स स्निग्धोऽकुशलान्निवारयति यस्तत्कर्म यन्निर्मलं
सा स्त्री याऽनुविधायिनी स मतिमान् यः सद्भिरभ्यर्च्यते ।
सा श्रीर्या न मदं करोति स सुखी यस्तृष्णया मुच्यते
तन्मित्रं यदकृत्रिमं स पुरुषो यः खिद्यते नेन्द्रियैः ॥

ಸಂಸ್ಕೃತ ಸುಭಾಷಿತ ಸಂಗ್ರಹ

ಪಠ್ಯಪುಸ್ತಕ ನಿರ್ದೇಶನಾಲಯ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಂಸ್ಕೃತ ಸುಭಾಷಿತ ಸಂಗ್ರಹ

ಪ್ರಿ. ಬಿ. ಎಚ್. ಶ್ರೀಧರ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಪಠ್ಯಪುಸ್ತಕ ನಿರ್ದೇಶನಾಲಯ

ನಿರ್ದೇಶಕರು : ಪ್ರೊ. ಎಸ್. ಎಮ್. ವೃಷಭೇಂದ್ರಸ್ವಾಮಿ

Sanskrita Subhashita Sangraha :

A Sanskrit Book recommended for P. U. C., B. A. Part-I and B. Sc. Part-I by Prin. B. H. Shreedhar, (Publication of the Text Book Directorate). Published by Shri S. S. Wodeyar, Registrar, Karnatak University, Dharwar-3 (1971).

ಸಂಸ್ಕೃತ ಪಠ್ಯಪುಸ್ತಕ ಸಂಪಾದಕ ಸಮಿತಿ :

ಡಾ. ಎಸ್. ಸಿ. ನಂದೀಮಠ

ಡಾ. ಕೆ. ಕೃಷ್ಣಮೂರ್ತಿ (ಕಾರ್ಯಾಧ್ಯಕ್ಷರು)

ಡಾ. ಬಿ. ಆರ್. ಮೋಡಕ

ಡಾ. ಎಚ್. ಪಿ. ಮಲ್ಲೇದೇವರು

ಡಾ. ಡಿ. ಎನ್. ಶಾನಭಾಗ

ಪ್ರಕಾಶಕರು : **ಶ್ರೀ ಎಸ್. ಎಸ್. ಒಡೆಯರ,**
ಕುಲಸಚಿವ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಬೆಲೆ : 4-00

ಪ್ರಥಮ ಮುದ್ರಣ : ೧೯೭೧

ಪ್ರತಿಗಳು : ೧೦೦೦

ಮುದ್ರಕರು :
ಎಮ್. ಎಮ್. ಹೊರಡಿ,
ಕ್ವಾಲಿಟಿ ಪ್ರಿಂಟರ್ಸ್, ಧಾರವಾಡ.

ಹಾರೈಕೆ

ಆಧುನಿಕ ಮಾನವಜೀವನವು ಮಹತ್ವದ ಬದಲಾವಣೆಯ ಪಥದಲ್ಲಿ ಸಾಗಿದೆ. ವೈಜ್ಞಾನಿಕ ಮನೋಭಾವ ಹಾಗೂ ತಾಂತ್ರಿಕ ಸಂಶೋಧನೆಗಳು ಈ ಪರಿವರ್ತನೆಯ ಪ್ರಮುಖ ಕಾರಣಗಳಾಗಿವೆ. ನೂತನ ವಿಜ್ಞಾನವು ಬಿಡಿಸಿ ತೋರುತ್ತಿರುವ ವಿಶ್ವದ ರಹಸ್ಯಗಳು, ಸಾಧಿಸಿರುವ ವಿಕ್ರಮಗಳು, ಪರಿಷ್ಕರಿಸುತ್ತಿರುವ ಪರಂಪರೆಯ ಮೌಲ್ಯಗಳು, ಈ ಹೊಸ ಬಾಳಿನ ತೋರಣವಾಗಿವೆ; ವಿಶ್ವಮಾನವಪ್ರಜ್ಞೆಯನ್ನು ರೂಪಿಸಿವೆ. ಈ ನೂತನ ಜ್ಞಾನವು ವ್ಯಕ್ತಿಜೀವಿತಕ್ಕೆ ಬೆಳಕು ನೀಡಿ, ಜನಾಂಗಗಳಲ್ಲಿ ಸಾಮರಸ್ಯ ಮೂಡಿಸಿ, ಮಾನವಕೋಟಿಯ ಕಲ್ಯಾಣಸಾಧನೆಗೆ ಪ್ರೇರಕವಾಗಬೇಕಾಗಿದೆ. ಕರ್ನಾಟಕ ವಿಶ್ವವಿದ್ಯಾಲಯವು ಈ ದಿಶೆಯಲ್ಲಿ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸುತ್ತ ಬಂದಿದೆ.

ವಿಶ್ವವಿದ್ಯಾಲಯಗಳು ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿದ್ಯಾಪ್ರಸಾರ ಮಾಡುವುದರ ಜೊತೆಗೆ ಸಂಶೋಧನೆ ಮತ್ತು ಜಿಜ್ಞಾಸೆಗಳ ಮೂಲಕ ಜ್ಞಾನದ ಪರಿಧಿಗಳನ್ನು ವಿಸ್ತರಿಸಿ, ಶ್ರೀಸಾಮಾನ್ಯರಿಗೂ ಉಪಯುಕ್ತವಾದ ಜ್ಞಾನ-ಪ್ರಸಾರ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಇಂದು ವಿದ್ಯಾಪ್ರಸಾರವು ಮಾತೃ-ಭಾಷೆಯಲ್ಲಿಯೇ ನಡೆಯಬೇಕೆಂಬುದು ಶಿಕ್ಷಣತಜ್ಞರ ಅಭಿಮತ. ಪ್ರಜಾಪ್ರಭುತ್ವವು ಯಶಸ್ವಿಯಾಗಲು ಪ್ರಾದೇಶಿಕಭಾಷೆಯೇ ಆಡಳಿತ ಭಾಷೆಯಾಗಿರಬೇಕಾದುದೂ ಅನಿವಾರ್ಯ. ಈ ಸಂಕ್ರಮಣಕಾಲದಲ್ಲಿ ಪ್ರಾದೇಶಿಕ ಭಾಷೆ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸಬೇಕಾಗಿದೆ. ವಿಜ್ಞಾನ, ಕಲೆ, ಭಾಷೆ, ಸಾಹಿತ್ಯ ಮತ್ತು

ಇತರ ಎಲ್ಲ ಸಾಮಾಜಿಕ ಶಾಸ್ತ್ರಗಳ ತಿಳುವಳಿಕೆಯನ್ನು ಜನಸಾಮಾನ್ಯರೆಲ್ಲರಿಗೆ ಮುಟ್ಟಿಸಲು, ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸುವುದು ಹಾಗೂ ಬೋಧನೆ ಮಾಡುವುದು ಬಹು ಮುಖ್ಯವಾದ ಉಪಕ್ರಮ. ಉನ್ನತ ವ್ಯಾಸಂಗ ಹಾಗೂ ಸಂಶೋಧನೆಯ ಹೊಣೆಯನ್ನು ಹೊತ್ತ ಎಲ್ಲ ಕಾಲೇಜು ಹಾಗೂ ವಿಶ್ವವಿದಾಲಯಗಳು ಇಂದು ಈ ದಿಶೆಯಲ್ಲಿ ಕಾರ್ಯತತ್ಪರವಾಗಬೇಕಾಗಿದೆ.

ಪಠ್ಯಪುಸ್ತಕಜ್ಞಾನ, ಸಂಶೋಧನೆಯ ಫಲ ಹಾಗೂ ಸ್ವತಂತ್ರ ವಿಚಾರಗಳನ್ನು ವಿದ್ಯಾರ್ಥಿಗಳಿಗೂ, ನಾಡಿನ ಸಮಸ್ತ ಜನತೆಗೂ ತಿಳಿಯಪಡಿಸುವುದು ಎಲ್ಲ ಅಧ್ಯಾಪಕ, ಪ್ರಾಧ್ಯಾಪಕ, ಪ್ರಾಚಾರ್ಯ ಹಾಗೂ ಇತರ ವಿದ್ವಾಂಸರ ಕರ್ತವ್ಯವಾಗಿದೆ. ಕನ್ನಡ ಮಾಧ್ಯಮವು ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಸಫಲವಾಗ-ಬೇಕಾದರೆ, ಕನ್ನಡ ಭಾಷೆಯನ್ನು ಕೃಷಿ ಮಾಡಿ, ಪಠ್ಯಪುಸ್ತಕ ಹಾಗೂ ಪ್ರೌಢ ಗ್ರಂಥಗಳನ್ನು ಸಿದ್ಧಗೊಳಿಸುವುದು ಅತ್ಯಾವಶ್ಯಕ. ಕೇಂದ್ರಸರಕಾರದ ಆದೇಶ ಮತ್ತು ರಾಜ್ಯಸರಕಾರದ ಪ್ರಾದೇಶಿಕ ಸಮಿತಿಯ ಯೋಜನೆಗನುಗುಣವಾಗಿ ಕರ್ನಾಟಕ ವಿಶ್ವವಿದ್ಯಾಲಯವು, ಪಠ್ಯಪುಸ್ತಕ ನಿರ್ದೇಶನಾಲಯ ವಿಭಾಗವನ್ನು ಸ್ಥಾಪಿಸಿ, ಕಲೆ, ವಿಜ್ಞಾನ ಹಾಗೂ ಇತರ ವಿಷಯಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿದೆ. ವಿದ್ವಾಂಸರೂ, ಅನುಭವಿಗಳೂ ಆದ ಅಧ್ಯಾಪಕ, ಪ್ರಾಧ್ಯಾಪಕ, ಪ್ರಾಚಾರ್ಯರು ಅತ್ಯಂತ ಶ್ರದ್ಧೆ-ವಹಿಸಿ, ಹಲವು ಪಠ್ಯಪುಸ್ತಕಗಳನ್ನು ರಚಿಸಿಕೊಟ್ಟಿದ್ದಾರೆ. ಅವರೆಲ್ಲರ ಪ್ರಯತ್ನವು ಅಭಿನಂದನೀಯವಾಗಿದೆ. ಈ ಕಾರ್ಯವು ಇನ್ನೂ ಉತ್ಸಾಹದಿಂದ ನಡೆಯಲೆಂದು ಹಾರೈಸುತ್ತೇನೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲ ಈ ಗ್ರಂಥಗಳ ಸದುಪಯೋಗ ಮಾಡಿಕೊಂಡು, ಆಧುನಿಕ ಜ್ಞಾನವಾಹಿನಿಯನ್ನು ಮುಂದುವರಿಸಲೆಂದು ಆಶಿಸುತ್ತೇನೆ.

ಪಠ್ಯಪುಸ್ತಕಗಳೊಡನೆ, ಪೂರಕ ಗ್ರಂಥಗಳನ್ನೂ, ಪ್ರೌಢಗ್ರಂಥಗಳ ಜೊತೆಗೆ ಜನಪ್ರಿಯ ಗ್ರಂಥಗಳನ್ನೂ, ಮೂಲ ಗ್ರಂಥಗಳೊಡನೆ ಅನುವಾದ ಕೃತಿಗಳನ್ನೂ, ಕನ್ನಡದಲ್ಲಿ ಪ್ರಕಟಿಸುವ ಮಹತ್ವದ ಕಾರ್ಯವನ್ನು ಪಠ್ಯಪುಸ್ತಕ ನಿರ್ದೇಶನಾಲಯವು ಸಮರ್ಥವಾಗಿ ನೆರವೇರಿಸಲೆಂದು ಹಾರೈಸುತ್ತೇನೆ.

ಕುಲಪತಿನಿವಾಸ
ಧಾರವಾಡ

ಅಪ್ಪಾಸಾಹೇಬ ಅಡಕೆ
ಕುಲಪತಿಗಳು

ಪೀಠಿಕೆ

ಪಠ್ಯಪುಸ್ತಕ ನಿರ್ದೇಶನಾಲಯವು ಹಮ್ಮಿಕೊಂಡಿರುವ ಪಠ್ಯಪುಸ್ತಕ ಪ್ರಕಟನೆಯ ಕಾರ್ಯವು ಕ್ರಮೇಣ ಜನಪ್ರಿಯವಾಗುತ್ತಿರುವುದು ಸಂತಸದ ಸಂಗತಿ. ಕಾಲೇಜು-ಶಿಕ್ಷಣದ ಎಲ್ಲ ಹಂತಗಳಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗುವ ಕಾಲ ಬಹುದೂರವಿಲ್ಲ. ಅದಕ್ಕಾಗಿ ಎಲ್ಲರೂ ಒಮ್ಮನಸ್ಸಿನಿಂದ ಕಾರ್ಯಪ್ರವೃತ್ತರಾಗ ಬೇಕಾಗಿದೆ. ಈ ದಿಶೆಯಲ್ಲಿ ನಡೆದುಬಂದ ದಾರಿಗಿಂತ ನಡೆಯಬೇಕಾದ ದಾರಿಯೇ ನಿಡಿದಾಗಿದೆ. ಪಠ್ಯಪುಸ್ತಕ ನಿರ್ದೇಶನಾಲಯದ ಎಲ್ಲ ಕಾರ್ಯಗಳಿಗೂ ಪ್ರೋತ್ಸಾಹ ನೀಡುತ್ತಿರುವ ಡಾ. ಅಪ್ಪಾಸಾಹೇಬ ಅಡಕೆ ಅವರಿಗೂ, ಯೋಜನೆಗಳಿಗೆ ಮಾರ್ಗ ದರ್ಶನ ನೀಡುತ್ತಿರುವ 'ಕಾರ್ಯಸಂಯೋಜಕ ಸಮಿತಿ'(Co-ordination Committee)ಯ ಸದಸ್ಯರಿಗೂ, ವಿವಿಧ ವಿಷಯಗಳಲ್ಲಿ ಪಠ್ಯಪುಸ್ತಕ ರಚನೆಯ ಹೊಣೆಹೊತ್ತ ಸಂಪಾದಕ ಸಮಿತಿಯವರಿಗೂ, ಗ್ರಂಥಕರ್ತರಿಗೂ, ವಿಶ್ವವಿದ್ಯಾಲಯದ ಪ್ರಕಟನ ವಿಭಾಗದವರಿಗೂ ನಮ್ಮ ಕೃತಜ್ಞತೆಗಳು. ಕುಲಸಚಿವ ಶ್ರೀ ಸದಾಶಿವ ಒಡೆಯರ ಅವರ ಸಕ್ರಿಯ ಸಹಕಾರವನ್ನು ವಿಶೇಷವಾಗಿ ಸ್ಮರಿಸಿಕೊಳ್ಳುತ್ತೇವೆ.

ಈ ಸಂಸ್ಕೃತ ಪೂರಕ ಪಠ್ಯಪುಸ್ತಕವನ್ನು ಸಿದ್ದಾಪುರ ಎಮ್. ಜಿ. ಸಿ. ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಬಿ. ಎಚ್. ಶ್ರೀಧರ ಅವರು ಬರೆದಿದ್ದಾರೆ. ಇದನ್ನು ಪಿ. ಯು. ಸಿ., ಬಿ. ಎ. ಭಾಗ—I ಮತ್ತು ಬಿ. ಎಸ್‌ಸಿ. ಭಾಗ—I ರ ಪೂರಕ ಪಠ್ಯಪುಸ್ತಕವೆಂದು ನಿಯಮಿಸಿದ ಸಂಸ್ಕೃತ ಪಠ್ಯಪುಸ್ತಕ ಸಮಿತಿಯ ಕಾರ್ಯಾಧ್ಯಕ್ಷರ ಹಾಗೂ ಸದಸ್ಯರ ಉಪಕಾರವನ್ನು ಸ್ಮರಿಸುತ್ತೇವೆ. ನಿರ್ದೇಶನಾಲಯದ ಕಲಾವಿಭಾಗ ಗ್ರಂಥಗಳ ಮೇಲ್ವಿಚಾರಕರಾದ ಪ್ರೊ. ಬಿ. ಸಿ. ಜವಳಿಯವರಿಗೂ, ಸಂಶೋಧನ ಸಹಾಯಕರಾದ ಶ್ರೀ ಎ. ಎಂ. ಅಣ್ಣೀಗೇರಿ ಅವರಿಗೂ ನಮ್ಮ ವಂದನೆಗಳು. ಸುಂದರವಾದ ಮುಖಪುಟದ ಚಿತ್ರ ಮತ್ತು ಪಡಿಯಚ್ಚನ್ನು ಅನುಕ್ರಮವಾಗಿ ಒದಗಿಸಿದ ಶ್ರೀ ಮಾರ್ಶಲ್ ಡಿಸೌಜಾ ಮತ್ತು ಮುದ್ರಣಕಾರ್ಯವನ್ನು ನಿಷ್ಠೆಯಿಂದ ನೆರವೇರಿಸಿದ ಧಾರವಾಡದ ಕ್ವಾಲಿಟಿ ಪ್ರಿಂಟರ್ಸ್ ಮಾಲಕರ ಹಾಗೂ ಇತರ ಕೆಲಸಗಾರರ ಸೇವೆಯನ್ನು ಸ್ಮರಿಸುತ್ತೇವೆ.

ಪಠ್ಯಪುಸ್ತಕ ನಿರ್ದೇಶನಾಲಯ
ಕ. ವಿ. ವಿ. ಧಾರವಾಡ
16-7-1971

ಎಸ್. ಎಸ್. ವೃಷಭೇಂದ್ರಸ್ವಾಮಿ
ನಿರ್ದೇಶಕರು

ಮೊದಲ ಮಾತು

"Readers' Digest" ನಲ್ಲಿ "Well-Said" "ಸುಭಾಷಿತ"ಗಳನ್ನು ಕಂಡವರು ಸಂಸ್ಕೃತ ಸಾಹಿತ್ಯದಲ್ಲಿ ಪ್ರತ್ಯೇಕವಾದ ವಿಭಾಗವೆಂಬಷ್ಟು ದೊಡ್ಡದಾಗಿ ಬೆಳೆದುಬಂದ "ಸುಭಾಷಿತ"ಗಳನ್ನು ನೆನೆದರೆ ಹೋಲಿಕೆ ಸ್ಪಷ್ಟವಾಗುವುದು. ಛಂದೋ-ಬದ್ಧತೆಯು ಸುಭಾಷಿತಕ್ಕೆ ಅನಿವಾರ್ಯವಲ್ಲವಾದರೂ ಸಂಸ್ಕೃತದಲ್ಲಿ ಅದು ಅರ್ಥದ ದೃಷ್ಟಿಯಲ್ಲಿ ಸ್ವಯಂಪೂರ್ಣವಾಗಿರುವ, ನಾಲ್ಕು ಸಾಲುಗಳನ್ನುಳ್ಳ ಮತ್ತು ಸಂಕ್ಷಿಪ್ತತೆ-ಯನ್ನು ಗಣ್ಯ ಗುಣವನ್ನಾಗಿ ಇಟ್ಟುಕೊಂಡ ಒಂದು ಪದ್ಯ, ನುಡಿ ಅಥವಾ ಸೊಲ್ಲು ಎಂಬಂತಿರುವುದೇ ಹೆಚ್ಚು; ಗಾದೆಗಿರುವ ಅರ್ಥಶ್ಲಿಷ್ಟತೆ, ಸರಳತೆ, ಶಬ್ದಾದ್ಯಲಂಕಾರ-ಗಳ ಸೌಂದರ್ಯ ಅಥವಾ ಅನೇಕ ಸಂದರ್ಭಾನ್ವಯ ಶಕ್ತಿ ಅದಕ್ಕಿದೆ. ಹಸಿ ಗೋಡೆಗೆ ಹರಳನ್ನಿಟ್ಟಂತೆ ಸಂದರ್ಭಕ್ಕೆ ಅನ್ವಿತವಾಗಿ ಅರ್ಥಸ್ಪಷ್ಟತೆಗೆ ಕಾರಣವಾಗುವುದು ಅದರ ಸ್ವಭಾವ. ಋಗ್ವೇದದ ಸೂಕ್ತಗಳಲ್ಲಿಯ ಕೆಲವು ಋಕ್ಕುಗಳ ಕೆಲವು ಸಾಲುಗಳು ಸುಭಾಷಿತ ಶೈಲಿಯ ಒಂದಲ್ಲ ಒಂದು ಗುಣವನ್ನು ವ್ಯಂಜಿಸಬಹುದು. ಆದರೆ "ಸುಭಾಷಿತ ಶ್ಲೋಕಗಳು" ಎಂದು ಕಾವ್ಯಸಂಗ್ರಹರೂಪದಲ್ಲಿ ಪ್ರಸಿದ್ಧಿಗೆ ಬಂದವು-ಗಳಲ್ಲಿ ಕ್ರಿ. ಶ. ೧೪೦೦ ರ "ಶಾರ್ಙ್ಗಧರ ಪದ್ಧತಿ" ಮತ್ತು ಕ್ರಿ. ಶ. ೧೨೦೫ ರ "ಸದುಕ್ತಿಕರ್ಣಾಮೃತ" ಗಳು ಸಂಸ್ಕೃತ ಸಾಹಿತ್ಯದಲ್ಲಿ ಗಣ್ಯ; ಹಾಗೇ ಡಾಕ್ಟರ್ ಕೆ. ಕೃಷ್ಣಮೂರ್ತಿಗಳು ಸಂಪಾದಿಸಿರುವ ಸಾಯಣಾಚಾರ್ಯರ "ಸುಭಾಷಿತ ಸುಧಾನಿಧಿ" ಮತ್ತು ನಿರ್ಣಯಸಾಗರ ಮುದ್ರಣಾಲಯದ "ಸುಭಾಷಿತ ರತ್ನಭಾಂಡಾಗಾರ"ಗಳೂ ಜನಪ್ರಿಯವಾಗಿವೆ. ಇಂಥ ಸಂಗ್ರಹಗಳಲ್ಲಿರುವ ಪದ್ಯಗಳು ಅನ್ಯಕರ್ತೃಕವಾದರೆ, ಸಂಸ್ಕೃತದ "ಶತಕ" ಸಾಹಿತ್ಯದಲ್ಲಿ ಅನ್ಯ ಗ್ರಂಥಗಳಿಂದ ಆಯ್ದು ಸಂಗ್ರಹಿಸದೆ—ಸ್ವತಃ ಕವಿಗಳು ಸ್ವತಂತ್ರವಾದ ಬಿಡಿ ಪದ್ಯಗಳನ್ನು ಬರೆದು ಸಂಗ್ರಹಿಸಿ ಪ್ರಸಿದ್ಧರಾದರು. ಅಂಥ ಬಿಡಿ ಪದ್ಯಗಳ ಸ್ವರೂಪದ ಸುಭಾಷಿತ ಶತಕಗಳಲ್ಲಿ ಭರ್ತೃಹರಿಯ ಶತಕ-ತ್ರಯವು ಅತಿ ಶ್ರೇಷ್ಠವಾಗಿದೆ.

ಕಿರಿದರಲ್ಲಿ ಪಿರಿಯ ಅರ್ಥವನ್ನು ಸ್ವಾರಸ್ಯಕರವಾಗಿ ಹೇಳಬಲ್ಲ ಸುಭಾಷಿತ ಶ್ಲೋಕಗಳನ್ನು ದಿವಂಗತ ರವೀಂದ್ರನಾಥ ಠಾಕೂರರು ಪ್ರೀತಿಯಿಂದಲೂ, ಅಭಿಮಾನದಿಂದಲೂ "Wisdom Pills" "ವಿವೇಕ ಘುಟಿಕೆಗಳು" ಎಂದು ಕರೆದರು. ಅಜ್ಞಾನದಿಂದ ಮಗನನ್ನು ಕೊಲ್ಲಲಂಹೋದ ವ್ಯಾಪಾರಿಯು ಭಾರವಿಯ ಸುಭಾಷಿತವನ್ನು ಓದಿ, ರೋಷಾವೇಶದಿಂದ ಮುಕ್ತನಾಗಿ ತನ್ನ ಮಗನನ್ನು ಕಡಿಯದೆ ಸುಖವಾಗಿ ಬದುಕಿದ ಕಥೆಯು ಸುಪ್ರಸಿದ್ಧ. ಸುಭಾಷಿತದಲ್ಲಿ ವ್ಯಾವಹಾರಿಕ ನೀತಿಸ್ಫೂರ್ತಿಯನ್ನು ಭಾರತೀಯರು ಸಾವಿರಾರು ವರ್ಷಗಳಿಂದ ಪಡೆಯುತ್ತ ಬಾಳಿಕೊಂಡು ಬಂದುದನ್ನು ಇಲ್ಲಿ ಇದು ಉದಾಹರಿಸುತ್ತದೆ. ದೈನಂದಿನ ಜೀವನದ ಸಾಮಾಜಿಕ ವರ್ತನೆಯ ನಿಯಮಗಳನ್ನು ಸುಭಾಷಿತಗಳು ಅನೇಕ ವೇಳೆ ತ್ರಿಕಾಲಾಬಾಧಿತವಾಗಿ ಹೇಳುವುದಲ್ಲದೆ, ವಿವಿಧ ಮಾದರಿಗಳ ಮನುಷ್ಯರ ಮನೋಧರ್ಮಗಳ ಪ್ರಕಾರಗಳನ್ನೂ ಅನೇಕ ಕಡೆಗಳಲ್ಲಿ ತ್ರಿಕಾಲಾಬಾಧಿತವೆನಿಸುವಂತೆಯೇ ಹೇಳುತ್ತವೆ. ಆದುದರಿಂದ ಅವು ಹೆಚ್ಚಾಗಿ ವಿಚಾರಪ್ರಚೋದಕವೆಂದು ಭಾವಿಸುವುದು ಜನರೂಢಿಯಾಯಿತು. ಚಾಣಕ್ಯ, ಭರ್ತೃಹರಿ ಮುಂತಾದವರ ನೀತಿಶತಕಗಳೇ ಬಹುಶಃ ಈ ಬಗೆಯ ರೂಢಿಯನ್ನು ರೂಪಿಸಿರಬೇಕು. ಆದರೆ "ಸುಭಾಷಿತ ರತ್ನಭಾಂಡಾಗಾರ" ಮುಂತಾದ ಕಾವ್ಯ ಸಂಗ್ರಹಗಳು ರೂಢಿಯ ಈ ಅರ್ಥವು ತಪ್ಪೆಂಬುದನ್ನು ತಮ್ಮಲ್ಲಿರುವ ಸುಭಾಷಿತ ಶ್ಲೋಕ ಸಂಗ್ರಹಗಳ ನೀತಿಪರವಷ್ಟೇ ಅಲ್ಲದ ವಸ್ತು–ಪಾತ್ರ–ರಸಗಳನ್ನು ವರ್ಣಿಸುವ ಅನೇಕ ಶ್ಲೋಕಗಳ ಮೂಲಕ ಸಾರುತ್ತವೆ.

ಪ್ರಸ್ತುತ ಸಂಗ್ರಹ

ಸುಭಾಷಿತ ಶ್ಲೋಕಗಳ ಪ್ರಸ್ತುತ ಸಂಗ್ರಹವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಸಹೆಜ್ಜೆಯಲ್ಲ. 'ಸೂಕ್ತಿ ಸುಧಾರ್ಣವ'ವೆಂಬ ಮೊದಲ ಸಂಕಲನ ೧೩ನೆಯ ಶತಮಾನದಷ್ಟು ಪ್ರಾಚೀನ. ಇದೇ ಮೊದಲನೆಯದಲ್ಲ. ಏಕೆಂದರೆ ಮಲ್ಲಿಕಾರ್ಜುನನ ಕನ್ನಡಾನುವಾದಗಳು ಕನ್ನಡ ಗದ್ಯದಲ್ಲಿವೆ; ಮೂಲ ಸಂಸ್ಕೃತ ಶ್ಲೋಕಗಳನ್ನು ಜೊತೆ ಜೊತೆಗೇ ಕೊಡಲಾಗಿದೆ. ಇದು ಸಂಸ್ಕೃತ ಗ್ರಂಥಗಳಿಂದ ಆಯ್ದು ಸಂಗ್ರಹಿಸಿದ ಸುಭಾಷಿತ ತರಂಗಮಾಲೆ. ಈ ಸಂಗ್ರಹದಲ್ಲಿ ಸಂಸ್ಕೃತ ಸಾಹಿತ್ಯದಲ್ಲಿಯ ಆದಿಕಾವ್ಯ (ರಾಮಾಯಣ)ದಿಂದ ಹಿಡಿದು ಪಂಡಿತರಾಜನ ಕಾಲದವರೆಗಿನ (ಕ್ರಿ. ಪೂ. ೪೦೦ ರಿಂದ ಕ್ರಿ. ಶ. ೧೬೩೦) ವಿವಿಧ ಸಂಸ್ಕೃತ ಸಾಹಿತ್ಯ ಗ್ರಂಥಗಳಿಂದ ಆಯ್ದ ಮುಕ್ತಕಗಳನ್ನು ಮೂರು ವಿಭಾಗಗಳಿರುವ ೨ ಭಾಗಗಳಲ್ಲಿ ವಿಂಗಡಿಸಿ ಅನುವಾದಿಸಲಾಗಿದೆ; ಕೆಲವು ಪುರಾಣ–ಶಾಸ್ತ್ರಗ್ರಂಥಗಳಿಂದಲೂ ವಸ್ತು ವೈವಿಧ್ಯಕ್ಕಾಗಿ ಸ್ವಯಂಪೂರ್ಣ ಶ್ಲೋಕಗಳನ್ನು ಆರಿಸಿ, ಭಾಷಾಂತರಿಸಲಾಗಿದೆ. ಅಲಂಕಾರ ಗ್ರಂಥಗಳೂ, ಸುಭಾಷಿತ ಸಂಗ್ರಹಗಳೂ, ಶತಕಗಳೂ, ಖಂಡಕಾವ್ಯಗಳೂ ಈ ಸಂಗ್ರಹದ ವಿವಿಧ ಅನುವಾದಗಳಿಗೆ ಆಕರಗಳಾಗಿವೆ. ಆದಷ್ಟು ಹೆಚ್ಚು ಸಂಸ್ಕೃತ ಗ್ರಂಥಗಳಿಂದ ಶ್ಲೋಕ

ಗಳನ್ನು ಆಯ್ದುಕೊಳ್ಳುವುದರಿಂದ ಸಂಸ್ಕೃತ ಸಾಹಿತ್ಯದ ವ್ಯಾಪ್ತಿಯ ಸ್ಥೂಲ ಪರಿಚಯವು ಸಾಮಾನ್ಯ ಓದುಗನಿಗೆ ಆಗಬಹುದೆಂಬುದು ಒಂದು ಉದ್ದೇಶ. ಅತಿ ಗಣ್ಯವಾದ ಸಂಸ್ಕೃತಗ್ರಂಥಗಳಿಂದ ಒಂದೆರಡು ಸುಭಾಷಿತಗಳನ್ನಾದರೂ ಆಯ್ದುಕೊಳ್ಳದೆ ಉಳಿಯಬಾರದೆಂಬುದು ಇನ್ನೊಂದು ಉದ್ದೇಶ. ಆಮೇಲೆ "ಸಂಸ್ಕೃತ ಸಾಹಿತ್ಯ" ಎಂಬ "ಹಳೆಯ ಭಂಡಾರ"ದಲ್ಲಿ ನಿತ್ಯನೂತನವಾದ ಸೌಂದರ್ಯ ಮತ್ತು ವರ್ತಮಾನ ಭಾರತವು ಕಲಿಯಲೇ ಬೇಕಾಗಿ ಬಂದಿರುವ ಸದುಪದೇಶಗಳೇನಾದರೂ ಇವೆಯೇ ಎಂಬ ಕುತೂಹಲಕ್ಕೆ ಸಮಾಧಾನಕರವಾದ ಉತ್ತರವನ್ನು ಯಥಾಶಕ್ತಿ ಕೊಡಬೇಕೆಂಬುದು ಮೂರನೆಯ ಉದ್ದೇಶ. ಇಂದಿನ ಭಾರತೀಯ ಹಾಗೂ ಕರ್ನಾಟಕೀಯ ಸಾಮಾಜಿಕ ಮನೋಧರ್ಮ ವಿವಿಧ ಮಾದರಿಗಳಲ್ಲಿ (ನೂರಕ್ಕೆ ೮೦ ರಷ್ಟು ಜನರಲ್ಲಿ) ಮನಃಶಾಸ್ತ್ರ ಶುದ್ಧವಾಗಿ ಮೂಲಭೂತ ಬದಲಾವಣೆಗಳು ಜೀವನದ ರಸ, ರುಚಿ, ದೃಷ್ಟಿಕೋನ, ಮನಃಪ್ರಣಾಳಿಗಳಲ್ಲಿ ಅವಿಜ್ಞಾತ ಪ್ರಜ್ಞೆ (The Collective Unconscious)ಯ ಸ್ತರದಲ್ಲಿ ಆಗಿದೆಯೇ ಎಂಬುದನ್ನು ಸಮಾಜವಿಜ್ಞಾನಿಯು (Social Scientist) ಇಲ್ಲಿ ಎಲ್ಲಾದರೂ ಪ್ರಯೋಗವಿಜ್ಞಾನರೀತ್ಯಾ ತತ್ತ್ವಜ್ಞಾನಾನುಮಾನದ ಪ್ರಕಾರ ಪರೀಕ್ಷಿಸಿದರೆ ನಿಜಸಂಗತಿ ಗೊತ್ತಾದೀತು. ಅಂಥ ಸಂಗತಿಯನ್ನು ಹೊರಗೆಡಹಲು ಈ ಸುಭಾಷಿತ ಸಂಗ್ರಹವು ಒಂದು ಸಾಧನವಾಗಬಲ್ಲದೆಂಬುದು ನಾಲ್ಕನೆಯ ಉದ್ದೇಶ : ಶೈಲಿಯ ಸೌಂದರ್ಯವಷ್ಟನ್ನಲ್ಲದೆ, ಈ ಸುಭಾಷಿತಗಳ ಅರ್ಥದ ಸತ್ಯ, ಸೌಂದರ್ಯ, ಸೌಜನ್ಯ, ಸದುಪಯೋಗವೆಂಬ ಮೌಲ್ಯಗಳನ್ನೂ ಬಹಳ ಜನ ಓದುಗರು ಮೆಚ್ಚಿದರೆ ಮತ್ತು ಅನುಸರಣೀಯ ಎಂದು ತಿಳಿದರೆ ಭಾರತೀಯ (ಕರ್ಣಾಟಕೀಯ) ಸಂಸ್ಕೃತಿಯ ಜೀವನಾಡಿಯು ಧಾರಾವಾಹಿಯಾಗಿ ತನ್ನ ಸಾರವನ್ನು ಇಂದಿನ ತಲೆಮಾರಿನ ಹೃದಯದಲ್ಲಿಯೂ ಸುಸ್ಪಷ್ಟವಾಗಿಯೋ, ಅಸ್ಪಷ್ಟವಾಗಿಯೋ ಹರಿಯಿಸುತ್ತಿದೆ ಎಂಬುದು ದೃಢಪಟ್ಟಂತಾಗುತ್ತದೆ. "ಸಂತರು (ವಿವೇಕಿಗಳು) ಪರೀಕ್ಷಿಸಿ, ದ್ವಂದ್ವಗಳೆರಡರಲ್ಲಿ ಯೋಗ್ಯವಾದುದನ್ನು ಆಯ್ದುಕೊಂಡು ಅನುಸರಿಸುತ್ತಾರೆ, ಮೂಢರು (ಅವಿವೇಕಿಗಳು) ಪರಾಭಿಪ್ರಾಯದಾಸರಾಗಿ ಒದುಕುತ್ತಾರೆ" ಎಂಬ ಕಾಳಿದಾಸನ ಸೂತ್ರದ ವೈಜ್ಞಾನಿಕತೆಯನ್ನು ಯಾವ ಸಮಾಜಮನಃಶಾಸ್ತ್ರಜ್ಞನೂ ಈಗ ಅಲ್ಲಗಳೆಯಲಾರನು. ಸುಭಾಷಿತಗಳ ಸತ್ಯವನ್ನು ಪ್ರತಿಯೊಬ್ಬ ಕನ್ನಡಿಗನೂ ಅಂತಃಕರಣದ ಒರೆಗಲ್ಲಿಗೆ ತಿಕ್ಕಿ ನೋಡಲು ಈ ಸಂಗ್ರಹವು ಅವಕಾಶವನ್ನು ಒದಗಿಸಿದರೆ ಇದರ ಸಮಾಜಶಿಕ್ಷಣ ಸಾಮರ್ಥ್ಯಕ್ಕೆ ಬೇರೆ ಯಾವ ಶಿಫಾರಸುಪತ್ರವೂ ಬೇಡ.

ವಿಭಾಗಗಳು

100 ನುಡಿಗಳು ದಾಂಪತ್ಯ ಪ್ರೇಮ ಮತ್ತು ಗೃಹಸ್ಥ ಜೀವನಗಳನ್ನು ವಿವರಿಸುತ್ತವೆ. ಗೃಹಸ್ಥರು "ಗ್ರಹಾವಿಷ್ಟ"ರಾದ ಮತ್ತು ಗೃಹಿಣಿಯರು "ಗ್ರಹಣಶೀಲೆ"

ಯರಾದ ಸಂದರ್ಭಗಳನ್ನು ಅಲ್ಲಿ ಇಲ್ಲಿ ತೋರಿಸುವ ವರ್ತಮಾನ ಜೀವನದಲ್ಲಿಯೂ ಪ್ರತಿಯೊಬ್ಬನಿಗೂ ಒಂದೊಂದು (Ideal Self) ತನ್ನದೇ ಆದ ಆದರ್ಶ (ತನ್ನತನ) ಆತ್ಮದ ಚಿತ್ರವು ಮನಸ್ಸಿನ ಕಣ್ಣಿನೆದುರು ಇರುವುದರಿಂದ ಮತ್ತು ಅದರಲ್ಲಿ ಸಾಮಾಜಿಕ ಆತ್ಮದ ಸಾಧಾರಣ ಧರ್ಮಗಳಿರುವುದರಿಂದ ಅವನ ವಾಸ್ತವಿಕ (ವಿಜ್ಞಾತ ಪ್ರಜ್ಞೆಯ) ಜಾಗರಿತ ಪ್ರಜ್ಞೆಯ ಪ್ರಕಾರ ಅವನೆಂತಿದ್ದರೂ ಉಕ್ತ ಶ್ಲೋಕ-ಗಳಲ್ಲಿರುವ ಅಭಿಪ್ರಾಯಗಳಲ್ಲಿ ತಲ್ಲೀನನಾಗಿ ರಸಾಸ್ವಾದವನ್ನೂ ಅದರ ಉತ್ತರ ಕಾಲದಲ್ಲಿ ಉಂಟಾಗುವ ಚಿಂತನ ಬುದ್ಧಿಯಿಂದ ತದ್ಗತ ತತ್ವವನ್ನೂ ಗ್ರಹಿಸಲು ಶಕ್ತನಾಗುತ್ತಾನೆ. ರೂಪಾಂತರ ಹೊಂದಿದ ಆಲಂಬನ ಉದ್ದೀಪನ ವಿಭಾವಗಳಲ್ಲೂ ಇಂದಿನ ನಮ್ಮ ಜೀವನದಲ್ಲಿ ಅರ್ಥಾಂತರ (ಭಾವಾಂತರ) ಹೊಂದದಿರುವ ಸ್ಥಿತಿ-ಯಿರುವುದನ್ನು ಉಕ್ತ ನುಡಿಗಳಿಂದ ಕಂಡುಕೊಳ್ಳಬಹುದು; ಪತ್ನಿ ಎಂದರೆ ಏನೆಂಬುದು ಪತಿಗೂ, ಪತಿ ಎಂದರೆ ಏನೆಂಬುದು ಪತ್ನಿಗೂ ಇಂದಿನ ಸುಸಂಸ್ಕೃತ ಕುಟುಂಬಗಳಲ್ಲಿ ಅಂದಿನವುಗಳಲ್ಲಿ ಹೇಗೋ ಹಾಗೇ ಅರ್ಥವಾಗುವ ಅಂಶವು ಮನನೀಯವಾಗಿದೆ: ಮಕ್ಕಳ ಬಗೆಗಿನ ದೃಷ್ಟಿಕೋನವೂ ಹಾಗೆಯೇ ತತ್ವಶಃ ಅಭಿನ್ನವಾಗಿದೆ; ಭಿನ್ನವಾದಲ್ಲಿ ಕುಟುಂಬವು ಕೊನೆಗಳಿಗೆಯಲ್ಲಿ ಕಹಿ ಗುಳಿಗೆಯನ್ನು ಒತ್ತಾಯದಿಂದ ಸವಿಯು ವಂತಾದದ್ದು ಮನಃಶಾಸ್ತ್ರಜ್ಞರ ಪ್ರಯೋಗಕ್ಕೆ ಲಭ್ಯವಾಗದಿರದು. ಅಪವಾದ-ಗಳನ್ನು ಅಂದಿನ ನಿಯಮವೆಂದರೂ ತಪ್ಪು, ಇಂದಿನ ನಿಯಮ (ವಾಸ್ತವಿಕ ಅಂಶ) ಎಂದರೂ ತಪ್ಪು.

2ನೆಯ ವಿಭಾಗವು ಭಾರತದಲ್ಲಿಯ ಚಿಂತಕರು ಜೀವನದ ಆದಿ ಬುನಾದಿಯ ಸತ್ಯವನ್ನು ಶೋಧಿಸಲು ಪ್ರಯತ್ನಿಸಿ ತಮ್ಮ ಸ್ತೋತ್ರಕಾವ್ಯ, ತತ್ವಕಾವ್ಯ, ಮಹಾ-ಕಾವ್ಯ ಮುಂತಾದವುಗಳಲ್ಲಿಯೂ ಶತಕಗಳಲ್ಲಿಯೂ ನಿರೂಪಿಸಿದ ಅಂಶಗಳನ್ನು 100 ಸೊಲ್ಲುಗಳಲ್ಲಿ ವಿವರಿಸುತ್ತದೆ. ಓಂ, ತತ್, ಸತ್; ಸತ್ಯ ಜ್ಞಾನ, ಅನಂತ; ಅಥವಾ ಸತ್, ಚಿತ್, ಆನಂದ — ಎಂಬಂಥ ಪದಗಳಿಂದ "ಸತ್ಯ"ಗಳೆಲ್ಲವುಗಳಿಗೂ ಮೂಲ ಭೂತ ಆಧಾರವಾದ ಒಂದೇ ಒಂದು ನಿತ್ಯ ಸತ್ಯವನ್ನು ಸರ್ವ ಗ್ರಾಹ್ಯವೆಂದು ವಿವಿಧ ಸಾಧಕರೂ ಸಿದ್ಧರೂ ಸಂತರೂ ಆಚಾರ್ಯರೂ ಕವಿಗಳೂ ಭಾರತದ ಬಹುಸಂಖ್ಯಾತರ ಶ್ರದ್ಧಾಧಾರವೆಂದು ತಮ್ಮ ತಮ್ಮ ಭಿನ್ನ ಶೈಲಿ ಬಂಧಗಳಿಂದ ಹೃತ್ಪೂರ್ವಕವಾಗಿ ಮತ್ತು ಬುದ್ಧಿಪೂರ್ವಕವಾಗಿ ವರ್ಣಿಸುತ್ತ ಬಂದುದನ್ನು ಓದುಗರು ಗಮನಿಸ ಬಹುದು. ವೈದಿಕ ನಾಗರಿಕತೆಯೆಂಬ ಸಮುದ್ರವನ್ನು ಕಡೆದು ತೆಗೆದ ಈ ಅಮೃತವನ್ನು ತಿರಸ್ಕರಿಸಿ ಬಾಳುವದು ಆಧುನಿಕ ಭಾರತೀಯತೆಗೆ ಶಕ್ಯವಿಲ್ಲ-ವೆಂಬುದನ್ನು ರಾಷ್ಟ್ರಕ್ಕೋ ರಾಜ್ಯಕ್ಕೋ ಕುಟುಂಬಕ್ಕೋ ದುರ್ನಿವಾರ್ಯವಾದ ದೊಡ್ಡ ಸಂಕಟ ಬಂದಾಗ ಒರೆಗೆ ಹಚ್ಚಿ ನೋಡಬಹುದು. ಕಾರ್ಲ್ ಜಿ. ಯುಂಗ್ ಮಹಾಶಯನು ಅತಿ ದೊಡ್ಡ ಮನಃಶಾಸ್ತ್ರಜ್ಞ. ಅವನ ಪ್ರಕಾರ ದೇವ (ನಿತ್ಯಸತ್ಯ)

ಪ್ರೇರಿತರು, ಅಹಂ (ಮನೋಮಧ್ಯ ಬಿಂದು) ಪ್ರೇರಿತರು ಮತ್ತು ದೇಹಾತ್ಮಭಾವ ಪ್ರೇರಿತರು(God-centered, Soul-centered, Ego-centered ಮತ್ತು Persona-Centered) ಎಂಬ ನಾಲ್ಕು ವರ್ಗಗಳ ಜನರು ಈಗ ಜಗತ್ತಿನಲ್ಲಿದ್ದಾರೆ ಎಂಬುದೂ ಈ ವರ್ಗಗಳಲ್ಲಿ ಅನುಕ್ರಮವಾದ ಅಪದೆಶೆ ಇದೆ ಎಂಬುದೂ ಗೊತ್ತಾಗು-ತ್ತದೆ. ಆದುದರಿಂದ ನಿತ್ಯಸತ್ಯದ ಅನುಸಂಧಾನ, ಸತತ ಸಂಶೋಧನ ಅಥವಾ ಶ್ರವಣ, ಮನನ, ನಿದಿಧ್ಯಾಸನ ಇಲ್ಲವೆ ತಪಸ್ಸು (ಆತ್ಮ ವಿಶ್ಲೇಷಣೆಯನ್ನಾಧರಿಸಿದ ಅಂತರ್ಮುಖಿ ಸಂಶೋಧನ) ಎಂಬ ಮಾನಸಶಾಸ್ತ್ರೀಯ ಯೋಗ (ಅನುಭಾವ) ಮಾರ್ಗಗಳಿಂದ ನಮ್ಮ ಗೌರವಕ್ಕೆ ಪಾತ್ರರಾದ ಹಿರಿಯರು ಮಾಡಿಕೊಂಡ ಮಾನವ ಜೀವನದ ಪೂರ್ಣತೆಯ ಕಲ್ಪನೆ (ಮೋಕ್ಷ, ಪರಮಸತ್ಯ, ಅಮೃತತ್ವ, ಬ್ರಹ್ಮ ಸಾಯುಜ್ಯ, ನಿತ್ಯಾನಂದಸ್ಥಿತಿ ಇತ್ಯಾದಿ)ಯನ್ನು ವಿವಿಧ ಕವಿಕಂಠಗಳು ವರ್ಣಿಸಿದ್ದನ್ನು ತಲ್ಲೀನತೆಯಿಂದ ಗ್ರಹಿಸಿ, ಇಂದಿನ ಸಾಮಾಜಿಕರು ತಮ್ಮ ಅನುಭವದ ಒಳಗಿನ ಒಳ ದನಿಯ ಒರೆಗೆ ತಿಕ್ಕಿ ಪರೀಕ್ಷಿಸಬಹುದು. ಧ್ಯೇಯವಾದೀಯ ಚಾರಿತ್ರ ನಿರ್ಮಾಣಕ್ಕೆ ಇದು ಭಾರತವು ಕೊಟ್ಟ ಮಹಾಧಾರ.

3ನೆಯ ವಿಭಾಗದ 100 ಪದ್ಯಗಳು ಭಾರತೀಯ ಲೌಕಿಕ ಜೀವನದ ಸಾಮಾ-ನ್ಯಾನುಭವವು ಕಲಿಸುವ ಪಾಠಗಳನ್ನು ಒಳಗೊಂಡಿವೆ. "ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು, ಅದ ಕದ್ದು ಮೇಯುದೇ ಮನವು?" ಎಂದು ಕೇಳಿದ ಕಡೆಂಗೋಡ್ಲು ಶಂಕರಭಟ್ಟರ ಸವಾಲಿಗೆ ಈ ವಿಭಾಗವು ಉತ್ತರ ಕೊಡಬಲ್ಲ ಅಂಶಗಳಿಂದ ಕೂಡಿದೆ. ವರ್ತಮಾನ ಕ್ಷಣಕ್ಕಿಂತ ಹಿಂದಿನದೆಲ್ಲವೂ ಭೂತಕಾಲಿಕ; ಅದನ್ನು ಬಿಟ್ಟರೆ ಮನುಷ್ಯನ ಚಿಂತನ ಬುದ್ಧಿಗೆ ಆಧಾರ ವಿಷಯವೇ ಇಲ್ಲ. ಸುಖ–ದುಃಖಗಳೆಂಬ ಎರಡು ಆತ್ಯಂತಿಕ ಅನುಭವ ಭೇದಗಳಲ್ಲಿ ಲೋಕ ಜೀವನದ ಎಲ್ಲ ಅನುಭವಗಳೂ ಪರ್ಯವಸಾನ ಹೊಂದುತ್ತವೆ. ಹಾಗೇ ತಾತ್ಕಾಲಿಕ ದುಃಖವನ್ನು ಅಥವಾ ಸುಖವನ್ನು ಲೆಕ್ಕಿಸದೆ ಚಿರಕಾಲಿಕ, ಆತ್ಯಂತಿಕ, ದೀರ್ಘಕಾಲಿಕ ಸುಖ ಅಥವಾ ಹೆಚ್ಚಿನ ಮನಃಶಾಂತಿ ಮನಃ ಸಮಾಧಾನವು ಫಲಿಸುವಂತೆ ತನ್ನ ಜೀವನದ ಯೋಜನೆಯನ್ನು ನಿರಪರಾಧಿ ಸಾಮಾಜಿಕರಿಗೆ ನಿಷ್ಕಂಟಕವಾಗುವಂತೆ ಮತ್ತು ತನ್ನ ಬೇರಾದ ಸಮಾಜಕ್ಕೆ ಹಿತವಾಗುವ ಪ್ರಧಾನ ದೃಷ್ಟಿಗೆ ವ್ಯತ್ಯಯ ಉಂಟಾಗದಂತೆ ರಚಿಸಿಕೊಳ್ಳುವ ಪ್ರಾಮಾಣಿಕ ಪ್ರಜ್ಞೆ ಅಂದಿನಂತೆ ಇಂದೂ ತತ್ತ್ವಶಃ ಭಿನ್ನವಲ್ಲದ ಸಾಮಾನ್ಯ ನ್ಯಾಯ, ನೀತಿ, ನಿಯಮ, ಶಿಸ್ತು, ಕ್ರಮ ಮತ್ತು ಮೌಲ್ಯಾಭಿಜ್ಞಾನಗಳು ಈ ಸಂಗ್ರಹದಲ್ಲಿರುವುದು ತುಲನಾತ್ಮಕ ದೃಷ್ಟಿಗೆ ಹೊಳೆಯದಿರದು.

4ನೆಯ ವಿಭಾಗದ 100 ನುಡಿಗಳು ಮಹಾನಾಯಕರನ್ನು ವರ್ಣಿಸುತ್ತವೆ. ಮಹಾಕಾವ್ಯದ ಲಕ್ಷಣಗಳನ್ನು ಹೇಳುವಾಗ, ದಂಡಿಯು ಅದರಲ್ಲಿ ಚತುರನೂ, ಉದಾತ್ತನೂ ಆದ ನಾಯಕ ಇರಬೇಕು ಎಂದಿದ್ದಾನೆ. ನಾಟಕದ ಲಕ್ಷಣಗ್ರಂಥಗಳಲ್ಲಿ

ಧೀರೋದಾತ್ತ, ಧೀರಲಲಿತ, ಧೀರಶಾಂತ, ಧಿರೋದ್ಧತರೆಂಬ ನಾಲ್ಕು ವರ್ಗಗಳ ಹೆಸರುಗಳನ್ನು ಹೇಳಲಾಗಿದೆ. "ಶೂರಃ ಸರ್ವಂ ಪಾಲಯತಿ" ಎಂದಿದೆ ಮಹಾಭಾರತ. ಶೌರ್ಯ–ಔದಾರ್ಯಗಳಿಲ್ಲದ ನಾಯಕನು ನಾಯಕನೇ ಅಲ್ಲ. ಇದು ಅಂದೂ ಸತ್ಯ, ಇಂದೂ ಸತ್ಯ. ನಮ್ಮ ಪ್ರಜಾಪ್ರಭುತ್ವದ ನಾಯಕರನ್ನು ಅಳತೆ ಮಾಡಲು ಮಹಾಕಾವ್ಯಗಳ ನಾಯಕರು ಇಂದೂ ಮಾನದಂಡವಾಗಬಲ್ಲರೆಂಬುದನ್ನು ಓದುಗ ಇಲ್ಲಿ ನೋಡಬಲ್ಲ. ಹರಿ–ಹರ–ಬ್ರಹ್ಮರೂ ದೇವತೆಗಳೂ ದೇವತೆಗಳಂಥ ಮಾನವರೂ, ಮಾನವಪುಂಗವರೂ ಹೇಗಿರುತ್ತಾರೆ ಎಂಬುದನ್ನು ಕವಿಗಳು ತಮ್ಮ ಪ್ರತಿಭೆಯಿಂದ ಕಂಡದ್ದರ ಅಲ್ಪ ಪರಿಚಯ ಈ ವಿಭಾಗದಿಂದಾಗುತ್ತದೆ. ಈ ನೇತೃದರ್ಶನವು ನಮ್ಮ ಮತದಾರರ ನೇತ್ರೋನ್ಮೀಲನ ಮಾಡಿದಾಗ, "ಪೂಜ್ಯ ಪೂಜಾ ವ್ಯತಿಕ್ರಮ" ತಪ್ಪಿ, ನಮ್ಮ ಸಾರ್ವಜನಿಕ ಸಂಸ್ಥೆಗಳೆಲ್ಲವೂ ಸರ್ವೋದಯವನ್ನು ಸಮರ್ಥವಾಗಿ ಸಾಧಿಸಬಲ್ಲವು.

5ನೆಯ ವಿಭಾಗದ 100 ಸೊಲ್ಲುಗಳು ಸಂಸ್ಕೃತದ ಕವಿಗಳು ಪ್ರಕೃತಿ ಸೌಂದರ್ಯವನ್ನು ಕಂಡುಂಡು ಹೇಗೆ ವರ್ಣಿಸಿದ್ದಾರೆ ಎಂಬುದಕ್ಕೆ ಕೆಲವು ಉತ್ತಮ ಉದಾಹರಣೆಗಳನ್ನು ಒದಗಿಸುತ್ತವೆ. ಪ್ರಕೃತಿಯು ದೇವರ ಸ್ವಭಾವ, ಶಕ್ತಿ. ಅದರಿಂದ ಈ ವಿಶ್ವವು ವ್ಯಕ್ತವಾಗಿದೆ ಎಂಬುದು ಭಾರತೀಯ ನಂಬಿಕೆ. ವಿಶ್ವದ ರೂಪವು "ವಿಶ್ವರೂಪ"ವಾಗಿದೆ. ಅದರ ಅನೇಕ ಸಂದರ್ಭಗಳಲ್ಲಿ ವಿವಿಧ ಮನುಷ್ಯರಿಗೆ ವಿವಿಧ ಅನುಭವಗಳಾಗುತ್ತವೆ. ಒಂದೇ ತರಹದ ಸಂದರ್ಭದಲ್ಲಿ ಒಬ್ಬರಿಗೆ ಒಂದು ಅನುಭವವಾದರೆ, ಇನ್ನೊಬ್ಬರಿಗೆ ಇನ್ನೊಂದು ಬಗೆಯ ಅನುಭವ ಉಂಟಾಗಬಹುದು. ಸಂಸ್ಕೃತದ ಮಹಾನಾಟಕಕಾರರೂ, ಕವಿಗಳೂ, ಭಾರತೀಯ ಪ್ರಕೃತಿ ಸೌಂದರ್ಯದ ಕಾಲಿಕ ಹಾಗೂ ದೇಶಿಕ ಸನ್ನಿವೇಶಗಳನ್ನು ಬಣ್ಣಿಸಿದ ಅಂದವು ಇತರ ದೇಶಗಳ ಮಹಾಕವಿಗಳ ಅಂಥ ವರ್ಣನೆಗಳ ಅಂದಕ್ಕೆ ಸೌಂದರ್ಯ ದೃಷ್ಟಿಯಿಂದ ಎಂದೂ ನ್ಯೂನವೆನ್ನಿಸದೆಂಬುದು ರಸಿಕರಿಗೆ ಇಲ್ಲಿ ಗೊತ್ತಾಗದಿರದು. ಸಂಸ್ಕೃತ ಕವಿಗಳು ಭಾರತದ ವಿವಿಧ ಪ್ರದೇಶಗಳಲ್ಲಿದ್ದವರು ಮತ್ತು ಅಲ್ಲಿಂದ ಹೊರಟು ಇತರ ಪ್ರದೇಶಗಳಲ್ಲಿ ಹೋಗಿ ಕೀರ್ತಿಯನ್ನು ಗಳಿಸಿಕೊಂಡು ಬಂದವರು. ಕರ್ನಾಟಕದ ಸಂಸ್ಕೃತ ಕವಿಗಳೂ ಕರ್ನಾಟಕೇತರ ಪ್ರದೇಶಗಳಲ್ಲಿ ಯಶಸ್ಸನ್ನು ಪಡೆದವರು. ಆದುದರಿಂದಲೇ ಸಂಸ್ಕೃತ ಸಾಹಿತ್ಯವೊಂದೇ ಇಂದಿಗೂ ಅಖಿಲ ಭಾರತೀಯ ಸಾಹಿತ್ಯವೆನ್ನಿಸಿದೆ. ಇಂದಿನ ಪ್ರಚಲಿತ ಭಾರತೀಯ ಭಾಷೆಗಳಲ್ಲಿರುವ ಸಾಹಿತ್ಯ ಕೃತಿಗಳಲ್ಲಿ ಬಂದಿರುವ ಪ್ರಕೃತಿ ಸೌಂದರ್ಯ ವರ್ಣನೆಗಳೊಡನೆ ಸುಭಾಷಿತಗಳ ರೂಪದಲ್ಲಿರುವ ಅಂಥ ವರ್ಣನೆಗಳನ್ನು ಹೋಲಿಸಿ ಓದುಗರು ಸಂತೋಷಪಡಬಹುದು.

6ನೆಯ ವಿಭಾಗದ 100 ಶ್ಲೋಕಗಳು ಸಂಸ್ಕೃತ ಕವಿಗಳ ಹಾಸ್ಯೋಕ್ತಿ-ಚತುರೋಕ್ತಿಗಳ ಕೆಲವು ಮಾದರಿಗಳನ್ನು ತೋರಿಸುತ್ತವೆ. ಅವುಗಳಲ್ಲಿ ಅಲಂಕಾರದ ಚಮತ್ಕಾರ, ವಿಡಂಬನ, ಅನ್ಯೋಕ್ತಿ, ನಿಂದೆ (Invective) ಮುಂತಾದ ವಿವಿಧ ತಿರುಹುಗಳ ಕಾವ್ಯವಾಣಿಗಳಿವೆ. ಪ್ರೊ. ಎಸ್. ವಿ. ರಂಗಣ್ಣನವರು ಕೊಟ್ಟ ವಿಡಂಬನ ಚಕ್ರದ ದಶವಿಧ ವಿಡಂಬನಗಳ ಎಲ್ಲ ಬಗೆಗಳೂ ಇಲ್ಲಿ ನಿದರ್ಶಿತವಾಗಿವೆ ಎಂದು ಹೇಳಲು ಬಾರದಿದ್ದರೂ "Wit and humour–ಚತುರೋಕ್ತಿ–ಹಾಸ್ಯ" ಎಂಬ ಸಾಮಾನ್ಯ ವರ್ಗದಲ್ಲಿ ಸೇರಬಹುದಾದ ಹಲವಾರು ವಿಧದ ಕಾವ್ಯೋಕ್ತಿ-ಗಳನ್ನಿಲ್ಲಿ ಸಂಗ್ರಹಿಸಲಾಗಿದೆ. ಈ ಮಾದರಿಗಳ ಅವಲೋಕನದಿಂದ ಓದುಗರು ಸಂಸ್ಕೃತ ಸಾಹಿತ್ಯದ ಹಾಸ್ಯೋಕ್ತಿಗಳ (ವಿಡಂಬನಾದಿಗಳ) ಸ್ಥೂಲ ಚಿತ್ರವನ್ನಾದರೂ ಊಹಿಸಿಕೊಳ್ಳಬಹುದಾಗಿದೆ. ಇವುಗಳಲ್ಲೂ ವಿವೇಕಬೋಧ (ನೀತಿಬೋಧ) ಇರುವುದು ಹಿಂದೆ ಹೇಳಿದಂತೆ ಮಿತ್ರಸಂಮಿತಿಯ ಹಾದಿಯನ್ನು (ಅನೇಕ ವೇಳೆ) ಹಿಡಿದ "ನೀತಿಸಾಹಿತ್ಯ" ವೆನಿಸಬಹುದಾದ ಶತಕಸಾಹಿತ್ಯ ಮತ್ತು ಪಂಚತಂತ್ರ–ಹಿತೋಪದೇಶಗಳ ಜನಪ್ರಿಯತೆ ಅತಿಯಾದುದರಿಂದ; ಎರಡನೆಯದಾಗಿ—ಪಂಡಿತ, ಕವಿ, ಶಿಕ್ಷಕ ಎಂಬ ಮೂರು ಪಾತ್ರಗಳನ್ನೂ ಒಬ್ಬ ಗ್ರಂಥಕರ್ತನು ನಿರ್ವಹಿಸಬೇಕಾಗಿ ಬಂದದ್ದೂ ಕೆಲವೊಮ್ಮೆ ಕಾರಣವಾಗಿರಬಹುದು; ಅಲ್ಲದೆ, ಮಹಾಭಾರತವು ಪ್ರತ್ಯಕ್ಷ ನೀತಿ ಕಥೆಗಳನ್ನೂ ಒಳಗೊಂಡು ತನ್ನ ಇಡಿ ಸ್ವರೂಪದಲ್ಲಿ ಕಾವ್ಯವೆನ್ನಿಸಿ ಉಳಿದಿರುವುದೂ, ಧಾರ್ಮಿಕ–ಲೌಕಿಕ ಕಾವ್ಯಗಳ ಭೇದವನ್ನು ಮರೆತು ಶುದ್ಧ ಧರ್ಮ (ನೀತಿ) ಬೋಧೆ (ದಾಸಸಾಹಿತ್ಯ ಮತ್ತು ಶರಣ ಸಾಹಿತ್ಯ) ಸಾಹಿತ್ಯವೆನ್ನಿಸಲಾರಂಭಿಸಿ ಈಗಲೂ ಕರ್ನಾಟಕದಲ್ಲಿ ಹಾಗೇ ಇರುವುದೂ ಉಕ್ತಪ್ರವೃತ್ತಿಗೆ ಸಾಕ್ಷಿ.

ಬಾಣನ ಕಾದಂಬರಿಯ ಚಿಕ್ಕ ಗದ್ಯಾಂಶವನ್ನು ಬಿಟ್ಟರೆ ಈ ಇಡಿ ಸಂಗ್ರಹದಲ್ಲಿ ಗದ್ಯಸಾಹಿತ್ಯ ಹೆಚ್ಚಾಗಿ ಇಲ್ಲದುದರಿಂದ ಅದರಲ್ಲಿರುವ ಎಷ್ಟೋ ಸರಸೋಕ್ತಿಗಳು ಬಿಟ್ಟು ಹೋಗುವಂತಾಗಿದೆ. ಭಾಸ–ಕಾಳಿದಾಸ–ಶೂದ್ರಕ–ವಿದೂಷಕ–ವಿಟಾದಿಗಳ ಗದ್ಯೋಕ್ತಿಗಳಲ್ಲಿ ಬಂದಿರುವ ಅರ್ಥಾಂತರನ್ಯಾಸ ಸ್ವರೂಪದ ಸುಭಾಷಿತಗಳು ಇಲ್ಲಿಲ್ಲ. ಏಕೆಂದರೆ ಛಂದೋಬದ್ಧ ಸುಭಾಷಿತಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮತ್ತು ಸಂದರ್ಭೋಚಿತವಾಗಿ ವಾಗ್ಮಿಗಳು ಬಳಸುವುದು ಹೆಚ್ಚು ಸುಲಭ ಎಂಬ ವ್ಯಾವಹಾರಿಕ ದೃಷ್ಟಿ ಪ್ರಸ್ತುತ ಸಂಗ್ರಹಕಾರನಿಗೆ ಪ್ರಧಾನವೆನ್ನಿಸಿತು. ಉದ್ಧೃತ ವಾಕ್ಯಗಳಿಂದಲೇ ಒಬ್ಬನು ಒಳ್ಳೆಯ ಭಾಷಣಕಾರನೆನ್ನಿಸನೆಂಬುದು ನಿಜವಾದರೂ ಎಲ್ಲ ದೇಶ–ಕಾಲ-ಗಳಲ್ಲೂ ಸಮಯೋಚಿತ ಆಧಾರಗಳನ್ನು ಮಿತವಾಗಿ ಕೊಡುವ ಮಾತುಗಾರಿಕೆ ಸರ್ವಾಹ್ಲಾದಕರವೆನ್ನಿಸಿರುವುದು ಅನುಭವಸಿದ್ಧವಾಗಿದೆ. "Best words in the best order — ಅತ್ಯುತ್ತಮ ಪದಗಳನ್ನು ಅತ್ಯುತ್ತಮ ಕ್ರಮದಿಂದ

ಜೋಡಿಸುವುದು" ಪದ್ಯದ ವೈಶಿಷ್ಟ್ಯವೆಂದ ಮ್ಯಾಥ್ಯೂ ಆರ್ನಾಲ್ಡನ ವ್ಯಾವಹಾರಿಕ ಸೂಚನೆಯನ್ನು "Classical–ಅಭಿಜಾತ" ವರ್ಗಕ್ಕೆ ಸೇರಿದ ಸರ್ವ ಭಾಷಾ ಸಾಹಿತ್ಯಗಳೂ ಪಾಲಿಸುತ್ತ ಬಂದಿರುವುದರಿಂದ, "ಮುಕ್ತಕ" ಸ್ವರೂಪದ ಸುಭಾಷಿತಗಳಲ್ಲಿ ಛಂದೋಬಂಧದ ಸೌಂದರ್ಯವು ಕಿರಿದರಲ್ಲಿ ಹಿರಿಯ ಅರ್ಥವನ್ನು ಹೇಳುವ ಕವಿಪ್ರತಿಭೆಯ ಸೌಂದರ್ಯದೊಡನೆ ಕೂಡಿರುವುದರಿಂದ ಶ್ಲೋಕಗಳೇ ಇಲ್ಲಿ ಹೆಚ್ಚಾಗಿ ಆಯ್ಕೆಯಾದವು. "ಶೋಕಃ ಶ್ಲೋಕತ್ವಮಾಗತಃ" ಎಂಬ ವಾಲ್ಮೀಕಿ ಸೂತ್ರವಂತೂ ಸುಪ್ರಸಿದ್ಧ. ಸ್ವಚ್ಛಂದವು ಛಂದವಲ್ಲ, ಮುಕ್ತಚ್ಛಂದವು ಛಂದೋಬಂಧವಲ್ಲ.

ಸುಭಾಷಿತ ಸಂಗ್ರಾಹಕರ ನೈಪುಣ್ಯ

ಇಡಿ ಕೃತಿಗಳನ್ನು ಸೊಗಸಾಗಿ ಬರೆದು ಮಹಾಕವಿಗಳೆನ್ನಿಸಿದವರ ಕೃತಿಗಳಲ್ಲಿ ಸಿಗುವ ಸುಭಾಷಿತಗಳಂತೆಯೇ ಸಂಸ್ಕೃತ ಸಾಹಿತ್ಯದಲ್ಲಿ ಆ ಈ ಸಾಮಾನ್ಯ ಕವಿಯ ಯಾವ ಕೃತಿಯೂ ಉಪಲಬ್ಧವಿಲ್ಲದಿದ್ದರೂ ಕಾವ್ಯ ಸಂಗ್ರಹ (ಸಂಕಲನ)ಕಾರರು ತಮ್ಮ ಸುಭಾಷಿತ ಗ್ರಂಥಗಳಲ್ಲಿ ಅಂಥವನ ಒಂದೇ ಒಂದು ಪದ್ಯ ಚೆನ್ನಾಗಿದ್ದರೂ, ಅದನ್ನು ಆಯ್ದು ಸಂಗ್ರಹಿಸಿಡುವ ವಿಮರ್ಶ ನೈಪುಣ್ಯವನ್ನು ಮೆರೆದಿದ್ದಾರೆ. ಈ ಸಂಗ್ರಹದಲ್ಲಿ ಒಂದೆರಡು ಶಿಲಾಶಾಸನ ಮತ್ತು ಸುಭಾಷಿತಸುಧಾನಿಧಿ ಹಾಗೂ ಶಾರ್ಙ್ಗಧರ ಪದ್ಧತಿಗಳಿಂದ ಆಯ್ದ ಶ್ಲೋಕಗಳು ಆ ಪ್ರಕಾರದವುಗಳಾಗಿವೆ. ಚೆನ್ನಾಗಿರುವುದು ಎಲ್ಲಿದ್ದರೂ, ಅದನ್ನು ಸಂಗ್ರಹಿಸುವ (ಅದು ಶಾಸ್ತ್ರಾರ್ಥವನ್ನೊಳಗೊಂಡಿರಲಿ ಅಥವಾ ಕಾವ್ಯ ಸೌಂದರ್ಯವನ್ನು ಪ್ರಧಾನ ಉಳ್ಳದ್ದಾಗಿರಲಿ) ಸುಭಾಷಿತ ಸಂಗ್ರಾಹಕರ ನೀತಿಯನ್ನು ಪ್ರಸ್ತುತ ಸಂಗ್ರಹ ಅನುಸರಿಸಿದೆ. ಒಂದು ಮಹಾ ನಾಗರಿಕತೆಯ ಮಹಾವೀಚಿಗಳೆನ್ನಿಸುವ ಗ್ರಂಥಗಳ ಅತಿಸಂಖ್ಯೆಯಿಂದ ತುಂಬಿರುವ ಸಂಸ್ಕೃತ ಸಾಹಿತ್ಯ ಸಾಗರದಿಂದ ಈ ಸುಭಾಷಿತಗಳನ್ನು ನಾನಾ ವಿಧದ ವ್ಯಾವಹಾರಿಕ ತೊಂದರೆಗಳ ನಡುವೆ ಆಯ್ದು ಅನುವಾದಿಸುತ್ತ ಹೋದ ಪ್ರಸ್ತುತ ಭಾಷಾಂತರಕಾರನ ಲೋಪದೋಷಗಳನ್ನು ವಿದ್ವಾಂಸರು ಕ್ಷಮಿಸಬೇಕೆಂದು ನಮ್ರ ಪ್ರಾರ್ಥನೆ.

ನಿಯಾಮಕ ಸೂತ್ರ

ವಸ್ತು, ಪಾತ್ರ. ರಸಗಳನ್ನು ನಿಯಾಮಕ ಸೂತ್ರಗಳನ್ನಾಗಿ ತೆಗೆದುಕೊಂಡು ಮಾಡಿದ ಈ ಸುಭಾಷಿತ ಸಂಗ್ರಹವು ಭಾಷಾಂತರದಲ್ಲಿ ಮೂಲಕ್ಕೆ ಅತ್ಯಂತ ನಿಕಟವರ್ತಿಯಾಗಿರುವುದರ ಜೊತೆಗೆ, ಶತಮಾನಗಳಿಂದ ಸುಪ್ರಸಿದ್ಧವಾದ ಕನ್ನಡ ವಾಕ್ಯ ರಚನಾ ಪದ್ಧತಿಯ ಮೂಲಭೂತ ನಿಯಮಗಳನ್ನೂ ಭಾಷಾವಿಶಿಷ್ಟ ರೀತಿ ರುಚಿಯನ್ನೂ ಅದಷ್ಟುಮಟ್ಟಿಗೆ ಕಾಯ್ದುಕೊಂಡು ಬರಲಾಗಿದೆ. ತತ್ಸಮ, ತದ್ಭವ, ದೇಶ್ಯ ಗಳೆಲ್ಲವೂ ಕನ್ನಡ ಪದಗಳೇ ಎಂಬುದನ್ನು ಭಾಷಾಂತರಕಾರ ಇಲ್ಲಿ ಮರೆತಿಲ್ಲ.

ಸಂದರ್ಭಗಳು ಅಸ್ಪಷ್ಟವಾಗಬಹುವಾದ ಸನ್ನಿವೇಶಗಳಲ್ಲಿ ಅವುಗಳ ಸೂಕ್ಷ್ಮ ಪರಿಚಯು ಆಗಿಂದಾಗ ಓದುಗನಿಗಾಗುವಂತೆ ತಕ್ಕ ಪದಗಳಿಂದ ಅವುಗಳನ್ನು ಭಾಷಾಂತರದಲ್ಲಿ ಸೂಚಿಸಲಾಗಿದೆ; ಕೆಲವೆಡೆ ಆವರಣ ಚಿಹ್ನಗಳಿಂದ ಅಂಥ ಪದಗಳನ್ನು ಪ್ರತ್ಯೇಕಿಸಿ ತೋರಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯುದ ಪಠ್ಯಪುಸ್ತಕ ನಿರ್ದೇಶನ ಸಮಿತಿಯುವರು ತಮ್ಮ ಸಂಸ್ಕೃತ ಶಾಖೆಯ ಮುಖ್ಯ ಆಚಾರ್ಯರ ಮೂಲಕ ಈ ಕಾರ್ಯವನ್ನು ಮಾಡಲು ಪ್ರಸ್ತುತ ಲೇಖಕನಿಗೆ ಅವಕಾಶ ಮಾಡಿಕೊಟ್ಟದ್ದು ಸಮಿತಿಯು ಹಾಗೂ ಆಚಾರ್ಯರ ಸಮಾಜ ಶಿಕ್ಷಣ ದೃಷ್ಟಿಗೆ ನಿದರ್ಶನವಾಗಿದೆ.

ಕನ್ನಡತಾಯ ಸಂಸ್ಕೃತಿಯು ಸಂಸ್ಕೃತ ಸೆಲೆಗೆ

ಜಯುವಾಗಲಿ !

೮–೧೦–೧೯೭೦ — ಬಿ. ಎಚ್. ಶ್ರೀಧರ

ಪರಿವಿಡಿ

ಮೊದಲ ಮಾತು

ಅನುಕ್ರಮಣಿಕೆ

ಅಧ್ಯಾಯ— 1 ಪುಟ

ಪ್ರಕರಣ : ಪ್ರೇಮ ಮತ್ತು ಗೃಹಸ್ಥಜೀವನ ೧

1. ನಗರ ಮತ್ತು ಮನೆಗಳು
2. ಪ್ರೇಮಾಲಾಪಗಳು
3. ಗೃಹಸ್ಥಜೀವನ

ಅಧ್ಯಾಯ— 2

ಪ್ರಕರಣ : ಮಾನವನ ತತ್ತ್ವಾನುಸಂಧಾನ ೩೨

1. ತತ್ತ್ವ
2. ಸ್ತುತಿ

ಅಧ್ಯಾಯ— 3

ಪ್ರಕರಣ : ಜೀವನ ಮತ್ತು ಲೋಕಾನುಭವ ೬೦

1. ರಾಜಕೀಯ ಅನುಭವ
2. ವೀರಾನುಭವ
3. ಸಾಮಾಜಿಕ ಅನುಭವ

ಅಧ್ಯಾಯ— 4

ಪ್ರಕರಣ : ಮಹಾನಾಯಕರು ೮೯

ಅಧ್ಯಾಯ— 5

ಪ್ರಕೃತಿಸೌಂದರ್ಯ ವರ್ಣನೆ ೧೧೬

ಅಧ್ಯಾಯ— 6

ಹಾಸ್ಯ ಮತ್ತು ಚತುರೋಕ್ತಿಗಳು ೧೪೮

ಪದ್ಯಸೂಚಿ ಮತ್ತು ಆಕರ ನಿರ್ದೇಶ

ಪ್ರೇಮ ಮತ್ತು ಗೃಹಸ್ಥಜೀವನ

॥ ૐ ॥

ಅಧ್ಯಾಯ ೧

ಪ್ರೇಮ ಮತ್ತು ಗೃಹಸ್ಥಜೀವನ

೧. ನಗರ ಮತ್ತು ಮನೆಗಳು

समुद्रवेला रतिरत्नसम्पदा
वधू तडित्ताण्डवमेघमण्डली ।
नभःस्थली विभ्रमतारकस्रजा
विभाति यत्र स्मरतल्पकल्पना ॥१॥

यदीय सौधध्वजपट्टपट्टिकाः
समुच्चलन्मौक्तिककान्तिनिर्झरैः ।
नभस्तलान्दोलन विभ्रमाहृतं
विनिक्षिपन्तीव सुरापगापयः ॥२॥

प्रकर्षवत्या कपिशीर्षमालया
यदुद्भटस्फाटिक वप्रसंहतिः ।
विलोकयत्यम्बरकेलिदर्पणे
विलासधौतामिव दन्तमण्डलीम् ॥३॥

समुच्छलन्मौक्तिक कान्तिवारिभिः
सुवर्णकुम्भैः सुरसद्ममूर्धगैः ।
प्रपापिपासा परितापशान्तये
नभश्चरीणामिव येन निर्मिता ॥४॥

ಓಂ

ಅಧ್ಯಾಯ ೧

ಪ್ರೇಮ ಮತ್ತು ಗೃಹಸ್ಥಜೀವನ

೧. ನಗರ ಮತ್ತು ಮನೆಗಳು

೧. ಅಲ್ಲಿ ತನ್ನ ರತಿ-ರತ್ನಸಂಪತ್ತಿನಿಂದ ಕಡಲ ಬೇಲೆಯೂ, ತನ್ನ ಪ್ರೇಯಸಿಯಾದ ಮಿಂಚಿನ ಕುಣಿತದಿಂದ ಮುಗಿಲೊಡ್ಡೂ, ವಿಲಾಸಪೂರ್ಣವಾದ ತಾರಾಹಾರದಿಂದ ಬಾಂದಳವೂ ಮನ್ಮಥನ ಹಾಸಿಗೆಯ ಸ್ವರೂಪದಲ್ಲಿ ರಾರಾಜಿಸುತ್ತವೆ.

೨. ಆ ನಗರದ ಸೌಧಗಳ ಧ್ವಜಗಳ ರೇಶಿಮೆಯ ಪಟ್ಟಿಗಳು ತಮ್ಮ ಮುತ್ತಿನ ಕಾಂತಿಯೆಂಬ ನೀರಿನ ಚಿಟ್ಟದೊರೆಗಳಿಂದ, ಆಕಾಶದಲ್ಲಿ ಅತ್ತಿತ್ತ ಚಲಿಸುವ ವಿಲಾಸದೊಡನೆ, ದೇವಗಂಗೆಯ ನೀರನ್ನು ತಂದು ಚಿಮುಕಿಸುತ್ತಿರುವಂತೆ ತೋರುತ್ತವೆ.

೩. ಅಲ್ಲಿ ದೊಡ್ಡ ಸ್ಫಟಿಕಶಿಲೆಯಿಂದ ನಿರ್ಮಿತವಾದ ನಗರಪ್ರಾಕಾರಗಳ ಸಮೂಹಕ್ಕೆ ದೊಡ್ಡ-ದೊಡ್ಡ ಕೊತ್ತಳಗಳಿವೆ. ಆಗಸವೆಂಬ ಅಡುಗನ್ನಡಿಯಲ್ಲಿ ಆ ನಗರಿಯು, ವಿಲಾಸದಿಂದ ತೊಳೆದು ಚೊಕ್ಕಮಾಡಿದಂಥ ಹಲ್ಲುಗಳಂತಿರುವ ಆ ಕೊತ್ತಳಗಳನ್ನು ನೋಡಿಕೊಳ್ಳುತ್ತಿರುವಂತೆ ತೋರುತ್ತದೆ.

೪. ದೇವಾಲಯಗಳ ಮೇಲಿರುವ ಚಿನ್ನದ ಕಲಶಗಳಿಂದ ಮುತ್ತಿನ ಕಾಂತಿಯ ನೀರು ಸಿಡಿದು ಹಾರುತ್ತಿರುವುದು, ಆಗಸದಲ್ಲಿ ಸಂಚರಿಸುವ ಅಪ್ಸರೆಯರಿಗೆ ಬಾಯಾರಿಕೆಯನ್ನು ಪರಿಹರಿಸಿಕೊಳ್ಳಲು ನಲ್ಲಿಗಳನ್ನು ನಿರ್ಮಿಸಿರುವ ಹಾಗೆ ತೋರುತ್ತದೆ.

जलाशया यत्र हसन्ति सन्ततं
नवेन्द्रनीलद्रवनिर्मलोदराः ।
शरत्समुत्सारितमेघकर्दमं
कलिन्दकन्या ह्रदमेचकं नभः ॥५॥

नृत्यन्मुग्धमयूरा मरकत धारा-
गृहावली सततम् ।
सेन्द्रायुध घननिवहा
प्रावृण्मूर्तेव यत्रास्ते ॥६॥

तनोति सा कोपिनि शान्तभावं
मनःसु यः कोऽपि निशान्तभावम् ।
खगाश्च यस्यां कलशालिकण्ठा
गृहाश्च भास्वत्कलशालिकण्ठाः ॥७॥

यत्सौधचन्द्रशालासु विहरन्त्यो मृगेक्षणाः ।
शशाङ्कमवलम्बन्ते मुक्ताकन्दुकशङ्कया ॥८॥

यद्दीर्घिकासु माणिक्यामयसोपानचारिभिः
क्षणदास्वपि चक्राह्वैर्विरहो नानुभूयते ॥९॥

मारप्रशस्ति कृतपुस्तकमेव चूतः
षट्पादपङ्क्ति लिपिराजिविराजितानि ।
पत्राणि तत्र हि पठन्ति शुकाः शृणोति
चैत्रः समं द्विजवरैर्मुदितान्तरङ्गैः ॥१०॥

हस्ते लीलाकमलमलके बालकुन्दानुविद्धं
नीता लोध्रप्रसवरजसा पांडुतामानन श्रीः ।
चूडापाशे नवकुरबकं चारुकर्णे शिरीषं
सीमन्ते च त्वदुपगमजं यत्र नीपं वधूनाम् ॥११॥

೫. ಅಲ್ಲಿ ಜಲಾಶಯಗಳು ನಿತ್ಯವೂ ನಗುತ್ತಿರುತ್ತವೆ; ಅವುಗಳಲ್ಲಿ ಹೊಸ ನೀಲಮಣಿಯ ರಸದಂಥ ನಿರ್ಮಲವಾದ ನೀರಿರುತ್ತದೆ. ಶರದೃತು ಬಂದ ಮೇಲೆ, ಮೋಡಗೆಸರನ್ನು ತೆಗೆದು ಸ್ವಚ್ಛವಾಡಿದ ಮತ್ತು ಯಮುನಾನದಿಯ ಗುಂಡಿಯಷ್ಟು ನೀಲವಾಗಿರುವ ಆಗಸವೂ ಹಾಗೇ ನಗುಮೊಗವುಳ್ಳದ್ದಾಗಿದೆ.

೬. ಅಲ್ಲಿ ಪಚ್ಚೆಯ ಕಾರಂಜಿಗಳು ಪುಟಿಯುತ್ತಿವೆ; ಯಾವಾಗಲೂ ಮುದ್ದಾದ ನವಿಲುಗಳು ಕುಣಿಯುತ್ತಿರುತ್ತವೆ; ಮೋಡದೊಡ್ಡುಗಳು ಕಾಮನ ಬಿಲ್ಲುಗಳಿಂದ ಕೂಡಿರುತ್ತವೆ; ಮಳೆಗಾಲವು ಮೈದಳೆದಂತಿರುತ್ತದೆ.

೭. ಆ ನಗರಿಯು ಸಿಟ್ಟಿನ ಮನುಷ್ಯನಲ್ಲಿ ಶಾಂತಭಾವವನ್ನು ಹರಿಸುತ್ತದೆ, ಮನದಲ್ಲಿ ಯಾವುದೋ ಒಂದು ವಿಧದ ತಂಬೆಳರನ್ನು ತುಂಬುತ್ತದೆ. ಅಲ್ಲಿಯ ಹಕ್ಕಿಗಳು ಇನಿಗೊರಲಿನವು, ಮನೆಗಳು ಹೊಳೆವ ಕಲಕಂತದ ಕೊಡಗಳಿಂದ ತುಂಬಿರುತ್ತವೆ.

೮. ಅದರ ಮಹಡಿಮನೆಗಳ ಚಂದ್ರಶಾಲೆಗಳಲ್ಲಿ ಚಿಗುರೆಗಣ್ಣಿನ ಚೆಲುವೆಯರು ತಿರುಗಾಡುತ್ತಿರುತ್ತಾರೆ; ಅವರು ಮುತ್ತಿನ ಚೆಂಡೆಂಬ ಭ್ರಾಂತಿಯಿಂದ ಚಂದ್ರನನ್ನು ಹಿಡಿಯುತ್ತಿರುತ್ತಾರೆ.

೯. ಅಲ್ಲಿ ಮಾಣಿಕ್ಯದಿಂದ ಮಾಡಿರುವ ಮೆಟ್ಟಿಲಿನ ಕೆರೆಗಳಿವೆ; ಅವುಗಳ ಮೆಟ್ಟಿಲುಗಳ ಮೇಲೆ ತಿರುಗಾಡುವ ಜಕ್ಕವಕ್ಕಿಗಳು ಇರುಳಲ್ಲಿ ಕೂಡ ವಿರಹವನ್ನು ಅನುಭವಿಸವು.

೧೦. ಅಲ್ಲಿಯ ಮಾಮರವು ಮನ್ಮಥನ ಪ್ರಶಸ್ತಿಗಾಗಿಯೇ ರಚಿಸಿದ ಒಂದು ಹೊತ್ತಗೆ. ಆ ಹೊತ್ತಗೆಯು ತುಂಬಿ, ಸಾಲುಗಳೆಂಬ ಅಕ್ಷರಪಂಕ್ತಿಗಳಿಂದ ವಿರಾಜಿಸುತ್ತದೆ. ಅದರ ಎಲೆಗಳೆಂಬ ಹಾಳೆಗಳಲ್ಲಿ ಬರೆದುದನ್ನು ಗಿಳಿಗಳು ಓದುತ್ತವೆ; ಅದನ್ನು ಪ್ರಸನ್ನಚಿತ್ತದ ಶ್ರೇಷ್ಠ ಹಕ್ಕಿಗಳೊಡನೆ ಚೈತ್ರಮಾಸವು ಕೇಳುತ್ತದೆ.

೧೧. ಅಲ್ಲಿಯ ತರುಣಿಯರ ಕೈಯಲ್ಲಿ ಲೀಲಾಕಮಲ; ಮುಂಗುರುಳಿನಲ್ಲಿ ಎಳೆಮಲ್ಲಿಗೆ ಸರ. ತಮ್ಮ ಮೊಗದ ಕಳೆಯನ್ನವರು ಲೋಧ್ರಪರಾಗದಿಂದ ಬೆಳ್ಳಗೆ ಮಾಡಿಕೊಳ್ಳುತ್ತಾರೆ; ಹಿಂದಲೆಯಲ್ಲಿ ಹೊಸ ಗೋರಟೆಯನ್ನು ಮುಡಿದಿರುವ ಅವರ ಚೆಲುವಾದ ಕಿವಿಯಲ್ಲಿ ರಂಜಲ ಹೂವಿರುತ್ತದೆ; ಬೈತಲೆಯಲ್ಲಿ ನಿನ್ನ (ಮೋಡದ) ಬರವಿನಿಂದ ಅರಳಿದ ಈಚಲ ಹೂ !

विद्युत्वन्तं ललितवनिताः सेन्द्रचापं सचित्राः
सङ्गीताय प्रहतमुरजाः स्निग्धपर्जन्यघोषम् ।
अन्तस्तोयं मणिमयभुवस्तुङ्गमभ्रंलिहाग्राः
प्रासादास्त्वां तुलयितुमलं यत्र तैस्तैर्विशेषैः ।।१२।।

प्रतिनगरमिहारामाः प्रत्यारामं पचेलिमाः क्रमुकाः ।
प्रसवाः प्रतिक्रमुकमप्युपसर्पति मधुपतिः प्रतिप्रसवम् ।।१३।।

प्रतिमधुबिन्दु मिलिन्दाः प्रेङ्खन्ति प्रतिमिलिन्दमारावाः ।
प्रत्यारावं सुदृशां मदा उदाराः प्रतिमदं मदनः ।।१४।।

೨. ಪ್ರೇಮಾಲಾಪಗಳು

त्वन्मुखं पुण्डरीकं च फुल्ले सुरभिगन्धिनी ।
भ्रमद्भ्रमरमम्भोजं लोलनेत्रं मुखं तु ते ।।१५।।

नैतन्मुखमिदं पद्मं न नेत्रे भ्रमराविमौ ।
एतानि केसराण्येव नैता दन्तार्चिषस्तव ।।१६।।

मदरक्तकपोलेन मन्मथस्त्वन्मुखेन्दुना ।
नर्तितभ्रूलतेनालं मर्दितुं भुवनत्रयम् ।।१७।।

अङ्गुल्यः पल्लवान्यासन् कुसुमानि नखार्चिषः ।
बाहूलते वसन्तश्रीस्त्वं नः प्रत्यक्षचारिणी ।।१८।।

व्यूढोरस्को वृषस्कन्धः सालप्रांशुर्महाभुजः ।
आत्मकर्मक्षमं देहं क्षात्रो धर्म इवाश्रितः ।।१९।।

೧೨. ಸುಂದರಿಯರಿಂದ, ಚಿತ್ರಗಳಿಂದ, ಸಂಗೀತಕ್ಕಾಗಿ ಬಡಿಯಲಾಗುವ ಮದ್ದಲೆಗಳಿಂದ, ರತ್ನಖಚಿತವಾದ ನೆಲಗಳಿಂದ ಮತ್ತು ಮುಗಿಲು ಮುಟ್ಟುವ ಮಾಡಿನ ತುದಿಗಳಿಂದ ಕೂಡಿದ ಅಲ್ಲಿಯ ಅರಮನೆಗಳು ಮಿಂಚಿನಿಂದ, ಕಾಮನಬಿಲ್ಲಿನಿಂದ, ಆಹ್ಲಾದಕರವಾದ ಗುಡುಗಿನಿಂದ ಮತ್ತು ಒಳಗೆ ತುಂಬಿಕೊಂಡ ನೀರಿನಿಂದ ಉನ್ನತವಾದ ನಿನ್ನನ್ನು (ಮೋಡವನ್ನು) ತಮ್ಮ ವಿಶೇಷಗಳಿಂದ ಹೋಲುತ್ತವೆ.

೧೩. ಕರ್ನಾಟಕದ ನಗರ-ನಗರಗಳಲ್ಲಿ ತೋಟ, ತೋಟ-ತೋಟಗಳಲ್ಲಿ ಬೆಳೆದ ಅಡಿಕೆಮರ, ಮರ-ಮರಗಳಲ್ಲಿ ಸಿಂಗಾರ ಹೂ, ಹೂ-ಹೂಗಳಲ್ಲಿ ತುಂಬಿ ಸೊಗಯಿಸುತ್ತಿವೆ.

೧೪. ಮಕರಂದದ ಆ ಹನಿ-ಹನಿಗಳಲ್ಲಿ ಒಂದೊಂದು ತುಂಬಿ ಆಡುತ್ತದೆ: ಆ ತುಂಬಿ-ತುಂಬಿಗಳಲ್ಲಿ ಗುಂಜಾರವದ ಉದಯ; ಅಂಥ ರವ-ರವಗಳಿಗೆ ಚೆಲುವು-ಗಣ್ಣಿನ ನಾರಿಯರ ಮದೋಲ್ಲಾಸ ಮತ್ತು ಆ ಮದೋಲ್ಲಾಸಗಳಿಂದ ಪ್ರೇಮೋ-ತ್ಪತ್ತಿ!

೨. ಪ್ರೇಮಾಲಾಪಗಳು

೧೫. ನಿನ್ನ ಮೊಗವೂ ಚೆಂದಾವರೆಯೂ ಅರಳಿವೆ; ಮತ್ತು ಪರಿಮಳಿಸುತ್ತಿವೆ. ಆದರೆ ತಾವರೆಯ ಸುತ್ತಲೂ ತುಂಬಿ ತಿರುಗುತ್ತಿದೆ, ನಿನ್ನ ಮೊಗದಲ್ಲಿ ಕಣ್ಣುಗಳು ಚಲಿಸುತ್ತಿವೆ.

೧೬. ಇದು ಮೊಗವಲ್ಲ, ತಾವರೆ; ಇವು ಕಣ್ಣುಗಳಲ್ಲ, ತುಂಬಿಗಳು: ಇವು ಕೇಸರಗಳೇ ಸರಿ, ನಿನ್ನ ದಂತಕಿರಣಗಳಲ್ಲ.

೧೭. ನಿನ್ನ ಮುಖಚಂದ್ರನಲ್ಲಿ ಮದದಿಂದ ಕೆಂಪಾದ ಕೆನ್ನೆಯಿದೆ, ಕುಣಿಯುವ ಹುಬ್ಬುಗಳಿವೆ; ಮನ್ಮಥನಿಗಿದು ಮೂರು ಲೋಕಗಳನ್ನು ಮರ್ದಿಸಲು ಸಾಕು.

೧೮. ನಮ್ಮೆದುರು ತಿರುಗುತ್ತಿರುವ ನೀನು ವಸಂತ ಋತುವಿನ ಸಿರಿಯೇ ಸರಿ; ನಿನ್ನ ಬೆರಳುಗಳೇ ಚಿಗುರುಗಳು, ಉಗುರು ಮಿಂಚುಗಳೇ ಹೂವುಗಳು, ತೋಳುಗಳೇ ಬಳ್ಳಿಗಳು!

೧೯. ಇವನ ಎದೆ ಅಗಲವಾಗಿದೆ; ಇವನಿಗೆ ಎತ್ತಿನಂಥ ಹೆಗಲುಗಳಿವೆ; ಇವನು ಸಾಲ ವೃಕ್ಷದಷ್ಟು ಎತ್ತರವಾಗಿದ್ದಾನೆ; ಇವನೊಬ್ಬ ನೀಳ್ದೋಳಿನವ: ಇವನನ್ನು ಕಂಡರೆ ಕ್ಷಾತ್ರಧರ್ಮವು ತನ್ನ ಕರ್ತವ್ಯ ನಿರ್ವಹಣಕ್ಕಾಗಿ ತಕ್ಕ ದೇಹವನ್ನು ತಾಳಿ ನಿಂತಂತೆ ತೋರುತ್ತದೆ.

आकारसदृशप्रज्ञः प्रज्ञया सदृशागमः ।
आगमैः सदृशारम्भ आरम्भसदृशोदयः ।।२०।।

तव न जाने हृदयं मम पुनः कामो दिवापि रात्रावपि ।
निर्घृण तपति बलीयस्त्वयि वृत्तमनोरथाया अङ्गानि
।।२१।।

मयि मलयसमीरो वर्षतीव स्फुलिङ्गान्
अहह हिमकरो मामग्निना सिञ्चतीव ।
किमिति मकरकेतोः किं नु वक्ष्ये कठोरे
कथमपि तदहं ते नाथ नोपेक्षणीया ।।२२।।

यदुच्यते पार्वति पापवृत्तये
न रूपमित्यव्यभिचारि तद्वचः ।
तथा हि ते शीलमुदारदर्शने
तपस्विनामप्युपदेशतां गतम् ।।२३।।

तपति तनुगात्रि मदनस्त्वामनिशं मां पुनर्दहत्येव
ग्लपयति यथा शशाङ्कं न तथाहि कुमुद्वतीं दिवसः ।।२४।।

अनातुरोत्कण्ठितयोः प्रसिध्यता
समागमेनापि रतिर्न मां प्रति ।
परस्पर प्रीति निराशयोर्वरं
शरीरनाशोऽपि समानुरागयोः ।।२५।।

विरहेऽपि सङ्गमः खलु परस्परं सङ्गतं मनो येषाम् ।
हृदयं विघट्टितं चेत् सङ्गो विरहं विशेषयति ।।२६।।

೨೦. ಇವನಲ್ಲಿ ಆಕೃತಿಗೆ ಸದೃಶವಾದ ಪ್ರಜ್ಞೆಯಿದೆ, ಪ್ರಜ್ಞೆಗೆ ತಕ್ಕ ಪಾಂಡಿತ್ಯವಿದೆ; ಇವನ ಕಾರ್ಯಾರಂಭಗಳು ಇವನ ಪಾಂಡಿತ್ಯಕ್ಕೆ ತಕ್ಕಂಥವುಗಳಾಗಿವೆ; ಅವುಗಳಿಗೆ ಸರಿಯಾದ ಸಮೃದ್ಧಿಯನ್ನು ಇವನು ಪಡೆದಿದ್ದಾನೆ.

೨೧. ಎಲೈ ನಿರ್ದಯನೇ, ನಿನ್ನ ಹೃದಯ ನನಗರಿಯದು. ನನ್ನನ್ನಾದರೋ ಹಗಲಿರುಳೂ ಬಲಿಷ್ಠನಾದ ಮನ್ಮಥನು ಕಾಯಿಸುತ್ತಿದ್ದಾನೆ; ಏಕೆಂದರೆ, ನನ್ನ ಅಂಗಾಂಗಗಳೆಲ್ಲವೂ ನಿನ್ನಲ್ಲಿ ಮಗ್ನವಾಗಿವೆ.

೨೨. ಎಲೈ ಮಾರುತನೇ, ಮಲಯಮಾರುತನು ನನ್ನ ಮೇಲೆ ಕಿಡಿಗಳನ್ನು ಸುರಿಸುತ್ತಿರುವಂತೆ ತೋರುತ್ತದೆ; ಅಹಹಾ, ತಂಗದಿರನು ನನ್ನ ಮೇಲೆ ಬೆಂಕಿಯನ್ನು ಚಿಮುಕಿಸುತ್ತಿರುವ ಹಾಗೆ ಭಾಸವಾಗುತ್ತದೆ. ಉಗ್ರನಾದ ಮನ್ಮಥನ ವಿಷಯವಾಗಿ ಏನು ಹೇಳಲಿ ? ನಾನು ನಿನ್ನವಳು; ಏನೇ ಆದರೂ ನೀನು ನನ್ನನ್ನು ಉಪೇಕ್ಷಿಸದಿರು.

೨೩. ಎಲೈ ಪರ್ವತರಾಯನ ಮಗಳೇ, ರೂಪವಿರುವುದು ಪಾಪಾಚಾರಕ್ಕಲ್ಲ- ಎಂಬ ಮಾತಿಗೆ ವ್ಯತ್ಯಯವಿಲ್ಲ; ಎಲೈ ಉದಾರಸ್ವರೂಪಿಣಿಯೇ, ಆದ್ದರಿಂದಲೇ ನಿನ್ನ ಶೀಲವು ತಪಸ್ವಿಗಳಿಗೆ ಕೂಡ ಒಂದು ಉಪದೇಶವಾಗಿ ಕಾಣುವಂತಾಯ್ತು !

೨೪. ಎಲೈ ತೆಳುಮೈಯವಳೇ, ಮನ್ಮಥನು ನಿನ್ನನ್ನು ಕಾಯಿಸುತ್ತಿದ್ದಾನೆ; ನನ್ನನ್ನಾದರೋ ಯಾವಾಗಲೂ ಸುಡುತ್ತಲೇ ಇದ್ದಾನೆ. ಹಗಲು ಚಂದ್ರನನ್ನು ಗ್ಲಾನಿಗೀಡುಮಾಡುವಂತೆ, ತಾವರೆಬಳ್ಳಿಯನ್ನು ಈಡು ಮಾಡುವುದಿಲ್ಲ.

೨೫. ಪ್ರೇಮಿಗಳಲ್ಲಿ ಒಬ್ಬರು ಉದಾಸೀನರಾಗಿಯೂ, ಇನ್ನೊಬ್ಬರು ಉತ್ಕಂಠಿತರಾಗಿಯೂ ಇದ್ದಾಗ, ಅವರ ಮಿಲನವು ಯಶಸ್ವಿಯಾಗಿ ನೆರವೇರಿದರೂ ಅದು ನನಗೆ ಸೇರದು; ಅದಕ್ಕಿಂತ, ಪರಸ್ಪರ ಸಮಾನ ಪ್ರೀತಿಯುಳ್ಳ ಪ್ರಿಯ-ಪ್ರೇಯಸಿಯರು ಕೂಡಲಾರದೆ ನಿರಾಶೆಯಿಂದ ಸೊರಗಿ ಹೋಗುವುದೇ ಲೇಸು !

೨೬. ಮನಗಳು ಪರಸ್ಪರ ಸಂಗತವಾಗಿರುವವರಲ್ಲಿ ವಿರಹದಲ್ಲೂ ಮಿಲನವಿದೆ; ಹೃದಯಗಳು ಪರಸ್ಪರ ಹೊಂದಿಕೊಳ್ಳದಿರುವವರಲ್ಲಿ ಮಿಲನವು ವಿರಹವನ್ನು ಮೀರಿಸುವ ಯಾತನೆಯನ್ನುಂಟು ಮಾಡುತ್ತದೆ !

दुर्लभः प्रियो मे तस्मिन् भव हृदय निराशं
अहो अपाङ्गको मे प्रस्फुरति किमपि वामकः ।
एष स चिरदृष्टः कथमुपनेतव्यो
नाथ मां पराधीनां त्वयि गणय सतृष्णाम् ॥२७॥

शशधर इव लोचनाभिरामैर्
गगनविसारिभिरंशुभिः परीतः ।
शिखरनिचयमेकसानुसद्मा
सकलमिवापि दधन्महीधरस्य ॥२८॥

ऋतुर्व्यतीतः परिवर्तते पुनः
क्षयं प्रयातः पुनरेति चन्द्रमाः ।
गतं गतं नैव तु सन्निवर्तते
जलं नदीनां च नृणां च यौवनम् ॥२९॥

सा मां द्रक्ष्यति वक्ष्यति प्रियकथां प्रत्यङ्गमालिङ्गनैः
प्रीतिं यास्यति रंस्यते सखि समागत्येति चिन्ताकुलः ।
सत्वां पश्यति कम्पते पुलकयत्यानन्दति स्विद्यति
प्रत्युद्गच्छति मूर्च्छति स्थिरतमः पुञ्जे निकुञ्जे प्रियः
॥३०॥

प्रयान्तीव प्राणाः सुतनु हृदयं ध्वंसत इव
ज्वलन्तीवाङ्गानि प्रसरति समन्तादिव तमः
त्वराप्रस्तावोऽयं न खलु परिहासस्य विषयम्
तदक्षणोरानन्दं वितर मयि मा भूरकरुणा ॥३१॥

गूढा नूपुरशब्दमात्रमपि मे कान्ता श्रुतौ पातयेत्
पश्चादेत्य शनैः कराम्बुजवृते कुर्वीत वा लोचने ।
हर्म्येऽस्मिन्नवतीर्य साध्वसवशान्मन्दायमाना बलाद्
आनीयेत पदात् पदं चतुरया सख्या ममोपान्तिकम् ॥३२॥

೨೭. ನನಗೆ ಪ್ರಿಯನು ದುರ್ಲಭನಾಗಿದ್ದಾನೆ. ಎಲೈ ಹೃದಯವೇ, ಆಶೆಯನ್ನು ಬಿಡು. ಆದರಿದೇನು? ನನ್ನ ಎಡಗಣ್ಣು ಹಾರುತ್ತಿದೆ! ಯಾವಾಗಲೂ ಕಂಡ ಈತನನ್ನು ಹತ್ತಿರಕ್ಕೆ ಕರೆತರುವುದು ಹೇಗೆ? ಎಲೈ ನಲ್ಲನೇ, ಪರಾಧೀನೆಯಾದ ನನ್ನನ್ನು ನಿನ್ನಲ್ಲಿ ಪ್ರೀತಿಯನ್ನಿಟ್ಟುಕೊಂಡಿರುವವಳೆಂದು ತಿಳಿ.

೨೮. ಚಂದ್ರನಂತೆ ಕಣ್ಣಿಗೆ ಚಂದವಾಗಿ ಕಾಣುವ, ಬಾನಲ್ಲಿ ಪಸರಿಸಿರುವ ಕಿರಣಗಳಿಂದ ಸುತ್ತುವರಿಯಲ್ಪಟ್ಟು, ಪರ್ವತದ ಒಂದು ತಪ್ಪಲಿನಲ್ಲಿ ಕುಳಿತ ಈತನು ಇಡಿ ಬೆಟ್ಟವನ್ನು ಆವರಿಸಿರುವಂತೆ ತೋರುತ್ತಾನೆ.

೨೯. ಕಳೆದ ಋತುವು ಪುನಃ ಬರುತ್ತದೆ. ಕ್ಷಯಿಸಿದ ಚಂದ್ರನು ಮತ್ತೆ ಬರುತ್ತಾನೆ. ಆದರೆ, ಹೊಳೆಗಳ ನೀರೂ, ಮಾನವರ ಯೌವನವೂ ಹೋದರೆ ಹೋಗಿಯೇ ಬಿಡುತ್ತವೆ. ಪುನಃ ತಿರುಗಿ ಬರುವುದಿಲ್ಲ.

೩೦. ಎಲೈ ಗೆಳತಿಯೇ, 'ಅವಳು ನನ್ನನ್ನು ನೋಡುವಳು, ಅಂಗಾಂಗಗಳನ್ನಪ್ಪಿ ಪ್ರಿಯವಾದ ಸುದ್ದಿಯನ್ನು ಹೇಳುವಳು, ಪ್ರೀತಳಾಗುವಳು, ಬಂದು ರಮಿಸುವಳು', ಎಂಬ ಆಲೋಚನೆಯಿಂದ ಕೂಡಿದ, ನಿನ್ನಲ್ಲಿ ದೃಢ ಪ್ರೀತಿಯನ್ನಿಟ್ಟ ಪ್ರಿಯನು ದಟ್ಟವಾದ ಎಲೆವನೆಯಲ್ಲಿ ನಿನ್ನನ್ನು ನೋಡುವನು, ನಡುಗುವನು, ರೋಮಾಂಚ ಹೊಂದುವನು, ಆನಂದಪಡುವನು. ಬೆವರುವನು, ಎದುರುಗೊಳ್ಳಬರುವನು ಹಾಗೂ ಮೈಮರೆಯುವನು!

೩೧. ಸುಂದರಿ, ಉಸಿರು ಹಾರಿಹೋಗುವ ಹಾಗಿದೆ, ಹೃದಯ ನಷ್ಟವಾಗಿ ಹೋಗುವಂತೆ ತೋರುತ್ತಿದೆ, ಕೈ–ಕಾಲು–ತಲೆಗಳು ಉರಿದು ಹೋಗುವ ಹಾಗೆನ್ನಿಸುತ್ತದೆ. ಹತ್ತಿರದಲ್ಲಿ ಕತ್ತಲು ಕವಿದುಕೊಂಡು ಬರುವಂತೆ ಕಾಣುತ್ತದೆ. ಇದು ಅವಸರದ ಮಾತು, ಪರಿಹಾಸದ ವಿಷಯವಲ್ಲ. ಆದುದರಿಂದ ಕಣ್ಣಿಗೆ ಆನಂದ ಕೊಡು, ನನ್ನಲ್ಲಿ ನಿಷ್ಕರುಣೆಯಾಗಬೇಡ!

೩೨. ನನ್ನ ನಲ್ಲೆಯು ಕಾಣಿಸಿಕೊಳ್ಳದೆ ತನ್ನ ಕಾಲಂದುಗೆಯ ಸದ್ದನ್ನು ಮಾತ್ರ ನನ್ನ ಕಿವಿಗೆ ಬೀಳಿಸಲಿ; ಆ ಮೇಲೆ ಮೆಲ್ಲನೆ ಬಂದು, ನನ್ನ ಕಣ್ಣುಗಳನ್ನು ತನ್ನ ಕರಕಮಲಗಳಿಂದ ಮುಚ್ಚಿದರೂ ಸರಿಯೆ. ಈ ಅರಮನೆಯಲ್ಲಿಳಿದು ಗಾಬರಿಯಿಂದ ನಡೆಯಲಾರಂಭಿಸಿದ ಅವಳನ್ನು ಒಂದೊಂದೇ ಹೆಜ್ಜೆಯನ್ನು ಒತ್ತಾಯದಿಂದ ಇಡಿಸುತ್ತ, ಅವಳ ಜಾಣ ಗೆಳತಿಯು ಅವಳನ್ನು ನನ್ನ ಹತ್ತಿರ ಕರೆತರಲಿ.

प्रेमार्द्राः प्रणयस्पृशः परिचयादुद्गाढ रागोदयास्
तास्ता मुग्धदृशो निसर्गमधुराश्चेष्टा भवेयुर्मयि ।
यास्वन्तःकरणस्य वाह्यकरण व्यापार रोधीक्षणाद्
आशंसा परिकल्पितास्वपि भवत्यानन्दसान्द्रो लयः ॥३३॥

सानुरागाः सानुकम्पाश्चतुराः शीलशीतलाः ।
हरन्ति हृदयं हन्त कान्तायाः स्वान्तवृत्तयः ॥३४॥

सहिष्ये विरहं नाथ देह्यदृश्याञ्जनं मम ।
यदक्तनेत्रां कन्दर्पः प्रहर्ता मां न पश्यति ॥३५॥

गच्छ गच्छसि चेत् कान्त पन्थानः सन्तु ते शिवाः ।
ममापि जन्म तत्रैव भूयाद्यत्र गतो भवान् ॥३६॥

दलति हृदयं गाढोद्वेगं द्विधा तु न भिद्यते
वहति विकलः कायो मोहं न मुञ्चति चेतनाम् ।
ज्वलयति तनूमन्तर्दाहः करोति न भस्मसात्
प्रहरति विधिर्मर्मच्छेदी न कृन्तति जीवितम् ॥३७॥

लोलोल्लोलक्षुभितकरुणोज्जृम्भणस्तम्भनार्थं
यो यो यत्नः कथमपि समाधीयते तं तमन्तः ।
भित्वा भित्वा प्रसरति बलात् कोऽपि चेतोविकारस्
तोयस्येवाप्रतिहतरयः सैकतं सेतुमोघः ॥३८॥

हाहा देवि स्फुटति हृदयं ध्वंसते देहबन्धः
शून्यं मन्ये जगदविरतज्वालमन्तर्ज्वलामि ।
सीदन्नन्धे तमसि विधुरो मज्जतीवान्तरात्मा
विष्वङ्मोहः स्थगयति कथं मन्दभाग्यः करोमि ॥३९॥

೩೩. ಆ ಮುದ್ದುನೋಟದವಳ ಪ್ರೇಮಾರ್ದ್ರವೂ, ಪ್ರಣಯಸ್ಪರ್ಶಿಯೂ, ಸ್ವಭಾವತಃ ಮಧುರವೂ ಆದ ವಿವಿಧ ವರ್ತನೆಯು, ನನ್ನಲ್ಲಿಯ ಪರಿಚಯದ ಬಲದಿಂದ, ಗಾಢವಾದ ಭಾವೋದ್ರೇಕವನ್ನು ಪ್ರಕಟಿಸಲಿ. ಹಾಗೆ ಪ್ರಕಟಿಸುವುದನ್ನು ಕ್ಷಣಮಾತ್ರ ಮನಸ್ಸಿನಲ್ಲಿ ಊಹಿಸಿಕೊಂಡರೂ ಆ ಊಹೆ ನನ್ನೆದೆಯಲ್ಲಿ ನನ್ನ ಬಾಹ್ಯ ಅವಯವಗಳ ಚಲನವಲನಗಳೆಲ್ಲವನ್ನೂ ಸ್ಥಗಿತಗೊಳಿಸುವಷ್ಟರಮಟ್ಟಿನ ಆಳವಾದ ಆನಂದ ಸಮಾಧಿಯನ್ನು ಸ್ಫುರಿಸುವಂತೆ ಮಾಡುವುದು!

೩೪. ಅಹಹಾ, ಅನುರಾಗ – ಅನುಕಂಪಗಳಿಂದ ಕೂಡಿದ, ಚಾತುರ್ಯವುಳ್ಳ ಶೀಲದ ತಣ್ಪಿನಿಂದ ತುಂಬಿದ ನನ್ನವಳ ಹೃತ್ಪೂರ್ವಕವೂ, ವೈವಿಧ್ಯಪೂರ್ಣವೂ ಆದ ನಡತೆಯು ನನ್ನ ಮನಸ್ಸನ್ನು ಮಾರುಹೋಗುವಂತೆ ಮಾಡುವುದು!

೩೫. ನಲ್ಲ, ವಿರಹವನ್ನು ಸಹಿಸಿಕೊಳ್ಳುವೆನು; ನನಗೆ ಅದೃಶ್ಯವಾಗಲು ಬರುವಂಥ ಅಂಜನವನ್ನು ಕೊಡು. ಅಂಥ ಅಂಜನವನ್ನು ಕಣ್ಣಿಗೆ ಹಚ್ಚಿಕೊಂಡಾಗ ಹೊಡೆಯಲು ಬರುವ ಮನ್ಮಥನು ನನ್ನನ್ನು ಕಾಣನು.

೩೬. ಇನಿಯ, ಹೋಗುವುದಾದರೆ ಹೋಗು; ನಿನ್ನ ದಾರಿ ಶುಭವಾಗಲಿ. ನನ್ನ ಮರುಹುಟ್ಟು, ನೀನು ಹೋದಲ್ಲೇ ಉಂಟಾಗಲಿ.

೩೭. ಗಾಢವಾದ ಉದ್ವೇಗದಿಂದ ಕೂಡಿದ ಹೃದಯವು ಬಿರಿಯುತ್ತಿದೆ, ಆದರೆ ಒಡೆದು ಎರಡು ಹೋಳಾಗಲಿಲ್ಲ. ಗಾಬರಿಗೆಟ್ಟ ಈ ಮೈ ಮರವಟ್ಟು ಹೋಗಿದೆ; ಆದರಿದು ಜೀವವನ್ನು ಬಿಡಲಿಲ್ಲ. ಒಳಗಿನ ಉರಿಯು ಮೈಯನ್ನು ಸುಡುತ್ತಿದೆ, ಆದರೆ ಅದನ್ನು ಬೂದಿ ಮಾಡದಾಗಿದೆ. ಮರ್ಮಭೇದಕವಾದ ಅದೃಷ್ಟವು ಹೊಡೆಯುತ್ತಿದೆ, ಆದರದು ಜೀವಿತವನ್ನು ಕಡಿದು ತುಂಡು ಮಾಡದಾಗಿದೆ!

೩೮. ಅಲೆಯಲೆಯಾಗಿ ಏರಿಬರುವ ಕರುಣತರಂಗಗಳನ್ನು ತಡೆಯಲು ಬಹಳ ಕಷ್ಟದಿಂದ ಮಾಡಿದ ಪ್ರತಿಯೊಂದು ಪ್ರಯತ್ನವನ್ನೂ, ಯಾವುದೋ ಒಂದು ಮನೋವಿಕಾರವು—ಮಳಲಿನ ಸೇತುವನ್ನು ತಡೆಯಲಸಾಧ್ಯವಾದ ವೇಗವುಳ್ಳ ನೀರಿನ ಹೊನಲು ಒಡೆದು ಹರಡುವಂತೆ—ಬಲಾತ್ಕಾರದಿಂದ ಒಳಗೇ ಒಡೆದೊಡೆದು ಚೆಲ್ಲುತ್ತದೆ.

೩೯. ಅಯ್ಯೋ ದೇವಿ, ಹೃದಯ ಬಿರಿಯುತ್ತಿದೆ, ದೇಹದ ಸಂದುಗಳು ಕಳಚಿಹೋಗುತ್ತಿವೆ, ಜಗತ್ತು ಶೂನ್ಯವಾಗಿ ತೋರುತ್ತಿದೆ; ಎಡೆಬಿಡದೆ ಏಳುವ ಒಳವುರಿಯಿಂದ ಉರಿದುಹೋಗುತ್ತಿದ್ದೇನೆ; ವಿಧುರವಾದ ನನ್ನ ಈ ಅಂತರಾತ್ಮವು ಕುರುಡುಗತ್ತಲಲ್ಲಿ ಮುಳುಗುವಂತಿದೆ; ಸುತ್ತಲೂ ಜಡತೆ ನನ್ನನ್ನು ಸ್ಥಗಿತಗೊಳಿಸುತ್ತಿದೆ. ದುರ್ದೈವಿಯಾದ ನಾನು ಏನು ಮಾಡಲಿ?

पाटीरद्रुभुजङ्गपुङ्गव मुखोद्भूता वपुस्तापिनो
वाता वान्ति दहन्ति लोचनममी ताम्रा रसालद्रुमाः ।
श्रोत्रे हन्त किरन्ति कूजितमिमे हालाहलं कोकिला
बाला बालमृणालकोमलतनुः प्राणान् कथं रक्षतु ॥४०॥

याताः किं न मिलन्ति सुन्दरि पुनश्चिन्ता त्वया मत्कृते
नो कार्या नितरां कृशासि कथयत्येवं सबाष्पे मयि ।
लज्जामन्थरतारकेण निपतत्पीनाश्रुणा चक्षुषा
दृष्ट्वा मां हसितेन भावि मरणोत्साहस्तयासूचितः ॥४१॥

प्रहर विरतौ मध्येवाह्नस्ततोऽपि परेण वा
किमुत सकले याते वाह्नि प्रिय त्वमिहैष्यसि ।
इति दिनशतप्राप्यं देशं प्रियस्य यियासतो
हरति गमनं बालालापैः सबाष्पगलज्जलैः ॥४२॥

अलमलमतिमात्रं साहसेनामुना ते
त्वरितमयि विमुञ्च त्वं लतापाशमेतम् ।
चलितमपि निरोद्धुं जीवितं जीवितेशे
क्षणमिह मम कण्ठे बाहुपाशं निधेहि ॥४३॥

प्राणेशेन प्रहितनखरेष्वङ्गकेषु क्षपान्ते
जातातङ्का रचयति चिरं चन्दनालेपनानि ।
धत्ते लाक्षामसकृदधरे दन्त दन्तावघाते
क्षामाङ्गीयं चकितमभितश्चक्षुषी विक्षिपन्ती ॥४४॥

मयि सकपटं किञ्चित् क्वापि प्रणीतविलोचने
किमपि नयनं प्राप्ते तिर्यग्विजृम्भित तारकम् ।
स्मितमुपगतामालीं दृष्ट्वा सलज्जमवाञ्चितं
कुवलयदृशः स्मेरं स्मेरं स्मरामि तदाननम् ॥४५॥

೪೦. ಅಯ್ಯೋ, ಗಂಧದಮರಗಳಲ್ಲಿರುವ ಮಹಾಸರ್ಪಗಳ ಬಾಯಿಂದ ಹೊರಟ ಪ್ಯೆಯುರಿಸುವ ಗಾಳಿ ಬೀಸುತ್ತಿದೆ. ಈ ಕೆಂಪಾದ ಮಾಮರಗಳು ಕಣ್ಣನ್ನು ಸುಡುತ್ತವೆ. ಈ ಕೋಗಿಲೆಗಳ ಕುಕಿಲು ಕಿವಿಯಲ್ಲಿ ಹಾಲಾಹಲವನ್ನು ಚೆಲ್ಲುತ್ತವೆ. ಹೀಗಿರುವಾಗ, ತಾವರೆ ದಂಟಿನಷ್ಟು ಮೃದುವಾದ ಮೈಯ ಈ ಬಾಲೆ ಹೇಗೆ ಪ್ರಾಣವನ್ನು ಕಾಪಾಡಿಕೊಂಡಿರಬಲ್ಲಳು ?

೪೧. "ಎಲೈ ಚೆಲುವೆ, ಹೋದವರು ಮತ್ತೆ ಬಂದು ಭೇಟಿಯಾಗುವು-ದಿಲ್ಲವೇನು? ಆದುದರಿಂದ ನನಗಾಗಿ ನೀನು ಚಿಂತೆ ಮಾಡಬಾರದು. ನೀನು ತುಂಬ ಸೊರಗಿದ್ದೀಯೆ"—ಎಂದು ನಾನು ಕಣ್ಣೀರುಬಿಡುತ್ತ ಹೇಳುತ್ತಿದ್ದಾಗ, ಅವಳು ನಾಚಿಕೆಯಿಂದ ಮಂದವಾದ ಗುಡ್ಡೆಗಳಿಂದ ಕೂಡಿದ ಮತ್ತು ಸುರಿವ ಕಣ್ಣೀರನ್ನು ಅಡಗಿಸಿಕೊಂಡ ಕಣ್ಣಿಂದ, ನನ್ನನ್ನು ನೋಡಿ ಮುಗುಳುನಗೆಯ ಮೂಲಕ ಖಂಡಿತವಾಗಿ ತಾನು ಸಾಯುವೆನೆಂಬುದನ್ನು ಸೂಚಿಸಿದಳು.

೪೨. "ಕಾದಲನೇ, ಮೊದಲಜಾವ ಕಳೆದಮೇಲೆ ಮಧ್ಯಾಹ್ನದಲ್ಲಿ ಅಥವಾ ಮಧ್ಯಾಹ್ನದ ಮೇಲೆ ಇಲ್ಲವೆ ಇಡಿ ಹಗಲು ಮುಗಿದ ಮೇಲಾದರೂ ನೀನು ಬರುವೆ" ಎಂದು ಮುಂತಾಗಿ ಉರುಳುತ್ತಿರುವ ಕಂಬನಿಗಳೊಡನೆ ಆಡಿದ ಮಾತುಗಳ ಮೂಲಕ ಪ್ರೇಯಸಿಯೊಬ್ಬಳು, ಹೋಗಿ ಬರಲು ನೂರು ದಿನಗಳು ಬೇಕಾದಂಥ ಊರಿಗೆ ಹೋಗಲೆಳಿಸಿದ ತನ್ನ ಪ್ರಿಯತಮನ ಲಕ್ಷ್ಯವನ್ನು ಸೆಳೆಯುತ್ತಾಳೆ.

೪೩. ಎಲೆಲೇ ಸಾಕು ಸಾಕು; ಈ ಅತಿ ಸಾಹಸ ನಿನಗೆ ಬೇಡ; ಬೇಗ ಈ ಲತಾಪಾಶವನ್ನು ಬಿಟ್ಟುಬಿಡು. ಎಲೈ ಪ್ರಾಣಕಾಂತೇ, ನನ್ನ ನಶ್ವರ ಜೀವನವನ್ನು ಹೋಗದಂತೆ ತಡೆಯುವುದಕ್ಕಾಗಿ ನೀನು ಒಂದು ಕ್ಷಣ ನಿನ್ನ ಬಾಹುಪಾಶವನ್ನು ನನ್ನ ಕೊರಳ ಸುತ್ತ ಇಡು !

೪೪. ಇರುಳು ಕಳೆದ ಬಳಿಕ ಈ ತೆಳುಮೈಯವಳು ತನ್ನ ಅಂಗಾಂಗಗಳಲ್ಲಿ ಪ್ರಾಣಪ್ರಿಯನು ಮಾಡಿದ ನಖಕ್ಷತಗಳಿಂದ ತೊಂದರೆಪಟ್ಟುಕೊಂಡು, ಬಹಳ ಹೊತ್ತಿನವರೆಗೆ ಗಂಧ ಹಚ್ಚಿಕೊಳ್ಳುತ್ತಿದ್ದಾಳೆ. ಹಲ್ಲಿಗೆ ಹಲ್ಲು ತಾಗಿದ್ದಕ್ಕಾಗಿ ಕೆಳದುಟಿಗೆ ಮತ್ತೆ ಮತ್ತೆ ಅರಗನ್ನು ಬಳಿದುಕೊಳ್ಳುತ್ತಿದ್ದಾಳೆ. ಅಲ್ಲದೆ, ಚಕಿತಳಾಗಿ ನೆಟ್ಟಗೆ ನೋಡುತ್ತಿದ್ದಾಳೆ.

೪೫. ಒಮ್ಮೆ ಕದ್ದು ನೋಡುತ್ತಿದ್ದ ನನ್ನ ಕಣ್ಣು, ಅಡ್ಡ ತಿರುಗಿದ್ದ ಗುಡ್ಡೆಯ ಅವಳ ಕಣ್ಣನ್ನು ಸಂಧಿಸುತ್ತಲೇ, ಮುಗುಳ್ನಗೆ ತಾಳಿದ ತನ್ನ ಗೆಳತಿಯನ್ನು ಕಂಡು, ನಾಚಿಕೆಯಿಂದ ಕೆಳಗೆ ನೋಡತೊಡಗಿದ ತಾವರೆಗಣ್ಣನವಳ, ಹೆಮ್ಮೆಯಿಂದ ಅರಳಿದ ಆ ಮೊಗವನ್ನು ನೆನೆದುಕೊಳ್ಳುತ್ತೇನೆ.

जातप्रीतिर्या मधुरेणानु वनान्तं
कामे कान्ते सा रसिका का कुरुते न
तत्सम्पर्कं प्राप्य पुरा मोहनलीलां
कामेकान्ते सारसिकाकाकुरुतेन ॥४६॥

विलसित मनुकुर्वतीपुरस्ताद्
धरणिरुहाधिरुहो वधूर्लतायाः ।
रमणमृजुतया पुरः सखीनां
अकलितचापल दोषमालि लिङ्ग ॥४७॥

यद्यदेव रुरुचे रुचिरेभ्यः
सुभ्रुवो रहसि तत्तदकुर्वन्
आनुकूलिकतया हि नराणां
अक्षिपन्ति हृदयानि तरुण्यः ॥४८॥

मनोरथैर्यदभ्यस्तं हृदयेन यदर्थितम् ।
मन्मथेन यदादिष्टं तयोस्तदभवद्रतम् ॥४९॥

विनिश्चेतुं शक्यो न सुखमिति वा दुःखमिति वा
प्रमोहो निद्रा वा किमु विषविसर्पः किमु मदः ।
तव स्पर्शे स्पर्शे मम ही परिमूढेन्द्रियगणो
विकारः कोप्यन्तर्जडयति च तापं च कुरुते ॥५०॥

किमपि किमपि मन्दं मन्दमासत्तियोगाद्
अविरलितकपोलं जल्पतोरक्रमेण ।
सपुलक परिरम्भ व्यापृतैकैक दो ष्णोर्
अविदितगतयामा रात्रिरेवं व्यरंसीत् ॥५१॥

೪೬. ಮನ್ಮಥನಂಥ ನಲ್ಲನಲ್ಲಿ ಒಲವು ಉಂಟಾದ ಯಾವಳು ಬಸದ ನೆರೆಯಲ್ಲಿ ಸಾರಸ ಪಕ್ಷಿಗಳಿಗೆ ಸಹಜವಾದ ಬೆದರುದನಿಯಿಂದ ಕೂಗಿ, ಅವನ ಸಂಪರ್ಕವನ್ನು ಏಕಾಂತದಲ್ಲಿ ಪಡೆದಾಗ, ಅನುರಾಗ ತೋರಿ, ಅವನಿಗಿಂತ ಮೊದಲು ತಾನೇ ಯಾವ ಮೋಹನಲೀಲೆಯನ್ನು ಮಧುರವಾಗಿ ತೋರುವುದಿಲ್ಲ ?

೪೭. ಎದುರಿಗೇ ಬೆಳೆದ ಮರವನ್ನು ಆಶ್ರಯಿಸಿದ ಬಳ್ಳಿಯ ವಿಲಾಸವನ್ನು ಅನುಕರಿಸಿ, ಸತಿಯು ಗೆಳತಿಯರೆದುರು ನೇರವಾಗಿ, ಅಲಕ್ಷ್ಯದಿಂದ ಮಾಡುವ ತಪ್ಪಿನಂತೆ, ಪತಿಯನ್ನು ಅಪ್ಪಿದಳು.

೪೮. ಏಕಾಂತದಲ್ಲಿ ಪ್ರಿಯತಮರಿಗೆ ಸೇರುವಂತಹ ಎಲ್ಲವನ್ನೂ ಚೆಲು-ಹುಬ್ಬಿನ ತರುಣಿಯರು ಮಾಡಿದರು; ತರುಣರಿಗೆ ಅನುಕೂಲವಾಗಿ ನಡೆದುಕೊಳ್ಳುವುದರಿಂದ ತರುಣಿಯರು ಅವರ ಹೃದಯಂಗಳನ್ನು ಆಕರ್ಷಿಸುತ್ತಾರೆ !

೪೯. ಅಭಿಲಾಷೆಗಳಿಗೆ ರೂಢವಾದದ್ದು, ಹೃದಯವು ಬಯಸಿದ್ದು ಮತ್ತು ಮನ್ಮಥನು ಅಪ್ಪಣೆ ಕೊಡಿಸಿದ್ದು ಅವರಿಬ್ಬರ ರತಿಸುಖವೆನ್ನಿಸಿತು !

೫೦. ಸುಖವೋ, ದುಃಖವೋ ಎಂದು ನಿಶ್ಚಯಿಸಿ ಹೇಳಲು ಬಾರದು; ಗಾಢವಾದ ಮೋಹವೋ, ನಿದ್ರೆಯೋ, ವಿಷವೇರಿ ಬರುವ ಅನುಭವವೋ, ಮದವೋ ಹೇಳಲು ಬರುವುದಿಲ್ಲ; ಪ್ರಿಯೇ, ನಿನ್ನ ಸ್ಪರ್ಶ-ಸ್ಪರ್ಶದಲ್ಲೂ ನನ್ನ ಪಂಚೇಂದ್ರಿಯಗಳು ವಿಮೂಢವಾದವು; ಒಳಗೆ ಯಾವುದೋ ಒಂದು ವಿಧವಾದ ವಿಕಾರವು ನನ್ನನ್ನು ಮರವಟ್ಟು ಹೋಗುವಂತೆಯೂ ತಾಪ ಹೊಂದುವಂತೆಯೂ ಮಾಡಿದೆ !

೫೧. ಕೆನ್ನೆಗೆ ಕೆನ್ನೆಯನ್ನಾಂತು, ತೋಳಲ್ಲಿ ತೋಳಿಟ್ಟು ಅಪ್ಪಿ, ನವಿರಿಂದ, ಒಟ್ಟಗಿದ್ದುದರಿಂದ ಏನೇನನ್ನೋ ಮೆಲ್ಲಮೆಲ್ಲನೆ ಹೇಳುತ್ತ ಇರುವಾಗ ಜಾವಗಳು ಕಳೆದದ್ದೇ ನಮಗೆ ಗೊತ್ತಾಗದಾಯ್ತು; ನಮ್ಮ ಇರುಳು ಹೀಗೇ ಹೋಯ್ತು !

अद्वैतं सुखदुःखयोरनुगुणं सर्वास्ववस्थासु यद्
विश्रामो हृदयस्य यत्र जरसा यस्मिन् न हार्यो रसः ।
कालेनावरणात्ययात् परिणते यत् स्नेहसारे स्थितं
भद्रं प्रेम सुमानुषस्य कथमप्येकं हि तत् प्राप्यते ॥५२॥

रहसि संविदं हृच्छयोदयं
प्रहसिताननं प्रेमवीक्षणम् ।
बृहदुरः श्रियो वीक्ष्य धाम ते
मुहुरतिस्पृहा मुह्यते मनः ॥५३॥

शून्यं वासगृहं विलोक्य शयनादुत्थाय किञ्चिच्छनैर्
निद्राव्याजमुपागतस्य सुचिरं निर्वर्ण्य पत्युर्मुखम् ।
विश्रब्धं परिचुम्ब्य जातपुलकामालोक्य गण्डस्थलीं
लज्जानम्रमुखी प्रियेण हसता बाला चिरं चुम्बिता ॥५४॥

೩. ಗೃಹಸ್ಥ ಜೀವನ

अर्थागमो नित्यमरोगिता च
प्रिया च भार्या प्रियवादिनी च
वश्यश्च पुत्रोऽर्थकरी च विद्या
षड् जीवलोकस्य सुखानि तात ॥५५॥

मातृतुल्यगुणो जातस्त्वनुजातः पितुः समः
अभिजातोऽधिकस्तस्मादपजातोऽधमाधमः ॥५६॥

किं कलत्रं प्रधानं स्यादुत मित्रं गुणाधिकम् ।
कलत्र मित्रयोर्नूनं कलत्रमतिरिच्यते ॥५७॥

೫೨. ಸುಖ-ದುಃಖಗಳಲ್ಲಿ ನಾವಿಬ್ಬರೂ ಒಂದೇ ಆದೆವು; ಎಲ್ಲ ಅವಸ್ಥೆಗಳಲ್ಲೂ ಅನುಗುಣ ಅನುಭವವನ್ನು ಪಡೆದೆವು; ನಮ್ಮಿಬ್ಬರ ಹೃದಯಕ್ಕೂ ವಿಶ್ರಾಂತಿ ಸಿಕ್ಕಿತು. ಇಂಥ ಪ್ರೇಮದ ಸವಿಯನ್ನು ಮುಪ್ಪು ಅಪಹರಿಸಲಾರದು. ಕಾಲಕ್ರಮೇಣ ಆಪಾಂಗದ ಬದಲಾವಣೆಯ ಮೂಲಕ ಪಕ್ವಗೊಂಡ ಸ್ನೇಹಸಾರವನ್ನು ಪಡೆದಂಥ, ಸಫಲ ಮಾನವಜೀವನದ ಮಂಗಲರೂಪದ ನಮ್ಮ ಈ ಪ್ರೇಮವು ಅನನ್ಯಸಾಧಾರಣವಾದುದು; ಬಹಳ ಶ್ರಮದಿಂದ ನಾವಿದನ್ನು ಪಡೆದೆವು !

೫೩. ಇನಿಯನೇ, ಗುಟ್ಟಿನಲ್ಲಿ ಸಂತಸ ಉಂಟುಮಾಡುವ ಮನ್ಮಥೋದಯದಿಂದ ಕೂಡಿದ ಹಾಗೂ ಪ್ರೇಮದೃಷ್ಟಿಪೂರ್ಣವಾದ ನಿನ್ನ ನಗುಮೊಗವನ್ನೂ, ನಿನ್ನ ಅಗಲ ಎದೆಯ ಚೆಂದದ ನೆಲೆಯನ್ನೂ ಕಂಡು ನಿನ್ನ ಮೇಲೆ ಹೆಚ್ಚಿನ ಆಸೆ ನನಗೆ ಪದೇ ಪದೇ ಉಂಟಾಗುತ್ತದೆ; ನಿನ್ನನ್ನು ಕಂಡು ನನ್ನೆದೆ ಮುಗ್ಧವಾಗಿ ಹೋಗಿ ಬಿಡುತ್ತದೆ !

೫೪. ಸೆಜ್ಜೆವನೆಯಲ್ಲಿ ಇತರ ಯಾರೂ ಇಲ್ಲದುದನು ಕಂಡು, ಮೆಲ್ಲನೆ ಹಾಸಿಗೆಯಿಂದೆದ್ದು ನಿದ್ರೆಯ ನೆವದಿಂದ ಮಲಗಿದ್ದ ಪತಿಯ ಮೊಗವನ್ನು ಬಹಳ ಹೊತ್ತು ಚೆನ್ನಾಗಿ ನೋಡಿದ ಬಳಿಕ ನಿರ್ಭಯವಾಗಿ ಚುಂಬಿಸಿದ ತರುಣಿಯೊಬ್ಬಳು ಅವನ ಗಂಡಸ್ಥಲಗಳಲ್ಲಿ ನವಿರೆದ್ದುದನ್ನು ಕಂಡು ನಾಚಿಕೆಯಿಂದ ತಲೆತಗ್ಗಿಸಿದಳು: ಆಗ ಪತಿಯು ಮುಗುಳುನಗೆ ಬೀರುತ್ತ ಬಹಳ ಹೊತ್ತು ಅವಳನ್ನು ಚುಂಬಿಸಿದನು.

೩. ಗೃಹಸ್ಥ ಜೀವನ

೫೫. ದುಡ್ಡು ಬರುವುದು, ನಿತ್ಯವೂ ಆರೋಗ್ಯದಲ್ಲಿರುವುದು, ಹೆಂಡತಿಯು ಪ್ರೀತಿಪಾತ್ರಳಾಗಿಯೂ ಪ್ರಿಯಂವದೆಯಾಗಿಯೂ ಇರುವುದು, ಮಗನು ವಿಧೇಯನಾಗಿರುವುದು ಮತ್ತು ಕಲಿತ ವಿದ್ಯೆಯು ಸಂಪಾದನೆಗೆ ಕಾರಣವಾಗುವಂತಿರುವುದು ಎಂಬ ಆರು— ಜನರಿಗೆ ಸುಖಗಳೆನ್ನಿಸುತ್ತವೆ.

೫೬. ತಾಯಿಯಂಥ ಗುಣವುಳ್ಳ ಮಗ 'ಜಾತ': ತಂದೆಯಂಥವನು 'ಅನುಜಾತ'; ತಂದೆಗಿಂತ ಅಧಿಕ ಗುಣವುಳ್ಳವನು 'ಅಭಿಜಾತ': ಅಧಮಾಧಮನಾದ ಮಗನು 'ಅಪಜಾತ'.

೫೭, ಹೆಂಡತಿಯು ಹೆಚ್ಚಿನವಳೋ, ಬಹುಗುಣಸಂಪನ್ನನಾದ ಗೆಳೆಯನು ಹೆಚ್ಚಿನವನೋ ? ನಿಜವಾಗಿ ನೋಡಿದರೆ, ಹೆಂಡತಿ ಮತ್ತು ಗೆಳೆಯರಲ್ಲಿ ಹೆಂಡತಿಯೇ ಹೆಚ್ಚಿನವಳು!

पतिप्रियहिते युक्ता स्वाचारा विजितेन्द्रिया ।
सेहकीर्तिमवाप्नोति प्रेत्य चानुत्तमां गतिम् ॥५८॥

पतिं या नाभिचरति मनोवाग्देह संयता ।
सा भर्तृलोकमाप्नोति सद्भिः साध्वीति चोच्यते ॥५९॥

आनन्दोत्थं नयनसलिलं यत्र नोन्यैर्निमित्तैर्
नान्यस्तापः कुसुमशरजादिष्टसंयोगसाध्यात् ।
नाप्यन्यत्र प्रणयकलहाद्विप्रयोगोपपत्तिर्
वित्तेशानां न खलु च वयो यौवनादन्यदस्ति ॥६०॥

वनेऽपि दोषाः प्रभवन्ति रागिणां
गृहेऽपि पञ्चेन्द्रियनिग्रहस्तपः ।
अकुत्सिते कर्मणि यः प्रवर्तते
निवृत्तरागस्य गृहं तपोवनम् ॥६१॥

पुत्रो मित्रं तथा भ्राता अन्ये स्वजनबान्धवाः
पञ्चभेदास्तु सम्बन्धाः पुरुषस्य भवन्ति ते ॥६२॥

यस्मिन्निदं प्रोतमशेषमोतं
पटो यथा तन्तुवितानसंस्थः ।
य एष संसारतरुः पुराणः
कर्मात्मकः पुष्पफले प्रसूते ॥६३॥

न स्त्री दुष्यति जारेण न विप्रोऽवेदकर्मणा
बलात्कारोपभुक्ता चेद्वैरिहस्तगतापि वा ॥६४॥

स्वकर्मधर्मार्जितजीवितानां
स्वेष्वेव दारेषु सदा रतानाम् ।
जितेन्द्रियाणामतिथिप्रियाणां
गृहेऽपि मोक्षाः पुरुषोत्तमानाम् ॥६५॥

೫೮. ಪತಿಗೆ ಪ್ರಿಯವೂ, ಹಿತವೂ ಆದುದನ್ನು ಮಾಡುವುದರಲ್ಲಿ ಮಗ್ನಳಾಗಿ, ತನ್ನ ಸದಾಚಾರವನ್ನು ಬಿಡದೆ, ಜಿತೇಂದ್ರಿಯಳಾಗಿರುವವಳು ಇಹದಲ್ಲಿ ಕೀರ್ತಿ ಮತಿಯಳೂ, ಪರದಲ್ಲಿ ಉತ್ತಮ ಗತಿಯನ್ನು ಹೊಂದುವವಳೂ ಆಗುತ್ತಾಳೆ.

೫೯. ಪತಿಯನ್ನುಳಿದು ಅನ್ಯರಲ್ಲಿ ಮನಸ್ಸು ಹಾಕದೆ, ಮನ, ಮಾತು, ಮೈಗಳನ್ನು ಸಂಯಮದಲ್ಲಿಟ್ಟುಕೊಂಡಾಕೆ ಪತಿಲೋಕವನ್ನು ಹೊಂದುವಳು: ಶಿಷ್ಟರು ಅವಳನ್ನು "ಸಾಧ್ವೀ" ಎಂದು ಕರೆಯುತ್ತಾರೆ.

೬೦. ಧನಿಕರೆನ್ನಿಸಿದ ಯಕ್ಷರಿಗೆ ಆನಂದದಿಂದಲ್ಲದೆ, ಬೇರೆ ಕಾರಣದಿಂದ ಕಂಬನಿದುಂಬದು: ಮನ್ಮಥನ ಹೂಬಾಣಗಳಿಂದಲ್ಲದೆ, ಇನ್ನಾವುದರಿಂದಲೂ ಉರಿ ಉಂಟಾಗದು; (ಹಾಗೆ ಮನ್ಮಥ ಬಾಣದಿಂದ ಉರಿ ಒಮ್ಮೆ ಉಂಟಾದರೆ) ಅದು ನೆಚ್ಚಿನ ಯುವತಿಯರ ಸಮಾಗಮದಿಂದ ಪರಿಹಾರವಾಗಬಲ್ಲದು. ಪ್ರಣಯ ಕಲಹದಿಂದಲ್ಲದೆ, ಬೇರೆ ಯಾವ ಕಾರಣದಿಂದಲೂ ಅವರಿಗೆ ವಿರಹ ಉಂಟಾಗದು; ಹಾಗೆಯೇ ಯೌವನವನ್ನು ಬಿಟ್ಟರೆ, ಇನ್ನಾವ ಅವಸ್ಥೆಯ ವಯಸ್ಸೂ ಅವರಿಗಿಲ್ಲ!

೬೧. ಭೋಗಾಸಕ್ತಿಯುಳ್ಳವರಿಂದ ಕಾಡಿನಲ್ಲಿ ಕೂಡ ತಪ್ಪುತಡೆಗಳಾಗುವವು. ಮನೆಯಲ್ಲೇ ಇದ್ದರೂ ಮಾನವರಿಗೆ ಇಂದ್ರಿಯ ನಿಗ್ರಹವೇ ತಪಸ್ಸು: ಯೋಗ್ಯವಾದ ಕೆಲಸದಲ್ಲಿ ಪ್ರವೃತ್ತನಾಗುವ ವಿರಾಗಿಗೆ ಮನೆಯೇ ತಪೋವನ!

೬೨. ಮಗ, ಗೆಳೆಯ, ಸಹೋದರ, ಇಷ್ಟರು, ನೆಂಟರು ಎಂಬುದಾಗಿ ಮನುಷ್ಯನ ಸಂಬಂಧಿಕರಲ್ಲಿ ಐದು ವರ್ಗದವರಿರುತ್ತಾರೆ.

೬೩. ಬಟ್ಟೆಯು ದಾರಗಳ ಹುರಿಹಿನಲ್ಲಿ ಸಂಪೂರ್ಣ ಓತಪ್ರೋತವಾಗಿರುವಂತೆ, ಜನನ-ಮರಣರೂಪದ ಸಂಸಾರವೆಂಬ ಹಳೆಯ ಮರವು ಕರ್ಮಾತ್ಮಕವಾಗಿದ್ದು-ಕೊಂಡು, ಹೂ-ಹಣ್ಣುಗಳನ್ನು ಬಿಡುತ್ತದೆ.

೬೪. ಬಲವಂತವಾಗಿ ಜಾರನಿಂದ ಭೋಗಿಸಲ್ಪಟ್ಟ ಹೆಂಗಸೂ, ಹಗೆಗಳ ಕೈಯಲ್ಲಿ ಸಿಕ್ಕು ವೇದೋಕ್ತ ಕರ್ಮಗಳನ್ನು ಮಾಡದ ಬ್ರಾಹ್ಮಣನೂ ದೋಷಪಾತ್ರರಾಗರು.

೬೫. ತಮ್ಮ ಕರ್ಮದ ಪುಣ್ಯದಿಂದ ಸಂಪಾದಿಸಿದ ಜೀವನವನ್ನುಳ್ಳ, ತಮ್ಮ ಹೆಂಡಿರಲ್ಲಿಯೇ ನಿತ್ಯವೂ ಪ್ರೀತಿಯನ್ನಿಟ್ಟಿರುವ ಮತ್ತು ಜಿತೇಂದ್ರಿಯರೂ, ಅತಿಥಿ ಪ್ರಿಯರೂ ಆದ ಶ್ರೇಷ್ಠರಿಗೆ ಮನೆಯಲ್ಲೇ ಕೈವಲ್ಯ ಕೈವಶವಾಗುವುದು.

नैवेदानीं तादृशाश्चक्रवाका
नैवाप्यन्ये स्त्रीविशेषैर्वियुक्ताः ।
धन्या सा स्त्री यां तथा वेत्ति भर्ता
भर्तृस्नेहात् सा हि दग्धाप्यदग्धा ॥६६॥

शशिना सह याति कौमुदी
सह मेघेन तडित् प्रलीयते ।
प्रमदाः पतिवर्त्मगा इति
प्रतिपन्नं हि विचेतनैरपि ॥६७॥

शुश्रूषस्व गुरून् कुरु प्रियसखीवृत्तिसपत्नीजने
भर्तुर्विप्रकृतापि रोषणतया मा स्म प्रतीपं गमः ।
भूयिष्ठं भव दक्षिणा परिजने भाग्येष्वनुत्सेकिनी
यान्त्येवं गृहिणीपदं युवतयो वामाः कुलस्याधयः ॥६८॥

दृष्टिर्न तृप्यति परिष्वजतीव साङ्गं
बुद्धिस्त्वरां व्रजति बोधयतीव सुप्ताम् ।
रागोऽभिचोदयति सादयतीव चाङ्गं
हर्षात् प्रसीदति विमुह्यति चान्तरात्मा ॥६९॥

इयं गेहे लक्ष्मीरियममृतवर्तिर्नयनयोर्
असावस्याः स्पर्शो वपुषि बहलश्चन्दनरसः ।
अयं कण्ठे बाहुः शिशिरमसृणो मौक्तिकसरः
किमस्या न प्रेयो यदि परमसह्यस्तु विरहः ॥७०॥

दिशः प्रसेदुर्मरुतो ववुः सुखाः
प्रदक्षिणार्चिर्हविरग्निराददे ।
बभूव सर्वं शुभशंसि तत्क्षणं
भवो हि लोकाभ्युदयाय तादृशाम् ॥७१॥

೬೬. ಈಗ ಅಂಥ ಜಕ್ಕವಕ್ಕಿಗಳಿಲ್ಲ; ಮಹಾಸತಿಯರ ವಿರಹದಿಂದ ಬಳಲುವ ಅಂಥ ಇತರ ವ್ಯಕ್ತಿಗಳೂ ಇಲ್ಲ; ಪತಿಯು ಅಂಥವಳೆಂದು ತಿಳಿದುಕೊಂಡಿರುವ ಸತಿಯು ಧನ್ಯೆ; ಪತಿಯು ಅಂಥ ಸ್ನೇಹದ ದೆಸೆಯಿಂದ ಅವಳು ಸುಟ್ಟುಹೋದರೂ ಸುಟ್ಟುಹೋಗಿಲ್ಲ!

೬೭. ಬೆಳುದಿಂಗಳು ಚಂದ್ರನೊಡನೆ ಹೋಗುತ್ತದೆ; ಮೋಡದೊಡನೆ ಮಿಂಚು ಲೀನವಾಗಿ ಹೋಗುತ್ತದೆ; ಸತಿಯರದು ಪತಿಮಾರ್ಗ ಎಂಬುದನ್ನು ಅಚೇತನ ಪದಾರ್ಥಗಳೂ ಅರಿತಿವೆ.

೬೮. ಹಿರಿಯರ ಶುಶ್ರೂಷೆಯನ್ನು ಮಾಡು; ಸವತಿಯರಲ್ಲಿ ಪ್ರಿಯ ಸ್ನೇಹಿತೆಯಂತೆ ನಡೆದುಕೋ; ಗಂಡ ಬೈದರೂ ಸಿಟ್ಟಿನಿಂದ ಅವನನ್ನು ವಿರೋಧಿಸಬೇಡ; ಸೇವಕರಲ್ಲಿ ಬಹಳ ಔದಾರ್ಯದಿಂದ ವರ್ತಿಸು–ಈ ಪ್ರಕಾರ ಇದ್ದರೆ, ಮಾತ್ರ ತರುಣಿಯರು ಗೃಹಿಣಿಯ ಸ್ಥಾನವನ್ನು ಹೊಂದುತ್ತಾರೆ; ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವವರು ಕುಲಕ್ಕೆ ವ್ಯಥೆಯನ್ನುಂಟುಮಾಡುತ್ತಾರೆ.

೬೯. ಕಣ್ಣು ತೃಪ್ತವಾಗದು; ಅದು ಅವಳ ಮೈಯನ್ನು ತಬ್ಬಿಕೊಳ್ಳುವಂತೆ ತೋರುತ್ತದೆ; ಬುದ್ಧಿಯು ತ್ವರೆ ಮಾಡುತ್ತದೆ; ನಿದ್ರಿಸಿರುವ ಅವಳನ್ನು ಎಬ್ಬಿಸುವಂತೆ ಕಾಣುತ್ತದೆ; ಅನುರಾಗವು ನನ್ನನ್ನು ಪ್ರಚೋದಿಸುತ್ತಿದೆ ಮತ್ತು ನನ್ನ ಮೈಯನ್ನು ಮರವಟ್ಟು ಹೋಗುವಂತೆ ಮಾಡುತ್ತಿದೆ; ಅಲ್ಲದೆ, ಸಂತೋಷದಿಂದ ನನ್ನ ಅಂತರಾತ್ಮವು ಮುಗ್ಧವಾಗಿ ಹೋಗಿದೆ !

೭೦. ಇವಳು ಮನೆಯಲ್ಲಿ ಲಕ್ಷ್ಮಿ, ಕಣ್ಣಿಗೆ ಅಮೃತವಾಗಿದ್ದಾಳೆ; ಇವಳ ಸ್ಪರ್ಶವು ಮೈಗೆ ಗಂಧದ ತಂಪನ್ನುಂಟುಮಾಡುತ್ತದೆ; ಕೊರಳಲ್ಲಿಟ್ಟ ಇವಳ ತೋಳು ಶಿಶಿರದಷ್ಟು ತಣ್ಣಗಿರುವ ಮುತ್ತಿನ ಸರ! ಇವಳ ವಿರಹವು ಅಸಹನೀಯ; ಆದುದರಿಂದ ಇವಳ ಇನ್ನಾವುದು ಪ್ರಿಯವಾಗದೆ ಉಳಿದೀತು ?

೭೧. ದಿಕ್ಕುಗಳು ಪ್ರಸನ್ನವಾದವು; ಸುಖಕರವಾದ ಗಾಳಿ ಬೀಸಿತು; ಪ್ರದಕ್ಷಿಣಾಕಾರದ ಉರಿಯುಳ್ಳ ಅಗ್ನಿಯು ಹವಿಸ್ಸನ್ನು ಸ್ವೀಕರಿಸಿತು; ಆ ಕೂಡಲೇ ಎಲ್ಲವೂ ಶುಭಸೂಚಕವಾಯಿತು. —ಅಂಥವರ ಹುಟ್ಟು ಲೋಕದ ಅಭ್ಯುದಯಕ್ಕಾಗಿಯೇ ಅಲ್ಲವೆ ?

निवातपद्मस्तिमितेन चक्षुषा
नृपस्य कान्तं पिबतः सुताननम् ।
महोदधेः पूरमिवेन्दुदर्शनाद्
गुरुः प्रहर्षः प्रबभूव नात्मनि ॥७२॥

आलक्ष्य दन्तमुकुलाननिमित्तहासैर्
अव्यक्तवर्णरमणीय वचः प्रवृत्तीन् ।
अङ्काश्रयप्रणयिनस्तनयान् वहन्तो
धन्यास्तदङ्गरजसा मलिनीभवन्ति ॥७३॥

व्यतिषजति पदार्थानान्तरः कोऽपि हेतुर्
न खलु बहिरुपाधीन् प्रीतयः संश्रयन्ते ।
विकसति हि पतङ्गस्योदये पुण्डरीकं
द्रवति च हिमरश्मावुद्गते चन्द्रकान्तः ॥७४॥

परिणतकठोरपुष्करगर्भच्छदपीनमसृणसुकुमारः ।
नन्दयति चन्द्रचन्दननिस्यन्दजडस्तवस्पर्शः ॥७५॥

माता शत्रुः पिता वैरी येन बालो न पाठितः ।
न शोभते सभामध्ये हंसमध्ये बको यथा ॥७६॥

रूपयौवनसम्पन्ना विशालकुलसम्भवाः ।
विद्याहीना न शोभन्ते निर्गन्धा इव किंशुकाः ॥७७॥

स जातो येन जातेन याति वंशः समुन्नतिम् ।
परिवर्तिनि संसारे मृतः को वा न जायते ॥७८॥

अजातमृतमूर्खाणां वरमाद्यौ न चान्तिमः
सकृद्दुःखकरावाद्यावन्तिमस्तु पदे पदे ॥७९॥

ययोरेव समं वित्तं ययोरेव समं कुलम्
तयोर्विवाहः सख्यं च न तु पुष्टविपुष्टयोः ॥८०॥

೭೨. ತನ್ನ ಮಗನ ಚೆಲುಮೊಗವನ್ನು ಗಾಳಿಯಿಲ್ಲದ ಸ್ಥಳದಲ್ಲಿರುವ ತಾವರೆಗಳಂತಹ ತನ್ನ ಕಣ್ಣುಗಳಿಂದ ನೋಡಿದಾಗ, ಅರಸನ ಮಹಾನಂದವು ಚಂದ್ರನನ್ನು ಕಂಡ ಹೆಗ್ಗಡಲ ಹೊನಲಿನಂತೆ ಉಕ್ಕಿ ಹರಿಯಿತು.

೭೩. ಅನಿಮಿತ್ತಹಾಸದಿಂದ ಕೂಡಿದ, ಸ್ವಲ್ಪ ಮಾತ್ರ ತೋರುವ ಹಲ್ಲು-ಮೊಗ್ಗೆಗಳನ್ನುಳ್ಳ, ಸೊಗಸಾದ ತೊದಲ್ನುಡಿಯನ್ನಾಡುವ ಸ್ವಭಾವವುಳ್ಳ ಮತ್ತು ತೊಡೆಯ ಮೇಲೆ ಕುಳಿತುಕೊಳ್ಳಲು ಬಯಸುವ ಮಕ್ಕಳನ್ನು ಎತ್ತಿಕೊಂಡು ಅವುಗಳ ಮೈಧೂಳಿಯಿಂದ ಮಲಿನರಾಗುವವರು ಧನ್ಯರು!

೭೪. ವಾತ್ಸಲ್ಯವು ನಿಜವಾಗಿಯೂ ಹೊರ ಉಪಾಧಿಗಳನ್ನಾಧರಿಸದು; ಒಳಗಿನ ಯಾವುದೋ ಒಂದು ಕಾರಣವು ಪದಾರ್ಥಗಳನ್ನು ಕೂಡಿಸುತ್ತದೆ; ಸೂರ್ಯ ಮೂಡಿದ ಕೂಡಲೇ ಚೆಂದಾವರೆ ಅರಳುತ್ತದೆ; ಚಂದ್ರ ಉದಯಿಸಿದ ಕೂಡಲೇ ಚಂದ್ರಕಾಂತ ಶಿಲೆ ದ್ರವಿಸುತ್ತದೆ!

೭೫. ಚೆನ್ನಾಗಿ ಬೆಳೆದು ಅರಳಿದ ತಾವರೆಯೊಳಗಿನ ಎಸಳಿನಂತೆ ಕೈತುಂಬ ನಯವೂ ಮೃದುವೂ ಆದ ಮತ್ತು ಚಂದ್ರಕಿರಣ ಗಂಧಲೇಪಗಳಂತೆ ಶೀತಲವೂ ಆದ ನಿನ್ನ ಸ್ಪರ್ಶವು ನನ್ನನ್ನು ಆನಂದಗೊಳಿಸುತ್ತದೆ!

೭೬. ಮಗನನ್ನು ಓದಿಸದ ತಾಯ್ತಂದೆಗಳು ವೈರಿಗಳು; ಓದದವನು ಹಂಸಗಳ ನಡುವಿನ ಕೊಕ್ಕರೆಯಂತೆ ಸಭೆಯಲ್ಲಿ ಶೋಭಿಸುವುದಿಲ್ಲ.

೭೭. ಉಚ್ಚ ಕುಲದಲ್ಲಿ ಹುಟ್ಟಿದ ರೂಪಯೌವನವಂತರು ವಿದ್ಯಾವಿಹೀನರಾದರೆ, ಪರಿಮಳವಿಲ್ಲದ ಮುತ್ತುಗದ ಹೂಗಳಂತೆ ಶೋಭಾಹೀನರಾಗುವರು.

೭೮. ತನ್ನ ಹುಟ್ಟಿನಿಂದ ತನ್ನ ವಂಶವು ಉನ್ನತಿ ಹೊಂದುವಂತೆ ಮಾಡುವವನೇ ನಿಜವಾಗಿ ಹುಟ್ಟಿದವನು; ಪರಿವರ್ತನಶೀಲದ ಈ ಜನನ-ಮರಣಚಕ್ರದಲ್ಲಿ ಸತ್ತ ಯಾವನು ತಾನೇ ಮತ್ತೆ ಹುಟ್ಟುವುದಿಲ್ಲ?

೭೯. ಹುಟ್ಟದ, ಹುಟ್ಟಿ ಸತ್ತ ಮತ್ತು ಹುಟ್ಟಿ ಮೂರ್ಖನಾಗಿ ಬದುಕಿರುವ ಮಕ್ಕಳಲ್ಲಿ ಮೊದಲಿನ ಎರಡು, ಮೂರನೆಯದಕ್ಕಿಂತ ಲೇಸು; ಏಕೆಂದರೆ, ಅವು ಒಮ್ಮೆ ಮಾತ್ರ ದುಃಖ ಉಂಟುಮಾಡುತ್ತವೆ; ಕೊನೆಯದು ಪದೇಪದೇ ದುಃಖ ತಂದೊಡ್ಡುತ್ತದೆ.

೮೦. ಧನ, ಕುಲಗಳಲ್ಲಿ ಸಮಾನರಾದವರ ನಡುವೆ, ಮದುವೆ ಗೆಳೆತನಗಳು ಉಚಿತ; ಮೇಲು-ಕೀಳು ಎನ್ನಿಸಿದವರಲ್ಲಿ ಅವು ನಡೆಯುವುದು ಅನುಚಿತ.

जीविते यस्य जीवन्ति विप्रा मित्राणि बान्धवाः ।
सफलं जीवितं तस्य आत्मार्थे को न जीवति ॥८१॥

स स्निग्धोऽकुशलान्निवारयति यस्तत्कर्म यन्निर्मलं
सा स्त्री याऽनुविधायिनी स मतिमान् यः सद्भिरभ्यर्च्यते ।
सा श्रीर्या न मदं करोति स सुखी यस्तृष्णया मुच्यते
तन्मित्रं यदकृत्रिमं स पुरुषो यः खिद्यते नेन्द्रियैः ॥८२॥

द्वाविन्द्राग्नी चरतो वै सखायौ
द्वौ देवर्षी नारदपर्वतौ च ।
द्वावश्विनौ द्वे रथस्यापि चक्रे
भार्यापती द्वौ विहितौ विधात्रा ॥८३॥

पिता-मातातथैवाग्निर्गुरुरात्मा च पञ्चमः ।
यस्मै ते पूजिताः पार्थ तस्य लोकानुभौ जितौ ॥८४॥

तृणानि भूमिरुदकं वाक् चतुर्थी च सूनृता ।
एतान्यपि सतां गेहे नोच्छिद्यन्ते कदाचन ॥८५॥

न वै स्वयं तदश्नीयादतिथिं यन्न भोजयेत् ।
धन्यं यशस्यमायुष्यं स्वर्ग्यं वातिथिपूजनम् ॥८६॥

सुवासिनीः कुमारीश्च रोगिणो गर्भिणीः स्त्रियः ।
अतिथिभ्योऽग्र एवैतान् भोजयेदविचारयन् ॥८७॥

आशंसते हि पुत्रेषु पिता माता च भारत ।
यशः कीर्तिमथैश्वर्यं प्रजा धर्मं तथैव च ॥८८॥

तयोराशां तु सफलं यः करोति स धर्मवित्
पिता माता च राजेन्द्र तुष्यतो यस्य नित्यशः ॥८९॥

೮೧. ಬ್ರಾಹ್ಮಣರನ್ನೂ, ಗೆಳೆಯರನ್ನೂ, ಬಂಧುಗಳನ್ನೂ ಹೊರೆಯುವವನ ಬಾಳು ಸಾರ್ಥಕ; ತನ್ನ ಹೊಟ್ಟೆಯ ಪಾಡಿಗಾಗಿ ಯಾರು ತಾನೇ ಬದುಕುವುದಿಲ್ಲ ?

೮೨. ಸಮ್ಮಾನ್ಯನ್ನು ಕಷ್ಟದಿಂದ ಪಾರುಮಾಡುವವನೇ ನಿಜವಾಗಿ ಪ್ರೀತಿಯುಳ್ಳ-ವನು: ನಿರ್ಮಲವಾದ ಕಾರ್ಯವೇ ನಿಜವಾದ ಕಾರ್ಯ: ಅನುಕೂಲೆಯೇ ನಿಜವಾದ ಸತಿ; ಸಜ್ಜನಗೌರವಕ್ಕೆ ಪಾತ್ರನಾದವನೇ ನಿಜವಾದ ಬುದ್ಧಿವಂತ; ಸೊಕ್ಕನ್ನುಂಟು ಮಾಡದ ಸಿರಿಯೇ ನಿಜವಾದ ಸಿರಿ; ಲೋಭವಿಲ್ಲದವನೇ ನಿಜವಾಗಿ ಸುಖಿ; ಕೃತ್ರಿಮತೆ ಇರದವನೇ ನಿಜವಾದ ಗೆಳೆಯ; ಇಂದ್ರಿಯಗಳ ದೆಸೆಯಿಂದ ಖೇದ ಪಡದಿರುವ-ವನೇ ನಿಜವಾದ ಗಂಡಸು !

೮೩. ಗೆಳೆಯರಾಗಿ ತಿರುಗುವ ಇಂದ್ರಾಗ್ನಿಗಳು ಇಬ್ಬರು; ದೇವರ್ಷಿಗಳಾದ ನಾರದಪರ್ವತರಿಬ್ಬರು; ಅಶ್ವಿನೀಕುಮಾರರು ಇಬ್ಬರು; ತೇರಿನ ಗಾಲಿಗಳು ಎರಡು; ಆ ಪ್ರಕಾರ ಗಂಡ-ಹೆಂಡಿರಿಬ್ಬರೆಂಬುದು ಬ್ರಹ್ಮ ಮಾಡಿದ ವ್ಯವಸ್ಥೆ.

೮೪. ತಂದೆ, ತಾಯಿ, ಅಗ್ನಿ, ಗುರು, ಮತ್ತು ಆತ್ಮಗಳನ್ನು ಪೂಜಿಸುವವನು ಇಹ-ಪರಗಳೆರಡನ್ನೂ ಗೆಲ್ಲುತ್ತಾನೆ

೮೫. ಹುಲ್ಲು, ನೆಲ, ನೀರು, ಒಳ್ಳೆಯ ಮಾತುಗಳು, ಸಜ್ಜನರ ಮನೆಯಲ್ಲಿ ಎಂದೂ ಇಲ್ಲವೆನಿಸವು.

೮೬. ಅತಿಥಿಗೆ ಬಡಿಸದ್ದನ್ನು ತಾನು ಉಣ್ಣಬಾರದು; ಅತಿಥಿ ಸತ್ಕಾರದಿಂದ ಧನ, ಯಶ, ಆಯುಷ್ಯ ಇಲ್ಲವೆ ಸ್ವರ್ಗ ದೊರಕುವುದು.

೮೭. ಸುವಾಸಿನಿ, ಕುಮಾರಿ, ರೋಗಿ ಮತ್ತು ಗರ್ಭಿಣಿಯರಿಗೆ ಅತಿಥಿಗಳಿಗಿಂತ ಮೊದಲು ನಿಃಶಂಕೆಯಿಂದ ಉಣಬಡಿಸಬೇಕು.

೮೮, ೮೯. ತಮ್ಮ ಮಕ್ಕಳು–ಯಶ, ಕೀರ್ತಿ, ಐಶ್ವರ್ಯ, ಮಕ್ಕಳು, ಧರ್ಮ ಗಳನ್ನು ಹೊಂದಿರಬೇಕೆಂದು ತಾಯ್ತಂದೆಗಳು ಬಯಸುತ್ತಾರೆ; ಅವರ ಆಶೆಯನ್ನು ಸಫಲಗೊಳಿಸಿ ಅವರನ್ನು ನಿತ್ಯವೂ ಸಂತೋಷಪಡಿಸುವವನೇ ಧರ್ಮಜ್ಞನು.

धर्मागतं प्राप्य धनं यजेत
दद्यात् सदैवातिथीन् भोजयेच्च ।
अनाददानश्च परैरदत्तं
सैषा गृहस्थोपनिषत् पुराणी ॥९०॥

अग्निहोत्रफला वेदा दत्तभुक्तफलं धनम् ।
रतिपुत्रफला दाराः शीलवृत्तफलं श्रुतम् ॥९१॥

यथा मातरमाश्रित्य सर्वे जीवन्ति जन्तवः ।
एवं गार्हस्थ्यमाश्रित्य वर्तन्त इतराश्रमाः ॥९२॥

लक्ष्मीर्दानफला श्रुतं शमफलं पाणिः सुरार्चाफलश्-
चेष्टा धर्मफला परार्तिहरणक्रीडाफलं जीवितम् ।
वाणी सत्यफला जगत्सुखफलस्फीता प्रभावोन्नतिर्
भव्यानां भवशान्तिचिन्तनफला भूत्यै भवत्येव धीः ॥९३॥

स्वकुलान्न्यूनता नेच्छेत् तुल्यः स्यादथवाधिकः ।
स्वोत्कर्षेऽपि रघोर्वंशे रामोऽभून् स्वकुलाधिकः ॥९४॥

अन्योन्यस्याव्यभीचारो भवेदामरणान्तिकः ।
एष धर्मः समासेन ज्ञेयः स्त्रीपुंसयोः परः ॥९५॥

न संवसेच्च पतितैर्न चाण्डालैर्न पुल्कसैः ।
न मूर्खैर्नावलिप्तैश्च नान्त्यैर्नान्त्यावसायिभिः ॥९६॥

शुनां च पतितानां च श्वपचां पापरोगिणाम्
वायसानां कृमीणां च शनकैर्निवपेद्भुवि ॥९७॥

लोभान्नाभूद्गृहे यस्य कदाचित् कश्चिदुत्सवः
नृत्यन्ति पटहैस्तस्य निधने धनभागिनः ॥९८॥

೯೦. ಧರ್ಮಮಾರ್ಗದಿಂದ ಬಂದ ಧನವನ್ನು ಪಡೆದು, ಅದನ್ನು ಯಜ್ಞಕ್ಕಾಗಿ ವಿನಿಯೋಗಿಸಬೇಕು; ಅದನ್ನು ನಿತ್ಯವೂ ದಾನಮಾಡಬೇಕು; ಅದರಿಂದ ಅತಿಥಿಗಳಿಗೆ ಉಣಬಡಿಸಬೇಕು; ಇನ್ನೊಬ್ಬರು ಕೈಯೆತ್ತಿ ಕೊಡದುದನ್ನು ಸ್ವೀಕರಿಸಬಾರದು— ಎಂಬುದು ಪ್ರಾಚೀನ ಕಾಲದಿಂದ ನಡೆದುಬಂದ ಗೃಹಸ್ಥಧರ್ಮದ ಉಪನಿಷತ್ತು.

೯೧. ವೇದಾಭ್ಯಾಸಕ್ಕೆ ಅಗ್ನಿಹೋತ್ರ ಮಾಡುವುದೇ ಫಲ; ಗಳಿಸಿದ ಧನಕ್ಕೆ ದಾನ-ಭೋಗಗಳೇ ಫಲ: ಮದುವೆಗೆ ಪತ್ನೀಪ್ರೇಮ-ಪುತ್ರಲಾಭಗಳೇ ಫಲ, ವಿವಿಧ ಶಾಸ್ತ್ರಗಳ ಓದಿಗೆ ಒಳ್ಳೆಯ ಗುಣ–ನಡತೆಗಳೇ ಫಲ.

೯೨. ಎಲ್ಲ ಜೀವಿಗಳೂ ತಾಯಿಯನ್ನು ಆಶ್ರಯಿಸಿ ಬದುಕುವಂತೆ, ಇತರ ಆಶ್ರಮಗಳೆಲ್ಲವೂ ಗೃಹಸ್ಥಾಶ್ರಮವನ್ನು ಆಶ್ರಯಿಸಿ ಇರುತ್ತವೆ.

೯೩. ಸಿರಿಗೆ ದಾನವು ಫಲ; ಓದಿಗೆ ಶಾಂತಿಯು ಫಲ; ಕೈಗೆ ದೇವರ ಪೂಜೆ ಫಲ; ಕರ್ಮಕ್ಕೆ ಪುಣ್ಯವು ಫಲ; ಜೀವನಕ್ಕೆ ಪರರ ದುಃಖವನ್ನು ಪರಿಹರಿಸುವ ಕ್ರೀಡೆಯೇ ಫಲ; ಮಾತಿಗೆ ಸತ್ಯವು ಫಲ; ಉನ್ನತಪ್ರಭಾವಕ್ಕೆ ಜಗತ್ತಿಗೆ ಹೆಚ್ಚಿನ ಸುಖ ಕೊಡುವುದೇ ಫಲ ಮತ್ತು ಬುದ್ಧಿಗೆ ಪುನರ್ಜನ್ಮ ಬಾರದಿರಲು ಏನು ಮಾಡ-ಬೇಕೆಂದು ಆಲೋಚಿಸುತ್ತಿರುವದೇ ಫಲ; ಅದು ಹಿತಕ್ಕಾಗಿಯೇ.

೯೪. ತನ್ನ ಹಿರಿಯರಿಗಿಂತ ಕಡಿಮೆಯವನಾಗುವುದನ್ನು ಬಯಸಬಾರದು; ಅವರಿಗೆ ಸಮನಾಗುವುದನ್ನು ಇಲ್ಲವೆ ಹೆಚ್ಚಿನವನಾಗುವುದನ್ನು ಬಯಸಬೇಕು; ಉತ್ಕೃಷ್ಟವಾದ ರಘುವಂಶದಲ್ಲಿ ಸಹ ರಾಮನು ತನ್ನ ಹಿರಿಯರಿಗಿಂತ ಹೆಚ್ಚಿನವ-ನೆನ್ನಿಸಿದನು.

೯೫. ಸಾಯುವ ವರೆಗೂ ಪತಿ-ಪತ್ನಿಯರು ಪರಸ್ಪರ ವ್ಯಭಿಚಾರಿಗಳಾಗ ಬಾರದು. ಸ್ತ್ರೀ-ಪುರುಷರಿಗೆ ಸಂಕ್ಷಿಪ್ತವಾಗಿ ಹೇಳಬಹುದಾದ ಧರ್ಮ ಇದು.

೯೬. ಪತಿತರ, ಬಹಿಷ್ಕೃತ ಜಾತಿಯವರ, ನಿಂದ್ಯರಾದ ಸಂಮಿಶ್ರ ಕುಲ ದವರ, ಮೂರ್ಖರ, ಸೊಕ್ಕಿನವರ, ಗಡಿನಿವಾಸಿಗಳ ಮತ್ತು ಕ್ಷೌರಿಕರ ಸಂಗಡ ವಾಸ ಮಾಡಬಾರದು.

೯೭. ನಾಯಿಗಳಿಗೂ, ಪತಿತರಿಗೂ, ಹೀನ ಜಾತಿಯವರಿಗೂ, ಕುಷ್ಠರೋಗಿ ಗಳಿಗೂ, ಕಾಗೆಗಳಿಗೂ, ಹುಳುಗಳಿಗೂ, ಮೆಲ್ಲಗೆ ನೆಲದಮೇಲೆ ಉಣಬಡಿಸಬೇಕು.

೯೮. ಯಾವ ಉತ್ಸವವನ್ನೂ ಯಾವಾಗಲೂ ಮನೆಯಲ್ಲಿ ಮಾಡಿಸದ-ಲೋಭಿಯು ಸತ್ತಾಗ, ಅವನ ವಾರಸುದಾರರು ತಂಬಟೆ ಬಡೆದು ಕುಣಿಯುತ್ತಾರೆ!

विद्वज्जनसम्पर्को नष्टेष्टज्ञातिदर्शनाभ्युदयः ।
कस्य न सुखाय भवने भवति महारत्नलाभश्च ॥९९॥

प्रातःशीतजले निमज्ज्य विबुधानभ्यर्चयत्युच्चकै-
रार्यः पर्युषितं तु नाभ्यवहरत्यन्धः क्षुधान्धोऽप्यसौ ।
भागे गोमयलिप्त एव पचते भुक्ते ततोऽन्यत्र यन्-
नीतं तद् विजहाति भुक्तिनियमो दृष्टः क्व भूयानियान्
॥१००॥

माता न यस्यास्त्यविवेकराशिः
पुनर्भवाब्धिर्जनको न यस्य ।
यस्य प्रसक्ता दयिता न तृष्णा
स एव लोके कुशली कुलीनः ॥१०१॥

नास्ति स्वस्तिकरः परः परिभवो धर्मात्मनां प्राणिनः
आपत्तापशमक्षमं धनसमं नान्यत् क्रियाजीविनाम् ।
संसारे परमस्ति नोऽत्र सुखदं रम्यं न रामाननात्
सर्वक्लेशविनाशनिर्वृतिरसः को नाम मोक्षात् परः ॥१०२॥

೯೯. ವಿದ್ವಜ್ಜನರ ಸಂಪರ್ಕ, ಕಳೆದುಹೋದ ಪ್ರಿಯಬಂಧುಗಳ ದರ್ಶನ-ಲಾಭ ಮತ್ತು ದೊಡ್ಡ ರತ್ನವೊಂದು ದೊರಕುವುದು, ಯಾವನ ಮನೆಯಲ್ಲಿ ಸುಖ-ದಾಯಕವಾಗದೆ ಉಳಿದಾವು ?

೧೦೦. ಆರ್ಯನು ಬೆಳಿಗ್ಗೆ ತಣ್ಣೀರುಸ್ನಾನ ಮಾಡಿ, ದೇವರ ಪೂಜೆಯನ್ನು ದೊಡ್ಡದಾಗಿ ಮಾಡಿ, ಕುರುಡನಾಗಿದ್ದರೂ, ಎಷ್ಟು ಹಸಿದಿದ್ದರೂ ತಂಗೂಳನ್ನು ಉಣ್ಣದೆ, ಗೋಮಯದಿಂದ ಸಾರಿಸಿದ ನೆಲದ ಮೇಲೆಯೇ ಅಡಿಗೆ ಮಾಡಿ ಉಣ್ಣುತ್ತಾನೆ, ಬೇರೆ ಕಡೆಯಿಂದ ತಂದದ್ದನ್ನು ಬಿಡುತ್ತಾನೆ— ಊಟದ ಇಷ್ಟು ದೊಡ್ಡ ನಿಯಮವನ್ನು ಇನ್ನೆಲ್ಲಾದರೂ ನೋಡಲು ಸಾಧ್ಯವೇ?

೧೦೧. ಅವಿವೇಕರಾಶಿಯು ಅವನಿಗೆ ತಾಯಿಯಾಗಿಲ್ಲ; ಪುನರ್ಜನ್ಮಸಮುದ್ರವು ಅವನ ತಂದೆಯಾಗಿಲ್ಲ; ಆಸೆಯು ಹೆಂಡತಿಯಾಗಿ ಅವನನ್ನು ಅಂಟಿಕೊಂಡಿಲ್ಲ; ಆದುದರಿಂದ ಅವನೇ ಜಗತ್ತಿನಲ್ಲಿ ಕುಶಲಿಯೂ, ಕುಲೀನನೂ ಆಗಿದ್ದಾನೆ!

೧೦೨. ಧರ್ಮಾತ್ಮರಿಗೆ ಅನಾದರಕ್ಕಿಂತ ಲೇಸು ಇನ್ನೊಂದಿಲ್ಲ; ಕರ್ಮಜೀವಿಗಳಿಗೆ ಆಪತ್ತಿನ ಉರಿಯನ್ನು ಆರಿಸಲು ದುಡ್ಡಿಗಿಂತ ಹೆಚ್ಚಿನ ಬೇರೆ ವಸ್ತುವಿಲ್ಲ; ಸಂಸಾರದಲ್ಲಿ ಚೆಲುವೆಯ ಮೊಗಕ್ಕಿಂತ ರಮ್ಯವೂ, ಸುಖದಾಯಕವೂ ಆದ ಪದಾರ್ಥ ಇನ್ನೊಂದಿಲ್ಲ; ಎಲ್ಲ ದುಃಖಗಳೂ ನಾಶವಾಗುವುದರಿಂದುಂಟಾಗುವ ಪರಮಾನಂದದ ಸವಿಯುಳ್ಳ ವಸ್ತುವು ಮುಕ್ತಿಯನ್ನು ಬಿಟ್ಟರೆ ಇನ್ನಾವುದಿದೆ?

II

ಮಾನವನ ತತ್ತ್ವಾನುಸಂಧಾನ

೧. ತತ್ತ್ವ

प्राणता श्वसितमेव विचार्यं
कुर्वता करणमेव निभाल्यम् ।
गच्छता गमनमेव विशोध्यं
तत्तनौ मथनमागमबोध्यम् ॥१॥

नादौ किञ्चिद्भवति नियतं यश्च पश्चान्न किञ्चित्
मध्येऽकस्मात् सपदि घटयन् सौस्थ्यदौस्थ्यानुरोधम् ।
निःशीर्षाङ्घ्रिर्नट इव मुहुः कोऽपि जन्तुर्नटित्वा
नो जानीमो भवजवनिकान्तर्हितः क्व प्रयाति ॥२॥

यः सहस्रं सहस्राणां पक्षानाहृत्य सम्पतेत् ।
नान्तं गच्छेत् कारणस्य यद्यपि स्यान्मनोजवः ॥३॥

आत्मारामा विहितरतयो निर्विकल्पे समाधौ
ज्ञानोद्रेकाद्विघटित तमोग्रन्थयः सत्त्वनिष्ठाः ।
यं वीक्षन्ते कमपि तमसां ज्योतिषां वा परस्तात्
तं मोहान्धः कथमयममुं वेत्तु देवं पुराणम् ॥४॥

प्रशासितारं सर्वेषामणीयांसमणोरपि ।
रुक्माभं स्वप्नधीगम्यं विद्यात्तं पुरुषं परम् ॥५॥

यदुपादाय पूर्वस्तु भावो विकुरुतेऽपरम्
आदिरन्तो यदा यस्य तत् सत्यमभिधीयते ॥६॥

II

ಮಾನವನ ತತ್ತ್ವಾನುಸಂಧಾನ

೧. ತತ್ತ್ವ

೧. ಬದುಕಿರುವವನು ಉಸಿರನ್ನು ವಿವೇಚಿಸಬೇಕು; ಕೆಲಸಗಾರನು ತನ್ನ ಉಪಕರಣವನ್ನು ಪರಾಂಬರಿಸಬೇಕು; ನಡೆಯುವಾತನು ನಡೆದಾಟವನ್ನು ಶೋಧಿಸಬೇಕು— ಹೀಗೆ ದೇಹದೊಳಗಿನ ಎಲ್ಲವನ್ನೂ ಶೋಧಿಸಿ ತಿಳಿದುಕೊಳ್ಳಬೇಕೆಂಬುದು ಆಗಮೋಪದೇಶ.

೨. ಮಾನವಜೀವನದಲ್ಲಿ ಮೊದಲು ಖಂಡಿತವಾಗಿ ಏನೂ ಇಲ್ಲ; ಆ ಮೇಲೂ ಏನೂ ಇಲ್ಲ: ನಡುವೆ ಮಾತ್ರ ಕೂಡಲೆ ಹೇಗೋ ಏನೋ ಸುಖ-ದುಃಖಗಳ ಅನುಭವ ಕಾಣುತ್ತದೆ. ತಲೆ, ಕಾಲು ಎರಡೂ ಇಲ್ಲದ ನಟನಂತೆ ಮಾನವನು ಪದೇ ಪದೇ ನಟನೆ ಮಾಡುತ್ತಾನೆ. ಆ ನಟನೆ ಮುಗಿದೊಡನೆ ಭವದ ಪರದೆ ಬೀಳುತ್ತದೆ; ಅದರ ಹಿಂದೆ ಅವನೆಲ್ಲಿ ಮರೆಯಾಗಿ ಹೋಗುವನೋ ನಮಗರಿಯದು.

೩. ಹತ್ತು ಲಕ್ಷ ರೆಕ್ಕೆಗಳನ್ನು ಕಟ್ಟಿಕೊಂಡು ಮನೋಜವದಿಂದ ಹಾರಿದರೂ ಈ ಜಗತ್ತಿನ ಕಾರಣದ ತುದಿಯನ್ನು ಯಾರೂ ಮುಟ್ಟಲಾರರು.

೪. ಆತ್ಮವನ್ನು ಉದ್ಯಾನವನ್ನಾಗಿ ಉಳ್ಳ ಸತ್ವನಿಷ್ಠರು, ಜ್ಞಾನದ ಕಾರಂಜಿಯಿಂದ ಅಜ್ಞಾನದ ಹೆಂಟೆಗಳನ್ನು ಬಿಡಿಸಿಕೊಂಡು ನಿರ್ವಿಕಲ್ಪ ಸಮಾಧಿಯಲ್ಲಿ ಸಂತೋಷಪಡುತ್ತಾರೆ; ಅಂಥವರು ಕಾಣುವ ಬೆಳಕು-ಕತ್ತಲುಗಳಾಚೆಗಿರುವ ಪ್ರಾಚೀನನಾದ ಆ ಅವರ್ಣನೀಯ ದೇವನನ್ನು ಮೋಹಾಂಧನೆಂತು ತಿಳಿದಾನು ?

೫. ಅಣುವಿಗಿಂತ ಅಣುವೂ, ಸರ್ವಪ್ರಶಾಸಕನೂ, ಬಂಗಾರದ ಬಣ್ಣದವನೂ ನಿದ್ರಾಸದೃಶಪ್ರಜ್ಞೆಗೆ ಗಮ್ಯನೂ ಆದವನನ್ನು ಪರಮ ಪುರುಷನೆಂದು ತಿಳಿಯತಕ್ಕದ್ದು.

೬. ಭಾವಪದಾರ್ಥವು ಒಂದನ್ನು ತೆಗೆದುಕೊಂಡು ಇನ್ನೊಂದು ಪದಾರ್ಥವಾಗಿ ಮಾರ್ಪಡುತ್ತದೆ; ಆ ಒಂದು ವಸ್ತುವು ಆ ಪದಾರ್ಥದ ಆದಿಯೂ ಅಂತ್ಯವೂ ಆಗಿದ್ದರೆ ಅದೇ ಸತ್ಯ.

अदृश्यमव्यक्तमचिन्त्यमव्ययं
ब्रह्मर्षयो ब्रह्ममयं सनातनम् ।
वदन्ति यं वै पुरुषं सनातनं
तं देवगुह्यं शरणं प्रपद्ये ॥७॥

दिक्काल्याद्यनवच्छिन्नानन्तचिन्मात्रमूर्तये ।
स्वानुभूत्येकमानाय नमः शान्ताय तेजसे ॥८॥

अनन्तनामधेयाय सर्वाकारविधायिने ।
समस्तमन्त्रवाच्याय विश्वैकपतये नमः ॥९॥

नमो वाङ्मनसातीतमहिम्ने परमेष्ठिने
त्रिगुणाष्टगुणानन्तगुणनिर्गुणमूर्तये ॥१०॥

भवबीजाङ्कुरजलदा रागाद्याः
क्षयमुपागता यस्य ।
ब्रह्मा वा विष्णुर्वा हरो जिनो वा
नमस्तस्मै ॥११॥

यस्मिन् सर्वं यतः सर्वं यः सर्वं सर्वतश्च यः ।
यश्च सर्वमयो नित्यं तस्मै सर्वात्मने नमः ॥१२॥

ब्रह्मादिषु प्रलीनेषु नष्टे लोके चराचरे ।
एकस्तिष्ठति विश्वात्मा स मे विष्णुः प्रसीदतु ॥१३॥

एकं ब्रह्मैवाद्वितीयं समस्तं
सत्यं सत्यं नेह नानास्ति किञ्चित् ।
एको रुद्रो न द्वितीयोऽवतस्थे
तस्मादेकं त्वां प्रपद्ये महेशम् ॥१४॥

आत्मस्वरूप तवरूपपरम्पराभि-
राभिस्ततं हर चराचररूपमेतत् ।
सर्वान्तरात्मनिलयप्रतिरूपरूप
नित्यं नतोऽस्मि परमात्मजनोऽष्टमूर्ते ॥१५॥

೭. ಬ್ರಹ್ಮರ್ಷಿಗಳು ಒಬ್ಬನನ್ನು ಅದೃಶ್ಯ, ಅವ್ಯಕ್ತ, ಅಚಿಂತ್ಯ, ಅವ್ಯಯ, ಸನಾತನ ಮತ್ತು ಬ್ರಹ್ಮಮಯ ಎಂದು ಕರೆಯುತ್ತಾರೆ: ದೇವತೆಗಳ ರಹಸ್ಯ ಸ್ವರೂಪ ವೆನ್ನಿಸಿದ ಆ ಸನಾತನಪುರುಷನನ್ನು ಶರಣು ಹೊಗುತ್ತೇನೆ.

೮. ಕಾಲದೇಶಗಳ ಗಡಿಯ ಹೊರಗಿನ, ಅಂತ್ಯವಿಲ್ಲದ, ಶುದ್ಧ ಜ್ಞಾನಾಕಾರದ ಸ್ವಾನುಭೂತಿಯನ್ನು ಮಾತ್ರ ಪ್ರಮಾಣವನ್ನಾಗಿ ಉಳ್ಳ ಶಾಂತಸ್ವರೂಪದ ತೇಜಸ್ಸಿಗೆ ನಮಸ್ಕಾರ.

೯. ಅಗಣಿತ ನಾಮಗಳುಳ್ಳ, ಸರ್ವಾಕಾರನಿರ್ಮಾಪಕನಾದ, ಸಮಸ್ತ ಮಂತ್ರ ಗಳಿಂದ ಉಕ್ತನಾದ, ಒಬ್ಬನೇ ಆಗಿರುವ ವಿಶ್ವದ ಒಡೆಯನಿಗೆ ನಮಸ್ಕಾರ.

೧೦. ಮಾತಿಗೂ ಮನಸ್ಸಿಗೂ ನಿಲುಕದ ಮಹಿಮೆಯುಳ್ಳವನೂ, ತ್ರಿಗುಣ, ಅಷ್ಟಗುಣ, ಅನಂತಗುಣವಂತನೂ ಹಾಗೆಯೇ ನಿರ್ಗುಣಮೂರ್ತಿಯೂ ಆದ ಪರಮೇಷ್ಠಿಗೆ ನಮಸ್ಕಾರ.

೧೧. ಭವಬೀಜದ ಅಂಕುರಕ್ಕೆ ಮೋಡಗಳಾದ ರಾಗದ್ವೇಷಗಳು ಒಬ್ಬನಲ್ಲಿ ನಷ್ಟಹೊಂದಿರುತ್ತವೆ. ಆತನು ಬ್ರಹ್ಮನಾಗಿರಲಿ, ವಿಷ್ಣುವಾಗಿರಲಿ, ಮಹೇಶ್ವರ-ನಾಗಿರಲಿ ಅಥವಾ ಜಿನನಾಗಿದ್ದರೂ ಸರಿ — ಅವನಿಗೆ ನಮಸ್ಕಾರ.

೧೨. ಆವನಲ್ಲಿ ಎಲ್ಲವೂ; ಆವನ ದೆಸೆಯಿಂದಲೇ ಎಲ್ಲವೂ; ಆವನೇ ಎಲ್ಲವೂ; ಎಲ್ಲ ಕಡೆಗಳಲ್ಲೂ ಅವನೇ; ಯಾವಾಗಲೂ ಅವನು ಸರ್ವವ್ಯಾಪಿ; ಆ ಸರ್ವಸಾರ ಸ್ವರೂಪನಿಗೆ ನಮಸ್ಕಾರ.

೧೩. ಬ್ರಹ್ಮ-ವಿಷ್ಣು-ಮಹೇಶ್ವರರು ಲಯವಾಗಿ ಹೋದಮೇಲೆ, ಚರಾಚರ ಜಗತ್ತು ನಾಶಹೊಂದಿದ ಮೇಲೆ, ಒಬ್ಬನೇ ಒಬ್ಬನಾಗಿ ಉಳಿಯುವ ವಿಶ್ವಾತ್ಮನಾದ 'ವಿಷ್ಣು'ವು ನನಗೆ ಪ್ರಸನ್ನನಾಗಲಿ.

೧೪. "ಬ್ರಹ್ಮನು" ಒಬ್ಬನೇ; ಅವನು ಸಮಸ್ತನು, ಅದ್ವಿತೀಯನು; ಸತ್ಯ, ಸತ್ಯ—ಇಲ್ಲಿ ಯಾವುದೂ ಅನೇಕವಾಗಿಲ್ಲ; "ರುದ್ರನು" ಒಬ್ಬನೇ; ಎರಡನೆಯವನಿಲ್ಲ; ಆದುದರಿಂದ ಮಹೇಶನೆನ್ನಿಸಿರುವ ಒಬ್ಬನಾದ ನಿನ್ನನ್ನು ಸೇರುತ್ತೇನೆ.

೧೫. ಎಲ್ಲೈ ಆತ್ಮಸ್ವರೂಪನೇ, ಹರನೇ, ಎಲ್ಲರ ಅಂತರಾತ್ಮನಿಲಯದ ಪ್ರತಿ-ರೂಪಕ್ಕೆ ಮೂಲನಾಗಿರುವವನೇ, ಅಷ್ಟಮೂರ್ತಿಯೇ, ನಿನ್ನ ಈ ರೂಪಪರಂಪರೆ ಗಳಿಂದ ಚರಾಚರ ರೂಪದ ಈ ಜಗತ್ತು ವ್ಯಾಪ್ತವಾಗಿದೆ. ಆದುದರಿಂದ ಪರಮಾತ್ಮ ನಾದ ನಿನಗೆ ಸೇರಿದವನಾದ ನಾನು ನಿತ್ಯವೂ ನಿನ್ನನ್ನು ನಮಸ್ಕರಿಸುತ್ತೇನೆ.

मायाकारः कारणं त्वं प्रसिद्धो
वेदैः शान्तो ज्योतिरर्कस्त्वमुक्तः ।
वेदार्थेन त्वां विवृण्वन्ति बुद्ध्या
हृत्पद्मान्तःसन्निविष्टं पुराणम् ॥१६॥

स्वप्रकाशं निराकारं सदानन्दमनादि यत् ।
नित्यं शुद्धं बुद्धमृद्धं सत्यमानन्दमद्वयम् ॥१७॥

तस्मादनन्तमजरं परमं विकासि
तद्ब्रह्म चिन्तय किमेभिरसद्विकल्पैः ।
यस्यानुषंगिण इमे भुवनाधिपत्य–
भोगादयः कृपणलोकमता भवन्ति ॥१८॥

सत्यस्य वचनं साधु न सत्याद्विद्यते परम्
सत्येन विधृतं सर्वं सर्वंसत्ये प्रतिष्ठितम् ॥१९॥

नैर्गुण्याद् ब्रह्म चाप्नोति सगुणत्वान्निवर्तते ।
गुणप्रचारिणी बुद्धिर्हुताशन इवेन्धने ॥२०॥

सत्यमेवेश्वरो लोके सत्ये पद्मा प्रतिष्ठिता ।
सत्यमूलानि सर्वाणि सत्यान्नास्ति परं पदम् ॥२१॥

यो ब्रह्माणं विदधाति पूर्वं
यो वै वेदांश्च प्रहिणोति तस्मै ।
तं ह देवमात्मबुद्धिप्रकाशं
मुमुक्षुर्वै शरणमहं प्रपद्ये ॥२२॥

पश्यामि देवांस्तव देव देहे
सर्वांस्तथा भूतविशेषसंघान् ।
ब्रह्माणमीशं कमलासनस्थं
ऋषींश्च सर्वानुरगांश्च दिव्यान् ॥२३॥

೧೬. ನೀನು ಮಾಯಾಕಾರದಿಂದ ಜಗತ್ಕಾರಣನಾಗಿರುವುದು ಪ್ರಸಿದ್ಧ; ಮತ್ತು ಶಾಂತನೂ, ಜ್ಯೋತಿಃಸ್ವರೂಪನೂ, ಸೂರ್ಯನೂ ಆಗಿರುವೆ ಎಂದು ವೇದಗಳಲ್ಲಿ ಹೇಳಿದೆ; ಹೃದಯಕಮಲದಲ್ಲಿರುವ ಪ್ರಾಚೀನನಾದ ನಿನ್ನನ್ನು ಬುದ್ಧಿಯ ಮೂಲಕ ವಿದ್ವಾಂಸರು ವೇದಾರ್ಥದಿಂದ ವಿವರಿಸುತ್ತಾರೆ.

೧೭. ಸ್ವಪ್ರಕಾಶವುಳ್ಳದ್ದೂ, ನಿರಾಕಾರವಾದುದೂ, ಸದಾನಂದಸ್ವರೂಪದ್ದೂ ಅನಾದಿಯೂ ಆದ ಪದಾರ್ಥವು ನಿತ್ಯವೂ, ಶುದ್ಧವೂ, ಬುದ್ಧವೂ, ಸಮೃದ್ಧವೂ, ಸತ್ಯವೂ, ಆನಂದವೂ, ಅದ್ವಿತೀಯವೂ ಆಗಿದೆ.

೧೮. ಆದುದರಿಂದ ಅನಂತವೂ, ನಿರ್ಜರವೂ, ಶ್ರೇಷ್ಠವೂ, ವಿಕಾಸಶೀಲವುಳ್ಳದ್ದೂ ಆದ ಬ್ರಹ್ಮವನ್ನು ಧ್ಯಾನಿಸು; ಅಸತ್‌ಸ್ವರೂಪದ ಈ ವಿಕಲ್ಪಗಳಿಂದ ಏನು ಪ್ರಯೋಜನ? ಈ ಜಗತ್ತಿನ ಒಡೆತನ ಮುಂತಾದ ಅಕಸ್ಮಾತ್ತಾಗಿ ಸಿಕ್ಕಿದ ಭೋಗಗಳೆಲ್ಲವೂ ಹೀನಮನರಿಗಷ್ಟೇ ಅಪೇಕ್ಷಣೀಯ.

೧೯. ಸತ್ಯ ಹೇಳುವುದು ಲೇಸು; ಸತ್ಯಕ್ಕಿಂತ ಹೆಚ್ಚಿನದಿನ್ನೊಂದಿಲ್ಲ; ಎಲ್ಲವೂ ಸತ್ಯವನ್ನಾಧರಿಸಿದೆ, ಎಲ್ಲವೂ ಸತ್ಯದಲ್ಲಿ ಪ್ರತಿಷ್ಠಿತವಾಗಿದೆ.

೨೦. ಮಾನವನು ನಿರ್ಗುಣತ್ವದಿಂದ ಬ್ರಹ್ಮವನ್ನು ಹೊಂದುತ್ತಾನೆ; ಮತ್ತು ಸಗುಣತ್ವದಿಂದ ಹಿಂದಿರುಗುತ್ತಾನೆ. ಕಟ್ಟಿಗೆಯಲ್ಲಿ ಬೆಂಕಿಯು ಸಂಚರಿಸಿದಂತೆ ಬುದ್ಧಿಯು ಗುಣದಲ್ಲಿ ಸಂಚರಿಸುತ್ತದೆ.

೨೧. ಲೋಕದಲ್ಲಿ ಈಶ್ವರನು ಸತ್ಯ; ಲಕ್ಷ್ಮಿಯು ಸತ್ಯದಲ್ಲಿ ಪ್ರತಿಷ್ಠಿತೆಯಾಗಿದ್ದಾಳೆ. ಎಲ್ಲದಕ್ಕೂ ಸತ್ಯವೇ ಮೂಲ; ಸತ್ಯಕ್ಕಿಂತ ಹೆಚ್ಚಿನ ಸ್ಥಾನವಿಲ್ಲ.

೨೨. ದೇವನು ಮೊದಲು ಬ್ರಹ್ಮನನ್ನು ಸೃಜಿಸಿದನು; ಅವನಿಗೆ ಆ ದೇವನು ವೇದಗಳನ್ನು ಕಳಿಸಿಕೊಟ್ಟನು; ಅವನು (ದೇವನು) ಆತ್ಮಬುದ್ಧಿಗೆ ಹೊಳೆಯುವವನು. ಮೋಕ್ಷವನ್ನು ಬಯಸುವ ನಾನು ಅವನನ್ನು ಮೊರೆಹೊಗುತ್ತೇನೆ.

೨೩. ದೇವರೇ, ನಿನ್ನ ದೇಹದಲ್ಲಿ ನಾನು ದೇವತೆಗಳನ್ನೂ, ಎಲ್ಲ ಭೂತಸಂಘಾತಗಳನ್ನೂ, ಕಮಲಾಸನನಾದ ಬ್ರಹ್ಮನನ್ನೂ, ಈಶ್ವರನನ್ನೂ, ಸರ್ವಋಷಿಗಳನ್ನೂ, ದಿವ್ಯಸರ್ಪಗಳನ್ನೂ ನೋಡುತ್ತಿದ್ದೇನೆ.

उपद्रष्टानुमन्ता च भर्ता भोक्ता महेश्वरः
परमात्मेति चाप्युक्तो देहेऽस्मिन् पुरुषः परः ॥२४॥

अनण्वस्थूलमह्रस्वमदीर्घमजमव्ययम् ।
अरूपगुणवर्णाख्यं तद्ब्रह्मेत्यवधारयेत् ॥२५॥

निष्कलं सकलं ब्रह्म निर्गुणं गुणगोचरम् ।
योगिनां परमानन्दमक्षरं मोक्षसंज्ञितम् ॥२६॥

न सादृश्ये तिष्ठति रूपमस्य
न चक्षुषा पश्यति कश्चिदेनम् ।
मनीषयाऽथो मनसा हृदा च
य एनं विदुरमृतास्ते भवन्ति ॥२७॥

जगद्योनिरयोनिस्त्वं जगदन्तोऽप्यनन्तकः
जगदादिरनादिस्त्वं जगदीशोऽप्यनीश्वरः ॥२८॥

आत्मानमात्मना वेत्सि सृजस्यात्मानमात्मना
आत्मना कृतिना च त्वमात्मन्येव प्रलीयसे ॥२९॥

स्वकालपरिमाणेन व्यस्तरात्रिं दिवस्य ते
यौ तु स्वप्नावबोधौ तौ भूतानां प्रलयोदयौ ॥३०॥

त्वामामनन्ति प्रकृतिं पुरुषार्थप्रवर्तिनीम् ।
तद्दर्शनमुदासीनं त्वामेव पुरुषं विदुः ॥३१॥

त्वमेव हव्यं होता च भोज्यं भोक्ता च शाश्वतः
वेद्यं च वेदिता चासि ध्याता ध्येयं च यत्परम् ॥३२॥

यदा न कुरुते भावं सर्वभूतेष्वमङ्गलम् ।
कर्मणा मनसा वाचा ब्रह्म सम्पद्यते तदा ॥३३॥

೨೪. ಈ ದೇಹದಲ್ಲಿರುವ ಪರಮಪುರುಷನು (ಗುಣಗಳ ಚಲನವನ್ನು ನೋಡುವ) ಸಾಕ್ಷಿಯೂ, ಒಪ್ಪಿಗೆ ಕೊಡುವವನೂ, ಪೊರೆಯುವವನೂ, ಭೋಗಿಸುವವನೂ, ಮಹೇಶ್ವರನೂ, ಪರಮಾತ್ಮನೆನ್ನಿಸಿದವನೂ ಆಗಿದ್ದಾನೆ.

೨೫. ಸೂಕ್ಷ್ಮವಲ್ಲದ, ಸ್ಥೂಲವಲ್ಲದ, ಹ್ರಸ್ವವಲ್ಲದ, ದೀರ್ಘವಲ್ಲದ, ಹುಟ್ಟಿಲ್ಲದ, ನಾಶವಿಲ್ಲದ, ರೂಪ-ಗುಣ-ವರ್ಣಗಳಿಲ್ಲದ ಪದಾರ್ಥವನ್ನು ಬ್ರಹ್ಮವೆಂದು ತಿಳಿಯಬೇಕು.

೨೬. ಬ್ರಹ್ಮವು ನಿಷ್ಕಲ ಹಾಗೂ ಸಕಲ, ನಿರ್ಗುಣ ಹಾಗೂ ಸಗುಣ; ಅದು ಯೋಗಿಗಳ ಪರಮಾನಂದದ ಸ್ವರೂಪವುಳ್ಳ ಅವಿನಾಶಿಯಾದ ಮೋಕ್ಷ.

೨೭. ಇವನ ರೂಪಕ್ಕೆ ಹೋಲಿಕೆಯಿಲ್ಲ. ಯಾವನೂ ಇವನನ್ನು ಕಣ್ಣಿಂದ ನೋಡಲಾರನು; ಬುದ್ಧಿ, ಮನಸ್ಸು, ಹೃದಯಗಳಿಂದ ಇವನನ್ನು ತಿಳಿದವರು ಅಮರರಾಗುವರು.

೨೮, ೨೯. ನೀನು ಜಗದ ಜನಕ, ನಿನಗೆ ಯಾವ ಜನಕನೂ ಇಲ್ಲ; ನೀನು ಜಗವನ್ನು ಕೊನೆಗೊಳಿಸುವವನು, ನಿನ್ನನ್ನು ಯಾವನೂ ಕೊನೆಗೊಳಿಸಲಾರನು; ನೀನು ಜಗದ ಆದಿ, ನಿನಗೆ ಆದಿಯಿಲ್ಲ! ಜಗಕ್ಕೆ ನೀನು ಒಡೆಯ, ಆದರೆ ನಿನಗೆ ಯಾವನೂ ಒಡೆಯನಿಲ್ಲ! ನೀನು ನಿನ್ನ ಮೂಲಕ ನಿನ್ನನ್ನರಿತಿರುವೆ; ನೀನು ಸ್ವಯಂಭು; ನಿನ್ನಿಂದ ಮತ್ತು ನಿನ್ನ ಕೃತಿಯಿಂದ, ನೀನು ನಿನ್ನಲ್ಲಿ ಲೀನನಾಗುವೆ!

೩೦ ನಿನ್ನ ಕಾಲದ ಅಳತೆಯ ಪ್ರಕಾರ ಇರುಳು ಹಗಲುಗಳನ್ನು ನೀನು ವಿಭಜಿಸಿಕೊಂಡಿರುವೆ; ನಿನ್ನ ನಿದ್ರೆ-ಎಚ್ಚರಗಳ ಅವಧಿಗಳಲ್ಲಿ ಭೌತಿಕ ಪದಾರ್ಥಗಳ ಲಯ ಮತ್ತು ಸೃಷ್ಟಿ ಆಗುತ್ತವೆ.

೩೧. (ಔಪನಿಷದಿಕರು) ನಿನ್ನನ್ನು ಪುರುಷನ ಅರ್ಥದಲ್ಲಿ ಪ್ರವರ್ತಿಸುವ ಪ್ರಕೃತಿಯೆನ್ನುತ್ತಾರೆ; ಹಾಗೆಯೇ ನಿನ್ನನ್ನು, ಆ ಪ್ರಕೃತಿಯನ್ನು ನೋಡುತ್ತ ಉದಾಸೀನನಾಗಿ ಕುಳಿತುಕೊಳ್ಳುವ ಪುರುಷನೆಂದೂ ತಿಳಿದಿದ್ದಾರೆ!

೩೨. ನೀನೇ ಹವಿಸ್ಸು, ಹೋತೃ, ಭೋಜ್ಯವಸ್ತು ಮತ್ತು ಭೋಗಿಸುವಾತನು; ಶ್ರೇಷ್ಠವಾದ ತಿಳಿವಳಿಕೆ, ತಿಳಿದುಕೊಳ್ಳುವವ, ಧ್ಯೇಯ ಮತ್ತು ಧ್ಯಾನ ಮಾಡುವವ ನೀನೇ!

೩೩. ಮನಸ್ಸು, ಮಾತು ಮತ್ತು ಕೃತಿಗಳಿಂದ ಯಾವ ಜೀವಿಗೂ ಅಮಂಗಲವನ್ನು ಮಾಡದಿದ್ದರೆ, ಬ್ರಹ್ಮವು ಸಿದ್ಧಿಸುವುದು.

सत्वं ज्ञानं तमोऽज्ञानं रागद्वेषौ रजः स्मृतम् ।
एतद्व्याप्तिमदेतेषां सर्वभूताश्रितं वपुः ॥३४॥

नित्यं द्वन्द्वसमायुक्तं सत्वमाहुर्मनीषिणः
निर्द्वंद्वो निष्कलो नित्यः क्षेत्रज्ञो निर्गुणात्मकः ॥३५॥

न सत्यं विन्दते कश्चित् क्षेत्रज्ञस्त्वेव विन्दति ।
गुणानां गुणभूतानां यत् परं परमं महत् ॥३६॥

संन्यासी ज्ञानसंयुक्तः प्राप्नोति परमां गतिम् ।
अतीतो द्वन्द्वमभ्येति तमोमृत्युजरातिगः ॥३७॥

आश्चर्यवत् पश्यति कश्चिदेनं
आश्चर्यवद् वदति तथैव चान्यः ।
आश्चर्यवच् चैनमन्यः शृणोति
श्रुत्वाप्येनं वेद न चैव कश्चित् ॥३८॥

न जायते म्रियते वा कदाचिन्
नायं भूत्वाऽभविता वा न भूयः ।
अजो नित्यः शाश्वतोऽयं पुराणो
न हन्यते हन्यमाने शरीरे ॥३९॥

आत्मा मनश्च तद्विद्यैरन्तःकरणमुच्यते ।
ताभ्यां तु सप्रयत्नाभ्यां सङ्कल्प उपजायते ॥४०॥

आत्मा बुद्धीन्द्रियाण्यर्था बहिष्करणमुच्यते ।
सङ्कल्पाध्यवसायाभ्यां सिध्दिरस्य प्रकीर्तिता ॥४१॥

उभे एते हि करणे यत्नानन्तर्यके स्मृते ।
तस्मात् प्रयत्न संरोधाद् भावयेन्निर्मनस्कता ॥४२॥

೩೪. ಸತ್ವವು ಜ್ಞಾನ, ತಮಸ್ಸು ಅಜ್ಞಾನ, ರಜಸ್ಸು ರಾಗ–ದ್ವೇಷಗಳ ಸ್ವರೂಪದ್ದು; ಎಲ್ಲ ಪ್ರಾಣಿಗಳ ಶರೀರವೂ ಈ ವ್ಯಾಪಕ ಲಕ್ಷಣವುಳ್ಳದ್ದು.

೩೫. ತಿಳಿದವರು ಯಾವಾಗಲೂ ದ್ವಂದ್ವಗಳಿಂದ ಕೂಡಿರುವ ಪದಾರ್ಥವನ್ನು ಸತ್ವವೆಂದು ಹೇಳುತ್ತಾರೆ; ಅವರ ಪ್ರಕಾರ ಆತ್ಮನು ನಿತ್ಯನೂ, ದ್ವಂದ್ವ ರಹಿತನೂ, ನಿಷ್ಕಲನೂ, ನಿರ್ಗುಣನೂ ಆಗಿದ್ದಾನೆ.

೩೬. ಇತರ ಯಾರೂ ಸತ್ವವನ್ನು ಪಡೆಯರು, ಆತ್ಮ ಮಾತ್ರ ಪಡೆಯಬಲ್ಲ; ಆತನು ಗುಣಗಳನ್ನು ಹಾಗೂ ಗುಣವುಳ್ಳ ಭೂತವಸ್ತುಗಳನ್ನು ಮೀರಿದವನು ಮತ್ತು ವಿಶ್ವವ್ಯಾಪಕನು.

೩೭. ಜ್ಞಾನಸಂಪನ್ನನೇ ಸಂನ್ಯಾಸಿ; ಅವನಿಗೆ ಅತಿಶ್ರೇಷ್ಠವಾದ ಸ್ಥಾನವು ಸಿಗುವುದು; ಅವನು ದ್ವಂದ್ವಾತೀತನಾಗಿ ದ್ವಂದ್ವಗಳನ್ನು ಎದುರಿಸುತ್ತಾನೆ, ಮತ್ತು ಅಜ್ಞಾನ-ಜರಾ-ಮರಣಗಳನ್ನು ಮೀರಿದವನಾಗಿರುತ್ತಾನೆ!

೩೮. ಈತನನ್ನು ಒಬ್ಬ ಒಂದು ಆಶ್ಚರ್ಯದ ವಸ್ತುವನ್ನು ನೋಡುವಂತೆ ನೋಡುತ್ತಾನೆ; ಇನ್ನೊಬ್ಬನು ಇವನನ್ನು ಒಂದು ಆಶ್ಚರ್ಯದ ವಸ್ತುವನ್ನು ಬಣ್ಣಿಸುವಂತೆ ಬಣ್ಣಿಸುತ್ತಾನೆ; ಮತ್ತೊಬ್ಬನು ಇವನ ವರ್ಣನೆಯನ್ನು ಒಂದು ಆಶ್ಚರ್ಯದ ಸುದ್ದಿಯನ್ನು ಕೇಳುವಂತೆ ಕೇಳುತ್ತಾನೆ. ಆದರೆ, ಹಾಗೆ ಕೇಳಿದರೂ ಯಾವನೂ ಈತನನ್ನು ಅರಿಯನು!

೩೯. ಈತನು ಎಂದೂ ಹುಟ್ಟನು, ಎಂದೂ ಸಾಯನು; ಇವನು ಆದವನಲ್ಲ, ಆಗುವವನಲ್ಲ ಅಥವಾ ಪುನರ್ಜನ್ಮ ಹೊಂದುವವನಲ್ಲ: ಇವನು ಜನ್ಮರಹಿತ, ನಿತ್ಯ, ಶಾಶ್ವತ ಮತ್ತು ಪ್ರಾಚೀನ (ಯಾವಾಗಲೂ ಹೆಚ್ಚು-ಕಡಿಮೆ ಆಗದೆ, ಹಿಂದಿನಿಂದ ಇದ್ದಂತೆ, ಒಂದೇ ವಿಧವಾಗಿ ಇರುವವನು): ಹಿಂಸೆಗೊಳಗಾಗುವ (ಬದಲಾಗುವ) ಶರೀರದಲ್ಲಿವನು (ಬದಲಾಗದೆ) ಹಿಂಸೆಗೊಳಗಾಗದೆ ಇರುತ್ತಾನೆ!

೪೦–೪೧–೪೨. ವೇದವನ್ನು ಬಲ್ಲವರು ಆತ್ಮ–ಮನಗಳನ್ನು ಅಂತಃಕರಣವೆನ್ನುತ್ತಾರೆ: ಅವುಗಳ ಪ್ರಯತ್ನದಿಂದ ಮನುಷ್ಯನಲ್ಲಿ ಸಂಕಲ್ಪ ಹುಟ್ಟುತ್ತದೆ. ಅವರು ದೇಹ, ಬುದ್ಧಿ, ಇಂದ್ರಿಯ ಮತ್ತು ಬಾಹ್ಯಪದಾರ್ಥಗಳನ್ನು ಬಹಿಷ್ಕರಣವೆಂದು ಹೇಳುತ್ತಾರೆ. ಸಂಕಲ್ಪ ನಿಶ್ಚಯಗಳಿಂದ ಕಾರ್ಯವೊಂದು ಸಿದ್ಧಿಸುತ್ತದೆ. ಒಳ ಹೊರಗಿನವುಗಳೆರಡೂ ಕರಣಗಳು (ಅಥವಾ ಅಸಾಧಾರಣ ಕಾರಣಗಳು); ಇವೆರಡೂ ಪ್ರಯತ್ನದ (ಅಥವಾ ಇಚ್ಛಾಶಕ್ತಿಯ ಉದಯದ) ಅನಂತರವೇ ಕಾರ್ಯೋನ್ಮುಖವಾಗುವಂಥವು. ಆದುದರಿಂದ ಪ್ರಯತ್ನವನ್ನು ತಡೆಹಿಡಿದು ನಿರ್ಮನಸ್ಕಭಾವವನ್ನು ಹೊಂದಬೇಕು.

प्राप्यते च यथा सत्यं तच्च श्रोतुमिहार्हसि ।
सत्यं त्रयोदशविधं सर्वलोकेषु भारत ॥४३॥

सत्यं च समता चैव दमश्चैव न संशयः ।
अमात्सर्यं क्षमा चैव ह्रीस्तितिक्षानसूयता ॥४४॥

त्यागो ध्यानमथार्यत्वं धृतिश्च सततं दया
अहिंसा चैव राजेन्द्र सत्याकारास्त्रयोदश ॥४५॥

अर्थकामेष्वसक्तानां धर्मज्ञानं विधीयते ।
धर्मं जिज्ञासमानानां प्रमाणं परमंश्रुतिः ॥४६॥

ममेति परमं दुःखं न ममेति परं सुखम् ।
द्वे हि बन्धस्य मोक्षस्य ममेति न ममेति च ॥४७॥

यच्च कामसुखं लोके यच्च दिव्यं महत्सुखम् ।
तृष्णाक्षयसुखस्यैतत्कलां नार्हन्ति षोडशीम् ॥४८॥

सुवर्णाज्जायमानस्य सुवर्णत्वं च शाश्वतम् ।
ब्रह्मणो जायमानस्य ब्रह्मत्वं च तथा भवेत् ॥४९॥

आत्मैव देवताः सर्वाः सर्वमात्मन्यवस्थितम् ।
आत्मा हि जनयत्येषां कर्मयोगं शरीरिणाम् ॥५०॥

एतमेके वदन्त्यग्निं मनुमन्ये प्रजापतिम् ।
इन्द्रलोके परे प्राणमपरे ब्रह्म शाश्वतम् ॥५१॥

एवं यः सर्वभूतेषु पश्यत्यात्मानमात्मना ।
स सर्वसमतामेत्य ब्रह्माभ्येति परं पदम् ॥५२॥

೪೩–೪೪–೪೫. ಎಲೈ ದೊರೆಯಾದ ಭಾರತವಂಶೀಯನೇ, "ಸತ್ಯವು" ಲಭಿಸುವುದು ಹೇಗೆಂಬುದನ್ನು ಹೇಳುತ್ತೇನೆ; ಅದನ್ನು ಕೇಳು; ಸರ್ವಲೋಕಗಳಲ್ಲೂ ಸತ್ಯ ಅಥವಾ ಧರ್ಮವು ಹದಿಮೂರು ವಿಧವಾದದ್ದು(ಹದಿಮೂರು ಗುಣಗಳಿಂದ ಕೂಡಿದ್ದು.) (೧) ಯೋಗದಿಂದ ಪಡೆವ ಸತ್ಯ, ಅಥವಾ ಅವ್ಯಯಭಾವ, (೨) ಶತ್ರು-ಮಿತ್ರರಿಬ್ಬರಲ್ಲೂ ತಾಳುವ ಸಮತ್ವದ ಭಾವ, (೩) ದಮ, (೪) ದಾನ-ಧರ್ಮಗಳಲ್ಲಿ ವಿವೇಕ, (೫) ಕ್ಷಮೆ, (೬) ನಾಚಿಕೆ, (೭) ಸಹನೆ, (೮) ಅನಸೂಯೆ, (೯) ಧೇನಿಸಿ, ಧೇನಿಸಿ ರಾಗ-ದ್ವೇಷಗಳನ್ನು ಬಿಡುವುದು (೧೦) ಪರೋಪಕಾರ ಶೀಲ, (೧೧) ಧೃತಿ (೧೨) ದಯೆ ಮತ್ತು (೧೩) ಅಹಿಂಸೆ.

೪೬. ಅರ್ಥ-ಕಾಮಗಳಲ್ಲಿ ಆಸಕ್ತಿ ಇಲ್ಲದವರಿಗೆ ಮಾತ್ರ ಧರ್ಮದ ಜ್ಞಾನವು ಶಕ್ಯ: ಧರ್ಮವನ್ನು ತಿಳಿದುಕೊಳ್ಳಬೇಕೆಂಬವರಿಗೆ ವೇದವಾಙ್ಮಯವೇ ಪರಮ ಪ್ರಮಾಣ.

೪೭. ನನ್ನದೆಂಬುದು ಪರಮದುಃಖಕರ, ನನ್ನದಲ್ಲವೆಂಬುದು ಪರಮ-ಸುಖಕರ; ಮಮ, ನ ಮಮ— ಎಂಬೀ ಎರಡು, ಬಂಧ ಮೋಕ್ಷಗಳಿಗೆ ಕಾರಣಗಳು.

೪೮. ಇಹದ ಕಾಮಸುಖವೂ, ಪರದ ದಿವ್ಯಸುಖವೂ ಆಶಾತ್ಯಾಗದಿಂದ ದೊರಕುವ ಸುಖದ ಹದಿನಾರನೆಯ ಒಂದಂಶದಷ್ಟೂ ಆಗಲಾರವು

೪೯. ಬಂಗಾರದಿಂದ ಹುಟ್ಟಿದ ಪದಾರ್ಥಕ್ಕೆ ಬಂಗಾರದ ಗುಣವು ಶಾಶ್ವತ; ಬ್ರಹ್ಮನಿಂದ ಹುಟ್ಟಿದ ಪದಾರ್ಥಕ್ಕೆ ಬ್ರಹ್ಮತ್ವವೂ ಹಾಗೆಯೇ ಶಾಶ್ವತ.

೫೦. ಎಲ್ಲ ದೇವತೆಗಳೂ ಆತ್ಮನೇ; ಎಲ್ಲವೂ ಆತ್ಮನಲ್ಲಿವೆ; ಆತ್ಮನೇ ಈ ಎಲ್ಲ ದೇಹಿಗಳ ಕರ್ಮಯೋಗವನ್ನು ನಿರ್ವಹಿಸುತ್ತಾನೆ.

೫೧. ಕೆಲವರಿವನನ್ನು ಅಗ್ನಿಯೆಂದೂ ಕೆಲವರು ಮನುವೆಂದೂ ಇತರರು ಪ್ರಜಾಪತಿಯೆಂದೂ ಇನ್ನೂ ಕೆಲವರು ಇಂದ್ರನೆಂದೂ ಮತ್ತಷ್ಟು ಜನರು ಪ್ರಾಣ-ವೆಂದೂ ಮಿಕ್ಕವರು ಶಾಶ್ವತಬ್ರಹ್ಮವೆಂದೂ ಹೇಳುತ್ತಾರೆ.

೫೨. ಹೀಗೆ ಸರ್ವಸೃಷ್ಟಿಯಲ್ಲಿಯೂ ಆತ್ಮನ ಮೂಲಕ ಆತ್ಮನನ್ನು ನೋಡುವಾತನು, ಸರ್ವಸಾಮ್ಯವನ್ನು ಹೊಂದಿ, ಶ್ರೇಷ್ಠವಾದ ಬ್ರಹ್ಮಸ್ಥಾನವನ್ನು ಸೇರುತ್ತಾನೆ.

೨. ಸ್ತುತಿ

उदासितारं निगृहीतमानसैर्
गृहीतमध्यात्मदृशा कथञ्चन ।
बहिर्विकारं प्रकृतेः पृथग्विदुः
पुरातनं त्वां पुरुषं पुराविदः ॥५३॥

सत्यवृत्तमपि मायिनं जगद्-
वृद्धमप्युचितनिद्रमर्भकम् ।
जन्म बिभ्रतमजं नवं बुधा
यं पुराणपुरुषं प्रचक्षते ॥५४॥

एतत् तत् परमं ब्रह्म निर्लिङ्गं ध्रुवमक्षरम् ।
यन्मोक्ष इति तत्वज्ञाः कथयन्ति मनीषिणः ॥५५॥

आत्मानन्दः परानन्दो निर्वाणं परमं सुखम् ।
ऐश्वर्यस्य सुखं लोके ससर्पगृहवासवत् ॥५६॥

समः शत्रौ च मित्रे च सर्वभूतहिते रतः ।
मुक्तमानसरोगोऽसावात्मारामो बभूव ह ॥५७॥

मृद्वीका रसिता सिता समशिता स्फीतं निपीतं पयः
स्वर्यातेन सुधाप्यधायि कतिधा रम्भाधरः खण्डितः ।
सत्यं ब्रूहि मदीयजीव भवता भूयो भवे भ्राम्यता
कृष्णेत्यक्षरयोरयं मधुरिमोद्गारः क्वचिल्लक्षितः ॥५८॥

रजोजुषे जन्मनि सत्त्ववृत्तये
स्थितौ प्रजानां प्रलये तमःस्पृशे ।
अजाय सर्गस्थितिनाशहेतवे
त्रयीमयाय त्रिगुणात्मने नमः ॥५९॥

೫೩. ಮನಸ್ಸನ್ನು ಬಿಗಿಹಿಡಿದ ಸನಾತನ ತತ್ತ್ವಜ್ಞರು ಬಹಳ ಪ್ರಯಾಸದಿಂದ, ಆಧ್ಯಾತ್ಮಿಕ ಕಣ್ಣಿನ ಮೂಲಕ, ಸಾಕ್ಷಾತ್ಕರಿಸಿಕೊಂಡು, ಉದಾಸೀನನಾದ ನಿನ್ನನ್ನು ಪ್ರಾಕೃತಿಕ ವಿಕಾರದ ಕಕ್ಷೆಯ ಹೊರಗಿನವನೆಂದೂ, ಪುರಾತನನಾದ ಪುರುಷನೆಂದೂ ಬಗೆಯುತ್ತಾರೆ.

೫೪. ನೀನು ನಿಷ್ಕಪಟಚರಿತನಾದರೂ ತಿಳಿದವರು ನಿನ್ನನ್ನು ಕಾಪಟ್ಯಸದೃಶವಾದ ಮಾಯಾಶಕ್ತಿಯುಳ್ಳವನೆನ್ನುತ್ತಾರೆ: ಎಲ್ಲ ಲೋಕಗಳಿಗೂ ನೀನು ಅಜ್ಞನಾದರೂ ನಿನ್ನನ್ನು ಯೋಗನಿದ್ರಾಮಗ್ನನಾದ ಶಿಶುವೆನ್ನುತ್ತಾರೆ: ನೀನು ಜನ್ಮರಹಿತನಾದರೂ ನಿನ್ನನ್ನು ಅವತಾರಪುರುಷನೆನ್ನುತ್ತಾರೆ; ಹಾಗೆಯೇ (ಎಂದಿನಿಂದಲೂ ಇದ್ದಿರುವಂಥ) ಹಳಬನಾದ ನಿನ್ನನ್ನು(ಅವತಾರದ ದೆಸೆಯಿಂದ) ಅವರು ಹೊಸಬನೆಂದು ಹೇಳುತ್ತಾರೆ!

೫೫-೫೬-೫೭. ಪರಬ್ರಹ್ಮಕ್ಕೆ ಲಿಂಗವಿಲ್ಲ; ಅದು ಶಾಶ್ವತ ಹಾಗೂ ದೃಢ; ತತ್ತ್ವಜ್ಞರಾದ ಮೇಧಾವಿಗಳು ಅದನ್ನು ಮೋಕ್ಷವೆಂದು ಕರೆಯುತ್ತಾರೆ. ಆತ್ಮಾನಂದವು ಅತ್ಯಂತ ಶ್ರೇಷ್ಠವಾದುದು; ಅದೇ ಪರಮಸುಖವೆಂಬ ನಿರ್ವಾಣ; ಲೋಕದ ಐಶ್ವರ್ಯ ಕೊಡುವ ಸುಖವು ಸರ್ಪ ಹೊಕ್ಕ ಮನೆಯಲ್ಲಿ ವಾಸಿಸುವ ಸುಖಕ್ಕೆ ಸಮ. ಶತ್ರು-ಮಿತ್ರರಲ್ಲಿ ಸಮನಾಗಿ, ಸರ್ವಪ್ರಾಣಿಗಳ ಹಿತವನ್ನು ಸಾಧಿಸುವುದರಲ್ಲಿ ಆಸಕ್ತನಾಗಿ ಆತ್ಮಸ್ಥನಾದ ಆತನು ಮಾನಸಿಕ ರೋಗದಿಂದ ಮುಕ್ತನಾದನು.

೫೮. ದ್ರಾಕ್ಷೆಯನ್ನು ರುಚಿ ನೋಡಿದ್ದಾಯ್ತು; ಕಲ್ಲುಸಕ್ಕರೆಯನ್ನು ಚೆನ್ನಾಗಿ ತಿಂದದ್ದಾಯ್ತು: ಯಥೇಷ್ಟ ನೀರು ಕುಡಿದಾಯ್ತು. ಸ್ವರ್ಗಕ್ಕೆ ಹೋಗಿ ನೀನು ಎಷ್ಟು ಸಲ ಅಮೃತವನ್ನು ಕುಡಿದೆ ಮತ್ತು ರಂಭೆಯನ್ನು ಚುಂಬಿಸಿದೆ! ನಿಜ ಹೇಳು; ನನ್ನ ಜೀವವೇ, ಮತ್ತೆ ಮತ್ತೆ ಹುಟ್ಟು-ಸಾವುಗಳ ಚಕ್ರದಲ್ಲಿ ತಿರುಗುವ ನೀನು ಎಲ್ಲಾದರೂ 'ಕೃಷ್ಣ' ಎಂಬ ಅಕ್ಷರಗಳ ಇಂಥ ಮಾಧುರ್ಯಧಾರೆಯನ್ನು ಕಂಡದ್ದುಂಟೇ ?

೫೯. ಪ್ರಜೆಗಳ ಸೃಷ್ಟಿಯಲ್ಲಿ ರಜಸ್ಸನ್ನು ಹೊಂದುವ, ಸ್ಥಿತಿಯಲ್ಲಿ ಸತ್ತ್ವವನ್ನು ತಾಳುವ ಮತ್ತು ಲಯದಲ್ಲಿ ತಮಸ್ಸನ್ನು ಹಿಡಿಯುವ, ವೇದತ್ರಯಸ್ವರೂಪದ ತ್ರಿಗುಣಾತ್ಮಕನೂ, ಸೃಷ್ಟಿ-ಸ್ಥಿತಿ-ಪ್ರಲಯಕಾರಣನೂ ಆದ ಬ್ರಹ್ಮನಿಗೆ ನಮಸ್ಕಾರ!

एणाक्षी स्पृहयालुना न कथमप्यास्ते विवेकोदयान्–
नित्यं प्रच्युतिशङ्कया क्षणमपि स्वर्गे न मोदामहे ।
अप्यन्येषु विनाशिवस्तु विषयाभोगेषु तृष्णा न मे
स्वर्णद्याः पुलिने परं हरिपदध्यानं मनोवाञ्छति ॥६०॥

सत्यं वक्तुमशेषमस्तिसुलभा वाणी मनोहारिणी
दातुं दानवरं शरण्यमभयं स्वच्छं पितृभ्यो जलम् ।
पूजार्थं परमेश्वरस्य विमलः स्वाध्याययज्ञः परं
क्षुद्व्याधेः फलमूलमस्ति शमनं क्लेशात्मकं किं धनैः ॥६१॥

गङ्गातीरे हिमगिरिशिलाबद्धपद्मासनस्य
ब्रह्मध्यानाभ्यसनविधिना योगनिद्रांगतस्य ।
किं तैर्भाव्यं मम सुदिवसैर्यत्र ते निर्विशङ्काः
कण्डूयन्ते जरठहरिणाः स्वाङ्गमङ्गे मदीये ॥६२॥

वेदानुद्धरते जगन्निवहते भूगोलमुद्बिभ्रते
दैत्यान् दारयते बलिं छलयते क्षत्रक्षयं कुर्वते ।
पौलस्त्यं जयते हलं कलयते कारुण्यमातन्वते
म्लेच्छान् मूर्छयते दशाकृतिधृते कृष्णाय तुभ्यं नमः ॥६३॥

नभोऽन्तरे हिरण्मयं विभुं प्रचक्षते हरं
दिनेशबिम्बबिम्बितं भणन्ति पङ्कजासनम् ।
इहास्मदन्तरालय वदन्ति विष्णुमच्युतं
सर्वत्र जन्मिनामियं त्रिमूर्तिवादिधोरणी ॥६४॥

स्वरूपं ते वज्रं वियति रजसां सूक्ष्ममहसा–
मुपाधिस्ते स्तोमो भवति चपला काऽपि तनुभा ।
अरुद्धा ते व्याप्तिर्बलमखिलदत्तं बलनिधेः
सहस्रांशः स्वस्य प्रभवसि समस्तस्य च शिवे ॥६५॥

೬೦. ವಿವೇಕ ಉಂಟಾದುದರಿಂದ ಪರಿಣಾಕ್ಷಿಯ ಹಂಬಲು ಹೇಗೂ ಇಲ್ಲ: ಪ್ರತಿದಿನವೂ ಸ್ಥಾನಭಂಗದ ಭಯವಿರುವುದರಿಂದ ಕ್ಷಣಮಾತ್ರವೂ ಸ್ವರ್ಗದಲ್ಲಿ ಸಂತೋಷಪಡಲಾರೆ: ಇತರ ನಶ್ವರವಸ್ತುಗಳ ಭೋಗ್ಯತೆಯ ಪರಿಹಿಸಲ್ಲಿ ನನಗಾಸೆ ಇಲ್ಲ; ಗಂಗೆಯ ಮಳಲು ದಿಣ್ಣೆಯಮೇಲೆ (ಕುಳಿತು) ಪರಿಪಾದಗಳನ್ನು ನೆನೆಯಲು ನನ್ನ ಮನಸ್ಸು ಬಯಸುತ್ತದೆ.

೬೧. ಸತ್ಯವೆಲ್ಲವನ್ನು ನಿಃಶೇಷವಾಗಿ ಹೇಳಲು ಸುಲಭವಾಗಿ ಸಿಗುವ ಸೊಗಸಾದ ಮಾತಿದೆ; ಇತರರಿಗೆ ಕೊಡಲು ಕೊಡತಕ್ಕ ವಸ್ತುಗಳಲ್ಲೆಲ್ಲಾ ಶ್ರೇಷ್ಠವಾದ ನಿರ್ಭಯದ ಆಶ್ರಯವಿದೆ; ಪಿತೃತರ್ಪಣಕ್ಕೆ ನಿರ್ಮಲವಾದ ನೀರಿದೆ; ಪರಮೇಶ್ವರನ ಪೂಜೆಗೆ ವಿಮಲವಾದ ವೇದಪಾರಾಯಣರೂಪದ ಯಜ್ಞವಿದೆ; ಹಸಿವಿನ ರೋಗವನ್ನು ವಾಸಿಮಾಡಲು ಉತ್ಕೃಷ್ಟವಾದ ಗಡ್ಡೆ-ಗೆಣಸು, ಹಣ್ಣು-ಹಂಪಲುಗಳಿವೆ. ಹೀಗಿರು- ವಾಗ ಕಷ್ಟಕರವಾದ ಧನಾರ್ಜನೆಯಿಂದ ನನಗೇನಾಗಬೇಕು?

೬೨. ಗಂಗಾತೀರದಲ್ಲಿ ಹಿಮಗಿರಿಯ ಕಲ್ಲಿನಮೇಲೆ ಪದ್ಮಾಸನ ಹಾಕಿ ಕುಳಿತು, ಬ್ರಹ್ಮಧ್ಯಾನವನ್ನು ಅಭ್ಯಾಸಮಾಡುವ ಕ್ರಮವನ್ನು ಹಿಡಿದು, ಯೋಗನಿದ್ರೆಯನ್ನು ಹೊಂದಿದಾಗ, ನಿರ್ಭಯವಾಗಿ ಅಲ್ಲಿಯ ಮುದಿಜಿಂಕೆಗಳು, ತಮ್ಮ ಮೈಯನ್ನು ನನ್ನ ಮೈಗೆ ತಿಕ್ಕಿ ತುರಿಸಿಕೊಳ್ಳುವಂಥ ಸುದಿನಗಳು ನನಗೆ ಪ್ರಾಪ್ತವಾಗುವವೇ?

೬೩. ವೇದಗಳನ್ನು ಉದ್ಧರಿಸಿದ, ಜಗತ್ತನ್ನು ಹೊತ್ತ, ಭೂಗೋಲವನ್ನು ಎತ್ತಿ ಹಿಡಿದ, ದಾನವರನ್ನು ಅರಿದ, ಬಲಿಯನ್ನು ಛಲಿಸಿದ, ಕ್ಷತ್ರಿಯರನ್ನು ನಾಶ- ಗೊಳಿಸಿದ, ರಾವಣನನ್ನು ಗೆದ್ದ, ನೇಗಿಲನ್ನು ಹಿಡಿದ, ಕಾರುಣ್ಯವನ್ನು ತೋರಿದ, ಮ್ಲೇಚ್ಛರನ್ನು ಸದೆದ—ಹೀಗೆ ಹತ್ತವತಾರ ತಾಳಿದ ಕೃಷ್ಣನಾದ ನಿನಗೆ ನಮಸ್ಕಾರ.

೬೪. ದೇಹಿಗಳ ತಾಯೇ, ಅಂತರಿಕ್ಷದ ನಡುವೆ ವ್ಯಾಪಿಸಿರುವ ಬಂಗಾರದ ಬಣ್ಣದ ಪುರುಷನನ್ನು ಹರನೆಂದೂ, ಸೂರ್ಯಮಂಡಲದೊಳಗಿರುವ ಪುರುಷನನ್ನು ಬ್ರಹ್ಮನೆಂದೂ, ಇಲ್ಲಿ ನಮ್ಮೊಳಗೆ ಅವಿನಾಶಿಯಾಗಿರುವ ಪುರುಷನನ್ನು ವಿಷ್ಣುವೆಂದೂ ಜನರು ಹೇಳುತ್ತಾರೆ; ಇದೇ ತ್ರಿಮೂರ್ತಿವಾದಿಗಳ ಸಂಪ್ರದಾಯ.

೬೫. ಎಲೈ ಪಾರ್ವತಿಯೇ, ಸಿಡಿಲು ನಿನ್ನ ಪ್ರಕೃತಿ; ಆಗಸದಲ್ಲಿಯ ಸೂಕ್ಷ್ಮ ವಾದ ರಜೋಮಯ ಜ್ಯೋತಿಸ್ಸುಗಳ ಗುಂಪು ನಿನ್ನ ಉಪಾಧಿ; ಚಂಚಲವಾದ ಮಿಂಚು ನಿನ್ನ ಅವರ್ಣನೀಯ ದೇಹಕಾಂತಿ; ನಿನ್ನ ಸರ್ವವ್ಯಾಪ್ತಿಯು ಅಡೆ-ತಡೆ ಯಿಲ್ಲದ್ದು; ವಿಶ್ವಕ್ಕಾಗಿ ನೀನು ಕೊಟ್ಟ ಶಕ್ತಿಯು ನಿನ್ನ ಬಲದ ಯತ್ಕಿಂಚಿದಂಶ; ನೀನು ಎಲ್ಲವುಗಳಿಗೂ ಒಡತಿ.

यदन्यत्तज्जन्यं न च किल तदाप्तिः प्रियतमा
न यज्जन्यं शम्भो तदिहनिजरूपं ह्यभिलपे ।
अपाकृत्य त्वं मे सकलमिदमज्ञानजनितं
कदाविर्भूतो भो अमृतवचनैर्बोधयसि माम् ॥६६॥

कदा वाराणस्याममरतटिनी रोधसि वसन्
वसानः कौपीनं शिरसि निदधानोऽञ्जलिपुटम् ।
अये गौरीनाथ त्रिपुरहर शम्भो त्रिनयन
प्रसीदेत्याक्रोशन्निमिषमिव नेष्यामि दिवसान् ॥६७॥

एष ब्रह्मा सरोजे रजनिकरकलाशेखरः शङ्करोऽयं
दोर्भिर्दैत्यान्तकोऽसौ सधनुरसिगदाचक्र चिह्नैश्चतुर्भिः ।
एषोऽप्यैरावणस्थस्त्रिदशपतिरमी देविदेवास्तथान्ये
नृत्यन्त्यो व्योम्नि चैताश्चलचरणरणन्नूपुरा दिव्यनार्यः
॥६८॥

समृद्धं सौभाग्यं सकलवसुधायाः किमपि तन्-
महैश्वर्यं लीलाजनितजगतः खण्डपरशोः ।
श्रुतीनां सर्वस्वं सुकृतमथ मूर्तं सुमनसां
सुधासौन्दर्यं ते सलिलमशिवं नः शमयतु ॥६९॥

पायं पायमपायहारि जननि स्वादुत्वदीयं पयो
नायं नायमनायनीमकृतिनां मूर्ति दृशोः केशवीम् ।
स्मारं स्मारमपारपुण्यविभवं कृष्णेति वर्णद्वयं
चारं चारमितस्ततस्तवतटे मुक्तो भवेयं कदा ॥७०॥

अहमेव हि दोषदूषितो
भगवंस्त्वां समुपालभे मुधा ।
रमणीविरहज्वरज्वल-
न्नमृतांशुं कुमतिर्विनन्दति ॥७१॥

೬೬. ಎಲೈ ಶಂಭುವೇ, ನಿನಗಿಂತ ಬೇರೆಯಾದುದೆಲ್ಲವೂ ಹುಟ್ಟುಳ್ಳದ್ದು (ನಶ್ವರ); ಅವರ ಪ್ರಾಪ್ತಿಯಿಂದೂ ಪರಮಪ್ರಾಯುವೆಂದೆನ್ನಿಸದು. ಹುಟ್ಟಿಲ್ಲದ (ಶಾಶ್ವತ) ನಿನ್ನ ನಿಜರೂಪವನ್ನು (ನೋಡಲು) ಬಯಸುತ್ತೇನೆ. ಅಜ್ಞಾನಜನ್ಯವಾದ ಈ ಎಲ್ಲವನ್ನೂ ದೂರಗೊಳಿಸಿ, ನನಗೆ ನೀನೆಂದು ಪ್ರತ್ಯಕ್ಷನಾಗಿ ಅಮೃತವಾಣಿಯಿಂದ ಬೋಧಿಸುವೆ?

೬೭. ಕಾಶಿಯಲ್ಲಿ ಗಂಗೆಯ ದಡದಮೇಲೆ ವಾಸಿಸುತ್ತ, ಕೌಪೀನಧಾರಿಯಾಗಿ ತಲೆಯ ಮೇಲೆ ಮುಗಿದ ಕೈಗಳನ್ನಿಟ್ಟುಕೊಂಡು, "ಎಲೈ ಗೌರೀನಾಥ, ತ್ರಿಪುರಹರ, ಶಂಭೋ, ತ್ರಿನಯನ, ಪ್ರಸನ್ನನಾಗು" ಎಂದು ಗಟ್ಟಿಯಾಗಿ ಕೂಗುತ್ತ, ಎಂದು ದಿನಗಳನ್ನು ನಿಮಿಷದಂತೆ ಕಳೆದೇನು ?

೬೮. ಎಲೈ ಪ್ರಿಯತಮೆ, ಇವನು ತಾವರೆಯ ಮೇಲೆ ಕುಳಿತಿರುವ ಬ್ರಹ್ಮ; ಇವನು ಚಂದ್ರಕಲೆಯನ್ನು ತಲೆಯೊಡವೆಯನ್ನಾಗಿಟ್ಟುಕೊಂಡಿರುವ ಶಂಕರ; ಬಿಲ್ಲು, ಕತ್ತಿ, ಗದೆ, ಚಕ್ರಗಳೆಂಬ ನಾಲ್ಕು ಗುರುತುಗಳಿರುವ ತೋಳುಗಳನ್ನುಳ್ಳ ಈತನು ದೈತ್ಯಾಂತಕ (ವಿಷ್ಣು); ಐರಾವತದ ಮೇಲಿರುವ ಈತನು ದೇವತೆಗಳ ದೊರೆ (ಇಂದ್ರ); ಇವರೂ, ಇತರರೂ ದೇವತೆಗಳು; ಚಲಿಸುವ ಕಾಲುಗಳಲ್ಲಿ ದನಿಗೈವ ಗೆಜ್ಜೆಗಳಿಂದೊಡಗೂಡಿ, ಬಾನಿನಲ್ಲಿ ಕುಣಿಯುತ್ತಿರುವ ಇವರು ದಿವ್ಯನಾರಿಯರು.

೬೯. ಇಡೀ ಜಗತ್ತಿಗೇ ನಿನ್ನ ನೀರೆಂಬುದೊಂದು ಸಮೃದ್ಧ ಸೌಭಾಗ್ಯ; ಲೀಲೆಯಿಂದ ಜಗತ್ತನ್ನು ನಿರ್ಮಿಸಿದ ಶಿವನ ಅದ್ಭುತವಾದ ಒಂದು ದೊಡ್ಡ ಸಂಪತ್ತು; ವೇದಗಳ ಸಾರ, ದೇವತೆಗಳ ಪುಣ್ಯದ ಮೂರ್ತರೂಪ; ಅಮೃತದ ಸೌಂದರ್ಯ; ಅದು ನಮ್ಮ ಅಶುಭವನ್ನು ನಿವಾರಿಸಲಿ.

೭೦. ತಾಯೇ, ಅಪಾಯಪರಿಹಾರಕವಾದ ನಿನ್ನ ಸವಿಯಾದ ನೀರನ್ನು ಕುಡಿದು, ಕುಡಿದು, ದುರ್ಗುಣಗಳನ್ನು ಕೈಹಿಡಿದು ಕರೆದೊಯ್ಯದ ನಿನ್ನ ನಾರಾಯಣಾಂಶದ ಮೂರ್ತಿಯನ್ನು ಕಣ್ಣುಗಳಿಡೆ ಒಯ್ದು, ಒಯ್ದು, ಅಪಾರವಾದ ಪುಣ್ಯ ವೈಭವದಿಂದ ಕೂಡಿದ "ಕೃಷ್ಣೆ"ಯೆಂಬ ಎರಡಕ್ಷರಗಳನ್ನು ನೆನೆದು, ನೆನೆದು, ನಿನ್ನ ದಡದ ಮೇಲೆ ಅತ್ತಿತ್ತ ತಿರುಗಿ ತಿರುಗಿ, ನಾನೆಂದು ಮುಕ್ತಿಯನ್ನು ಹೊಂದಿಯೇನು ?

೭೧. ನಾನೇ ದೋಷಗಳಿಂದ ಕೆಟ್ಟು ಹೋದವನು; ಭಗವಂತನೇ ಬರಿದೆ ನಿನ್ನನ್ನು ಬೈಯುತ್ತಿದ್ದೇನೆ. ಇದು ಸತಿಯ ವಿರಹಜ್ವರದಿಂದ ತಪ್ತನಾದ ದುರ್ಮತಿಯು ಚಂದ್ರನನ್ನು ದೂರಿದಂತಾಯ್ತು.

रमे पद्मे लक्ष्मि प्रणतजनकल्पद्रुमलते
सुधाम्भोधेः पुत्रि त्रिदशनिकरोपास्तचरणे ।
परे नित्यं मातर्गुणमयि परब्रह्ममहिले
जगन्नाथस्याकर्णय मृदुलवर्णावलिमिमाम् ।।७२।।

नानारत्नैरुपचितगुणां नित्यसङ्गीतनादां
भूमेर्द्रक्ष्यस्युचितविभवं भूषणं तत्र काञ्चीम् ।
यस्यां नित्यं निहितनयनो हस्तिशैलाधिवासी
द्वन्द्वातीतस्स खलु पुरुषो दृश्यते सत्यकामः ।।७३।।

सत्वे दिव्ये स्वयमुदयतस्तस्य धाम्नः प्रसङ्गात्
मंजूषायां मरकतमिव भ्राजमानं तदन्तः ।
चेतो धावत्युपहितभुजं शेषभोगे शयानं
दीर्घापाङ्गं जलधितनया जीवितं देवमाद्यम् ।।७४।।

या सृष्टिः स्रष्टुराद्या वहति विधिहुतं या हविर्या च होत्री
ये द्वे कालं विधन्तः श्रुतिविषयगुणा या स्थिता व्याप्य विश्वम् ।
यामाहुः सर्वबीजप्रकृतिरिति यया प्राणिनः प्राणवन्तः
प्रत्यक्षाभिः प्रपन्नस्तनुभिरवतुवस्ताभिरष्टाभिरीशः ।।७५।।

अविग्रहस्याप्यतुलेन हेतुना
समेतभिन्नद्वयमूर्ति तिष्ठतः ।
तवैव नान्यस्य जगत्सु दृश्यते
विरुद्धवेषाभरणस्य कान्तता ।।७६।।

चलचित्राश्रयभूतः पट इव सद्
ब्रह्म जीव जगदीशाः ।
चलानि चित्राणीव ब्रह्म विशुद्धं हि
केवलं सत्यम् ।।७७।।

೭೨. ರಮೆಯೇ, ಪದ್ಮೆಯೇ, ಲಕ್ಷ್ಮಿಯೇ, ನಮಸ್ಕರಿಸಿದವರ ಕಲ್ಪವೃಕ್ಷವೇ, ಕ್ಷೀರಸಾಗರದ ಮಗಳೇ, ದೇವತಾಗಣದಿಂದ ಪೂಜಿತವಾದ ಕಾಲುಗಳುಳ್ಳವಳೇ, ಪರಾಶಕ್ತಿಯೇ, ನಿತ್ಯವೂ ಗುಣವತಿಯಾಗಿರುವ ತಾಯೇ, ಪರಬ್ರಹ್ಮಪತ್ನಿಯೇ, ಜಗನ್ನಾಥನ ಈ ಮೃದು ಅಕ್ಷರಸಮೂಹವನ್ನು ಲಾಲಿಸು.

೭೩. ವಿವಿಧ ರತ್ನಗಳಿಂದ ಕೂಡಿ ಸುಂದರವಾದ, ನಿತ್ಯವೂ ಸಂಗೀತದ ನಾದದಿಂದ ತುಂಬಿರುವ ಮತ್ತು ಭೂಮಿಗೆ ತಕ್ಕ ಐಶ್ವರ್ಯಸಂಪನ್ನವಾದ ಆಭರಣವೆನ್ನಿಸಿರುವ ಕಾಂಚಿಯನ್ನು ನೀನು ನೋಡುವೆ; ಅಲ್ಲಿ ಸ್ವಾಂತ್ಯಾತೀತನೂ, ಸತ್ಯಕಾಮನೂ ಹಸ್ತಿಶೈಲನಿವಾಸಿಯೂ, ನಿತ್ಯವೂ ಕಣ್ತೆರೆದುಕೊಂಡಿರುವವನೂ ಆದ ಪುರುಷನು (ಪರಮಾತ್ಮನು) ಕಾಣಿಸುತ್ತಾನೆ.

೭೪. ದಿವ್ಯಸತ್ತ್ವದಿಂದ ಕೂಡಿದ ಪ್ರದೇಶದಲ್ಲಿ ತಾನೇ ತಾನಾಗಿ ಆವಿರ್ಭವಿಸಿದ ರಂಗಧಾಮದ ವಿಷಯವೀಗ ಪ್ರಸ್ತುತ. ಅಲ್ಲಿ ಪೆಟ್ಟಿಗೆಯೊಳಗಿಟ್ಟ ಹೊಳೆಯುವ ಪಚ್ಚೆ ಮಣಿಯಂತಿರುವ, ತೋಳನ್ನು ತಲೆಗಿಂಬಾಗಿ ಮಾಡಿಕೊಂಡು, ಆದಿಶೇಷನ ಹೆಡೆಯಲ್ಲಿ ಮಲಗಿದ, ನೀಳ್ಗಣ್ಣನ, ಲಕ್ಷ್ಮಿಗೆ ಪ್ರಾಣನಾದ ಆದಿದೇವನತ್ತ ಮನಸ್ಸು ಓಡುವುದು.

೭೫. ಬ್ರಹ್ಮನ ಮೊದಲ ಸೃಷ್ಟಿಯೆನ್ನಿಸಿದ ನೀರು, ವಿಧಿವತ್ತಾಗಿ ಹಾಕಿದ ಹವಿಸ್ಸನ್ನು ಒಯ್ಯುವ ಬೆಂಕಿ, ಯಜ್ಞಕ್ಕೆ ದೇವತೆಗಳನ್ನು ಕರೆವ ಹೋತೃ, ಕಾಲವನ್ನು ವಿಧಿಸುವ ಇಬ್ಬರಾದ ಸೂರ್ಯ–ಚಂದ್ರರು, ಕಿವಿ ಗ್ರಹಿಸಲು ವಿಷಯವಾಗುವ ಗುಣವುಳ್ಳ ಹಾಗೂ ವಿಶ್ವವನ್ನು ವ್ಯಾಪಿಸಿ ನಿಂತ ಆಕಾಶ, ಎಲ್ಲ ಬೀಜಗಳಿಗೂ ಕ್ಷೇತ್ರವೆನ್ನಿಸಿದ ಭೂಮಿ ಮತ್ತು ಪ್ರಾಣಿಗಳನ್ನು ಪ್ರಾಣಯುಕ್ತವಾಗಿ ಇಡುವ ಗಾಳಿ–ಎಂಬ ಪ್ರತ್ಯಕ್ಷವಾದ ಎಂಟು ದೇಹಗಳಿಂದೊಡಗೂಡಿದ ಈಶ್ವರನು ನಿಮ್ಮನ್ನು ಕಾಯಲಿ.

೭೬. ನಿರಾಕಾರನಾದ ನೀನು, ನಿರುಪಮ ಕಾರಣದಿಂದ, ಸಂಯುಕ್ತ ಮತ್ತು ಭಿನ್ನವಾದ ಆಕಾರಗಳನ್ನು ತಾಳಿ ನಿಂತಿರುವೆ; ಈ ವಿರುದ್ಧ ವೇಷ ಮತ್ತು ವಿರುದ್ಧ ಆಭರಣಗಳ ಧಾರಣವು, ಮೂರು ಲೋಕಗಳಲ್ಲಿ ನಿನಗೆ ಮಾತ್ರ ಮನೋಹರವಾಗಿ ತೋರುತ್ತದೆ !

೭೭. ಸದ್ರೂಪದ ಬ್ರಹ್ಮವು ಚಲಚ್ಚಿತ್ರದ ಹಿನ್ನೆಲೆಯಾದ ಬಟ್ಟೆಯಂತಿದೆ; ಜೀವ, ಜಗತ್ತು, ಈಶ್ವರರು ಅದರ ಮೇಲೆ ಚಲಿಸುವ ಚಿತ್ರಗಳಂತಿದ್ದಾರೆ; ಇವುಗಳಲ್ಲಿ ವಿಶುದ್ಧವಾದ ಬ್ರಹ್ಮವೊಂದೇ ಸತ್ಯವಷ್ಟೇ !

विधिरिति कर्मैवोक्तं पूर्वकृतं यत् स्वयं प्रयत्नेन।
तस्माद् विधिं प्रमार्ष्टुं मनुजः शक्नोति साधु यत्नेन ॥७८॥

जन्तुषु भगवद्भावं भगवति भूतानि पश्यति क्रमशः।
एतादृशी दशाचेत् तदैव हरिदासवर्यः स्यात् ॥७९॥

अधिपौरुषमध्यात्ममधिभूताधिदैवतम्।
अधिलोकाधिविज्ञानमधियज्ञस्त्वमेव हि ॥८०॥

चण्डालं किमयं द्विजातिरथवा शूद्रोऽथ किं तापसः
किं वा तत्वविवेकपेशलमतिर्योगीश्वरः कोऽपि किम्।
इत्युत्पन्नविकल्पजल्पमुखरैराभाष्यमाणा जनैर्
न क्रुद्धाः पथिनैव तुष्टमनसो यान्ति स्वयं योगिनः ॥८१॥

किं कन्दर्प शरं कदर्थयसि रे कोदण्ड टङ्कारितं
रे रे कोकिल कोमलं कलरवं किंवा वृथा जल्पसि।
मुग्धे स्निग्धविदग्धचारुमधुरैर्लोलैः कटाक्षैरलं
चेतश्चुम्बितचन्द्रचूडचरणध्यानामृतं वर्तते ॥८२॥

यदासीदज्ञानं स्मरतिमिरसञ्चारजनितं
तदा दृष्टं नारीमयमिदमशेषं जगदिति।
इदानीमस्माकं पटुतरविवेकाञ्जनजुषां
समीभूतादृष्टिस्त्रिभुवनमपि ब्रह्म मनुते ॥८३॥

त्रयी सारंख्यं योगः पशुपतिमतं वैष्णवमिति
प्रभिन्ने प्रस्थाने परमिदमदः पथ्यमिति च।
रुचीनां वैचित्र्यादृजुकुटिलनानापथजुषां
नृणामेको गम्यस्त्वमसि पयसामर्णव इव ॥८४॥

೭೮. ಸ್ವಪ್ರಯತ್ನದಿಂದ ಹಿಂದೆ ಮಾಡಿದ ಕರ್ಮವನ್ನೇ ಜನರು ವಿಧಿ ಎನ್ನುತ್ತಾರೆ; ಆದುದರಿಂದ ಅದನ್ನು ಒಳ್ಳೆಯ ಯತ್ನದಿಂದ ಮನುಷ್ಯನು ತೊಳೆದೊಗೆಯಬಲ್ಲನು.

೭೯. ಪ್ರಾಣಿಗಳಲ್ಲಿ ಭಗವಂತನ ಭಾವವನ್ನೂ ಭಗವಂತನಲ್ಲಿ ಪ್ರಾಣಿಗಳ (ಭಾವವ)ನ್ನೂ ಕ್ರಮವಾಗಿ ನೋಡುತ್ತಾನೆ; ಈ ದಶೆಯುಂಟಾದರೆ ಆಗಲೇ ಆತನು ಹರಿದಾಸಶ್ರೇಷ್ಠನಾದಾನು !

೮೦. ಪರಮಾತ್ಮಜ್ಞಾನ, ಆತ್ಮಜ್ಞಾನ, ಭೌತಸಾರಜ್ಞಾನ, ಅಧಿದೇವತಾಜ್ಞಾನ, ಲೋಕತತ್ತ್ವಜ್ಞಾನ, ಪರಮತತ್ತ್ವಜ್ಞಾನ, ಯಜ್ಞತತ್ತ್ವಜ್ಞಾನ — ಈ ಎಲ್ಲವೂ ನೀನೇ ಅಲ್ಲವೇ !

೮೧. "ಇವನು ಹೊಲೆಯನೇ ? ದ್ವಿಜನೇ ? ಶೂದ್ರನೇ ? ತಪಸ್ವಿಯೇ ? ಅಥವಾ ತತ್ತ್ವವಿವೇಚನೆಯಿಂದ ರಮ್ಯವಾದ ಬುದ್ಧಿಯನ್ನು ತಳೆದ ಯಾವನಾದರೂ ಒಬ್ಬ ಯೋಗೀಶ್ವರನೇ ?" — ಎಂದು ಮುಂತಾಗಿ, ವಿವಿಧ ವಿಕಲ್ಪಗಳನ್ನು ಗಳಹುತ್ತ ಮತ್ತು (ಪರಸ್ಪರ) ಹರಟುತ್ತ, ಹಾದಿಯಲ್ಲಿ ಹೋಗುವ ಜನರಿಂದ ಹೇಳಿಸಿಕೊಂಡರೂ ಸಿಟ್ಟನ್ನೂ ಮಾಡದೆ, ಸಂತೃಪ್ತಮನಸ್ಕರೂ ಆಗದೆ, ಯೋಗಿವರ್ಯರು ತಮ್ಮಿಷ್ಟಕ್ಕೆ ತಾವು ಸಾಗುತ್ತಾರೆ !

೮೨. ಎಲೈ ಮನ್ಮಥನೇ, ಬಿಲ್ಲಿನ ಝೇಂಕಾರದಿಂದ ಹೊರಡುವ ನಿನ್ನ ಅಂಬನ್ನೇಕೆ ವ್ಯರ್ಥಗೊಳಿಸುವೆ? ಎಲೈ ಕೋಗಿಲೆಯೇ, ಕೋಮಲವಾದ ಇನಿದನಿಯಿಂದ ಬರಿದೆ ಏಕೆ ಗಳಹುವೆ ? ಚೆಲುವೆಯೇ, ಕಳೆದುಂಬಿದ, ಚಮತ್ಕಾರಪೂರ್ಣವಾದ, ಚೆಲುವಾದ, ಇಂಪಾದ ಮತ್ತು ಚಂಚಲವಾದ ನಿನ್ನ ಕಡೆಗಣ್ಣೋಟ ಇನ್ನು ಸಾಕು. ಏಕೆಂದರೆ, ನನ್ನ ಬಗೆಯು ಚಂದ್ರಶೇಖರನ ಚರಣಧ್ಯಾನವೆಂಬ ಅಮೃತವನ್ನು ಕುಡಿಯುತ್ತಲಿದೆ !

೮೩. ನಮಗೆ ಕಾಮವೆಂಬ ಕತ್ತಲಲ್ಲಿ ಅಲೆಯುವುದರಿಂದುಂಟಾದ ಅಜ್ಞಾನವಿದ್ದಾಗ ಈ ಜಗತ್ತಿಡೀ ನಾರೀಮಯವೆಂದು ತೋರಿತು. ಆದರೀಗ, ಸಮರ್ಥತರವಾದ ವಿವೇಕವೆಂಬ ಕಾಡಿಗೆ ಹಚ್ಚಿಕೊಂಡು, ಸಮತೋಲವನ್ನು ಪಡೆದ ನಮ್ಮ ಕಣ್ಣು ಮೂರು ಲೋಕಗಳನ್ನೂ ಬ್ರಹ್ಮವೆಂದು ಅರಿತಿದೆ !

೮೪. ವೇದತ್ರಯ, ಸಾಂಖ್ಯ, ಯೋಗ, ಪಾಶುಪತ, ವೈಷ್ಣವ ಎಂಬ ಭಿನ್ನ-ಭಿನ್ನ ಪ್ರಸ್ಥಾನಗಳಲ್ಲಿ ಇದು ಯೋಗ್ಯ, ಅದು ಯೋಗ್ಯ ಎಂದು ನೇರ ಹಾಗೂ ವಕ್ರ ಮಾರ್ಗಗಳವರು ಹೇಳುವುದು ಅವರವರ ಅಭಿರುಚಿವೈಚಿತ್ರ್ಯದ ದೆಸೆಯಿಂದ; ಆದರೆ ಎಲ್ಲ ಜಲಪ್ರವಾಹಗಳಿಗೂ ಸಮುದ್ರವನ್ನು ಸೇರುವುದು ಗುರಿಯಾಗಿರುವಂತೆ, ಮನುಷ್ಯರೆಲ್ಲರಿಗೂ ನೀನೊಬ್ಬನೇ ಗಮ್ಯ.

किमीहः किं कायः स खलु किमुपायस्त्रिभुवनं
किमाधारो धाता सृजति किमुपादान इति च ।
अतर्क्यैश्वर्ये त्वय्यनवसरदुःस्थो हतधियः
कुतर्कोऽयं कांश्चिन्मुखरयति मोहाय जगतः ॥८५॥

घृतक्षीरद्राक्षामधुमधुरिमा कैरपि पदैर्
विशिष्यानाख्येयो भवति रसनामात्रविषयः ।
तथा ते सौन्दर्यं परमशिवदृङ्मात्रविषयः
कथंकारं ब्रूमः सकलनिगमागोचरगुणे ॥८६॥

मातर्जाह्नवि शम्भुसङ्गवलिते मौलौ निधायाञ्जलिं
त्वत्तीरे वपुषोऽवसानसमये नारायणाङ्घ्रिद्वयम् ।
सानन्दं स्मरतो भविष्यति मम प्राणप्रयाणोत्सवे
भूयाद्भक्तिरविच्युता हरिहराद्वैतात्मिका शाश्वती ॥८७॥

जाग्रत्स्वप्नसुषुप्तिषु स्फुटतरा या संविदुज्जृम्भते
या ब्रह्मादिपिपीलिकान्ततनुषु प्रोता जगत्साक्षिणी ।
सैवाहं न च दृश्यवस्त्विति दृढप्रज्ञापि यस्यास्ति चेत्
चाण्डालोऽस्तु स तु द्विजोऽस्तु गुरुरित्येषा मनीषा मम
॥८८॥

आस्वाद्य स्वयमेव वच्मि महती मर्मच्छिदो वेदना
मा भूत् कस्यचिदप्ययं परिभवो याच्ञाति संसारिणः ।
पश्य भ्रातरियं हि यौवनजराधिक्कारकेलिस्थली
मानम्लानमषी गुणव्यतिकरप्रागल्भ्यगर्वच्युतिः ॥८९॥

अन्तस्थमात्मानमजं न दृष्ट्वा
भ्रमन्ति मूढा गिरिगह्वरेषु ।
पश्चादुदग्दक्षिणतः पुरस्ताद्
अधःस्विदासीदुपरिस्विदासीत् ॥९०॥

೮೫. ಯಾವ ಬಯಕೆಯಿಂದ, ಯಾವ ಶರೀರದಿಂದ, ಯಾವ ಸಾಧನದಿಂದ, ಯಾವುದನ್ನು ಆಧರಿಸಿ, ಯಾವ ವಸ್ತುವಿನಿಂದ ಸೃಷ್ಟಿಕರ್ತನು ಮೂರು ಲೋಕಗಳನ್ನು ಸೃಷ್ಟಿಸುತ್ತಾನೆ? ಎಂದು ಜಗತ್ತನ್ನು ಮರುಳುಗೊಳಿಸಲು, ಮಂದಮತಿಗಳು ಏನೇನನ್ನೋ ಹರಟುವುದು— ಅತರ್ಕ್ಯಪ್ರಭುತ್ವವುಳ್ಳ ನಿನ್ನ ವಿಷಯದಲ್ಲಿ ಅಸಾಂದರ್ಭಿಕವೂ, ಅದೃಢವೂ ಆದ ಕುತರ್ಕವೇ ಸರಿ !

೮೬. ಎಲೈ ಸರ್ವವೇದಗಳಿಗರಿಯದ ಗುಣವುಳ್ಳವಳೇ, ನಾಲಿಗೆಗಷ್ಟೇ ವಿಷಯಗಳಾದ ತುಪ್ಪ, ಹಾಲು, ದ್ರಾಕ್ಷೆ, ಜೇನುಗಳ ಮಾಧುರ್ಯವನ್ನು ಪ್ರತ್ಯೇಕಿಸಿ ಹೇಳಲು ಸಾಧ್ಯವಾಗದಿರುವಾಗ, ಶ್ರೇಷ್ಠವಾದ ಶಿವನ ಕಣ್ಣಿಗಷ್ಟೇ ಕಾಣುವ ನಿನ್ನ ಸೊಬಗನ್ನು ನಾವೆಂತು ಹೇಳಬಲ್ಲೆವು?

೮೭. ಗಂಗಾಮಾತೆಯೇ, ಶಿವನ ಸಂಗದಿಂದ ಜಲಿತಳಾದವಳೇ, ತಲೆಯು ಮೇಲೆ ಮುಗಿದ ಕೈಗಳನ್ನಿಟ್ಟು, ನಿನ್ನ ದಡದಲ್ಲಿ ಶರೀರ ಕೊನೆಗೊಳ್ಳುವ ವೇಳೆಯಲ್ಲಿ, ನಾರಾಯಣನ ಪಾದಗಳನ್ನು ಆನಂದದಿಂದ ನೆನೆಯುವ ನನ್ನ, ಮರಣೋತ್ಸವ ಆಗುವಾಗ ಹರಿಹರರಲ್ಲಿ ಭೇದವನ್ನೆಣಿಸದ ಶಾಶ್ವತವೂ, ಭಂಗರಹಿತವೂ, ಆದ ಭಕ್ತಿಯು ಉಂಟಾಗಲಿ !

೮೮. ಎಚ್ಚರ, ಸ್ವಪ್ನ, ನಿದ್ರೆಗಳಲ್ಲಿ ಸ್ಫುಟವಾಗಿ ಒಂದು ಜ್ಞಾನವು ತೆರೆದಿರುತ್ತದೆ; ಅದು ಬ್ರಹ್ಮನಿಂದ ಒಡಿದು ಇರುವೆಗಳ ವರೆಗಿನ ದೇಹಗಳಲ್ಲಿ ಜಗತ್ಸಾಕ್ಷಿಯಾಗಿ ಹೆಣೆದುಕೊಂಡಿರುತ್ತದೆ; "ಅದೇ ನಾನು; ದೃಶ್ಯವಾದ ವಸ್ತುವಲ್ಲ" ಎಂಬ ದೃಢವಾದ ಪ್ರಜ್ಞೆ ಒಬ್ಬನಿಗಿದ್ದರೆ, ಚಾಂಡಾಲನಾಗಿರಲಿ, ಬ್ರಾಹ್ಮಣನಾಗಿರಲಿ–ಅವನು ನನಗೆ ಗುರು ಎಂಬುದೇ ನನ್ನ ವಿಚಾರ!

೮೯. ನಾನು ಸ್ವತಃ ಮರ್ಮಭೇದಕವಾದ ಮಹಾವೇದನೆಗಳನ್ನು ಅನುಭವಿಸಿ ಹೇಳುತ್ತೇನೆ; ಯಾವ ಸಂಸಾರಿಗೂ ಭಿಕ್ಷೆ ಬೇಡುವಂಥ ಅವಮಾನಕರ ಪರಿಸ್ಥಿತಿಯುಂಟಾಗದಿರಲಿ; ನೋಡು ಸೋದರ, ಅದು ಯೌವನ–ಮುಪ್ಪುಗಳನ್ನು ಧಿಕ್ಕರಿಸುವ ಆಟದ ಬಯಲು, ಮರ್ಯಾದೆಯನ್ನು ಮಲಿನಗೊಳಿಸುವ ಮಸಿ, ಸುಗುಣಗಳ ಸಮೂಹದ ಪ್ರೌಢಿಯ ಹೆಮ್ಮೆಗೆ ಚ್ಯುತಿಯನ್ನು ತರುವಂಥದು!

೯೦. ಹುಟ್ಟಿಲ್ಲದ ಒಳಗಿರುವ ಆತ್ಮನನ್ನು ಕಾಣದೆ, ಮೂಢರು ಗಿರಿ-ಗುಹೆಗಳತ್ತ ಹೋಗಿ, ಆತನು ಪಡುವಲಲ್ಲಿರಬಹುದೇ? ತೆಂಕಲಲ್ಲಿರಬಹುದೇ? ಬಡಗಲಲ್ಲಿರಬಹುದೇ? ಮೂಡಲಲ್ಲಿರಬಹುದೇ? ಕೆಳಗಿರಬಹುದೇ, ಮೇಲಿರಬಹುದೇ ? ಎಂದು ಅಲೆದಾಡುತ್ತಾರೆ !

सारूप्यं तव पूजने शिव महादेवेति सङ्कीर्तने
सामीप्यं शिवभक्तिधुर्यजनतासाङ्गत्यसम्भाषणे ।
सालोक्यं च चराचरात्मकतनुध्याने भवानीपते
सायुज्यं मम सिद्धमत्र भवति स्वामिन् कृतार्थोऽस्म्यहम्
॥९१॥

उदितवति त्वयि विकसति मुकुलीयति
समस्तमस्तमितबिम्बे ।
न ह्यन्यस्मिन् दिनकर सकलं
कमलायते भुवनम् ॥९२॥

गणेशं गाणेशाः शिवमिति च शैवाश्च विबुधाः
रविं सौरा विष्णुं प्रथमपुरुषं विष्णुभजकाः ।
वदन्त्येके शाक्ता जगदुदयमूलां परशिवां
न जाने किं तस्मै नम इति परं ब्रह्म सकलम् ॥९३॥

ज्ञानं न स्यात्क्वचिदपि किल ज्ञेयसम्बन्धशून्यं
ज्ञेयं सत्तामपि न लभते ज्ञानबाह्यं कदाचित् ।
इत्यन्योन्यग्रथितमुभयोर्व्यापकं यत्स्वरूपं
तत्ते प्राहुः प्रकृतिपुरुषस्यार्धनारीश्वरत्वम् ॥९४॥

आत्मा त्वं गिरिजा मतिः परिजनाः प्राणाः शरीरं गृहं
पूजा ते विषयोपभोगरचना निद्रासमाधिस्थितिः ।
सञ्चारः पदयोः प्रदक्षिणविधिः स्तोत्राणि सर्वा गिरो
यद्यत्कर्म करोमि तत्तदखिलं शम्भो तवाराधनम् ॥९५॥

सर्वेषां हृदि विद्यसे शिव ततस्त्वद्ध्यानयोगेन किं
विश्वस्योपरि वर्तसे यदि तदा त्वत्पादमूले नतिः ।
त्रैलोक्यं त्वयि लीयते यदि तदा त्वत्प्राप्त्युपायैरलं
सत्यप्यायतने तनौ किमपरं दैवं न रोचिष्यते ॥९६॥

೯೧. ಎಲೈ ಪಾರ್ವತೀಪತಿಯೇ, ಒಡೆಯನೇ, ನಿನ್ನ ಪೂಜೆಯಲ್ಲಿ ನನಗೆ ನಿನ್ನ ರೂಪವು ಸಿದ್ಧ; "ಶಿವ–ಮಹಾದೇವ" ಎಂಬ ನಿನ್ನ ನಾಮಸಂಕೀರ್ತನೆಯಲ್ಲಿ ನಿನ್ನ ಸಾಮೀಪ್ಯವು ಸಿದ್ಧ; ಶಿವಭಕ್ತಿಪ್ರಧಾನರಾದ ಜನರೊಡನೆ ಇರುವಾಗ ಹಾಗೂ ಮಾತುಕತೆಗಳನ್ನಾಡುವಾಗ, ನನಗೆ ನಿನ್ನ ಸಹಲೋಕವಾಸವು ಸಿದ್ಧ; ನಿನ್ನ ಚರಾಚರಸ್ವರೂಪದ ದೇಹವನ್ನು ಧೇನಿಸುವಾಗ, ಇಲ್ಲಿ ನನಗೆ ನಿನ್ನೊಡನೆ ಐಕ್ಯವು ಲಭಿಸುತ್ತದೆ. ಇದರಿಂದ ನಾನು ಕೃತಕೃತ್ಯನಾಗುವೆನು !

೯೨. ರವಿಯೇ, ನೀನು ಉದಯಿಸಿದ ಕೂಡಲೇ ಎಲ್ಲ ತಾವರೆಗಳೂ ಅರಳುತ್ತವೆ, ನಿನ್ನ ಬಿಂಬವು ಅಸ್ತವಾದ ಕೂಡಲೇ ಎಲ್ಲವೂ ಮೊಗ್ಗಿನಂತೆ ಮುದುರಿಕೊಳ್ಳುತ್ತವೆ; ಇತರ ಯಾವನ ಉದಯಾಸ್ತಗಳಿಂದಲೂ ಸಮಸ್ತ ಜಗತ್ತು ತಾವರೆಯ ಹಾಗೆ ನಡೆದುಕೊಳ್ಳುವುದಿಲ್ಲ!

೯೩. ಗಾಣಪತ್ಯ ಮತದವರು ಗಣೇಶನೆಂದೂ, ಶೈವರು ಶಿವನೆಂದೂ ವಿದ್ವಾಂಸರಾದ ಸೂರ್ಯಾರಾಧಕರು ಸೂರ್ಯನೆಂದೂ, ವೈಷ್ಣವರು ವಿರಾಡ್ರೂಪನಾದ ವಿಷ್ಣುವೆಂದೂ, ಶಾಕ್ತರು ಜಗತ್ತಿನ ಉತ್ಪತ್ತಿಗೆ ಮೂಲಕಾರಣಳಾದ ಪರಶಿವೆಯೆಂದೂ, ಒಬ್ಬನೇ ಒಬ್ಬನೂ ಸರ್ವಸ್ವರೂಪನೂ ಆದ ಪರಬ್ರಹ್ಮನನ್ನು ಕರೆಯುತ್ತಾರೆ; ಆದರೆ ನನಗೇನೂ ಅರಿಯದು; ನಾನಾತನಿಗೆ ನಮಸ್ಕಾರ ಎಂದಷ್ಟೇ ಹೇಳಬಲ್ಲೆ !

೯೪. ತಿಳಿಯಲ್ಪಡಬೇಕಾದುದರ ಸಂಬಂಧವಿಲ್ಲದಿರುವ ತಿಳಿವಳಿಕೆಯೆಂಬುದು ಎಲ್ಲಿಯೂ ಇಲ್ಲ; ತಿಳುವಳಿಕೆಗೆ ಹೊರತಾದ ತಿಳಿಯಲ್ಪಡುವ ವಸ್ತುವಿಗೆ ಅಸ್ತಿತ್ವ ಎಂದೂ ಇಲ್ಲ; ಈ ಪ್ರಕಾರ ಪರಸ್ಪರ ತಳಿಕೆ ಹಾಕಿಕೊಂಡ ನಿನ್ನ ಪ್ರಕೃತಿ–ಪುರುಷ–ಸ್ವರೂಪವನ್ನು ಜನರು ಅರ್ಧನಾರೀಶ್ವರ ಎನ್ನುತ್ತಾರೆ !

೯೫. ನನ್ನ ಆತ್ಮ ನೀನು, ನನ್ನ ಬುದ್ಧಿ ಗಿರಿಜೆ; ನನ್ನ ಪ್ರಾಣಗಳು ಪರಿವಾರದವರು, ನನ್ನ ಶರೀರವು ನಿನ್ನ ಗೃಹ; ನಾನು ಮಾಡುವ ವಿಷಯಭೋಗವು ನಿನ್ನ ಪೂಜೆ, ನನ್ನ ನಿದ್ರೆ ಸಮಾಧಿ; ನಾನು ಪಾದಗಳಿಂದ ತಿರುಗಾಡುವುದು ನಿನಗೆ ಹಾಕುವ ಪ್ರದಕ್ಷಿಣೆ, ನನ್ನ ಮಾತುಗಳೆಲ್ಲವೂ ನಿನ್ನ ಹೊಗಳಿಕೆ: ಹೀಗೆ, ಎಲೈ ಶಿವನೇ, ನಾನು ಮಾಡುವ ಕೆಲಸವೆಲ್ಲವೂ ನಿನ್ನ ಆರಾಧನೆ !

೯೬. ಎಲೈ ಶಿವನೇ, ನೀನು ಎಲ್ಲರ ಹೃದಯದಲ್ಲೂ ಇದ್ದೀಯೆ; ಆದುದರಿಂದ ನಿನ್ನನ್ನು ನೆನೆಯುವ ಯೋಗದಿಂದ ಏನು ಪ್ರಯೋಜನ? ನೀನು ವಿಶ್ವದ ಆಚೆಗೆ ಇರುವುದಾದರೆ, ನಿನ್ನ ಪಾದಕ್ಕೆ ಎರಗುವುದರಿಂದೇನು ಪ್ರಯೋಜನ? ಮೂರು ಲೋಕಗಳೂ (ಕೊನೆಯಲ್ಲಿ) ನಿನ್ನಲ್ಲಿ ಲೀನವಾಗುವವಾದರೆ, ನಿನ್ನನ್ನು ಪಡೆಯುವ ಉಪಾಯಗಳಿನ್ನು ಸಾಕು; ನೀನು ನಿನ್ನ ಮನೆಯಾದ ನನ್ನ ದೇಹದಲ್ಲಿರುವುದರಿಂದ ಇತರ ಯಾವ ದೇವನಾದರೂ ನನಗೆ ಪ್ರಿಯನಾದಾನೇನು?

निराकारं निराधारं निर्विकारं निरामयम्
निर्द्वन्द्वञ्च निरालम्बं वन्दे गुहमुमासुतम् ॥९७॥

विचारिते महिमनि त्वदीये नित्यनिर्मले ।
परमात्मन् गमनमप्याधत्ते परमाणुताम् ॥९८॥

किरीटे निशेशो ललाटे हुताशो
भुजे भोगिराजो गले कालिमा च ।
तनौ कामिनी यस्य तत्तुल्यदेवं
न जाने न जाने न जाने न जाने ॥९९॥

मातर्मेदिनि तात मारुत सखे तेजः सुबन्धो जल
भ्रातर्व्योम निबद्ध एव भवतामन्त्यः प्रणामाञ्जलिः ।
युष्मत्सङ्गवशोपजात सुकृतस्फारस्फुरन्निर्मल–
ज्ञान।पास्तसमस्तमोहमहिमा लीये परब्रह्मणि ॥१००॥

೯೭. ಆಕಾರ, ಆಧಾರ, ವಿಕಾರ, ರೋಗ, ದ್ವಂದ್ವ, ಅವಲಂಬನಗಳಿಲ್ಲದ ಪಾರ್ವತೀಸುತನಾದ ಸುಬ್ರಹ್ಮಣ್ಯನನ್ನು ವಂದಿಸುತ್ತೇನೆ.

೯೮. ಎಲೈ ಪರಮಾತ್ಮನೇ, ನಿತ್ಯವೂ ನಿರ್ಮಲವಾದ ನಿನ್ನ ಮಹಿಮೆಯನ್ನು ವಿವೇಚಿಸಿ ನೋಡಿದರೆ, ಆಕಾಶವನ್ನು ಕೂಡ ಅದು ಪರಮಾಣುತ್ವಕ್ಕೆ ಇಳಿಸೀತು (ಎಂದು ತೋರುತ್ತದೆ).

೯೯. ಕಿರೀಟದಲ್ಲಿ ಚಂದ್ರ, ಹಣೆಯಲ್ಲಿ ಬೆಂಕಿ, ತೋಳಿನಲ್ಲಿ ಸರ್ಪರಾಜ, ಕೊರಳಲ್ಲಿ ಕಪ್ಪು, ಮೈಯಲ್ಲಿ ಹೆಂಗಸು ಇರುವ ದೇವನಿಗೆ ಸರಿಸಮಾನನಾದ ಇನ್ನೊಬ್ಬ ದೇವನನ್ನು ನಾ ಕಾಣೆ, ನಾ ಕಾಣೆ, ನಾ ಕಾಣೆ, ನಾ ಕಾಣೆ!

೧೦೦. ಭೂಮಿತಾಯಿಯೇ, ಗಾಳಿ ತಂದೆಯೇ, ಬೆಳಕು ಗೆಳೆಯನೇ, ನೀರ-ನೆಂಟನೇ, ಬಾನಣ್ಣನೇ, ನಿಮಗಿದೋ ಕೊನೆಯ ನಮಸ್ಕಾರ; ನಿಮ್ಮ ಸಹವಾಸದಿಂದೆ ದೊರಕಿದ ಪುಣ್ಯದಿಂದ ಹೆಜ್ಜೊಳಪಿನದೆನ್ನಿಸಿದ ಶುದ್ಧಜ್ಞಾನದಿಂದ ಅಜ್ಞಾನದ ಎಲ್ಲ ದೊಡ್ಡಸ್ತಿಕೆಯನ್ನು ಕಳೆದೊಗೆದ ನಾನು ಪರಬ್ರಹ್ಮದಲ್ಲಿ ಲೀನನಾಗುತ್ತೇನೆ!

III

ಜೀವನ ಮತ್ತು ಲೋಕಾನುಭವ

೧. ರಾಜಕೀಯ ಅನುಭವ

प्रजा यस्य विवर्धन्ते सरसीव महोत्पलम् ।
स राजा सर्वसुखदः स्वर्गलोके महीयते ॥१॥

राजा प्रजानां प्रथमं शरीरं
प्रजाश्च राज्ञोऽप्रतिमं शरीरम् ।
राज्ञा विहीना न भवन्ति देशा
देशैर्विहीना न नृपा भवन्ति ॥२॥

राजैव कर्ता भूतानां राजैव च विनाशकः
धर्मात्मा यः स कर्ता स्यादधर्मात्मा विनाशकः ॥३॥

राज्ञः प्रमाददोषेण दस्युभिः परिमुष्यताम् ।
अशरण्यः प्रजानां यः स राजा कलिरुच्यते ॥४॥

दण्डः संरक्षते धर्मं तथैवार्थं जनाधिप ।
कामं संरक्षते दण्डस्त्रिवर्गो दण्ड उच्यते ॥५॥

अलब्धमीहेद् धर्मेण लब्धं यत्नेन पालयेत्
पालितं वर्धयेन्नीत्या वृद्धं पात्रेषु निक्षिपत् ॥६॥

स्मृत्योर्विरोधे न्यायस्तु बलवान् व्यवहारतः ।
अर्थशास्त्रात्तु बलवद्धर्मशास्त्रमिति स्थितिः ॥७॥

III

ಜೀವನ ಮತ್ತು ಲೋಕಾನುಭವ

೧. ರಾಜಕೀಯ ಅನುಭವ

೧. ಕೆರೆಯಲ್ಲಿಯ ಹೆದ್ದಾವರೆಯಂತೆ ಅಭಿವೃದ್ಧಿ ಹೊಂದುತ್ತಿರುವ ಪ್ರಜೆಗಳನ್ನುಳ್ಳ ರಾಜನು ಎಲ್ಲರಿಗೂ ಸುಖ ಕೊಡುವವನು; ಅವನು ಸ್ವರ್ಗದಲ್ಲಿ ಸುಖಪಡುತ್ತಾನೆ.

೨. ದೊರೆಯು ಪ್ರಜೆಗಳ ಮೊದಲ ಮೈ; ಪ್ರಜೆಗಳು ದೊರೆಯ ಎಣೆಯಿಲ್ಲದ ಮೈ; ರಾಜನಿಲ್ಲದ ದೇಶ ದೇಶವಲ್ಲ; ದೇಶವಿಲ್ಲದ ರಾಜ ರಾಜನಲ್ಲ.

೩. ಪ್ರಾಣಿಗಳಿಗೆ (ಜೀವನಾನುಕೂಲ ಕಲ್ಪಿಸಿಕೊಡುವ) ಕರ್ತನು ರಾಜನು; (ಅದನ್ನು) ನಾಶ ಮಾಡುವವನು ರಾಜನು; ಧರ್ಮಾತ್ಮನಾದ ದೊರೆ ಕರ್ತನಾಗುತ್ತಾನೆ; ಅಧರ್ಮಾತ್ಮನು ವಿನಾಶಕನಾಗುತ್ತಾನೆ.

೪. ತನ್ನ ತಪ್ಪು ನಡತೆಯ ಫಲವಾಗಿ ತನ್ನ ಪ್ರಜೆಗಳು ದುಷ್ಟರಿಂದ ವಂಚಿತರಾದಾಗ ಅವರನ್ನು ರಕ್ಷಿಸಲಾರದಾದ ಅರಸು ಶುದ್ಧ ಕಲಿಸ್ವರೂಪನೇ ಸರಿ.

೫. ಎಲೈ ಅರಸನೇ, ಧರ್ಮ, ಅರ್ಥ, ಕಾಮಗಳನ್ನು ರಾಜಪ್ರಶಾಸನವು ಕಾಯುವುದರಿಂದ ಅದನ್ನು ತ್ರಿವರ್ಗಯುಕ್ತವೆಂದು ಹೇಳಲಾಗಿದೆ.

೬. ಧರ್ಮಮಾರ್ಗದಿಂದ ಇಲ್ಲದ್ದನ್ನು ಬಯಸಬೇಕು; ಸಿಕ್ಕಿದ್ದನ್ನು ಪ್ರಯತ್ನದಿಂದ ಕಾಪಾಡಿಕೊಳ್ಳಬೇಕು; ಕಾಪಾಡಿಕೊಂಡದ್ದನ್ನು ನೀತಿಯಂತೆ ವೃದ್ಧಿ ಮಾಡಿಕೊಳ್ಳಬೇಕು: ಹಾಗೆ ಸಮೃದ್ಧವಾದ ಅರ್ಥವನ್ನು ಸತ್ಪಾತ್ರರಿಗೆ ಕೊಡಬೇಕು.

೭. (ರಾಜಧರ್ಮವನ್ನು ಹೇಳುವ) ಸ್ಮೃತಿಗ್ರಂಥಗಳಲ್ಲಿ (ಯಾವುದಾದರೊಂದು ಪ್ರಕರಣದಲ್ಲಿ) ವಿರೋಧ ಉಂಟಾದರೆ, ಪರಂಪರಾನುಗುಣವಾಗಿ ಮಾಡುವ ತರ್ಕವೇ ಬಲವತ್ತರವಾದುದು; ಅರ್ಥಶಾಸ್ತ್ರ (ರಾಜನ ಲಾಭಗಳನ್ನು ಹೇಳುವ ಶಾಸ್ತ್ರ) ಕ್ಕಿಂತ ಧರ್ಮಶಾಸ್ತ್ರ, (ಸರ್ವರ ಶ್ರೇಯಃ ಪ್ರೇಯಗಳನ್ನು ಪಡೆಯಲು ತಕ್ಕ ಮಾರ್ಗಗಳನ್ನು ಹೇಳುವ ಶಾಸ್ತ್ರ, ಸ್ಮೃತಿ) ಹೆಚ್ಚು ವಿಧಾಯಕವಾದುದು. (ಎಂದು ರಾಜ ತಿಳಿದು ನಡೆದುಕೊಳ್ಳಬೇಕು.)

राज्ञः स्वधर्मः स्वर्गीयः प्रजा धर्मेण रक्षितुः ।
अरक्षितुर्वाक्षेप्तुर्वा मिथ्यादण्डमतोऽन्यथा ॥८॥

न हि स्वसुखमन्विच्छन् पीडयेत् कृपणं नृपः ।
कृपणः पीड्यमानो हि मन्युना हन्ति पार्थिवम् ॥९॥

स्वाधीनवृत्तेः साफल्यं न पराधीनवर्तिता ।
ये पराधीनकर्माणो जीवन्तोऽपि च ते मृताः ॥१०॥

सर्वं परवशं दुःखं सर्वमात्मवशं सुखम् ।
एतद्विद्यात् समासेन लक्षणं सुखदुःखयोः ॥११॥

अदण्ड्यान् दण्डयन् राजा दण्ड्यांश्चैवाप्यदण्डयन् ।
अयशो महदाप्नोति नरकं चैव गच्छति ॥१२॥

दण्डःशास्ति प्रजाः सर्वा दण्ड एवाभिरक्षति ।
दण्डः सुप्तेषु जागर्ति दण्डं धर्मं विदुर्बुधाः ॥१३॥

धर्म एव हतो हन्ति धर्मो रक्षति रक्षितः ।
तस्माद्धर्मो न हन्तव्यो मा नो धर्मो हतो वधीत् ॥१४॥

वृथा वृष्टिः समुद्रस्य वृथा तृप्तस्य भोजनम् ।
वृथा दानं समृद्धस्य नीचस्य सुकृतं यथा ॥१५॥

೮. ಪ್ರಜೆಗಳನ್ನು ಧರ್ಮದಿಂದ ರಕ್ಷಿಸುವ ರಾಜನ ಸ್ವಧರ್ಮವು ಅವನಿಗೆ ಸ್ವರ್ಗಪ್ರಾಪ್ತಿಕರವಾಗುವುದು; ಹಾಗೆ ರಕ್ಷಿಸದ ಅಥವಾ ಅವರನ್ನು ಅವ್ಯವಸ್ಥೆಗೀಡು-ಮಾಡಿದ ಇಲ್ಲವೆ ಸುಳ್ಳು-ಸುಳ್ಳೇ (ನಿಷ್ಕಾರಣ-ದುಷ್ಕಾರಣಗಳಿಗಾಗಿ) ಶಿಕ್ಷಿಸಿದ ರಾಜನು ನರಕಕ್ಕೆ ಹೋಗುವನು.

೯. ತನ್ನ ಸುಖಕ್ಕಾಗಿ ಅರಸು ಬಡವನನ್ನು ಪೀಡಿಸಬಾರದು; ಏಕೆಂದರೆ ಪೀಡಿತನಾದ ಬಡವನು ತನ್ನ ಸಿಟ್ಟಿನಿಂದ ಅರಸನನ್ನು ಕೊಲ್ಲುತ್ತಾನೆ.

೧೦. ತನ್ನ ವೃತ್ತಿಯು ತನ್ನ ವಶದಲ್ಲಿರುವವನ ಬಾಳು ಸಫಲ; ಪರಾಧೀನ ವೃತ್ತಿಯುಳ್ಳವರ ಬಾಳು ವಿಫಲ; ಅವರು ಬದುಕಿದ್ದರೂ ಸತ್ತ ಹಾಗೆಯೇ ಸರಿ.

೧೧. ಪರವಶವಾಗಿರುವ ಎಲ್ಲವೂ ದುಃಖ; ಸ್ವವಶವಾಗಿರುವ ಎಲ್ಲವೂ ಸುಖ. ಇದು ಸುಖ-ದುಃಖಗಳ ಸಂಕ್ಷಿಪ್ತವಾದ ಲಕ್ಷಣ.

೧೨. ನಿರಪರಾಧಿಗಳನ್ನು ಶಿಕ್ಷಿಸುವುದರಿಂದಲೂ, ಅಪರಾಧಿಗಳನ್ನು ಶಿಕ್ಷಿಸದೇ ಬಿಡುವುದರಿಂದಲೂ, ರಾಜನಿಗೆ ಬಹಳ ಅಪಕೀರ್ತಿ ಬರುತ್ತದೆ; ಮತ್ತು ಅವನು ನರಕಕ್ಕೂ ಹೋಗುವನು.

೧೩. ಎಲ್ಲ ಪ್ರಜೆಗಳನ್ನು (ರಾಜನ ಅಥವಾ ಸರಕಾರದ) ಆಡಳಿತವು ಕಾಯದೆಗೊಳಪಡಿಸುತ್ತದೆ: ಅದೇ ಅವರನ್ನು ಕಾಯುತ್ತದೆ; ಪ್ರಶಾಸನ ಶಕ್ತಿಯು (ಜನರು) ಮಲಗಿದ್ದಾಗ (ತಾನು) ಜಾಗೃತವಾಗಿರುತ್ತದೆ; ವಿದ್ವಾಂಸರು (ಆದರಿಂದಲೇ) ಆ ದಂಡಶಕ್ತಿಯನ್ನು ಧರ್ಮವೆಂದು ತಿಳಿಯುತ್ತಾರೆ.

೧೪. ಮುರಿದ ಕಾಯದೆಯು (ರಾಜ, ಪ್ರಜೆ ಎಲ್ಲರನ್ನೂ) ಮುರಿಯುತ್ತದೆ: ಪಾಲಿತವಾದರದು (ಎಲ್ಲರನ್ನೂ) ಪಾಲಿಸುತ್ತದೆ; ಆದುದರಿಂದ ಕಾಯದೆಯನ್ನು ಮುರಿಯಬಾರದು; ಮುರಿದ ಕಾಯದೆಯು ನಮ್ಮನ್ನು ಮುರಿಯುವ ಸಂದರ್ಭ ಉಂಟಾಗದಿರಲಿ.

೧೫. ಕಡಲಲ್ಲಿ ಮಳೆಗರೆದರೆ ಅದು ವ್ಯರ್ಥ; ತೃಪ್ತನಿಗೆ ಉಣಬಡಿಸಿದರೆ ಅದು ವ್ಯರ್ಥ; ಸಮೃದ್ಧನಿಗೆ ದಾನ ಮಾಡಿದರೆ ಅದು ವ್ಯರ್ಥ: ಇವು ನೀಚನಿಗೆ ಒಳಿತನ್ನು ಮಾಡಿದಷ್ಟೇ ಫಲ ಕೊಡುತ್ತವೆ.

त्यजेदेकं कुलस्यार्थे ग्रामस्यार्थे कुलं त्यजेत् ।
ग्रामं जनपदस्यार्थे आत्मार्थे पृथिवीं त्यजेत् ॥१६॥

सद्भावेन हि तुष्यन्ति देवाः सत्पुरुषा द्विजाः ।
इतरे खाद्यपानेन मानदानेन पण्डिताः ॥१७॥

कनकभूषणसङ्ग्रहणोचितो
यदिमणिस्त्रपुणि प्रतिबध्यते ।
न च विरौति न चापि स शोभते
भवति योजयितुर्वचनीयता ॥१८॥

मनः प्रह्लादयन्तीभिर्मन्दं यान्तीभिरप्यलम् ।
महान्तोऽपि हि भिद्यन्ते स्त्रीभिरद्भिरिवाचलाः ॥१९॥

मृगयाक्षास्तथापानं गर्हितानि महीभुजाम् ।
दृष्टास्तेभ्योऽपि विपदः पाण्डुनैषधवृष्णिषु ॥२०॥

जानन्ति तन्त्रयुक्तिं यथास्थितं मण्डलमभिलिखन्ति ।
ये मन्त्ररक्षणपरास्ते सर्पनराधिपावुपचरन्ति ॥२१॥

कुलीनान् नावमन्येत सम्यग्वृत्तान् मनस्विनः ।
त्यजन्त्येतेऽवमन्तारं घ्नन्ति वा मानहेतवः ॥२२॥

೧೬. (ಆಪತ್ಕಾಲದಲ್ಲಿ) ಕುಟುಂಬವೊಂದರ ಹಿತಕ್ಕಾಗಿ ಒಬ್ಬನ ಹಿತವನ್ನು (ಅದರ ಒಬ್ಬ ಸದಸ್ಯನ ಹಿತವನ್ನು) ಬಿಡಬಹುದು: ಗ್ರಾಮವೊಂದರ ಹಿತವನ್ನು ಉಳಿಸಿಕೊಳ್ಳಲು, ಒಂದು ಕುಟುಂಬದ ಹಿತವನ್ನು ಕಡೆಗಣಿಸಬಹುದು: ಒಂದು ರಾಜ್ಯದ (ಅಥವಾ ಒಂದು ರಾಷ್ಟ್ರದ) ಹಿತವನ್ನು ಕಾಯಲು ಗ್ರಾಮವೊಂದರ ಹಿತ-ವನ್ನು ತ್ಯಜಿಸಬಹುದು; ಹಾಗೆಯೇ ರಾಜನು (ಅತ್ಯಯ ಪ್ರಸಂಗದಲ್ಲಿ) ತನ್ನ ಇಡೀ ರಾಜ್ಯವನ್ನೇ (ಮುಂದೆ ಶಕ್ತಿ ಸಂಗ್ರಹ ಮಾಡಿಕೊಂಡು ಬಂದು ಹಗೆಯನ್ನು ಓಡಿಸುವು-ದಕ್ಕಾಗಿ) ಕೈ ಬಿಡಬಹುದು.

೧೭. (ರಾಜಾಸ್ಥಾನದಲ್ಲಿ) ದೇವತೆಗಳೂ, ಸತ್‌ಪುರುಷರೂ, ದ್ವಿಜರೂ ಸದ್ಭಾವ ತೋರುವುದರಿಂದಲೂ ಮಾನ-ದಾನಗಳಿಂದ ವಿದ್ವಾಂಸರೂ ಇತರರು ತಿಂಡಿ-ತೀರ್ಥಗಳಿಂದಲೂ ಸಂತುಷ್ಟರಾಗುತ್ತಾರೆ.

೧೮. ಚಿನ್ನದ ಒಡವೆಗೆ ತಕ್ಕದ್ದಾದ ರತ್ನವನ್ನು ಸೀಸದ ಕಟ್ಟಿನಲ್ಲಿಟ್ಟರೆ, ಅದು (ಇಂಪಾದ) ಸದ್ದನ್ನು ಉಂಟು ಮಾಡುವುದೂ ಇಲ್ಲ, ಶೋಭಿಸುವುದೂ ಇಲ್ಲ: ಯೋಜಕನನ್ನು ಮಾತ್ರ ಅದು ದೂಷಣೆಗೆ ಗುರಿಮಾಡುತ್ತದೆ.

೧೯. ಬೆಟ್ಟವು ನೀರಿನಿಂದ ಹೇಗೋ ಹಾಗೇ ದೊಡ್ಡವರು (ರಾಜಾದಿಗಳು) ಕೂಡ, ಮನಸ್ಸನ್ನು ಸಂತಸಗೊಳಿಸುವ ಮೆಲುನಡಿಗೆಯ ಹೆಂಗಸರಿಂದ ಭೇದಿಸಲ್ಪಡು-ತ್ತಾರೆ; ಅವರಿಗೆ ಇಂಥ ಹೆಂಗಸರು ಕೂಡ ಸಾಕು.

೨೦. ಬೇಟೆ, ಜೂಜು, ಮದ್ಯಪಾನಗಳು ರಾಜರಿಗೆ ಹೇಳಿಸಿದಂಥವುಗಳಲ್ಲ: ಅವುಗಳಿಂದ ಕೂಡ ಪಾಂಡು, ನಳ, ಯಾದವರು ವಿಪತ್ತಿಗೀಡಾದದ್ದು ಅನುಭವ-ಸಿದ್ಧವಾಗಿದೆ.

೨೧. ಪ್ರತ್ಯೌಷಧವನ್ನು ತಿಳಿದ, ಇಂದ್ರಜಾಲವೃತ್ತವನ್ನು ಚೆನ್ನಾಗಿ ಬರೆಯಲು ಗೊತ್ತಿರುವ ಮತ್ತು ಮಂತ್ರ ಮಾಡಬಲ್ಲ ಜನರು ಸರ್ಪದೊಡನೆ ವ್ಯವಹರಿಸಬಲ್ಲರು: ಹಾಗೆಯೇ, ರಾಜ್ಯದ ಆಡಳಿತದ ಧೋರಣೆ-ಯೋಜನೆಗಳನ್ನು ಅರಿತ ಮತ್ತು ರಾಜನ ಪರಿವಾರದವರ ಅಧಿಕಾರವನ್ನು ಹಿಡಿತದಲ್ಲಿಟ್ಟುಕೊಳ್ಳಬಲ್ಲ ಜನರು ಮಾತ್ರ ರಾಜಸೇವೆ ಮಾಡಬಲ್ಲರು.

೨೨. (ಅರಸನು) ಒಳ್ಳೆಯ ನಡತೆಯ ಹಾಗೂ ದೊಡ್ಡ ಮನಸ್ಸಿನ ಕುಲೀನ-ರನ್ನು ಅವಮಾನಿಸಕೂಡದು; ಅವರು ಅವಮಾನಿಸಿದವರನ್ನು ಬಿಟ್ಟು ಹೋಗುವರು ಅಥವಾ ಸ್ವಾಭಿಮಾನರಕ್ಷಣೆಗಾಗಿ (ಅರಸನನ್ನು) ನಾಶಮಾಡುವರು.

अभ्यस्तकर्मणस्तज्ज्ञान् शुचीन् शुद्धार्थसङ्गतान् ।
कुर्यादुद्योगसम्पन्नान् अध्यक्षान् सर्वकर्मसु ॥२३॥

कुलं विद्यां श्रुतं शौर्यं सौशील्यं भूतपूर्वताम् ।
वयोऽवस्थां च संवीक्ष्य स्त्राद्रियेत महामनाः ॥२४॥

यो यद्वस्तु विजानाति तं तत्र विनियोजयेत् ।
अशेषविषयप्राप्ता विन्द्रियार्थेष्विवेन्द्रियाः ॥२५॥

अपि भ्राता सुतोऽर्घ्यो वा श्वशुरो मातुलोऽपि वा
नादण्डचो नाम राज्ञोऽस्ति धर्माद्विचलितः स्वकात् ॥२६॥

ज्ञात्वापराधं देशं च कालं बलमथापि वा
वयः कर्म च वित्तं च दण्डं दण्ड्येषु पातयेत् ॥२७॥

यथाचतुर्भिः कनकं परीक्ष्यते
निघर्षणच्छेदनतापताडनैः ।
तथा चतुर्भिर्भृतकं परीक्षयेद्
व्रतेन शीलेन कुलेन कर्मणा ॥२८॥

क्षणशयितविबुद्धाः कल्पयन्तः प्रयोगान्
उदधिमहति राज्ये काव्यवद्दुर्विगाह्ये ।
गहनमपररात्रप्राप्तबुद्धिप्रसादाः
कवय इव महीपाश्चिन्तयन्त्यर्थजातम् ॥२९॥

विषादप्यमृतं ग्राह्यं बालादपि सुभाषितम् ।
अमित्रादपि सद्वृत्तं अमेध्यादपि काञ्चनम् ॥३०॥

೨೩. ವಿವಿಧ ಕಾರ್ಯಶಾಖೆಗಳಲ್ಲಿ ದೊರೆಯು (ಸರಕಾರವು) ಆಯಾ ಕಾರ್ಯಗಳಲ್ಲಿ ನುರಿತ, ತಜ್ಞರಾದ, ಲಂಚ ತೆಗೆದುಕೊಳ್ಳದ, ನ್ಯಾಯವಾದ ಸಂಪಾದನೆಯಿಂದ ಬದುಕುವ ಮತ್ತು ತಮ್ಮ ತಮ್ಮ ಪ್ರತ್ಯೇಕ ಉದ್ಯೋಗಗಳಿರುವ ಜನರನು ಶಾಖಾಧ್ಯಕ್ಷ (ಸಚಿವ)ರನ್ನಾಗಿ ನಿಯಮಿಸಿಕೊಳ್ಳಬೇಕು.

೨೪. ಕುಲ, ವಿದ್ಯೆ, ಜ್ಞಾನ, ಪರಾಕ್ರಮ, ಸುಶೀಲ, ಹಿನ್ನೆಲೆ, ವಯಸ್ಸುಗಳನ್ನು ಚೆನ್ನಾಗಿ ಪರಿಶೀಲಿಸಿ, ಮಹಾಶಯುದ ದೊರೆಯು (ತಾರತಮ್ಯಾನುಸಾರವಾಗಿ) (ಅಧಿಕಾರಿಗಳನ್ನು ಹಾಗೂ ಜನರನ್ನು) ಆದರಿಸಬೇಕು.

೨೫. ಆಯಾ ಕಾರ್ಯವನ್ನು ಬಲ್ಲವರನ್ನೇ ಆಯಾ ಕಾರ್ಯಶಾಖೆಗಳಲ್ಲಿ ನಿಯಮಿಸಬೇಕು; ಅದಕ್ಕೆ ಎಲ್ಲ ವಿಷಯಗಳನ್ನು ಗ್ರಹಿಸಲು ಆಯಾ ವಿಷಯಗಳಲ್ಲಿ ಆಯಾ ಇಂದ್ರಿಯಗಳನ್ನು ಬಳಸುವ ಅನುಭವವು ದೃಷ್ಟಾಂತ.

೨೬. ತನ್ನ ಕರ್ತವ್ಯದಿಂದ ಚ್ಯುತನಾದವನು ಸೋದರನಿರಲಿ, ಮಗನಿರಲಿ, ಗುರುವಿರಲಿ, ಮಾವನಿರಲಿ, ಸೋದರಮಾವನಿರಲಿ — ಯಾರಾಗಿದ್ದರೂ ಸರಿಯೆ— ರಾಜನಿಗೆ ದಂಡನೆಗೆ ಅನರ್ಹನೆಂಬಾತನಿಲ್ಲ.

೨೭. ಅಪರಾಧವೆಸಗಿದ ಸ್ಥಳ, ಕಾಲಗಳನ್ನು, ಅಪರಾಧಿಗಳ ಬಲ, ವಯಸ್ಸು, ಉದ್ಯೋಗ, ಧನಸಂಪತ್ತುಗಳನ್ನು ಗಮನಿಸಿ, ಅರಸು (ಸಪರಿಮಾಣ) ಶಿಕ್ಷೆಯನ್ನು ವಿಧಿಸಬೇಕು.

೨೮. ಒರೆಗಲ್ಲಿಗೆ ಉಜ್ಜುವುದು, ತುಂಡು ಮಾಡುವುದು, ಕಾಯಿಸುವುದು ಮತ್ತು ಬಡಿಯುವುದು ಎಂಬ ನಾಲ್ಕು ಬಗೆಗಳಿಂದ ಬಂಗಾರವನ್ನು ಪರೀಕ್ಷಿಸುವಂತೆ, (ದೃಢ)ವ್ರತ, ಶೀಲ, ಕುಲ, ಕಾರ್ಯ(ದಕ್ಷತೆ)ಗಳೆಂಬ ನಾಲ್ಕು ಇರುವವೋ ಇಲ್ಲವೋ ಎಂಬುದನ್ನು ನೌಕರನಲ್ಲಿ ಪರೀಕ್ಷಿಸಬೇಕು.

೨೯. ಕಡಲಿನಷ್ಟು ವಿಸ್ತಾರವಾದ ಹಾಗೂ ಕಾವ್ಯದಷ್ಟು ಕಷ್ಟದಿಂದ ಒಳಹೊಗಬೇಕಾದ ರಾಜ್ಯದಲ್ಲಿ ಕವಿಗಳಂತೆ ರಾಜರು ವಿವಿಧ ಪ್ರಯೋಗಗಳನ್ನು ಕಲ್ಪಿಸುತ್ತ, ಒಂದು ಕ್ಷಣ ಮಲಗಿ ಕೂಡಲೇ ಏಳುತ್ತಾರೆ; ಮತ್ತು ಅಪರ ರಾತ್ರಿಯಲ್ಲಿ ಹೊಳೆದ ಉಪಾಯಗಳಿಂದ— ದುರ್ಲಭವಾದ ಅರ್ಥಸಂಪತ್ತನ್ನು ಕುರಿತು ವಿಚಾರ ಮಾಡುತ್ತಾರೆ.

೩೦. ವಿಷದಿಂದ ಕೂಡ ಅಮೃತವನ್ನು (ಅದು ಸಿಗುವಂತಿದ್ದರೆ) ತೆಗೆದುಕೊಳ್ಳಬೇಕು; ಚಿಕ್ಕ ಹುಡುಗನಿಂದ ಕೂಡ ವಿವೇಕದ ಮಾತನ್ನು (ಅವನೊಮ್ಮೆ ಆಡಿದರೆ) ಸ್ವೀಕರಿಸಬೇಕು; ಶತ್ರುವಿನಿಂದ ಕೂಡ (ಅವನಲ್ಲಿದ್ದರೆ) ಒಳ್ಳೆಯ ನಡತೆಯನ್ನು ಕಲಿಯಬೇಕು; ಅಮೇಧ್ಯದಿಂದ ಕೂಡ ಬಂಗಾರವನ್ನು (ಒಮ್ಮೆ ಅಲ್ಲಿದ್ದರೆ) ಎತ್ತಿಕೊಳ್ಳಬೇಕು.

अयुद्धेनैव विजयं वर्धयेद्वसुधाधिपः ।
जघन्यमाहुर्विजयं युद्धेन च नराधिपः ॥३१॥

अद्भ्योऽग्निर्ब्रह्मतः क्षत्रं अश्मनोलोहमुत्थितम् ।
तेषां सर्वत्रगं तेजः स्वासु योनिषु शाम्यति ॥३२॥

सप्ताङ्गस्य च राज्यस्य विपरीतं य आचरेत् ।
गुरुर्वा यदि वा मित्रं प्रतिहन्तव्य एव सः ॥३३॥

अचिराधिष्ठितराज्यः शत्रुः प्रकृतिष्वरूढमूलत्वात् ।
नवसंरोहणशिथिलस्तरुरिव सुकरः समुद्धर्तुम् ॥३४॥

मदमानसमुद्धतं नृपं न वियुंक्ते नियमेन मूढता ।
अतिमूढ उदस्यते नयान्नयहीनादपरज्यते जनः ॥३५॥

अणुरप्युपहन्ति विग्रहः प्रभुमन्तः प्रकृतिप्रकोपजः ।
अखिलं हि हिनस्ति भूधरं तरुशाखान्तनिघर्षजोऽनल : ।
॥३६॥

मतिमान् विनयप्रमाथिनः समुपेक्षेत
समुन्नतिं द्विषः ।
सुजयः खलु तादृगन्तरे विपदन्ता
ह्यविनीतसम्पदः ॥३७॥

लघुवृत्तितया भिदां गतं बहिरन्तश्च नृपस्य मण्डलम् ।
अभिभूय हरत्यनन्तरः शिथिलं कूलमिवापगारयः ॥३८॥

೩೧. ಎಲೈ ರಾಜನೇ, ಯುದ್ಧ ಮಾಡದೆಯೇ, (ಸಾಧ್ಯವಾದಲ್ಲಿಲ್ಲಾ) ಗೆಲುವನ್ನು ಸಂಪಾದಿಸಬೇಕು; ಯುದ್ಧದಿಂದ ಗಳಿಸುವ ಜಯವು ಕೀಳೆಂದು (ತಿಳಿದವರು) ಹೇಳುತ್ತಾರೆ.

೩೨. ನೀರಿನಿಂದ ಬೆಂಕಿಯೂ, ಬ್ರಹ್ಮದಿಂದ ಕ್ಷತ್ರವೂ, ಕಲ್ಲಿನಿಂದ ಲೋಹವೂ ಹುಟ್ಟಿವೆ; ಅವುಗಳ ಸರ್ವತ್ರವ್ಯಾಪಿಯಾದ ತೇಜಸ್ಸು, ಆಯಾ ಮೂಲ ಆಕರದಲ್ಲಿ ಶಮನ ಹೊಂದುವುದು.

೩೩. ರಾಜ್ಯದ (ರಾಷ್ಟ್ರದ) ಸಪ್ತಾಂಗದ (ಹಿತಕ್ಕೆ) ವಿರುದ್ಧವಾಗಿ ಗುರು, ಮಿತ್ರ—ಅಥವಾ ಯಾರೇ ಆಗಲಿ—ನಡೆದುಕೊಂಡರೆ, ಅಂಥವನು ಮರಣದಂಡನೆಗೆ ಪಾತ್ರನಾಗುವನು.

೩೪, ರಾಜ್ಯಾಧಿಕಾರವನ್ನು ಈಗ ತಾನೇ ಪಡೆದ ಹಗೆಯು ತನ್ನ ಪ್ರಜೆಗಳ ಹೃದಯದಲ್ಲಿ ರೂಢಮೂಲನಾಗದಿರುವುದರಿಂದ ಹೊಸದಾಗಿ ನೆಟ್ಟಂತಹ, ಬುಡ ಸಡಿಲವಾಗಿರುವ ಮರದಂತೆ ಕಿತ್ತು ಹಾಕಲು ಸುಲಭನಾಗಿರುವನು.

೩೫. ಸೊಕ್ಕು-ಸಿಟ್ಟುಗಳಿಂದ ಕೂಡಿದ ರಾಜನನ್ನು ದಡ್ಡತನವು ಎಂದೂ ಬಿಟ್ಟುಹೋಗದು; ಅತಿ ದಡ್ಡನು ನೀತಿಚ್ಯುತನಾಗುವನು; ನೀತಿಬಾಹಿರನಾದ ರಾಜನಿಂದ ಜನ ಅಸಂತೋಷ ಪಡುವುದು.

೩೬. ಮರದ ಕೊಂಬೆಗಳ ಘರ್ಷಣದಿಂದ ಹುಟ್ಟಿದ ಬೆಂಕಿಯು ಇಡಿ ಬೆಟ್ಟವೊಂದನ್ನು ಅಂಜಿಸುವುದಿಲ್ಲವೇ ? ಹಾಗೆಯೇ ತನ್ನ ರಾಜ್ಯದೊಳಗಿನ ಪ್ರಜೆಗಳ ಕೋಪದಿಂದ ಉಂಟಾದ ಒಂದೇ ಒಂದು ವೈರಾಣು ಕೂಡ ರಾಜನನ್ನು ನಷ್ಟಕ್ಕೀಡು ಮಾಡುವುದು !

೩೭. ಬುದ್ಧಿವಂತನಾದ ದೊರೆಯು ಅವಿನೀತನಾದ ಶತ್ರುರಾಜನ ವೃದ್ಧಿಯನ್ನು (ಕೆಲಕಾಲ) ಅಲಕ್ಷಿಸಬೇಕು; ಏಕೆಂದರೆ, ಅಂಥ ಅವಿನೀತನನ್ನು ಅವನ ದುರ್ಬಲ ಸ್ಥಾನವನ್ನು ಹಿಡಿದು ಗೆಲ್ಲುವುದು ಸುಲಭ; ಅವಿನೀತರ ಸಂಪತ್ತು (ವೈರಿಯಿಂದ) ವಿಪತ್ತು ಉಂಟಾಗುವವರೆಗಷ್ಟೇ ಉಳಿಯುವಂಥದು !

೩೮. ರಾಜನ ದುರ್ವ್ಯತ್ತಿಯಿಂದ, ಹೊರಗೆ ಪ್ರಜೆಗಳ ಮತ್ತು ಒಳಗೆ ಮಂತ್ರಿ ಮುಂತಾದವರ ವಿಶ್ವಾಸವನ್ನು ಕಳೆದುಕೊಂಡ ರಾಷ್ಟ್ರವನ್ನು ಆಮೇಲೆ —ಸಡಿಲವಾದ ದಡವನ್ನು ಹೊಳೆಯ ವೇಗವು ಒಡೆಯುವಂತೆ,— ಹಗೆಗಳು ಬಂದು ಎದುರಿಸಿ, ಅಪಹರಿಸಿಕೊಂಡೊಯ್ಯುತ್ತಾರೆ.

मुहुर्लक्ष्योद्भेदा मुहुरधिगमाभावगहना
मुहुः सम्पूर्णाङ्गी मुहुरतिकृशा कार्यवशतः ।
मुहुर्नश्यद्बीजा मुहुरपि बहु प्रापितफले-
त्यहो चित्राकारा नियतिरिव नीतिर्नयविदः ॥३९॥

अधीकारप्राप्त्या तृणमिव विदन् विश्वमखिलं
नियोगी जातार्तिर्नमति गृहदासीरपि रुदन् ।
नदन् मूर्खोऽज्ञानी बहुदुरुपदेशाधिगमतः
करोति प्राणान्ते शिशुरिव च किं किं न विगुणम् ॥४०॥

अमानुषत्वं पुरुषाधिराजा
विटस्तवैः स्वस्य विचिन्त्य सत्यम् ।
तृतीयमक्ष्यभ्यधिकं भुजौ वा
ममेति मत्वा न विदन्ति मृत्युम् ॥४१॥

विलासहासासनयानदान-
पानाशनाद्या असतीः सतीर्वा ।
छायेव चेष्टाः क्षितिपालवर्गः
परानुकारेण करोति सर्वाः ॥४२॥

निशासु येषां प्रभवन्ति दारा
दिनेष्वमात्या नियताधिकाराः
अहो भ्रमः स्वस्य यदत्र तेऽपि
विदन्ति भूपा प्रभविष्णुभावम् ॥४३॥

स्मरेन्नोपपतिः पूर्वपतिद्रोहं कुयोषितः ।
पूर्वस्वाम्यरितां चाद्य कुभृत्यस्येश्वरो जडः ॥४४॥

೩೯. ರಾಜನೀತಿಜ್ಞನ ನೀತಿಯು ಆವಿರ್ಭಾವವು ಕೆಲವು ಸಲ ಚೆನ್ನಾಗಿ ಗೋಚರವಾಗುತ್ತದೆ, ಕೆಲವು ಸಲ ತಿಳಿಯಲಾರದಷ್ಟು ಗೂಢವಾಗಿ ಹೋಗುತ್ತದೆ, ಮತ್ತೆ ಕೆಲವು ಬಾರಿ ಸರ್ವಾಂಗಸಮನ್ವಿತವಾಗುತ್ತದೆ; ಆ ನೀತಿಯು ಕೆಲವೊಮ್ಮೆ ಗುರಿಗನುಗುಣವಾಗಿ ಬಹು ಸೂಕ್ಷ್ಮವಾಗಿಬಿಡುತ್ತದೆ; ಇಂದು ಅದರ ಮೂಲವೇ ಕಿತ್ತು ಹೋಯ್ತೇನೋ ಎಂದು ತೋರುತ್ತದೆ; ನಾಳೆ ಅದು ಬೇಕಾದಷ್ಟು ಹಣ್ಣು-ಗಳಿಂದ ತುಂಬಿದ್ದಾಗಿ ಕಾಣಿಸುತ್ತದೆ. ಆಹಾ, ಅದು ದೈವದಂತೆ, ಚಿತ್ರ-ವಿಚಿತ್ರ ಆಕೃತಿಗಳುಳ್ಳದ್ದಾಗಿದೆ.

೪೦. ಅಧಿಕಾರ ಸಿಕ್ಕಿದ ಕೂಡಲೇ ಇಡಿ ಜಗತ್ತೇ ಹುಲ್ಲುಕಡ್ಡಿಗೆ ಸಮಾನ-ವೆಂದು ತಿಳಿದುಕೊಳ್ಳುವ ಅಧಿಕಾರಿಯು, ಸಂಕಟವೊದಗಿದಕೂಡಲೇ, ಮನೆಗೆಲಸದ ಹೆಂಗಸರಿಗೆ ಕೂಡ, ಅಳುತ್ತ ನಮಸ್ಕಾರ ಹಾಕುವನು. ದುರ್ಬುದ್ಧಿಯನ್ನು ಬಹಳ ವಾಗಿ ಕಲಿತುಕೊಂಡು, ಮೂರ್ಖನಾದ ಅಜ್ಞಾನಿಯು ಮೊದಲು, ಬೇಕಾದಹಾಗೆ ಕೂಗಾಡಿ, ಕೊನೆಗೆ ಪ್ರಾಣಕ್ಕೆ ಸಂಚಕಾರ ಬಂದಾಗ, ಮಗುವಿನಂತೆ ಯಾವ ಯಾವ ವಿಕೃತ ಚೇಷ್ಟೆಗಳನ್ನು ಮಾಡದಿದ್ದಾನು ?

೪೧. ತನ್ನ ಕುಶೀಲ ಸಂಗಾತಿಗಳ ಹೊಗಳಿಕೆಯಿಂದ ತಮ್ಮಲ್ಲಿ ದೇವತಾ-ಗುಣವಿರುವುದು ಸತ್ಯವೆಂದು ಆಲೋಚಿಸಿ, ದೊರೆಗಳು ತಮಗೆ ಮೂರನೆಯ ಕಣ್ಣಿದೆ, ಅಥವಾ ಎರಡರ ಮೇಲೆ ಮತ್ತೆರಡು ತೋಳುಗಳಿವೆ ಎಂದು ತಿಳಿದು, ತಮ್ಮ ಸಾವನ್ನೇ ತಾವು ತಿಳಿಯದವರಾಗಿರುತ್ತಾರೆ.

೪೨. ಉಡಿಗೆ-ತೊಡಿಗೆಗಳಲ್ಲಿ ವಿಲಾಸ ತೋರುವ, ನಗುವ, ಕುಳಿತು-ಕೊಳ್ಳುವ, ಹೋಗುವ, ದಾನಮಾಡುವ, ಪಾನ ಮಾಡುವ ಮತ್ತು ಉಣ್ಣುವ ಪರ-ಪದ್ಧತಿಗಳೆಲ್ಲವನ್ನೂ-ಅವು ಒಳ್ಳೆಯವುಗಳಾಗಿರಲಿ, ಕೆಟ್ಟವುಗಳಾಗಿರಲಿ-ಅರಸರ ವರ್ಗವು ನೆರಳಿನಂತೆ ಅನುಕರಿಸುತ್ತದೆ.

೪೩. ಕೆಲ ಅರಸರು ಇರುಳಿನಲ್ಲಿ ಹೆಂಡಿರ ಅಧೀನರಾಗಿಯೂ, ಹಗಲಲ್ಲಿ ಮಂತ್ರಿಗಳ ಕೈಗೊಂಬೆಗಳಾಗಿಯೂ ನಡೆದುಕೊಳ್ಳುತ್ತಾರೆ; ಅಂಥವರು ಕೂಡ ತಾವು ಬಹಳ ಪ್ರಭಾವಶಾಲಿಗಳೆಂದು ತಿಳಿದುಕೊಂಡರೆ, ಅವರ ಭ್ರಮೆಯನ್ನು ಎಷ್ಟೆಂದು ಹೇಳಬೇಕು !

೪೪. ಕೆಟ್ಟ ಹೆಂಗಸು ತನ್ನ ಹಿಂದಿನ ಗಂಡನಿಗೆ ಮಾಡಿದ ದ್ರೋಹವನ್ನು ಮಿಂಡನು ನೆನಪಿಟ್ಟುಕೊಳ್ಳುವದಿಲ್ಲ; ಹಾಗೆಯೇ ಬುದ್ಧಿಹೀನನಾದ ಒಡೆಯನು (ರಾಜನು) ಕೆಟ್ಟ ಸೇವಕನು ತನ್ನ ಹಿಂದಿನ ಒಡೆಯನಿಗೆ (ರಾಜನಿಗೆ) ಹಗೆಯಾಗಿ ವರ್ತಿಸಿದ್ದನ್ನು ಈಗ ನೆನಪಿಟ್ಟುಕೊಳ್ಳುವದಿಲ್ಲ.

बुद्धिशस्त्रः प्रकृत्यङ्गो धनसंवृतिकञ्चुकः ।
चारेक्षणो दूतमुखः पुरुषः कोऽपि पार्थिवः ॥४५॥

स्वार्थनिष्पादनपरैर्धनपिशितग्रासगृध्रै-रास्थाननलिनीबकैः:— द्यूतं विनोद इति, परदाराभिगमनं वैदग्ध्यमिति, मृगया श्रम इति, पानं विलास इति, प्रमत्तताशौर्यमिति, स्वदार-परित्यागोऽव्यसनिता चेति, गुरुवचनावधीरणं अपरप्रणेयत्वमिति, अजितभृत्यता सुखोपसेव्यत्व-मिति, नृत्यगीतवाद्यवेश्याभिसक्तिः रसिकतेति, महापराधानाकर्णनं महानुभावतेति, परिभव-सहत्वं क्षमेति, स्वच्छन्दता प्रभुत्वमिति, देवावमाननं महासत्वतेति, वन्दिजनख्यातिर्यश इति, तरलता उत्साह इति, अविशेषज्ञता अपक्षपातित्वमिति, दोषानपि गुणपक्षमध्यारोप-यद्भिरन्तः स्वयमपि विहसद्भिः प्रतारणकुशलै-र्धूर्तैरमानुषोचिताभिः स्तुतिभिः प्रतार्यमाणा वित्तमदमत्तचित्ता निश्चेतनतया तथैवेत्यन्या-रोपितालीकाभिमाना मर्त्यधर्माणोऽपि दिव्यांशावतीर्णमिव सदैव तमिव अतिमानुषं आत्मानमुत्प्रेक्षमाणाः प्रारब्धदिव्योचितचेष्टानुभावाः सर्वजनस्योपहास्यतामुपयान्ति ॥४६॥

೪೫. ರಾಜನು ಬುದ್ಧಿಯನ್ನು ಆಯುಧವನ್ನಾಗಿಯೂ, ಪ್ರಜೆಗಳನ್ನು ಶರೀರವನ್ನಾಗಿಯೂ, ಕಂಡುಹಿಡಿಯಲಾಗದ ಗುಪ್ತ ರಾಜಕೀಯ ವಿಚಾರಗಳನ್ನು ಕವಚವನ್ನಾಗಿಯೂ, ಗುಪ್ತಚಾರರನ್ನು ಕಣ್ಣುಗಳನ್ನಾಗಿಯೂ, ರಾಯಭಾರಿಯನ್ನು ಬಾಯಿಯನ್ನಾಗಿಯೂ ಉಳ್ಳ ಒಬ್ಬ ವಿಚಿತ್ರ ಪುರುಷನು!

೪೬. ರಾಜಸ್ಥಾನವೆಂಬ ತಾವರೆಬಳ್ಳಿಯಲ್ಲಿ ಕೊಕ್ಕರೆಯಂತೆ ಕುಳಿತಿರುವ ಮತ್ತು ಮಾಂಸದ ತುತ್ತಿಗೆ ಕಾದು ಕುಳಿತ ಹದ್ದುಗಳಂತೆ, ಹಣಕ್ಕಾಗಿ ಹಪಹಪಿಸುವ ಚತುರ ಸ್ವಾರ್ಥಸಾಧಕರು—ಜೂಜನ್ನು ವಿನೋದವೆಂದೂ, ಪರಸ್ತ್ರೀಗಮನವನ್ನು ಪಾಂಡಿತ್ಯವೆಂದೂ, ಬೇಟೆಯನ್ನು ವ್ಯಾಯಾಮವೆಂದೂ, ಮದ್ಯಪಾನವನ್ನು ವಿಲಾಸವೆಂದೂ, ಸೊಕ್ಕನ್ನು ಶೌರ್ಯವೆಂದೂ, ತನ್ನ ಹೆಂಡತಿಯನ್ನು ಬಿಡುವುದು ವ್ಯಸನರಹಿತತೆಯೆಂದೂ ಹಿರಿಯರ ಮಾತನ್ನು ಕೇಳದಿರುವುದು ಸ್ವಾತಂತ್ರ್ಯವೆಂದೂ, ಜವಾನರನ್ನು ಅಂಕೆಯಲ್ಲಿಟ್ಟುಕೊಳ್ಳದಿರುವುದು ಅವರ ಬಗ್ಗೆ ಔದಾರ್ಯದಿಂದಿರುವ ದೊಡ್ಡಸ್ತಿಕೆಯೆಂದೂ ಬಣ್ಣಿಸುತ್ತಾರೆ; ಅಲ್ಲದೆ, ಅವರು ಕುಣಿತ, ಸಂಗೀತ, ಪಕ್ಕವಾದ್ಯ ಮತ್ತು ಸೂಳೆಯರಲ್ಲಿ ಆಸಕ್ತಿ ತಳೆಯುವುದು ರಸಿಕತೆಯೆಂದೂ, ದೊಡ್ಡ ತಪ್ಪನ್ನು ಕೂಡ ಕಿವಿಯಮೇಲೆ ಹಾಕಿಕೊಳ್ಳದಿರುವುದು ಮಹಾನುಭಾವಸ್ವಭಾವವೆಂದೂ ಅರ್ಥಯಿಸಿ ಹೇಳುತ್ತಾರೆ; ಇಷ್ಟೇ ಅಲ್ಲ—ಅವಮಾನವನ್ನು ಸಹಿಸಿಕೊಳ್ಳುವುದು ಕ್ಷಮೆ, ಸ್ವಚ್ಛಂದ ವರ್ತನೆಯು ಅಧಿಕಾರಸಂಪನ್ನತೆ, ದೇವರನ್ನು ಹೀಗಳೆಯುವುದು ದೊಡ್ಡ ಬಲಶಾಲಿತ್ವ, ಹೊಗಳುಭಟ್ಟರ ಹೊಗಳಿಕೆಯು ಕೀರ್ತಿ, ಚಂಚಲತೆಯು ಉತ್ಸಾಹ, ವಿಶೇಷಜ್ಞರಾಗದಿರುವುದು ನಿಷ್ಪಕ್ಷಪಾತತೆ, ಎಂದು ಮುಂತಾಗಿ ದೋಷಗಳನ್ನು ಗುಣಗಳೆಂದು ಅವರು ವಿವರಿಸುತ್ತಾರೆ. ಹಾಗೆ ಮುಗ್ಧರೆದುರು (ತರುಣರಾದ ರಾಜಾದಿ ಸರದಾರರೆದುರು) ಹೇಳುವಾಗ ಅವರು ಒಳಗೊಳಗೇ ನಗುತ್ತಿರುತ್ತಾರೆ. ಆ ವಂಚನಾನಿಪುಣರು ಮನುಷ್ಯರಿಗೆ ಹೆಚ್ಚೆನ್ನಿಸುವ ಹೊಗಳಿಕೆಯಿಂದ ಮುಗ್ಧರನ್ನು ಮೋಸಗೊಳಿಸುತ್ತಾರೆ. ಧನಮದಾಂಧರಾದ ಅಂಥ ಮುಗ್ಧರು ಬುದ್ಧಿಸ್ವಾಧೀನತೆಯನ್ನು ಕಳೆದುಕೊಂಡು, ಇತರರು ಹೊರಿಸಿದ ಟೊಳ್ಳು ಅಭಿಮಾನವನ್ನು ತಾಳಿ, ಮನುಷ್ಯ ಸಹಜವಾದ ದೌರ್ಬಲ್ಯ ಉಳ್ಳವರಾಗಿದ್ದೂ, ತಾವು ದೇವರ ಅವತಾರಗಳೇ ಸರಿ ಎಂದುಕೊಂಡು, ಯಾವಾಗಲೂ ತಮ್ಮಲ್ಲಿರುವುದಕ್ಕಿಂತ ಹೆಚ್ಚಿನ ಗುಣಗಳಿವೆಯೆಂದು ತಮ್ಮನ್ನು ತಾವೇ ಮೇಲಕ್ಕೆ ಏರಿಸಿಕೊಂಡು, ದೇವತೆಗಳಿಗೆ ಉಚಿತವಾದ ಮಾತುಕತೆ ಅಭಿನಯಗಳನ್ನು ಅಳವಡಿಸಿಕೊಂಡು, ಎಲ್ಲರ ತಮಾಷೆಗೂ ಗುರಿಯಾಗುತ್ತಾರೆ!

೨. ವೀರಾನುಭವ

वद्धगोधाङ्गुलित्राणा हस्तविष्ठितकार्मुकाः
शराध्मातमहातूणा व्यायताबद्धवाससः ॥४७॥

अथ गृहमहितस्य तस्य पुत्रो
प्रथितयशा रघुपार्थिवः पृथुश्रीः ।
पृथुरिव पृथ्वी प्रसह्य योऽरीन्
+ अकृत पराक्रमतः स्ववंशभोज्याम् ॥४८॥

प्रतिभयसमरेष्वरातिशस्त्रो-
ल्लिखितमुखोऽभिमुखाद् द्विषां प्रहर्ता ।
श्रुतिपथनिपुणो कविः प्रदाता
विविधकलाकुशलः प्रजाप्रियश्च ॥४९॥

साधयत्यसहायोऽपि कार्यमुद्यतपौरुषः ।
सिंहः पातयते मत्तानेक एव मतङ्गजान् ॥५०॥

दोर्दण्डदर्पाद् द्रविडप्रकाण्डं
यः संमुखं धावितमेकवीरम् ।
अभाजनं वीररसस्य चक्रे
बाणोत्करच्छिद्रपरम्पराभिः ॥५१॥

अपरिमितविभूतिस्फीतसामन्तसेना-
मकुटमणिमयूखाक्रान्तपादारविन्दः ।
युधि पतितगजेन्द्रानीकबीभत्सभूतो
भयविगलितहर्षो येन चाकारि हर्षः ॥५२॥

धौतेऽपि कीर्तिधाराभिश्चरिते चारुणि द्विषः ।
मृषामषीलवैर्लक्ष्म लेखितं के न शिल्पिनः ॥५३॥

+ चकर

೨. ವೀರಾನುಭವ

೪೭. (ವೀರರು) ಚರ್ಮದ ರಕ್ಷೆಯನ್ನು ಎಡತೋಳಿಗೆ ಕಟ್ಟಿಕೊಂಡು, ಬೆರಲುಚೀಲಗಳನ್ನು ಹಾಕಿಕೊಂಡು, ಕೈಯಲ್ಲಿ ಬಿಲ್ಲುಗಳನ್ನು ಹಿಡಿದು, ಬಟ್ಟೆಯನ್ನು ಬಿಗಿದುಟ್ಟು, ಅಂಬುಗಳಿಂದ ತುಂಬಿ ಊದಿಕೊಂಡ ದೊಡ್ಡ ಬತ್ತಳಿಕೆಗಳನ್ನು ಧರಿಸಿರುತ್ತಾರೆ.

೪೮. ಮನೆತನದ ದೊಡ್ಡಸ್ತಿಕೆಯುಳ್ಳ ಆತನ (ಭಗೀರಥನ) ಮಗನಾದ ರಘುವು ಪ್ರಸಿದ್ಧವಾದ ಕೀರ್ತಿಯುಳ್ಳವನೂ, ಬಹಳ ಐಶ್ವರ್ಯಸಂಪನ್ನನೂ ಆಗಿದ್ದನು; ಆತನು ಬಲಾತ್ಕಾರದಿಂದ ಶತ್ರುಗಳನ್ನು ಎಳೆದೆಸೆದು, ಪರಾಕ್ರಮದಿಂದ ಭೂಮಿಯನ್ನು ಪೃಥುಮಹಾರಾಜನಂತೆ ತನ್ನ ವಂಶದವರಿಗೆ ಭೋಗ್ಯವನ್ನಾಗಿ ಮಾಡಿದನು.

೪೯. ಭಯಕ್ಕೆ ಪ್ರತಿಭಯವನ್ನುಂಟುಮಾಡುವ, ಕಾಳೆಗಗಳಲ್ಲಿ ಹಗೆಗಳ ಆಯುಧಗಳ ಗುರುತುಗಳನ್ನುಳ್ಳ ಆತನು ಅವರ ಎದುರು ನಿಂತು, (ಅವರನ್ನು) ಹೊಡೆಯುವಂಥವನಾಗಿದ್ದನು; ಮತ್ತು (ಆ ದೊರೆ), ವೇದವೇದಾಂಗಪಾರಂಗತನೂ ಕವಿಯೂ, ಮಹಾದಾನಿಯೂ, ವಿವಿಧ ಲಲಿತಕಲೆಗಳಲ್ಲಿ ಕುಶಲನೂ, ಪ್ರಜಾಪ್ರಿಯನೂ ಆಗಿದ್ದನು.

೫೦. ಮದಿಸಿದ ಆನೆಗಳನ್ನು ಏಕಾಕಿಯಾಗಿ ಸಿಂಹವು ಮುರಿದು ಕೆಡಹುತ್ತದೆ; ಹಾಗೆಯೇ ಪೌರುಷ(ಪಂಥ)ವನ್ನು ಹಿಡಿದವನು ಅಸಹಾಯಕನಾಗಿದ್ದರೂ ಕಾರ್ಯವನ್ನು ಸಾಧಿಸುತ್ತಾನೆ.

೫೧. ದ್ರಾವಿಡದೊರೆಗಳಲ್ಲಿ ಏಕೈಕವೀರನೆನ್ನಿಸಿದವನನ್ನು (೬ನೆಯ ಚಾಲುಕ್ಯ ವಿಕ್ರಮಾರ್ಕನು) ತನ್ನ ಭುಜಬಲಪರಾಕ್ರಮದಿಂದ ಎದುರು ನಿಂತು ಓಡಿಸಿದನು; ಮತ್ತು ಅವನನ್ನು ತನ್ನ ಬಾಣರಾಶಿಯಿಂದ ಮಾಡಿದ ಗಾಯಗಳ ಮೂಲಕ (ಕಾವ್ಯದ) ವೀರರಸಕ್ಕೆ ಅಪಾತ್ರನನ್ನಾಗಿ ಮಾಡಿದನು.

೫೨. ಆತನ (೨ ನೆಯ ಪುಲಿಕೇಶಿಯ) ಪಾದಾರವಿಂದವು ಅಳತೆಗೆ ಮೀರಿದ ಐಶ್ವರ್ಯದಿಂದ ತುಂಬಿದ ಸಾಮಂತ ಅರಸರ ಸಮೂಹದ ಕಿರೀಟಗಳಲ್ಲಿರುವ ನವ-ರತ್ನಗಳ ಕಿರಣಗಳನ್ನು ಆಕ್ರಮಿಸಿತು; ಯುದ್ಧದಲ್ಲಿ ಬಿದ್ದ ಆನೆಗಳೊಡೆಯರ ರಾಶಿಯು ದೆಸೆಯಿಂದ ಜುಗುಪ್ಸೆಗೀಡಾದ ಹರ್ಷವರ್ಧನನು ಈತನಿಂದ ಭಯಕ್ಕೆ ತುತ್ತಾಗಿ, ಹರ್ಷವನ್ನು ಕಳೆದುಕೊಂಡನು.

೫೩. ಕೀರ್ತಿಧಾರೆಗಳಿಂದ ಹಗೆಯ ಚೆಲುವಾದ ಚರಿತವು ಶುಭ್ರವಾಗಿದ್ದರೂ ಅಸತ್ಯವೆಂಬ ಮಸಿವನಿಯಿಂದ ಅದಕ್ಕೆ ಕಲಂಕವನ್ನು ಬರೆಯಲು ಯಾರು ಚತುರರಾಗರು?

जाग्रतामपि निद्रा यः पश्यतामपि योऽन्धता
श्रुते सत्यपि जाड्यं यः प्रकाशेऽपि च यस्तमः ।।५४।।

रथः शरीरं पुरुषस्य दृष्टं
आत्मा नियन्तेन्द्रियाण्याहुरश्वाः ।
तैरप्रमत्तः कुशलः सदश्वैर्
दान्तैः कृती याति पदं स धीरः ।।५५।।

हतो वा प्राप्स्यसि स्वर्गं जित्वा वा भोक्ष्यसे महीम् ।
तस्मादुत्तिष्ठ कौन्तेय युध्दाय कृतनिश्चयः ।।५६।।

क्लैब्यं मा स्म गमः पार्थ नैतत् त्वय्युपपद्यते ।
क्षुद्रं हृदयदौर्बल्यं त्यक्त्वोत्तिष्ठ परंतप ।।५७।।

जातस्य हि ध्रुवो मृत्युः, ध्रुवं जन्म मृतस्य च ।
तस्मादपरिहार्येऽर्थे न त्वं शोचितुमर्हसि ।।५८।।

उद्यम्य धुरमुत्कर्षेदाजानेयकृतं स्मरन्
कुरु सत्वं च मानं च विध्दि पौरुषमात्मनः ।।५९।।

राशिवर्धनमात्रं स नैव स्त्री न पुनः पुमान्
दाने तपसि सत्ये च यस्य नोच्चरितं यशः ।।६०।।

ज्वल मूर्धन्यमित्राणां मुहूर्तमपि वा क्षणम् ।
एतावानेव पुरुषो यदमर्षी यदक्षमी ।।६१।।

आयसं हृदयं कृत्वा मृगयस्व पुनः स्वकम् ।
परं विषहते यस्मात् तस्मात् पुरुष उच्यते ।।६२।।

क्षुत्क्षामोऽपि जराकृशोऽपि शिथिलप्रायोऽपि कष्टांदशा-
मापन्नोऽपि विपन्नदीधितिरपि प्राणेषु नश्यत्स्वपि ।
मत्तेभेन्द्र विभिन्नकुम्भपिशित ग्रासैकबद्धस्पृहः
किं जीर्णं तृणमत्ति मानमहतामग्रेसरः केसरी ।।६३।।

೫೪. ಮೋಹವೆಂಬುದು ಎಚ್ಚತ್ತಿರುವವನಲ್ಲಿ ನಿದ್ರೆಯಾಗಿರುತ್ತದೆ; ನೋಡುತ್ತಿರುವವನಲ್ಲಿ ಕುರುಡುತನವಾಗಿರುತ್ತದೆ: ಶಾಸ್ತ್ರಜ್ಞರಲ್ಲಿ ಮಂದಮತಿತ್ವವಾಗಿರುತ್ತದೆ; ಮತ್ತು ಪ್ರಕಟವಾದ ಅರ್ಥದಲ್ಲಿಯೂ ಅದನ್ನು ತಿಳಿಯಗೊಡದಂತೆ, ಮಾಡುವ ಪ್ರತಿಬಂಧಕವಾಗಿರುತ್ತದೆ.

೫೫. ಮನುಷ್ಯನಿಗೆ ದೇಹವು ತೇರು, ಆತ್ಮನು ಸಾರಥಿಯು, ಇಂದ್ರಿಯಗಳು ಕುದುರೆಗಳು; ಅವುಗಳಿಂದ ಮತ್ತನಾಗದೆ ನಿಪುಣನಾಗಿ ಹಿಡಿತದಲ್ಲಿಟ್ಟುಕೊಂಡ ಒಳ್ಳೆಯ ಕುದುರೆಗಳ ಮೂಲಕ ಯಶಸ್ವಿಯಾಗಿ ಮುನ್ನಡೆಯುವವನೇ ಧೀರನು.

೫೬–೫೭–೫೮. ಹತನಾದರೆ ಸ್ವರ್ಗವನ್ನು ಹೊಂದುವೆ: ಜಯ ಪಡೆದರೆ ರಾಜ್ಯವನ್ನು ಅನುಭವಿಸುವೆ; ಆದುದರಿಂದ, ಅರ್ಜುನನೇ, ಯುದ್ಧ ಮಾಡಲು ನಿಶ್ಚಯಿಸಿ, ಎದ್ದೇಳು. ಎಲೈ ಹಗೆಗಳನ್ನು ಸುಡಬಲ್ಲ ಅರ್ಜುನ, ಹೇಡಿಯಾಗದಿರು: ಇದು ನಿನಗೆ ತಕ್ಕದ್ದಲ್ಲ; ಕ್ಷುದ್ರವಾದ ಮನೋದೌರ್ಬಲ್ಯವನ್ನು ಬಿಟ್ಟು ನೀನು ಎದ್ದೇಳು. ಹುಟ್ಟಿದವನಿಗೆ ಸಾವು ನಿಶ್ಚಿತ, ಸತ್ತವನಿಗೆ ಹುಟ್ಟು ನಿಶ್ಚಿತ; ಆದುದರಿಂದ ತಪ್ಪಿಸಲಾಗದ ವಿಷಯದಲ್ಲಿ ನೀನು ಚಿಂತಿಸುವುದು ತರವಲ್ಲ !

೫೯, ೬೦, ೬೧, ೬೨. ಯುದ್ಧದಲ್ಲಿ ಜಾತ್ಯಶ್ವಗಳು ಧೈರ್ಯದಿಂದ ನಿಂತುದನ್ನು ನೆನೆದು, ನೀನು ಪ್ರಯತ್ನಿಸಿ, ಹೊಣೆಯನ್ನು ಹೊರಬೇಕು; ಧೈರ್ಯ ತಾಳು, ಸಿಡಿದೇಳು, ನಿನ್ನ ಪೌರುಷವನ್ನು ಅರಿತುಕೋ ! ದಾನದಲ್ಲಿ, ತಪಸ್ಸಿನಲ್ಲಿ ಅಥವಾ ಸತ್ಯದಲ್ಲಿ ಒಬ್ಬನ ಕೀರ್ತಿಯನ್ನು ಯಾರೂ ಹೇಳದಿದ್ದರೆ, ಅಂಥವನು ಹೆಣ್ಣೂ ಅಲ್ಲ, ಗಂಡೂ ಅಲ್ಲ—ಕೇವಲ ಸಂಖ್ಯಾಭಿವೃದ್ಧಿಗೆ ಕಾರಣನು. ಹಗೆಗಳ ತಲೆಯ ಮೇಲೆ ಒಂದು ನಿಮಿಷವಾಗಲಿ ಕ್ಷಣ ಮಾತ್ರವಾಗಲಿ, ಉರಿ ! ಹಗೆಗಳನ್ನು ಕ್ಷಮಿಸದ ಮತ್ತು ಸಹಿಸದ ಮನುಷ್ಯನೇ ಗಂಡಸು ! ಹೃದಯವನ್ನು ಕಬ್ಬಿಣವನ್ನಾಗಿ ಮಾಡಿಕೊಂಡು, ನಿನ್ನ ಧನಾದಿಸ್ವತ್ತುಗಳನ್ನು ಪುನಃ ಹುಡುಕು (ಹುಡುಕಿ ಪಡೆ.) ಹಗೆಯನ್ನು ಎದುರಿಸಿ, ತನ್ನದನ್ನು ಉಳಿಸಿಕೊಳ್ಳುವುದರಿಂದಲೇ ಗಂಡಸು ಗಂಡಸೆನ್ನಿಸುತ್ತಾನೆ !

೬೩. ಹಸಿವಿನಿಂದ ಕ್ಷೀಣವಾಗಿದ್ದರೂ, ಮುಪ್ಪಿನಿಂದ ಬಡಕಲಾಗಿದ್ದರೂ ಶರೀರವು ಸಡಿಲಾದಂತಿದ್ದರೂ, ಕಷ್ಟದಲ್ಲಿ ಬಿದ್ದಿದ್ದರೂ, ತೇಜಸ್ಸು ಉಡುಗಿ ಹೋಗಿದ್ದರೂ, ಪ್ರಾಣವೇ ಹೋಗುವಂತಾಗಿದ್ದರೂ, ಮದಿಸಿದ ಬಲಿಷ್ಠ ಆನೆಯ, ಒಡೆದ ಕುಂಭಸ್ಥಳದ ಮಾಂಸದ ತುತ್ತನ್ನೇ ತಿನ್ನಬೇಕೆಂಬ ಬಯಕೆಯುಳ್ಳ, ಮಾನಕ್ಕೆ ಮಹತ್ವ ಕೊಡುವವರಲ್ಲಿ ಅಗ್ರಗಣ್ಯವಾದ, ಸಿಂಹವು (ಎಂದಾದರೂ) ಒಣಹುಲ್ಲನ್ನು ತಿಂದೀತೇ ?

अम्बरत्यम्बरं यद्वत् समुद्रोऽपि समुद्रति ।
विक्रमार्कमहीपाल तथा त्वं विक्रमार्कसि ॥६४॥

लोकालोकव्याहृतं घर्मरश्मेः
शालीनं वा धाम नालं प्रसर्तुम् ।
लोकस्याग्रे पश्यतो धृष्टमाशु
क्रामत्युच्चैर्भूभृतो यस्य तेजः ॥६५॥

स्ववीर्यं यः समाश्रित्य समाह्वयति वै परान् ।
अभीतो युध्यते शत्रून् स वै पुरुष उच्यते ॥६६॥

परवीर्यं समाश्रित्य यः समाह्वयते परान् ।
क्षत्रबन्धुरशक्तत्वाल्लोके स पुरुषाधमः ॥६७॥

यदा धृतिं कुरुते योत्स्यमानः
स दीर्घबाहुर्दृढधन्वा महात्मा ।
सिंहस्येव गन्धमाघ्राय गावः
सञ्चेष्टन्ते शत्रवोऽस्माद्रणाग्रे ॥६८॥

सन्त्यन्येऽपि बृहस्पतिप्रभृतयः सम्भाविताः पञ्चषा–
स्तान् प्रत्येष विशेषविक्रमरुची राहुर्न वैरायते ।
द्वावेव ग्रसते दिवाकरनिशाप्राणेश्वरौ भास्वरौ
भ्रातः पर्वणि पश्य दानवपतिः शीर्षावशेषाकृतिः ॥६९॥

निन्दन्तु नीतिनिपुणा यदि वा स्तुवन्तु
लक्ष्मीः समाविशतु गच्छतु वा यथेष्टम् ।
अद्यैव वा मरणमस्तु युगान्तरे वा
न्याय्यात् पथः प्रविचलन्ति पदं न धीराः ॥७०॥

೬೪. ಎಲೈ ವಿಕ್ರಮಾದಿತ್ಯ ದೊರೆಯೇ, ಬಾನು ಬಾನಿಸುವಂತೆ, (ಎಲ್ಲವನ್ನೂ ಒಳಗೊಳ್ಳುವ ಪರಾಕ್ರಮವನ್ನು ತೋರುವಂತೆ), ಕಡಲು ಕಡಲಿಸುವಂತೆ (ಅದೇ ಪ್ರಕಾರ ಗರ್ಜಿಸಿ, ತರ್ಜಿಸಿ, ಭೂಮಿಯ ಬಹ್ವಂಶವನ್ನು ಆಕ್ರಮಿಸಿರುವಂತೆ), ನೀನು ವಿಕ್ರಮಾರ್ಕಿಸಿರುವೆ. (ಸಮಸ್ತ ಸಾಮಂತರ ರಾಜ್ಯಗಳನ್ನಾಕ್ರಮಿಸಿ, ಅವರ ಮೇಲೆ ಪ್ರಭುತ್ವವನ್ನು ಸ್ಥಾಪಿಸಿಕೊಂಡಿರುವೆ) !

೬೫. ಸೂರ್ಯನ ತೇಜಸ್ಸು ಲೋಕಾಲೋಕಪರ್ವತ ಅಡ್ಡ ಬಂದುದರಿಂದ ಮುಂದೆ ಪಸರಿಸಲಾರದೆ, ನಾಚಿಕೊಂಡಂತೆ ತೋರುತ್ತದೆ; ಆದರೆ ವೀರದೊರೆಗಳ ತೇಜಸ್ಸು ನೋಡುತ್ತಿರುವ ಲೋಕದೆದುರಿಗೇ ಅಡೆ-ತಡೆಗಳಿಲ್ಲದೆ, ಆಗಿಂದಾಗ ಎತ್ತರಕ್ಕೆ ಏರಿ ಹಬ್ಬುತ್ತದೆ !

೬೬–೬೭. ತನ್ನ ಪರಾಕ್ರಮವನ್ನೇ ಅವಲಂಬಿಸಿ, ಹಗೆಗಳನ್ನು ಯುದ್ಧಕ್ಕೆ ಕರೆದು, ಹೆದರದೆ ಅವರೊಡನೆ ಹೋರುವವನು ಗಂಡಸೆಂದು ಹೇಳಿಸಿಕೊಳ್ಳುತ್ತಾನೆ; ಹಾಗಲ್ಲದೆ, ಇನ್ನೊಬ್ಬರ ಪರಾಕ್ರಮವನ್ನು ಆಧರಿಸಿ, ಹಗೆಗಳನ್ನು ಕಾಳಗಕ್ಕೆ ಆಹ್ವಾನಿಸುವ ಹೀನ ಕ್ಷತ್ರಿಯನು ತನ್ನ ದೌರ್ಬಲ್ಯದ ದೆಸೆಯಿಂದ ಪುರುಷಾಧಮನೆನ್ನಿಸಿಕೊಳ್ಳುತ್ತಾನೆ.

೬೮. ಯುದ್ಧ ಮಾಡುವವನು ಧೈರ್ಯ ತಾಳಿದರೆ ಆಗ ಅವನೇ ನೀಳ್-ದೋಳಿನವನು, ಅವನೇ ಗಟ್ಟಿಯಾಗಿ ಬಿಲ್ಲನ್ನು ಹಿಡಿದಂಥವನು, ಅವನೇ ಮಹಾ ಆತ್ಮಶಕ್ತಿಸಂಪನ್ನನು; ಸಿಂಹದ ವಾಸನೆಯನ್ನು ಮೂಸಿ ತಿಳಿದು, ಹಸುಗಳು ಮಾಡುವಂತೆ, ಅಂಥವನಿಂದ ರಣರಂಗದ ಮುಂಚೂಣಿಯಲ್ಲಿ ನಿಂತ ಹಗೆಗಳು ಗಾಬರಿಗೆಟ್ಟು, ದೂರ ಓಡುತ್ತಾರೆ !

೬೯. ಸೋದರ, ಹುಣ್ಣಿಮೆ–ಅಮಾವಾಸ್ಯೆಗಳಲ್ಲಿ ನೋಡು — ತಲೆಯನ್ನಷ್ಟೇ ಉಳಿಸಿಕೊಂಡಿರುವ ರಾಕ್ಷಸರೊಡೆಯನಾದ ಈ ರಾಹುವು, ವಿಶೇಷ ಪರಾಕ್ರಮದಲ್ಲಿ ಅಭಿರುಚಿಯುಳ್ಳವನಾದುದರಿಂದ, ತಕ್ಕವರಾದ ಬೃಹಸ್ಪತಿ ಮೊದಲಾದ ಐದಾರು ಜನರು (ದೇವಲೋಕದಲ್ಲಿ) ಇದ್ದರೂ, ಅವರಲ್ಲಿ ವೈರವನ್ನು ಸಾಧಿಸಲಿಲ್ಲ; (ತದ್ವಿರುದ್ಧವಾಗಿ) ಆತನು ಪ್ರಕಾಶಮಾನರಾದ ಸೂರ್ಯ – ಚಂದ್ರರಿಬ್ಬರನ್ನೇ ನುಂಗುತ್ತಾನೆ !

೭೦. ಶಾಸ್ತ್ರಜ್ಞರು ತೆಗಳಲಿ ಅಥವಾ ಹೊಗಳಲಿ; ಐಶ್ವರ್ಯವು ಬರಲಿ ಅಥವಾ ಅಡೆತಡೆಯಿಲ್ಲದೆ ಹೊರಟು ಹೋಗಲಿ; ಈಗಲೇ ಸಾವು ಬರಲಿ ಅಥವಾ ಕಲ್ಪಾಂತರ ಕಳೆದ ಮೇಲೆ ಬರಲಿ— ಏನೇ ಆದರೂ ಧೀರರು ನ್ಯಾಯವಾದ ಮಾರ್ಗವನ್ನು ಬಿಟ್ಟು (ಬೇರೆ ಮಾರ್ಗದಲ್ಲಿ) ಹೆಜ್ಜೆ ಇಡರು !

अवन्ध्यकोपस्य विहन्तुरापदां
भवन्ति वश्याः स्वयमेव देहिनः ।
अमर्षशून्येन जनस्य जन्तुना
न जातहार्देन न विद्विषादरः ॥७१॥

त्यक्तग्राम्यसुखाः पार्थ नित्यं वीरसुखप्रियाः
न तु स्वल्पेन तुष्येयुर्महोत्साहा महाबलाः ॥७२॥

कामार्थौ लिप्स्यमानस्तु धर्ममेवादितश्चरेत्
न हि धर्मादपैत्यर्थ : कामो वाऽपि कदाचन ॥७३॥

रत्नैर्महाब्धेस्तुतुषुर्न देवा
न भेजिरे भीमविषेण भीतिम् ।
सुधां विना न प्रययुर्विरामं
न निश्चितार्थाद्विरमन्ति धीरा : ॥७४॥

इमे वङ्गाः पौण्ड्रा मगधनरपा कोसलनृपा
अमी कालिङ्गान्ध्रा द्रविडनरनाथास्त्वसुहृदाः ।
विशीर्णाश्शस्त्रौघैर्नरपतिविमुक्तैरिति जनाः
प्रशंसा यस्यालं विदधुरनिशं सामियरणे ॥७५॥

೩. ಸಾಮಾಜಿಕ ಅನುಭವ

सबन्धुर्यो हिते युक्तः स विना यस्तु पोषकः ।
तन्मित्रं यत्र विश्वासः स देशो यत्र जीव्यते ॥७६॥

स जीवति गुणा यस्य धर्मो यस्य स जीवति ।
गुणधर्मविहीनो यो निष्फलं तस्य जीवनम् ॥७७॥

दुष्टा भार्या शठं मित्रं भृत्यश्चोत्तरदायकः ।
ससर्पे च गृहे वासो मृत्युरेव न संशयः ॥७८॥

೭೧. ಆಪತ್ತುಗಳನ್ನು ಸದೆಬಡಿಯಬಲ್ಲ ಹಾಗೂ ತನ್ನ ಸಿಟ್ಟನ್ನು ಬಂಜೆ-ಯಾಗಗೊಡದ ಮನುಷ್ಯನಿಗೆ ಎಲ್ಲರೂ ತಾವಾಗಿಯೇ ವಶವರ್ತಿಗಳಾಗುವರು: ಸಿಟ್ಟೇ ಬಾರದಂತಹ ಮಿತ್ರನ ಅಥವಾ ಶತ್ರುವಿನ ಬಗೆಗೆ ಜನರಿಗೆ ಆದರ ಉಂಟಾಗದು. (ಅಥವಾ ಮಿತ್ರನ ಬಗೆಗೆ ಆದರ ಹುಟ್ಟದು, ಶತ್ರುವಿನ ಬಗೆಗೆ ಭಯ ಉಂಟಾಗದು).

೭೨–೭೩. ಪಾಂಡವರು ಅಸಂಸ್ಕೃತ ಸುಖವನ್ನು ಬಿಟ್ಟು, ನಿತ್ಯವೂ ವೀರ ಸಹಜವಾದ ಸುಖವನ್ನು ಬಯಸುವವರು; ಬಲಿಷ್ಠರೂ, ಬಹಳ ಉತ್ಸಾಹಶಾಲಿಗಳೂ ಆದವರು ಅಲ್ಪದಿಂದ ಎಂದೂ ತೃಪ್ತರಾಗರು. ಕಾಮ, ಅರ್ಥಗಳನ್ನು (ಪುರುಷಾರ್ಥಗಳಲ್ಲಿ ಎರಡನ್ನು) ಬಯಸುವವರು ಮೊದಲು ಧರ್ಮವನ್ನೇ ಆಚರಿಸಬೇಕು: ಅರ್ಥವಾಗಲಿ, ಕಾಮವಾಗಲಿ—ಎಂದೂ ಧರ್ಮವನ್ನು ಬಿಟ್ಟಿರದು.

೭೪. ದೇವತೆಗಳು ಮಹಾಸಮುದ್ರದಲ್ಲಿ ಸಿಕ್ಕಿದ ಬಹಳ ಬೆಲೆಯುಳ್ಳ ರತ್ನಗಳಿಂದ ತೃಪ್ತರಾಗಲಿಲ್ಲ; ಭಯಂಕರವಾದ ವಿಷದಿಂದ ಅವರು ಹೆದರಲಿಲ್ಲ; ಅಮೃತ ಸಿಗುವ ವರೆಗೆ ಪ್ರಯತ್ನವನ್ನವರು ನಿಲ್ಲಿಸಲಿಲ್ಲ; ಹೀಗೆ ಧೀರರು (ತಮ್ಮ) ನಿಶ್ಚಿತವಾದ ಗುರಿಯನ್ನೇ ಮುಟ್ಟದೆ ನಿಲ್ಲುವುದಿಲ್ಲ.

೭೫. "ಇವರು ಬಂಗಾಳಿಗಳು, ಇವರು ಪೌಂಡ್ರಕರು, ಇವರು ಮಗಧ ದೇಶದರಸರು, ಇವರು ಕೋಸಲ ದೇಶದರಸರು, ಇವರು ಕಳಿಂಗ (ಒಡಿಸ್ಸಾ) ದೇಶದವರು, ಇವರು ಆಂಧ್ರರು, ಇವರು ತಮಿಳರೊಡೆಯರು; ಈ ಎಲ್ಲ ಹಗೆಗಳೂ ನಮ್ಮ ದೊರೆ (ವಿನಯ ರಾಜಮಲ್ಲ) ಎಸೆದ ಆಯುಧಗಳಿಂದ ಸಾಮಿಯ ರಣಾಂಗಣದಲ್ಲಿ ಚದುರಿಹೋದರು" ಎಂದು ನಿತ್ಯವೂ ಜನರು ಮಾಡಿದ ಪ್ರಶಂಸೆಯೇ (ನಮ್ಮ ದೊರೆಯ ಕೀರ್ತಿಯನ್ನು ಹೇಳಲು) ಸಾಕು!

೩. ಸಾಮಾಜಿಕ ಅನುಭವ

೭೬. ನಮಗೆ ಹಿತಕಾರಿಯಾದವನು ನೆಂಟ; ಪೋಷಕನಾದವನು ತಂದೆ; ವಿಶ್ವಾಸಕ್ಕೆ ಪಾತ್ರನಾದವನು ಗೆಳೆಯ: ಜೀವನಕ್ಕೆ ಅನುಕೂಲ ಮಾಡಿಕೊಟ್ಟಿರುವುದು (ಸ್ವ)ದೇಶ.

೭೭. ಗುಣಿಯ ಬದುಕೇ ಬದುಕು; ಧರ್ಮಿಷ್ಠನ ಬದುಕೇ ಬದುಕು; ಗುಣ, ಧರ್ಮಗಳಿಲ್ಲದವನ ಬದುಕು ನಿಷ್ಫಲವಾದುದು.

೭೮. ಕೆಟ್ಟ ಹೆಂಡತಿ, ವಿಶ್ವಾಸಘಾತಕನಾದ ಗೆಳೆಯ, ಎದುರುತ್ತರ ಕೊಡುವ ಆಳು ಮತ್ತು ಸರ್ಪ ನೆಲೆಸಿರುವ ಮನೆಯಲ್ಲಿಯ ವಾಸ — ಇವು ಸಾವೇ ಸರಿ: ಇದರಲ್ಲಿ ಸಂಶಯವಿಲ್ಲ.

कान्तावियोगः स्वजनापमानं
ऋणस्य शेषः कुजनस्य सेवा ।
दारिद्र्यभावाद्विमुखं च मित्रं
विनाग्निना पञ्च दहन्ति तीव्राः ॥७९॥

जयन्ति जितमत्सरा परहितार्थमभ्युद्यताः
पराभ्युदयमुस्थिताः परविपत्तिखेदाकुलाः ।
महापुरुषसत्कथाश्रवणजातकौतूहलाः
समस्तदुरितार्णवप्रकटसेतवः साधवः ॥८०॥

रक्षन् परसंस्पर्शं शौचार्थी ब्रह्मलोकेऽपि
दम्भः पुरोऽस्य नस्थावुत्थित एवासनाकांक्षी ॥८१॥

वचने बाह्लीकानां व्रतनियमे प्राच्यदाक्षिणात्यानाम् ।
अधिकारे कीराणां दम्भः सर्वत्र गौडानाम् ॥८२॥

दम्भविकारः पुरतो वञ्चकचक्रस्य कल्पवृक्षोऽयम्
वामनदम्भेन पुरा हरिणा त्रैलोक्यमाक्रान्तम् ॥८३॥

कदर्थितस्यापि हि धैर्यवृत्तेर्
न शक्यते सर्वगुणप्रमाथः ।
अधः खलेनापि कृतस्य वह्नेर्
नाधः शिखा याति कदाचिदेव ॥८४॥

अर्थेन किं कृपणहस्तगतेन केन
ज्ञानेन किं बहुशठाग्रहसङ्कुलेन ।
रूपेण किं गुणपराक्रमवर्जितेन
मित्रेण किं व्यसनकालपराङ्मुखेन ॥८५॥

अहिंसा सूनृता वाणी सत्यं शौचं दया क्षमा ।
वर्णिनां लिङ्गिनां चैव सामान्यो धर्म इष्यते ॥८६॥

೭೯. ಹೆಂಡತಿಯ ಅಗಲುವಿಕೆ, ಸ್ವಜನರಿಗೆ ಅವಮಾನವಾಗುವುದು, ಸಾಲದ ಬಾಕಿ, ದುರ್ಜನರ ಸೇವೆ, ಬಡತನದ ದೆಸೆಯಿಂದ ಗೆಳೆಯ ದೂರ ಸರಿಯುವುದು— ಎಂಬ ಈ ಐದು ತೀಕ್ಷ್ಣ ಅನುಭವಗಳು ಮನುಷ್ಯನನ್ನು ಬೆಂಕಿಯಿಲ್ಲದೆ ಸುಡಬಲ್ಲವು.

೮೦. ಮತ್ಸರವನ್ನು ಗೆದ್ದವರು, ಪರರ ಹಿತಕ್ಕಾಗಿ ದುಡಿಯುವವರು, ಪರರ ಅಭ್ಯುದಯದಿಂದ ಸಮಾಧಾನ ಪಡುವವರು, ಪರರಿಗೆ ಸಂಕಟ ಬಂದಾಗ ಮರುಗುವವರು, ಮಹಾಪುರುಷರ ಸಮಾಚಾರವನ್ನು ಕೇಳುವುದರಲ್ಲಿ ಕುತೂಹಲ ವುಳ್ಳವರು ಯೋಗ್ಯರೆಂದೆನ್ನಿಸುತ್ತಾರೆ; ಅವರು ಎಲ್ಲ ಪಾಪಸಮುದ್ರಗಳನ್ನು ದಾಟಲು ಸೇತುವಾಗಿದ್ದಾರೆ; ಆದ್ದರಿಂದ ಲೋಕಜೀವನದಲ್ಲಿ ಯಶಸ್ವಿಗಳೆನ್ನಿಸುತ್ತಾರೆ.

೮೧. ಮಡಿವಂತನು ಬ್ರಹ್ಮಲೋಕದಲ್ಲಿ ಕೂಡ ಇನ್ನೊಬ್ಬರು ತನ್ನನ್ನು ಮುಟ್ಟಿಯಾರು, ಎಂದು ಕಾಯ್ದುಕೊಳ್ಳುತ್ತಾನೆ; ತನ್ನ ಆಸನವನ್ನು ಬಿಟ್ಟು ಏಳು ವಷ್ಟರಲ್ಲಿಯೇ ಅದರ ಮೇಲೆ ಕುಳಿತುಕೊಳ್ಳಬೇಕೆಂಬ ಆಸೆಯನ್ನಿಟ್ಟುಕೊಂಡಿರುವಂಥ ಅವನೆದುರು ದಂಭವು ನಿಂತಿರುತ್ತದೆ!

೮೨. ಮಾತಿನಲ್ಲಿ ಬಾಹ್ಲೀಕರೂ (ಪಂಜಾಬಿಗಳೂ), ವ್ರತನಿಯಮಗಳಲ್ಲಿ ಪೂರ್ವ ಮತ್ತು ದಕ್ಷಿಣ ಭಾರತೀಯರೂ, ಅಧಿಕಾರದಲ್ಲಿ ಕಾಶ್ಮೀರಿಗಳೂ ಈ ಎಲ್ಲವುಗಳಲ್ಲೂ ಗೌಡರೂ (ಬಂಗಾಳಿಗಳೂ) ಡಾಂಭಿಕರು!

೮೩. ದಂಭವಿಕಾರವು ವಂಚಕರೆದುರಿಗಿರುವ ಕಲ್ಪವೃಕ್ಷ; ಹಿಂದೆ ವಾಮನಾವತಾರದ ದಂಭದಿಂದ ವಿಷ್ಣುವು ಮೂರು ಲೋಕಗಳನ್ನು ಆಕ್ರಮಿಸಿದನು.

೮೪. ಬೆಂಕಿಯನ್ನು ದುಷ್ಟನೊಬ್ಬನು ಕೆಳಮುಖ ಮಾಡಿ ಹಿಡಿದರೂ, ಅದರ ಉರಿಯು ಎಂದೂ ಕೆಳಮುಖವಾಗದು; ಹಾಗೆಯೇ ಧೀರವೃತ್ತಿಯವನನ್ನು ಹೀಯಾಳಿಸಿದರೂ ಅವನಲ್ಲಿರುವ ಎಲ್ಲ ಗುಣಗಳನ್ನೂ ನಾಶಮಾಡಲು ಸಾಧ್ಯವಾಗದು.

೮೫. ಜಿಪುಣನ ಕೈಗೆ ಹೋದ ಯಾವ ಹಣದಿಂದ ಏನು ಪ್ರಯೋಜನ? ಶಾಠ್ಯ-ಆಗ್ರಹಗಳಿಂದ ಕೂಡಿದ ಯಾವ ಜ್ಞಾನದಿಂದ ಏನು ಉಪಯೋಗ? ಗುಣ-ಪರಾಕ್ರಮಗಳಿಲ್ಲದ ಯಾವ ರೂಪದಿಂದ ಏನು ಫಲ? ಕಷ್ಟಕಾಲದಲ್ಲಿ ತಿರುಗಿ ನೋಡದ ಯಾವ ಗೆಳೆಯನಿಂದ ಏನು ಲಾಭ?

೮೬. ಅಹಿಂಸೆ, ಒಳ್ಳೆಯ ಮಾತು, ಸತ್ಯಸಂಧತೆ, ನಿರ್ಮಲವಾದ ನಡತೆ, ದಯೆ, ಕ್ಷಮೆಗಳು ವರ್ಣಾಶ್ರಮಧರ್ಮವನ್ನು ಪಾಲಿಸುವ ಹಾಗೂ ಪಾಲಿಸದ ಸರ್ವರಿಗೂ ಸಾಮಾನ್ಯವಾದ ಧರ್ಮ.

दाक्षिण्यं स्वजने दया परिजने शाठ्यं सदा दुर्जने
प्रीतिः साधुजने नयो नृपजने विद्वज्जने चार्जवम् ।
शौर्यं शत्रुजने क्षमा गुरुजने कान्ताजने धृष्टता
ये चैवं पुरुषाः कलासु कुशलास्तेष्वेव लोकस्थितिः ॥८७॥

इदं तत् स्नेहसर्वस्वं सममाढ्यदरिद्रयोः ।
अचन्दनमनौशीरं हृदयस्यानुलेपनम् ॥८८॥

दारिद्र्यात् ह्रियमेति ह्रीपरिगतः प्रभ्रश्यते तेजसो
निस्तेजाः परिभूयते परिभवान्निर्वेदमापद्यते ।
निर्विण्णः शुचमेति शोकविहतो बुध्या परित्यज्यते
निर्बुद्धिः क्षयमेत्यहो निधनता सर्वापदामास्पदम् ॥८९॥

यशःसौरभ्यलशुनः शान्तिशैत्यहुताशनः
कारुण्यकुसुमाकाशः पिशुनः केन वर्ण्यते ॥९०॥

वरं कार्यं मौनं न च वचनमुक्तं यदनृतं
वरं क्लैब्यं पुंसां न च परकलत्राभिगमनम् ।
वरं प्राणत्यागो न च पिशुनवाक्येष्वभिरतिर्
वरं भिक्षाशित्वं न च परधनास्वादनसुखम् ॥९१॥

शास्त्राण्यधीत्यापि भवन्ति मूर्खा
यस्तु क्रियावान् पुरुषः स विद्वान् ।
सञ्चिन्तितं त्वौषधमातुरं हि
किं नाममात्रेण करोत्यरोगम् ॥९२॥

उपकर्तुमनुपकर्तुः प्रियाणि कर्तुं कृतान्यनुस्मर्तुम् ।
विनिपतितांश्चोद्धर्तुं कुलान्वितानामुचितमेतत् ॥९३॥

೮೭. ಸ್ವಜನರಲ್ಲಿ ದಾಕ್ಷಿಣ್ಯ, ನೌಕರರಲ್ಲಿ ದಯೆ, ದುಷ್ಟರಲ್ಲಿ ಶಾಠ್ಯ (ಅಪ್ರಿಯವಾಗಿ ವರ್ತಿಸುವುದು), ಸುಸ್ವಭಾವದವರಲ್ಲಿ ಪ್ರೀತಿ, ರಾಜವರ್ಗದವರಲ್ಲಿ ಕಾಯಿದೆಬದ್ಧವಾದ ನಡತೆ, ವಿದ್ವಾಂಸರಲ್ಲಿ ಮುಚ್ಚುಮರೆ ಇಲ್ಲದಿರುವುದು, ಶತ್ರುಗಳಲ್ಲಿ ಶೌರ್ಯ, ಹಿರಿಯರಲ್ಲಿ ಕ್ಷಮೆ, ಸ್ತ್ರೀಯರಲ್ಲಿ ಪ್ರಾಗಲ್ಭ್ಯ (ವಶವರ್ತಿಯಾಗದಿರುವುದು)— ಎಂಬ ಕಲೆಗಳಲ್ಲಿ ಯಾವಾಗಲೂ ನಿಪುಣರಾಗಿರುವವರಿಗೆ ಮಾತ್ರ ಲೋಕಮರ್ಯಾದೆ ಸಿಗುತ್ತದೆ.

೮೮. ಈ ಸ್ನೇಹಸಾರವು ಬಡವ–ಬಲ್ಲಿದರಿಬ್ಬರಿಗೂ ಸರಿಸಮ; ಇದು ಗಂಧ ಮತ್ತು ಲವಂಚದ ಮುಲಾಮುಗಳಿಲ್ಲದೆ ತಯಾರಿಸಿದ ಎದೆಲೇಪ.

೮೯. ಬಡತನದಿಂದ ಮಾನವನು ನಾಚಿಕೆಗೊಳಗಾಗುವನು: ನಾಚಿಕೆಯಲ್ಲಿ ಮುಳುಗಿದವನು ನಿಸ್ತೇಜನಾಗುವನು; ನಿಸ್ತೇಜತೆಯಿಂದ (ಮುಂದೆ) ಆತನು ಅಪಮಾನಿತನಾಗುವನು; ಅವಮಾನದಿಂದ ಮನಸ್ಸಿನಲ್ಲಿ ಅವನು ಕುಸಿದುಹೋಗುವನು. ಮನಸ್ಸಿನ ಕುಸಿತದಿಂದ ಆತ ದುಃಖಕ್ಕೀಡಾಗುವನು; ದುಃಖದಲ್ಲಿ ಮಗ್ನನಾದವನು ಬುದ್ಧಿಯನ್ನು ಕಳೆದುಕೊಳ್ಳುವನು; ಬುದ್ಧಿಹೀನನು ನಾಶಹೊಂದುವನು: ಆಹಾ, ಬಡತನವು ಸರ್ವಸಂಕಟಗಳ ಮೂಲ!

೯೦. ಚಾಡಿಕೋರನು ಕೀರ್ತಿಯ ಪರಿಮಳಕ್ಕೆ ಬೆಳ್ಳುಳ್ಳಿ, ಶಾಂತಿಯ ತಂಪಿಗೆ ಬೆಂಕಿ, ಮರುಕದ ಹೂವಿಗೆ ಬಾನು (ಆಶ್ರಯ ಕೊಡದವನು); ಇಂಥವನನ್ನು ಯಾರು ವರ್ಣಿಸಬಲ್ಲರು ?

೯೧. ಸುಳ್ಳು ಹೇಳುವುದಕ್ಕಿಂತ ಸುಮ್ಮನಿರುವುದೇ ಲೇಸು; ಪರಸ್ತ್ರೀ ಸಹವಾಸಕ್ಕಿಂತ ಪುರುಷರಿಗೆ ನಪುಂಸಕತೆಯೇ ಲೇಸು: ಚಾಡಿಕೋರರ ಮಾತಿನಲ್ಲಿ ಆಸಕ್ತಿ ವಹಿಸುವುದಕ್ಕಿಂತ ಪ್ರಾಣಬಿಡುವುದೇ ಒಳ್ಳೆಯದು; ಪರರ ಆಸ್ತಿಯನ್ನು ಸವಿಯುವ ಸುಖಕ್ಕಿಂತ ಬೇಡಿ ತಿನ್ನುವುದೇ ಉತ್ತಮ.

೯೨. ಶಾಸ್ತ್ರಗಳನ್ನು ಕಲಿತರೂ ಮೂರ್ಖರಾಗುತ್ತಾರೆ. (ಕಲಿತುದನ್ನು) ಕೃತಿಯಲ್ಲಿ ಮಾಡಿ ತೋರಿಸುವವನೇ ಗಂಡಸು, ವಿದ್ವಾಂಸ; (ಮನದಲ್ಲಿ) ನೆನೆಸಿಕೊಂಡ ಔಷಧವು ಹೆಸರು ಹೇಳಿದ ಕೂಡಲೇ ರೋಗಿಯನ್ನು ಆರೋಗ್ಯವಂತನನ್ನಾಗಿ ಮಾಡುವುದೇ ?

೯೩. ಉಪಕಾರ ಮಾಡದವನಿಗೆ ಉಪಕಾರ ಮಾಡುವುದು, (ಪರರಿಗೆ) ಪ್ರಿಯವಾದ ಕೆಲಸಗಳನ್ನು ಮಾಡುವುದು, (ಇತರರು) ಮಾಡಿದುದನ್ನು ನೆನೆಪಿಟ್ಟುಕೊಳ್ಳುವುದು ಮತ್ತು ಪತಿತರನ್ನು ಉದ್ಧಾರ ಮಾಡುವುದು ಸತ್ಕುಲಪ್ರಸೂತರಿಗೆ (ಸುಸಂಸ್ಕೃತರಿಗೆ) ತಕ್ಕಂಥವುಗಳು.

आसन्नमेव नृपतिर्भजते मनुष्यं
विद्याविहीनमकुलीनमसंस्तुतं वा ।
प्रायेण भूमिपतयः प्रमदा लताश्च
यः पार्श्वतो वसति त परिवेष्टयन्ति ॥९४॥

मायाविनिमयविभ्रमनिम्हववैचित्त्यकूटकपटानाम् ।
सञ्चयदुर्गपिशाचः सर्वहरो मूलकारणं लोभः ॥९५॥

क्षुत्क्षामस्तनयो वधूः परगृहप्रेष्यावसन्नः सुहृत्
दुग्धा गौरशनाद्यभावविवशाहम्बारवोद्गारिणी ।
निष्पथ्यौ पितरावदूरमरणौ स्वामी द्विषन्निर्जितो
दृष्टो येन परं न तस्य निरये प्राप्तव्यमस्त्यप्रियम् ॥९६॥

हालाहलं खलु पिपासति कौतुकेन
कालानलं परिचुचुम्बिषति प्रकामम् ।
व्यालाधिपं च यतते परिरब्धुमद्धा
यो दुर्जनं वशयितुं कुरुते मनीषाम् ॥९७॥

केयूराणि न भूषयन्ति पुरुषं हारा न चन्द्रोज्वला
न स्नानं न विलेपनं न कुसुमं नालङ्कृता मूर्धजाः ।
वाण्येका समलङ्करोति पुरुषं या संस्कृता धार्यते
क्षीयन्तेऽखिलभूषणानि सततं वाग्भूषणं भूषणम् ॥९८॥

अकुर्वतोऽपि पापानि शुचयः पापसंश्रयात् ।
परपापैर्विनश्यन्ति मत्स्या नागह्रदे यथा ॥९९॥

अदृष्टगुणदोषाणामध्रुवाणां च कर्मणाम्
नान्तरेण क्रियां तेषां फलमिष्टं प्रवर्तते ॥१००॥

೯೪. ಹತ್ತಿರ ಇರುವವನು ವಿದ್ಯಾಹೀನ, ಕುಲಹೀನ (ಅಸಂಸ್ಕೃತ) ಅಥವಾ ಅಯೋಗ್ಯನಾಗಿದ್ದರೂ ದೊರೆ ಆತನನ್ನೇ ಅವಲಂಬಿಸುತ್ತಾನೆ; ದೊರೆಗಳೂ ಯುವತಿಯರೂ, ಬಳ್ಳಿಗಳೂ, ಬಹುಶಃ ಹತ್ತಿರ ಇರುವವನನ್ನು ಸುತ್ತಿಕೊಳ್ಳುತ್ತಾರೆ!

೯೫. ಸುಳ್ಳು ಹೇಳುವುದು, ಅದಲುಬದಲು ಮಾಡುವುದು, ಸುತ್ತು ಹಾಕುವುದು, ಅಡಗಿಸಿಕೊಳ್ಳುವುದು, ಗೊಂದಲ ಮಾಡುವುದು, ದಗ ಹಾಕುವುದು, ಮೋಸ ಮಾಡುವುದು ಎಂಬೀ ಎಲ್ಲವುಗಳಿಗೂ ಕೂಡಿಡುವಿಕೆ ಎಂಬ ಕೋಟೆಯನ್ನಾಕ್ರಮಿಸಿರುವ ಲೋಭ ಎಂಬ ಪಿಶಾಚವೇ ಮೂಲಕಾರಣ.

೯೬. ಮಗ ಹಸಿದಿರುವುದನ್ನು, ಹೆಂಡತಿ ಇನ್ನೊಬ್ಬರ ಮನೆಯಲ್ಲಿ ಕೆಲಸಕ್ಕೆ ಆಳಾಗಿ ಹೋಗುವುದನ್ನು, ಗೆಳೆಯು ಸಾಯುವುದನ್ನು, ಕರೆದ ಹಸು ಆಹಾರ ಮುಂತಾದವುಗಳಿಲ್ಲದೆ ನಿತ್ರಾಣ ಹೊಂದಿ ಅಂಬಾ ಎಂದು ಕೂಗುವುದನ್ನು, ಸಾವು ಬಹಳ ದೂರದಲ್ಲಿಲ್ಲದ ತಾಯಿ-ತಂದೆಗಳು (ಅತಿ ಮುದುಕರು) ಪಥ್ಯವಿಲ್ಲದೆ ಇರುವುದನ್ನು ಮತ್ತು ಒಡೆಯನು ಹಗೆಯಿಂದ ಸೋತು ಹೋಗುವುದನ್ನು ಕಾಣುವಂತಾದವನಿಗೆ ನರಕಕ್ಕೆ ಹೋಗಿ ಹೊಂದಬೇಕಾದ ಹೆಚ್ಚಿನ ಅಪ್ರಿಯ ಅನುಭವ ಇನ್ನಾವುದೂ ಇಲ್ಲ!

೯೭. ದುಷ್ಟರನ್ನು ವಶಕ್ಕೆ ತರಲು ಆಲೋಚಿಸುವವನು — ಕುತೂಹಲದಿಂದ ಹಾಲಾಹಲ ಕುಡಿಯಲು ಬಯಸುತ್ತಾನೆ, ಯಥೇಷ್ಟವಾಗಿ ಪ್ರಳಯಾಗ್ನಿಗೆ ಮುತ್ತಿಡಲು ಆಶಿಸುತ್ತಾನೆ: ನಿಜವಾಗಿಯೂ ಆತನು ನಾಗರಹಾವುಗಳ ಅರಸನನ್ನು ಅಪ್ಪಿಕೊಳ್ಳಲು ಪ್ರಯತ್ನಿಸುತ್ತಾನೆ!

೯೮. ತೋಳುಬಂದಿಗಳಾಗಲಿ, ಚಂದ್ರನಂತೆ ಹೊಳೆಯುವ ಸರಗಳಾಗಲಿ, ಸ್ನಾನವಾಗಲಿ, ಪರಿಮಳದ್ರವ್ಯಗಳ ಲೇಪನವಾಗಲಿ, ಹೂವಾಗಲಿ, ಕೂದಲಿನೊಪ್ಪವಾಗಲಿ ಮಾನವನಿಗೆ ಶೋಭೆ ತರುವುದಿಲ್ಲ; ಅವನಲ್ಲಿರುವ ಸುಸಂಸ್ಕೃತವಾದ ವಾಕ್ ಶಕ್ತಿಯೊಂದೇ ಅವನಿಗೆ ಸರಿಯಾದ ಶೋಭೆ ಉಂಟುಮಾಡಬಲ್ಲದು: ಇತರ ಒಡವೆಗಳೆಲ್ಲವೂ ಎಂದಾದರೂ ನಶಿಸಿಹೋಗತಕ್ಕಂಥವುಗಳೇ; ವಾಗ್ಮಿತ್ವ ಎಂಬ ಆಭರಣವೊಂದೇ ನಿಜವಾದ ಆಭರಣ— (ಏಕೆಂದರೆ, ಅದು ಸಾಯುವ ತನಕ ಇರಬಲ್ಲದು.)

೯೯-೧೦೦. ತಾವೇ ಪಾಪ ಮಾಡದಿದ್ದರೂ, ಪಾಪಿಗಳನ್ನು ಆಶ್ರಯಿಸಿದ್ದರಿಂದ ನಿರ್ಮಲ ಸ್ವಭಾವದವರು, ಇತರರ ಪಾಪಗಳಿಂದ, ಆನೆಹೊಂಡದಲ್ಲಿರುವ ಮೀನುಗಳಂತೆ, ನಾಶ ಹೊಂದುತ್ತಾರೆ. ಗುಣ-ದೋಷ ಗೊತ್ತಿಲ್ಲದ ಮತ್ತು ಚಿರ ಸ್ಥಾಯಿಯಲ್ಲದ ಕೆಲಸಗಳಿಗೆ ಮತ್ತೇನಾದರೂ ಒಂದನ್ನು (ಆಮೇಲೆ) ಮಾಡದೆ, ಬಯಸಿದ ಫಲ ಉಂಟಾಗದು.

ಮಹಾನಾಯಕರು

IV

ಮಹಾನಾಯಕರು

सर्वातिरिक्तसारेण सर्वतेजोऽभिभाविना ।
स्थितः सर्वोन्नतेनोर्वीं क्रान्त्वा मेरुरिवात्मना ॥१॥

प्रजानामेव भूत्यर्थं स ताभ्यो बलिमग्रहीत् ।
सहस्रगुणमुत्स्रष्टुमादत्ते हि रसं रविः ॥२॥

जुगोपात्मानमत्रस्तो भेजे धर्ममनातुरः ।
अगृध्नुराददे सोऽर्थमसक्तः सुखमन्वभूत् ॥३॥

स्थित्यै दण्डयतो दण्ड्यान् परिणेतुः प्रसूतये ।
अप्यर्थकामौ तस्यास्तां धर्म एव मनीषिणः ॥४॥

दुदोह गां स यज्ञाय सस्याय मघवा दिवम् ।
सम्पद्विनिमयेनोभौ दधतुर्भुवनत्रयम् ॥५॥

यथाप्रह्‌लादनाच्चन्द्रः प्रतापात्तपनो यथा ।
तथैव सोऽभूदन्वर्थो राजा प्रकृतिरञ्जनात् ॥६॥

रघुवंशप्रदीपेन तेनाप्रतिमतेजसा ।
रक्षागृहगता दीपाः प्रत्यादिष्टा इवाभवत् ॥७॥

IV

ಮಹಾನಾಯಕರು

೧. ಎಲ್ಲ ಪ್ರಾಣಿಗಳಿಗಿಂತಲೂ ಅಧಿಕಬಲನಾಗಿ ಎಲ್ಲ ಪ್ರಾಣಿಗಳ ತೇಜಸ್ಸನ್ನೂ ಮೀರಿಸುವ, ಎಲ್ಲರಿಗಿಂತಲೂ ಎತ್ತರವಾದ ಶರೀರವುಳ್ಳ ದಿಲೀಪನು ಮೇರುಪರ್ವತ-ದಂತಿದ್ದನು.

೨. ಅವನು ಉತ್ಪನ್ನದ ಆರನೆಯ ಒಂದಂಶದಷ್ಟನ್ನು ಪ್ರಜೆಗಳ ಅಭಿವೃದ್ಧಿ-ಗಾಗಿಯೇ ಕಂದಾಯರೂಪದಲ್ಲಿ ತೆಗೆದುಕೊಳ್ಳುತ್ತಿದ್ದನು; ಸೂರ್ಯನು ಒಂದಕ್ಕೆ ಸಾವಿರದಷ್ಟು ಹಿಂದಿರುಗಿ ಕೊಡಲೆಂದೇ ನೀರನ್ನು (ಆವಿಯ ರೂಪದಲ್ಲಿ) ತೆಗೆದು ಕೊಳ್ಳುತ್ತಾನಷ್ಟೇ !

೩. ಹೆದರದ ದೊರೆ ತನ್ನ ಶರೀರವನ್ನು ಕಾಯ್ದುಕೊಂಡಿದ್ದನು: ಕಾಹಿಲೆ ಇಲ್ಲದ ಆತನು ಪುಣ್ಯಕರ್ಮವನ್ನು ಮಾಡಿದನು; ದುರಾಶೆಯಿಲ್ಲದ ಆತ ದ್ರವ್ಯಾರ್ಜನೆ ಮಾಡಿದನು; ಅನಾಸಕ್ತನಾಗಿ ಸುಖವನ್ನು ಅನುಭವಿಸಿದನು.

೪. ಲೋಕಪಾಲನೆಗಾಗಿ ದೊರೆ ಶಿಕ್ಷಾರ್ಹರನ್ನು ಶಿಕ್ಷಿಸಿದನು; ಸಂತಾನ ಲಾಭಕ್ಕಾಗಿ ಮದುವೆಯಾದನು; ಆದುದರಿಂದ ವಿದ್ವಾಂಸನಾದ ಆ ದೊರೆಗೆ ಅರ್ಥ-ಕಾಮಗಳು ಕೂಡ ಧರ್ಮಸ್ವರೂಪದವುಗಳೇ ಆದವು.

೫. (ಸತ್ಪಾತ್ರದಾನಪ್ರಧಾನವಾದ) ಯಜ್ಞಕ್ಕಾಗಿ ದಿಲೀಪದೊರೆಯು ಭೂಕಂದಾಯವನ್ನು ವಸೂಲು ಮಾಡಿದನು; ದೇವೇಂದ್ರನು ಸಸ್ಯಗಳ ಬೆಳವಣಿಗೆ-ಗಾಗಿ ಆಕಾಶದಿಂದ ಮಳೆಯನ್ನು ಸುರಿಸಿದನು. ಹೀಗೆ ಈ ಇಬ್ಬರು ತಮ್ಮ ತಮ್ಮ ಸಂಪತ್ತುಗಳ ವಿನಿಮಯದಿಂದ ಮೂರುಲೋಕಗಳನ್ನು ಹೊರೆದರು.

೬. ಆಹ್ಲಾದವನ್ನುಂಟುಮಾಡುವುದರಿಂದ ಚಂದ್ರನು ಚಂದ್ರನೆನ್ನಿಸಿದಂತೆ ಮತ್ತು ಸೂರ್ಯನು ಉರಿಯನ್ನುಂಟುಮಾಡುವುದರಿಂದ ತಪನನೆನ್ನಿಸಿದಂತೆ ರಘು ರಾಜನು ಪ್ರಜಾಹಿತವನ್ನು ಸಾಧಿಸುತ್ತಿದ್ದುದರಿಂದ ರಾಜನೆಂಬ ಅನ್ವರ್ಥನಾಮಕ್ಕೆ ಪಾತ್ರನಾದನು.

೭. ಹೋಲಿಕೆಯಿಲ್ಲದ ತೇಜಸ್ಸಿನಿಂದ ಕೂಡಿದ ರಾಮಚಂದ್ರನ ಎದುರಿಗೆ ಪ್ರಸೂತಿಗೃಹದ ದೀಪಗಳು ಮಂದಪ್ರಭವಾದವು.

एको दाशरथिःकामं यातुधानाः सहस्रशः
ते तु यावन्त एवाजौ तावांश्च ददृशे स तैः ॥८॥

श्रुताप्सरोगीतिरपि क्षणेऽस्मिन्
हरः प्रसंख्यानपरो बभूव ।
आत्मेश्वराणां न हि जातु विघ्नाः
समाधिभेदप्रभवो भवन्ति ॥९॥

तपः परामर्शविवृद्धमन्यो
र्भ्रूभङ्गदुष्प्रेक्षमुखस्य तस्य ।
स्फुरन्नुदर्चिः सहसा तृतीया-
दक्ष्णः कृशानुः किल निष्पपात ॥१०॥

स हि देवः परं ज्योतिस्तमः पारे व्यवस्थितम् ।
परिच्छिन्नप्रभावर्द्धिर्न मया न च विष्णुना ॥११॥

असम्पदस्तस्य वृषेण गच्छतः
प्रभिन्नदिग्वारणवाहनो वृषा ।
करोति पादावुपगम्य मौलिना
विनिद्रमन्दाररजोरुणाङ्गुली ॥१२॥

अकिञ्चनः सन् प्रभवः स सम्पदां
त्रिलोकनाथः पितृसद्मगोचरः ।
स भीमरूपः शिव इत्युदीर्यते
न सन्ति याथार्थ्यविदः पिनाकिनः ॥१३॥

विभूषणोद्भासि पिनद्धभोगि वा
गजाजिनालम्बि दुकूलधारि वा ।
कपालि वा स्यादथवेन्दुशेखरं
न विश्वमूर्तेरवधार्यते वपुः ॥१४॥

೮. ರಾಮನು ಒಬ್ಬ, ರಾಕ್ಷಸರು ಸಾವಿರಾರು; ಆದರೆ ಯುದ್ಧದಲ್ಲಿ ಅವರಿಗೆ ತಮ್ಮಷ್ಟೇ ಸಂಖ್ಯೆಯಲ್ಲಿ ಅವನು ಕಾಣಿಸಿಕೊಂಡನು.

೯. ವಸಂತ ಋತುವಿನ ಆರಂಭ ಕಾಲದಲ್ಲಿ ದಿವ್ಯಸುಂದರಿಯರ ಗಾನವನ್ನು ಕೇಳಿದರೂ ಹರನು ಆತ್ಮಾನುಸಂಧಾನಪರನಾದನು; ಮನಸ್ಸಿನ ಮೇಲೆ ನಿಯಂತ್ರಣವುಳ್ಳವರಿಗೆ ಎಂದೂ ಎಡರುಗಳು ಸಮಾಧಿಯನ್ನು ಭಂಗಿಸುವುದರಲ್ಲಿ ಶಕ್ತವಾಗುವುದಿಲ್ಲ.

೧೦. ತನ್ನ ತಪಸ್ಸಿಗೆ ತೊಂದರೆಯನ್ನುಂಟುಮಾಡಿದ್ದರಿಂದ ಹೆಚ್ಚಿದ ಕೋಪವನ್ನುಳ್ಳ ಮತ್ತು ಗಂಟಿಕ್ಕಿದ ಹುಬ್ಬಿನಿಂದ ನೋಡಲಸಾಧ್ಯವಾದ ಮುಖವುಳ್ಳ ಶಿವನ ಮೂರನೆಯ ಕಣ್ಣಿನಿಂದ ಮೇಲೆದ್ದ ಉರಿಗಳಿಂದೊಡಗೂಡಿದ ಬೆಂಕಿಯು ಕೂಡಲೇ (ಮನ್ಮಥನನ್ನು ಸುಡಲು) ಹೊರಬಿದ್ದಿತು.

೧೧. ಆ ಶಿವನು ಪರಂಜ್ಯೋತಿಃಸ್ವರೂಪನು; ಅವನು ತಮಃಸಾಗರದ ಆಚೆಯ ದಡದಲ್ಲಿದ್ದಾನೆ. ಆ ದೇವನ ಮಹಿಮಾತಿಶಯದ ಆಳವನ್ನು ಅಳೆಯಲು ನಾನೂ (ಬ್ರಹ್ಮನೂ) ಶಕ್ತನಲ್ಲ, ವಿಷ್ಣುವೂ ಶಕ್ತನಲ್ಲ.

೧೨. ಬಡವನಾಗಿ ಎತ್ತನ್ನು ಹತ್ತಿಕೊಂಡು ಹೋಗುವ ಶಿವನ ಪಾದಗಳೆಡೆಗೆ ಹೋಗಿ, ಮದಿಸಿದ ದಿಗ್ಗಜವಾದ ಐರಾವತವನ್ನೇರಿದ ಇಂದ್ರನು ಅವುಗಳ ಬೆರಳುಗಳಿಗೆ ಅರಳಿದ ಮಂದಾರ ಹೂಗಳ ರೇಣುಗಳನ್ನು ಬಳಿಯುತ್ತಾನೆ.

೧೩. ಶಿವನು ಬಡವನಾಗಿಯೂ ಸಂಪತ್ತಿಗೆ ಕಾರಣನು; ಮೂಲೋಕಗಳ ಒಡೆಯನಾಗಿಯೂ ಸುಡುಗಾಡಿನಲ್ಲಿದ್ದಾನೆ: ಭಯಂಕರಾಕೃತಿಯು ಆತನನ್ನು ಶಿವನೆನ್ನುತ್ತಾರೆ; ಪಿನಾಕವೆಂಬ ಬಿಲ್ಲನ್ನು ಹಿಡಿದ ಅವನ ಸತ್ಯಸ್ವರೂಪವನ್ನು ತಿಳಿದವರಿಲ್ಲ.

೧೪. ಅಷ್ಟಮೂರ್ತಿಯಾದ ಶಿವನ ಶರೀರವು ಆಭರಣಗಳಿಂದ ಅಲಂಕೃತವಾಗಿರಬಹುದು, ಅಥವಾ ಸರ್ಪಗಳನ್ನು ಸುತ್ತಿಕೊಂಡಿರಬಹುದು; ಆನೆಯ ಚರ್ಮವನ್ನು ಉಟ್ಟಿರಬಹುದು ಅಥವಾ ಹತ್ತಿಯ ಬಟ್ಟೆಯನ್ನು ಧರಿಸಿರಬಹುದು; ಬ್ರಹ್ಮಕಪಾಲವನ್ನು ಕೈಯಲ್ಲಿ ಹಿಡಿದಿರಬಹುದು ಅಥವಾ ಹಣೆಯಲ್ಲಿ ಚಂದ್ರನನ್ನು ಧರಿಸಿರಬಹುದು: ಅವನ ಶರೀರದ ಸ್ವರೂಪವನ್ನು ಯಾರೂ ನಿರ್ಧರಿಸಿ ಹೇಳಲಾರರು.

उदासितारं निगृहीतमानसैर्
गृहीतमध्यात्मदृशा कथञ्चन ।
बहिर्विकारं प्रकृतेः पृथग्विदुः
पुरातनं त्वां पुरुषं पुराविदः ॥१५॥

अनन्यगुर्वास्तव केन केवलः
पुराणमूर्तेर्महिमावगम्यते ।
मनुष्यजन्माऽपि सुरासुरान्गुणैर्
भवान् भवच्छेदकरैः करोत्यधः ॥१६॥

उपप्लुतं पातुमदो मदोद्धतै
स्त्वमेव विश्वम्भर विश्वमीशिषे ।
ऋते रवेः क्षालयितुं क्षमेत कः
क्षपातमस्काण्डमलीमसं नभः ॥१७॥

करोति कंसादिमहीभृतां वधाञ्
जनो मृगाणामिव यत्तव स्तवम् ।
हरे हिरण्याक्षपुरः सरासुर-
द्विपद्विषः प्रत्युत सा तिरस्क्रिया ॥१८॥

अथ वीररसावतारतस्तरसापल्लवितेन चेतसा
जगदाद्भुतभूरिसाहसः प्रहसन्नुच्चलति स्म पार्थिवः ॥१९॥

बभार हारावलिमौक्तिकानि
वक्षःस्थलेन स्फटिकोज्वलेन ।
उच्चैःस्थितस्य प्रतिबिम्बितानि
स कुड्मलानीव यशोद्रुमस्य ॥२०॥

೧೫. "ಮನಸ್ಸನ್ನು ನಿಗ್ರಹಿಸಿದ ಯೋಗಿಗಳು ಚಿತ್ತವೃತ್ತಿಗಳನ್ನು ಅಂತರ್ಮುಖ ಮಾಡಿಕೊಂಡ ಅಧ್ಯಾತ್ಮದ ಕಣ್ಣಿನಿಂದ ಎಷ್ಟೋ ಪ್ರಯಾಸದಿಂದ ನಿನ್ನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ನಿನ್ನನ್ನು ಜಗತ್ತಿನ ಸುಖ-ದು:ಖಗಳಿಂದ ಅತೀತನೆಂದೂ ಸಾಂಖ್ಯೋಕ್ತ ಪ್ರಕೃತಿಯಿಂದ ಪ್ರತ್ಯೇಕನೆಂದೂ ವಿಜ್ಞಾನವೆಂಬ ದಿವ್ಯ ಜ್ಞಾನದಿಂದ ತುಂಬಿದ ಅನಾದಿ ಪುರುಷನೆಂದೂ ಗತೇತಿಹಾಸವನ್ನು ಬಲ್ಲವರು ತಿಳಿದಿದ್ದಾರೆ"—ಎಂಬುದು ವಿಷ್ಣು (ಕೃಷ್ಣ) ವರ್ಣನೆ.

೧೬. "ನಿನಗೆ ಯಾವ ಗುರುವೂ ಇಲ್ಲ. ಅನಾದಿಪುರುಷನಾದ ನಿನ್ನ ಮಹಿಮೆ ಕೇವಲಸ್ವರೂಪದ್ದು. ಅದನ್ನರಿಯಲು ಯಾರಿಗೆ ಸಾಧ್ಯ? ಮಾನವ ಜಾತಿಯಲ್ಲಿ ನೀನು ಹುಟ್ಟಿದರೂ ಭವಬಂಧನಹರವಾದ ಗುಣಗಳಿಂದ ಸುರಾಸುರರನ್ನು ಮೀರಿಸಿದ್ದೀಯೆ" — ಎಂಬುದು ವಿಷ್ಣುಸ್ವರೂಪ.

೧೭. "ಎಲೈ ವಿಶ್ವರಕ್ಷಕನೇ, ಮದೋನ್ಮತ್ತರಾದ ಜನರಿಂದ ಪೀಡಿತವಾದ ಈ ವಿಶ್ವವನ್ನು ಕಾಪಾಡಲು ನೀನೇ ಸಮರ್ಥನು. ರಾತ್ರಿಯ ಕತ್ತಲಿನಿಂದ ಕಪ್ಪಾದ ಆಕಾಶವನ್ನು ಸೂರ್ಯನಲ್ಲದೆ ಇನ್ನಾರು ಸ್ವಚ್ಛ ಮಾಡಬಲ್ಲರು?"— ವಿಷ್ಣುಸ್ತುತಿ.

೧೮. "ಕಂಸ ಮೊದಲಾದ ದೊರೆಗಳನ್ನು ಸಾಮಾನ್ಯ ಪಶುಗಳನ್ನು ಸಂಹರಿಸಿದಂತೆ ನೀನು ಸಂಹರಿಸಿದ್ದನ್ನು ಜನರು ಹೊಗಳುವುದು ನಿನ್ನನ್ನು ತೆಗಳಿದಂತೆಯೇ ಸರಿ; ಏಕೆಂದರೆ, ಎಲೈ ಹರಿಯೇ, ನೀನು ಹಿರಣ್ಯಾಕ್ಷ ಮುಂತಾದ ಅನೇಗಳಂಥ ಅಸುರರನ್ನು ಕೊಂದವನು!"— ವಿಷ್ಣುಸ್ತುತಿ.

೧೯. ಜಗತ್ತಿಗೇ ಆಶ್ಚರ್ಯವನ್ನುಂಟುಮಾಡುವ ಪರಾಕ್ರಮವನ್ನು ಉಳ್ಳ ದೊರೆ ವಿಕ್ರಮಾಂಕದೇವನು ವೀರರಸದ ಆವಿರ್ಭಾವದ ದೆಸೆಯಿಂದ ಪುಟಿದೆದ್ದ ಹೃದಯದಿಂದ ನಗುತ್ತ ವೇಗವಾಗಿ ಹೊರಟನು.

೨೦. ಆತನು ಸ್ಫಟಿಕದಂತೆ ಪ್ರಕಾಶಮಾನವಾದ ವಕ್ಷಃಸ್ಥಳದಲ್ಲಿ ಹಾರದ ಮುತ್ತುಗಳನ್ನು ಧರಿಸಿದನು; ಅವು ಉನ್ನತ ಸ್ಥಾನದಲ್ಲಿದ್ದ ಅವನ ಕೀರ್ತಿಯೆಂಬ ಮರದ (ಮರ ಬಿಟ್ಟ) ಮೊಗ್ಗುಗಳನ್ನು ಪ್ರತಿಬಿಂಬಿಸಿದವು.

चलुक्यवंशे महतां महीभुजां
महाभुजः शेखरतामसौ गतः ।
न मानुषीमेव निराचकार यः
प्रजासु दैवीमपि चिच्छिदे रुजम् ॥२१॥

अकालमृत्युर्नचचार कुत्रचित्
क्वचिन्न दुर्भिक्षमलक्ष्यत क्षितौ ।
किमन्यदन्यायनिबर्हणो नृपः
स राज्यमिक्ष्वाकुपतेरदर्शयत् ॥२२॥

न भानुरत्यर्थमतापयज्जनं
ववुःसमीराः श्रममात्रहारिणः ।
फलानि भङ्क्त्वातिभरेण पादपान्
भियेव पक्वान्यभजन्त पाण्डुताम् ॥२३॥

अहं सदा प्राणसमं महीभुजा–
मयं तु मां वेत्ति नृपस्तृणोपमम्- ।
इतीव कर्णेषु सुवर्णमर्थिनां
स्वखेदमाख्यातुमभूत्कृतास्पदम् ॥२४॥

ददौ स दानानि महान्ति षोडश
प्रतापशाली प्रतिपर्व पार्थिवः ।
तदन्तिकाद्दानजलैः सकर्दमा-
न्निपात भीत्येव कलिः पलायितः ॥२५॥

अथ तीव्रतरव्रतस्थितेर्विमलध्याननिवेशितात्मनः ।
उदपद्यत केवलं मुनेः परमं ज्योतिरनाश्रितेन्द्रियम् ॥२६॥

स ददर्श जगत्रयं ततो विलसत्केवलबोधसम्पदा ।
अवलुप्ततमःप्रदीपकप्रभयानक्तमिवात्ममन्दिरम् ॥२७॥

೨೧. ಅವನು ಪ್ರಜೆಗಳಲ್ಲಿ ಮಾನವರೂಪದ ಶತ್ರುಬಾಧೆಯನ್ನಷ್ಟೇ ಅಲ್ಲ, ದೈವಿಕ ಆಪತ್ತನ್ನೂ ಪರಿಹರಿಸಿದನು; ಆದುದರಿಂದ ಆ ವಿಕ್ರಮಾಂಕದೇವನು ನಿಃಕ್ಷೋಳಿನವನು ಮತ್ತು ಚಾಲುಕ್ಯ ವಂಶದ ದೊಡ್ಡ ದೊರೆಗಳೆಲ್ಲರಿಗೂ ಶಿರೋಮಣಿ ಎನ್ನಿಸಿದನು.

೨೨. ಅವನ ರಾಜ್ಯದಲ್ಲಿ ಎಲ್ಲಿಯೂ ಅಕಾಲ ಮರಣ ಉಂಟಾಗಲಿಲ್ಲ, ದುರ್ಭಿಕ್ಷೆ ಒದಗಲಿಲ್ಲ; ಇನ್ನೇನನ್ನು ಬಣ್ಣಿಸಬೇಕು ? ಅನ್ಯಾಯ ಪರಿಹಾರಕನಾದ ಆ ದೊರೆಯು ರಾಮರಾಜ್ಯದ (ಸುಖ-ಸಂಪತ್ತುಗಳನ್ನು) ಪ್ರಜೆಗಳ ಅನುಭವಕ್ಕೆ ತಂದುಕೊಟ್ಟನು.

೨೩. ಅವನ ರಾಜ್ಯದಲ್ಲಿ ಸೂರ್ಯನು ಜನರನ್ನು ಬಹಳ ತಾಪಕ್ಕೀಡು ಮಾಡಲಿಲ್ಲ; ಗಾಳಿಯು ಕೇವಲ ಶ್ರಮಪರಿಹಾರಕವಾಗಿ ಬೀಸಿತು; ಗಳಿತ ಹಣ್ಣುಗಳು ಮರಗಳನ್ನು ಜಿರಿದು ಹಾಗೆ ಮಾಡಿದ ತಪ್ಪಿಗೆ ಹೆದರಿಯೋ ಏನೋ ಎಂಬಂತೆ ಬಿಳಿಚಿಕೊಂಡವು.

೨೪. "ದೊರೆಗಳಿಗೆ ನಾನು ಪ್ರಾಣಕ್ಕೆ ಸಮ: ಆದರೆ ಈ ದೊರೆಯು ನನ್ನನ್ನು ಹುಲ್ಲುಕಡ್ಡಿಗೆ ಸಮನೆಂದು ತಿಳಿಯುತ್ತಾನೆ" ಎಂದು ಬಂಗಾರವು ಬಡವರ ಕಿವಿಗಳಲ್ಲಿ ತನ್ನ ದು:ಖವನ್ನು ತೋಡಿಕೊಳ್ಳತೊಡಗಿತೋ ಏನೋ ಎಂಬಂತಾಯಿತು.

೨೫. ಪ್ರತಾಪಶಾಲಿಯಾದ ಆ ದೊರೆಯು ಪ್ರತಿ ಹುಣ್ಣಿಮೆ-ಅಮಾವಾಸ್ಯೆಗಳಲ್ಲಿಯೂ ೧೬ ದೊಡ್ಡ ದಾನಗಳನ್ನು ಮಾಡಿದನು; ಆ ದಾನೋದಕದ ಕೆಸರಿನ ದೆಸೆಯಿಂದ ತಾನು ಬಿದ್ದುಬಿಟ್ಟೇನೆಂದು ಹೆದರಿಯೋ ಏನೋ ಎಂಬಂತೆ ಕಲಿಯು ಓಡಿಹೋದನು.

೨೬. ತೀಕ್ಷ್ಣವಾದ ತಪಸ್ಸಿನಲ್ಲಿದ್ದು, ನಿರ್ಮಲವಾದ ಧ್ಯಾನದಲ್ಲಿ ತನ್ನ ಆತ್ಮವನ್ನು ಮಗ್ನಗೊಳಿಸಿಕೊಂಡ ನೇಮಿನಾಥ ಮುನಿಗೆ ಇಂದ್ರಿಯಗಳ ಆಶ್ರಯವಿಲ್ಲದ ಕೇವಲ ಸ್ವರೂಪದ ಪರಂಜ್ಯೋತಿಯು ಸಾಕ್ಷಾತ್ಕಾರವಾಯಿತು.

೨೭. ಆತನು ಅನಂತರ, ಕತ್ತಲನ್ನು ಕಳೆದ ದೀಪಪ್ರಭೆಯಿಂದ ಇರುಳನ್ನು ಹೇಗೋ ಹಾಗೆ, ಪ್ರಕಾಶಿಸುವ ಕೇವಲ ಜ್ಞಾನಸಂಪತ್ತಿನಿಂದ ತನ್ನ ಆತ್ಮಮಂದಿರವನ್ನು ನೋಡಿದನು.

सुकृतानवलोक्यमुदितान्नरकस्थांश्च विरुद्धकर्मणः ।
मुदमुद्वहति स्म न क्षणं करुणार्द्रो भवति स्म केवली ॥२८॥

अथापगतमानवप्रकृतिरुत्तरैर्दैवतै-
रयुज्यत सचेष्टितैर्दलितकर्ममर्मा जिनः ।
महीरुह इवाखिलच्युतपुराणपत्रावलि-
र्नवैः किसलयोत्करैः कलितचैत्रकालागमः ॥२९॥

आयोजनशतद्वन्द्वमद्भुतात्तप्रभावतः ।
दुर्भिक्षस्यैव सञ्जज्ञे बाधा न प्राणिनां क्वचित् ॥३०॥

ज्ञानदर्शनचारित्राण्यासाद्येवास्य मूर्तताम् ।
अन्यानि त्रीणि वक्त्राणि प्रादुरासन्नमायिनः ॥३१॥

सम्भाव्य एष भवतो भगवान् यवीयां ।
ल्लीलाकलेवरधरः पुरुषः पुराणः ।
यद्भ्रूविभङ्गमनुरुध्य विधातृमुख्या ।
विख्यापयन्त्यधिकृता विविधाधिकारान् ॥३२॥

देवः स एष नरवेषधरो धराया–
मस्मत्तपः परवशाऽवरजस्तवास्ते ।
समानयैनमिदमीयविभूतिभोगै–
स्तन्मा नय क्रुधममुं न विमानयावाम् ॥३३॥

सुरविजयसमेतं स्वप्रतिज्ञातमेतं
मधुमथनमुपेतं पारिजातेन सार्धम् ।
सपदि समवगत्य प्रत्यगारं गरीयः
किमपि नगरनार्यश्चक्रिरे मङ्गलानि ॥३४॥

सद्वृत्तसर्वक्ष्मपयुद्धशौण्डहिंसीरदर्पोद्धरणायधात्रा ।
धात्रीप्रतोषाय समभ्युदायि क्षोणीतले सद्यनः स एकः ॥३५॥

೨೮. ಅದರಲ್ಲಿ ಕೇವಲಿಯಾದ ಅವನು ಸುಖಿಗಳಾದ ಪುಣ್ಯಾತ್ಮರನ್ನೂ ಪಾಪದಿಂದ ದುಃಖಿಗಳಾದ ಪಾಪಿಗಳು ನರಕಾನುಭವ ಪಡೆಯುತ್ತಿರುವುದನ್ನೂ ಕಂಡು, ಒಂದು ಕ್ಷಣವೂ ಸಂತೋಷಪಡದೆ, ಕರುಣಾರ್ದ್ರಹೃದಯನಾದನು.

೨೯. ಕರ್ಮಮುಕ್ತನಾದ ಆ ಜಿನನು ಮಾನವ ಪ್ರಕೃತಿಯನ್ನು ಬಿಟ್ಟು, ಸಕ್ರಿಯವಾದ ದೇವಗುಣಗಳಿಂದ ಕೂಡಿದವನಾಗಿ, ಹಳೆಯ ಎಲೆಗಳೆಲ್ಲವನ್ನೂ ಕಳೆದುಕೊಂಡು ವಸಂತಾಗಮದಲ್ಲಿ ಹೊಸ ಚಿಗುರುಗಳಿಂದ ಕೂಡಿದ ಮರದಂತಾದನು.

೩೦. ಅವನ ಸುತ್ತಲೂ ಇನ್ನೂರು ಯೋಜನದ ತ್ರಿಜ್ಯೆಯಲ್ಲಿ ಯಾವ ಜೀವಿಗಳಿಗೂ ಅವನ ಅದ್ಭುತವಾದ ಪ್ರಭಾವದ ದೆಸೆಯಿಂದ ದುರ್ಭಿಕ್ಷೆಯಂಥ ಬಾಧೆ ಯಾವುದೂ ಉಂಟಾಗಲಿಲ್ಲ.

೩೧. ನಿರ್ವಾಣಯನಾದ ಆ ನೇಮಿನಾಥನಲ್ಲಿ ಜ್ಞಾನ, ದರ್ಶನ, ಚಾರಿತ್ರಗಳು ಮೂರ್ತರೂಪ ಹೊಂದಿ ಮೊದಲಿದ್ದ ಏಕಮುಖದೊಡನೆ ಸೇರಿ ಅವನನ್ನು ಚತುರ್ಮುಖನನ್ನಾಗಿ ಮಾಡಿದವು.

೩೨. ಎಲೈ ಇಂದ್ರನೇ, ಈತನನ್ನು (ಕೃಷ್ಣನನ್ನು) ನೀನು ಕಿರಿಯನೆಂದು ತಿಳಿದುಕೊಳ್ಳುವುದು ಸಹಜ; ಆದರೆ ಇವನು ಲೀಲೆಗಾಗಿ ಶರೀರಧಾರಣ ಮಾಡಿದ ಪುರಾತನ ಪುರುಷನು; ಬ್ರಹ್ಮ ಮುಂತಾದ ದೇವತೆಗಳು ಈತನ ಹುಬ್ಬಿನ ಸನ್ನೆಯ ಪ್ರಕಾರ ವಿವಿಧ ಅಧಿಕಾರಗಳನ್ನು ಪಡೆದು ನಡೆಸುತ್ತಿದ್ದಾರೆ.

೩೩. ಈತನು ನರವೇಷಧರನಾದ ದೇವನು; ನನ್ನ ತಪಸ್ಸಿಗೆ ಪರವಶನಾಗಿ ನಿನ್ನ ಅನುಜನಾದನು. ಈ ಐಶ್ವರ್ಯಭೋಗಗಳಿಂದ ಈತನನ್ನು ಸತ್ಕರಿಸು. ಇವನನ್ನು ಸಿಟ್ಟಿಗೆಬ್ಬಿಸಬೇಡ ಮತ್ತು ನಮ್ಮಿಬ್ಬರಿಗೆ ಅಪಮಾನವನ್ನು ಉಂಟುಮಾಡಬೇಡ.

೩೪. ಮಧುಸೂದನನಾದ ಕೃಷ್ಣನು ದೇವತೆಗಳನ್ನು ಗೆದ್ದು ತನ್ನ ಪ್ರತಿಜ್ಞಾನುಸಾರವಾಗಿ ಪಾರಿಜಾತದೊಡನೆ ಊರಿಗೆ ಮರಳಿಬಂದುದನ್ನು ತಿಳಿದಕೂಡಲೇ ನಗರದ ನಾರಿಯರೆಲ್ಲರೂ ಮನೆಮನೆಯಲ್ಲಿ (ಬಾಗಿಲೆದುರು) ಅದ್ಭುತರೀತಿಯಿಂದ ಮಂಗಲಾರತಿಯನ್ನು ಅವನಿಗೆ ಎತ್ತಿದರು.

೩೫. ಸಜ್ಜನರನ್ನು ಯುದ್ಧಮಾಡಿ ಕೊಲ್ಲುವುದರಲ್ಲಿ ಪ್ರಾವೀಣ್ಯ ಉಳ್ಳವರ ಸೊಕ್ಕನ್ನು ಮುರಿಯಲೆಂದು ಮತ್ತು ಅದರಿಂದ ಭೂದೇವಿಗೆ ಸಂತಸ ಉಂಟಾಗಲೆಂದು ಸಜ್ಜನರಕ್ಷಕನೂ (ಪರಾಕ್ರಮದಲ್ಲಿ) ಏಕಮೇವಾದ್ವಿತೀಯನೂ ಆದ ರಾಮ (ಅಥವಾ ನಳ) ಭೂಲೋಕದಲ್ಲಿ ಬ್ರಹ್ಮನಿಂದ ಹುಟ್ಟುವಂತಾದನು.

कपिकच्छूः शत्रूणां मित्राणामास पाठीरः ।
कल्पतरुर्दीनानां वनीपकानां स वीरसेनसुतः ॥३६॥

घटदोहिन्यो गावः फलपूर्णा विदिद्युते वसुधा ।
व्यसनानि पुष्कसमपि त्यक्त्वारण्यं प्रयातानि ॥३७॥

निःस्वेदत्वादिभिस्तस्य सहजैर्दशभिर्गुणैः ।
बभासे भुवनोद्भासि वपुर्भास्करभासुरम् ॥३८॥

व्यहरद्यत्र यत्रासौ तत्र तत्र सुभिक्षता ।
अजायत जनप्रीत्यै योजनानां शतद्वये ॥३९॥

गगने गमनं तस्य सर्वेषामपि हृष्टये ।
बभूव प्राणिनां प्राणिविरोधेन विवर्जितम् ॥४०॥

चतुराननतारूपमहातिशयशालिनः
चतुरा न नता तस्य काभ्युत्थाय स्वयं प्रजा ॥४१॥

भोगे रोगे काञ्चने वा तृणे वा
मित्रे शत्रौ पत्तने वा वने वा ।
देवो दृष्टिं निर्विशेषं दधानोऽ
प्येकः सीमासीद्विशेषज्ञतायाः ॥४२॥

तथ्यं पथ्यं चेदभाषिष्ट किंचित्
सिद्धं शुद्धं चेदभुङ्क्तान्यदत्तम् ।
मुक्त्वा नक्तं चेदयासीत् स पश्यन्
सर्वं किंचित् तस्य शास्त्रानुरोधि ॥४३॥

निर्व्यामोहो निर्मदो निष्प्रपञ्चो
निःसङ्गोऽयं निर्भयो निर्ममश्च ।
देशे देशे पर्यटन् संयतानां
केषां नासीन्मोक्षशिक्षैकहेतुः ॥४४॥

೩೬. ರಾಮ (ಅಥವಾ ನಳ) ಹಗೆಗಳಿಗೆ ನಸುಗುನ್ನಿ (ತುರುಚಿ), ಗೆಳೆಯರಿಗೆ ಮಲಯ ಮಾರುತ, ಬೇಡುವ ದೀನರಿಗೆ ಕಲ್ಪವೃಕ್ಷ ಆಗಿದ್ದನು: ಅಲ್ಲದೆ, ಅವನು ಪರಾಕ್ರಮಶಾಲಿಯಾದ ಸೈನ್ಯವುಳ್ಳ ದೊರೆಯ ಮಗನೆನ್ನಿಸಿದ್ದನು.

೩೭. ರಾಮ (ನಳ) ರಾಜ್ಯಭಾರ ಮಾಡುತ್ತಿದ್ದಾಗ, ಹಸುಗಳು ಕೊಡಪಾಲ ಕೊಟ್ಟವು, ಭೂಮಿಯು ಫಲಪೂರ್ಣವಾಗಿ ಪ್ರಕಾಶಿಸಿತು ಮತ್ತು ದುರ್ವ್ಯಸನಗಳು ಚಂಡಾಲನನ್ನು ಕೂಡ ಬಿಟ್ಟು ಕಾಡಿಗೆ ಹೋದವು.

೩೮. ಚಂದ್ರಪ್ರಭಮುನಿಯು ಪ್ರೈಯು ಜೀವರಿಲ್ಲದಿರುವಿಕೆಯೇ ಮೊದಲಾದ ಹತ್ತು ಹುಟ್ಟುಗುಣಗಳಿಂದ ಕೂಡಿದ್ದೂ ಜಗತ್ತಿಗೇ ಬೆಳಕನ್ನು ಕೊಡುವಂಥದ್ದೂ ಸೂರ್ಯನಷ್ಟು ಪ್ರಕಾಶಮಾನವಾದದ್ದೂ ಆಗಿ ಹೊಳೆಯಿತು.

೩೯. ಆತನು ಎಲ್ಲೆಲ್ಲಿ ವಿಹರಿಸಿದನೋ ಅಲ್ಲಲ್ಲಿ ಎರಡು ಯೋಜನಗಳ ತ್ರಿಜ್ಯೆಯಲ್ಲಿ ಜನಪ್ರೀತಿಗಾಗಿ ಸುಭಿಕ್ಷೆ ಉಂಟಾಯಿತು.

೪೦. ಅವನ ಆಕಾಶಗಮನವು ಎಲ್ಲರಿಗೂ ಸಂತೋಷವನ್ನು ಉಂಟು ಮಾಡಿತು; ಪ್ರಾಣಿ-ಪ್ರಾಣಿಗಳಲ್ಲಿ ಪರಸ್ಪರ ವಿರೋಧವಿಲ್ಲದಂತಾಯಿತು.

೪೧. ಚತುರ್ಮುಖಿಬ್ರಹ್ಮಸಂಘ ರೂಪಾತಿಶಯದಿಂದ ಕೂಡಿದ ಆ ಮುನಿಯನ್ನು (ಕಂಡು) ಜಾಣನಾದ ಯಾವನು ತಾನೇ ಎದ್ದು ನಮಸ್ಕರಿಸದೆ ಉಳಿದಿದ್ದನು ?

೪೨. ಭೋಗ–ರೋಗ, ಚಿನ್ನ–ಹುಲ್ಲುಕಡ್ಡಿ, ಹಗೆ–ಗೆಳೆಯ, ಪಟ್ಟಣ–ವನ ಎಂಬಿವುಗಳನ್ನು ಸಮಾನವೆಂದು ಧರ್ಮನಾಥದೇವನು ತಿಳಿದನು. ಅವನ ವಿಶೇಷಜ್ಞತೆಗೆ ಇದೊಂದೇ ಗಡಿಗೆರೆಯಾಗಿತ್ತು.

೪೩. ಆತನು ಸತ್ಯವೂ ಪಥ್ಯವೂ ಆದದ್ದೇನಾದರೂ ಇದ್ದರೆ ಅದನ್ನು ಹೇಳುತ್ತಿದ್ದನು; ಯಾರಾದರೂ ಬಡಿಸಿದ ಪಕ್ವವೂ ಪರಿಶುದ್ಧವೂ ಆದುದೇನಾದರೂ ಇದ್ದರೆ ಅದನ್ನು ಉಣ್ಣುತ್ತಿದ್ದನು; ಇರುಳನ್ನುಳಿದು ಬೇರೆ ಕಾಲವೇನಾದರೂ ಇದ್ದರೆ ಅದನ್ನು ಗಮನಿಸಿ ತಿರುಗಾಡಲು ಹೋಗುತ್ತಿದ್ದನು; ಅವನ ಕೆಲಸ ಏನಿದ್ದರೂ ಅವೆಲ್ಲವೂ ಶಾಸ್ತ್ರಾನುಸಾರವಾಗಿದ್ದವು.

೪೪. ಧರ್ಮನಾಥನು ವ್ಯಾಮೋಹ, ಮದ, ಪ್ರಪಂಚದ ಮೇಲಿನ ಆಸೆ ಸಹವಾಸದ ಬಯಕೆ, ಭಯ, ಮಮಕಾರಗಳನ್ನು ಬಿಟ್ಟು ದೇಶ-ದೇಶಗಳಲ್ಲಿ ಸಂಚರಿಸುತ್ತಿದ್ದಾಗ, ಸಂಯಮಶೀಲರಾದ ಯಾರಿಗೆ ಮೋಕ್ಷಶಿಕ್ಷಣವನ್ನು ಪಡೆಯಲು ಕಾರಣವಾಗದಿದ್ದಾನು ?

नो दौर्भिक्षं नेतयो नोपसर्गा
नो दारिद्र्यं नोपघातो न रोगाः ।
तन्माहात्म्याद्योजनानां शते द्वे
नाभूत् किंचित्क्वापि कर्माप्यनिष्टम् ॥४५॥

निष्पन्दाया ज्ञानदृष्टेरिवापुः
पक्ष्मस्पन्दं स्पर्धया नेक्षणानि ।
वृद्धिं प्रापुर्नाङ्गजा वा नखा वा
तस्यावश्य योगनिद्रास्थितस्य ॥४६॥

भद्राख्यः प्रमदोज्वलश्च सततं यो राजहंसश्रिया
भ्राजिष्णुः सुकुमारतां समगमद्यो वै घनोद्भासितः ।
स श्रीमाञ्जयति प्रकाममसुरश्रेणीकृपाणी हरिर्
गङ्गावद्गजगण्डवद् गगनवद् गाङ्गेयवद् गेयवत् ॥४७॥

गङ्गा पादसरोजपुष्परसति व्यालाधिपस्तत्पति
त्रैलोक्यं च कुटुम्बति द्विरसनद्वेषी रथत्यण्डजः ।
कालः शस्त्रति शासना–यनुदिनं सा वेदवाणी गृह-
त्यब्धिर्यस्य रमाविलासरसिके तस्मिन्न किं सद्गुणाः ॥४८॥

यैः क्रियते जगति बलादक्षतरक्षोभिमानसारोद्धारः ।
ते पार्थास्तव दर्पं दक्षतरक्षोभिमानसारोद्धारः ॥४९॥

यः सुतरां ज्यायस्तः पतगानां यस्य दृढनराज्यायस्तः ।
यो न हराज्यायस्तः स च भीमश्च प्रभू स्वराज्याय स्तः
॥५०॥

೪೫. ಅವನ ಸುತ್ತ ೨೦೦ ಯೋಜನಗಳ ವರೆಗೆ ಅವನ ಪ್ರಭಾವದ ದೆಸೆಯಿಂದ ಈತಿಬಾಧೆ, ಮರಣಸೂಚನೆ, ಬಡತನ, ಅಪಾಯ, ಕಾಯಿಲೆಗಳು ಉಂಟಾಗಲಿಲ್ಲ.

೪೬. ಆತನ ಕಣ್ಣುಗಳು ಸ್ಪಂದಿಸಲು ಪೈಪೋಟಿ ನಡೆಸದೆ ಜ್ಞಾನವೃತ್ತಿಯು ನಿಷ್ಪಂದತೆಯನ್ನು ಪಡೆದವು: ಯೋಗನಿದ್ರೆಯಲ್ಲಿದ್ದ ಅವನ ಉಗುರು–ಕೂದಲುಗಳು ಬೆಳೆಯಲಿಲ್ಲ.

೪೭. ಶ್ರೀನಿವಾಸ (ವೆಂಕಟೇಶ) ಗಂಗೆಯಂತೆ ಮಂಗಲವಾದ ಹೆಸರನ್ನುಳ್ಳವನು; ಗಂಗಾಪ್ರವಾಹವೊಂದಕ್ಕೆ ಭದ್ರೆ(=ಮಂಗಲೆ)ಯೆಂಬ ಹೆಸರಿದೆ. ಅವನು ಆನೆಯ ಗಂಡಸ್ಥಳದಂತೆ ಸಂತೋಷ (=ಪ್ರಮದ)ಉಳ್ಳವನಾಗಿದ್ದಾನೆ; ಆನೆಯ ಗಂಡಸ್ಥಳದಲ್ಲಿ ಮದೋದಕವಿದೆಯೆಂಬುದು ಕವಿಸಮಯ ಪ್ರಸಿದ್ಧ. ಆತನು ಆಕಾಶದಂತೆ ರಾಜಶ್ರೇಷ್ಠನ ಸಂಪತ್ತನ್ನು (=ರಾಜಹಂಸ ಶ್ರೀಃ) ಉಳ್ಳವನಾಗಿದ್ದಾನೆ; ಆಕಾಶದ ಸಂಪತ್ತು ಚಂದ್ರಸೂರ್ಯರ ಶೋಭೆ. ಅವನು ಗಂಗೆಯಲ್ಲಿ ಹುಟ್ಟಿದವನಷ್ಟು ಸುಕುಮಾರನು; (ಗಾಂಗೇಯನೆಂದರೆ ಕುಮಾರ ಅಥವಾ ಕಾರ್ತಿಕೇಯ. ಅವನ ಸೌಕುಮಾರ್ಯವು ಪುರಾಣ ಪ್ರಸಿದ್ಧ). ಅವನು ಮೋಡದಂತೆ ಹೊಳೆಯುತ್ತಾನೆ; ಘನವೆಂಬ ವಾದ್ಯದ ಧ್ವನಿಯಂತೆ ಖ್ಯಾತನಾಗಿದ್ದಾನೆ (ಘನ=ಮೋಡ ಮತ್ತು ವಾದ್ಯಭೇದ).

೪೮. ಗಂಗೆಯು ಶ್ರೀನಿವಾಸನ ಪಾದಕಮಲ ಮಕರಂದವಾಗಿದ್ದಾಳೆ; ಹಾವುಗಳ ಒಡೆಯನು ಹಾಸಿಗೆಯಾಗಿದ್ದಾನೆ; ಮೂರುಲೋಕಗಳು ಅವನಿಗೆ ಕುಟುಂಬಸ್ಥಾನದಲ್ಲಿವೆ: ಸರ್ಪಶತ್ರುವಾದ ಗರುಡನು ಅವನಿಗೆ ತೇರಾಗಿದ್ದಾನೆ; ಕಾಲವು ಅವನ ಆಯುಧವಾಗಿದೆ; ಯಾವಾಗಲೂ ವೇದವಾಣಿಯು ಅವನ ಅಪ್ಪಣೆಯಾಗಿ ನಡೆದುಕೊಳ್ಳುತ್ತದೆ; ಕಡಲು ಅವನ ಮನೆಯಾಗಿದೆ. ಹೀಗಿರುವಾಗ ಲಕ್ಷ್ಮಿಯು ವಿಲಾಸದಲ್ಲಿ ಅಭಿರುಚಿಯುಳ್ಳ ಅವನಲ್ಲಿ ಯಾವ ಸದ್ಗುಣ ಇಲ್ಲವೆಂದು ಹೇಳಲು ಬಂದೀತು ?

೪೯. ಕುಂತಿಯ ಮಕ್ಕಳು ಈ ಲೋಕದಲ್ಲಿ ತಮ್ಮ ಬಲದಿಂದ ರಾಕ್ಷಸರ ಅಭಿಮಾನದ ಸಾರವನ್ನು ಕಿತ್ತೆಸೆದು ಗಾಯಗೊಳ್ಳದೆ ಉಳಿದರು; ಎಲೈ ಕೌರವನೇ, ಅವರು ಪ್ರಕ್ಷುಬ್ಧಮನಸ್ಕರಾಗಿ ಇನ್ನೂ ಹೆಚ್ಚು ದಕ್ಷತೆಯಿಂದ ನಿನ್ನ ಸೊಕ್ಕನ್ನು ತಡೆಹಿಡಿಯುತ್ತಾರೆ.

೫೦. ಹಕ್ಕಿಗಳ ಹಿರಿಯನಾದ ಗರುಡನಿಗಿಂತಲೂ ಅರ್ಜುನನು ಹೆಚ್ಚುವೇಗವುಳ್ಳವನು: ಅವನಿಗೆ ಕಬ್ಬಿಣಕ್ಕಿಂತಲೂ ಹೆಚ್ಚು ದಾರ್ಢ್ಯವುಳ್ಳ ಬಿಲ್ಲಿನ ಹುರಿಯಿದೆ; ಅವನು ಹರನೊಡನೆ ಹೋರಾಡುವಾಗ ಖಿನ್ನನಾಗಲಿಲ್ಲ. ಅಂಥ ಅರ್ಜುನನೂ ಭೀಮನೂ ತಮ್ಮ ರಾಜ್ಯವನ್ನು ಸಂಪಾದಿಸಿಕೊಳ್ಳಲು ಸಮರ್ಥರು.

न सुखं प्रार्थये नार्थमुदन्वद्वीचिचञ्चलम् ।
नानित्यताशने स्त्रस्यन् विविक्तं ब्रह्मणःपदम् ।।५१।।

प्रमार्ष्टुमयशः पङ्कमिच्छेयं छद्मना कृतम् ।
वैधव्यतापितारातिवनितालोचनाम्बुभिः । ५२।।

कृतं पुरुषशब्देन जातिमात्रावलम्बिना ।
योऽङ्गीकृतगुणैःश्लाघ्यः सविस्मयमुदाहृतः ।।५३।।

ग्रसमानमिवौजांसि सदसा गौरवेरितम् ।
नाम यस्याभिनन्दन्ति द्विषोऽपि स पुमान् पुमान् ।।५४।।

न रागिचेतः परमा विलासिता
वधूःशरीरेऽस्ति न चास्ति मन्मथः ।
नमस्क्रिया चोषसि धातुरित्यहो
निसर्गदुर्बोधमिदं तवेहितम् ।।५५।।

तत्कृतं यन्न केनापि तद्दत्तं यन्न केनचित् ।
तत्साधितमसाध्यं यद्विक्रमार्केण भूभुजा ।।५६।।

धाराधीश धरामहेन्द्रगणनाकौतूहली यामयं
वेधास्त्वद्गणने चकार खटिकाखण्डेन रेखांदिवि ।
सैवेयं त्रिदशापगा समभवत्त्वत्तुल्यभूमीधरा-
भावात्तु त्यजति स्म सोऽयमवनीपृष्ठे तुषाराचलः ।।५७।।

೫೧. ಅರ್ಜುನನೆಂದ—"ಕದಲಲೆಗಳಂತೆ ನಶ್ವರವಾದ ಸುಖವನ್ನಾಗಲಿ, ಅರ್ಥವನ್ನಾಗಲಿ ನಾನು ಬೇಡೆನು; ಅಷ್ಟೇ ಅಲ್ಲ—ನಶ್ವರತೆ ಎಂಬ ಸಿಡಿಲಿಗಂಜಿ, ಬಾಧಾರಹಿತವಾದ ಮುಕ್ತಿಪದವನ್ನೂ ಯಾಚಿಸೆನು."

೫೨. ಅವನು ಮತ್ತೂ ಹೇಳಿದ್ದೇನೆಂದರೆ—"ವೈಧವ್ಯದಿಂದ ಸುಟ್ಟ ಶತ್ರು ಪತ್ನಿಯರ ಕಣ್ಣೀರಿಂದ, ಮೋಸದಿಂದ ನಮ್ಮ ಮೇಲೆ ಎಸೆಯಲಾದ ಅಪಕೀರ್ತಿಯ ಕೆಸರನ್ನು ತೊಳೆಯಬಯಸುತ್ತೇನೆ."

೫೩. "ಪ್ರಾಣಿಗಳಿಗೂ ಮನುಷ್ಯರಿಗೂ ಸಾಧಾರಣವಾದ ಪುಲ್ಲಿಂಗ ಜಾತಿ ವಾಚಕವೆನ್ನಿಸಿದ 'ಪುರುಷ' ಎಂಬ ಹೆಸರು ಸಾಕು (ಅದು ನಿರರ್ಥಕ); ಸಮಾಜವು ಆಶ್ಚರ್ಯದಿಂದ ಮನ್ನಿಸಿ ತೋರಿಸುವ ಪುರುಷಗುಣಗಳಿಂದ ಕೂಡಿದವನೇ ಪ್ರಶಸ್ತನು" —ಎಂಬುದು ಅರ್ಜುನ ತನಗನ್ವಯಿಸಿಕೊಂಡ ನಾಯಕತ್ವದ ನಿಕಷ.

೫೪. "ಸಭೆಯಲ್ಲಿ ಗೌರವದಿಂದ ಮಾತನಾಡುವ ಸಂದರ್ಭದಲ್ಲಿ ಯಾವನ ತೇಜಸ್ಸಿನ ಬಗೆಗೆ ಕೇಳುವಾಗ ಅವನ ಹೆಸರನ್ನು ನುಂಗುವಂತೆ ಅದು ಕುಳ್ಳಿರುವುದೋ ಮತ್ತು ಹಗೆಗಳೂ ಅದನ್ನು ಒಪ್ಪುವರೋ ಅವನೇ ನಿಜವಾದ ಗಂಡಸು"—ಎಂಬುದು ಅರ್ಜುನಮತ.

೫೫. ಎಲೈ ದೇವನೇ, ನಿನ್ನ ಮನಸ್ಸು ರಾಗರಹಿತ; ಆದರೂ ನೀನು ವಿಲಾಸಿ ತನದ ಪರಾಕಾಷ್ಠೆಯಲ್ಲಿರುವೆ. ನಿನ್ನ ಶರೀರಾರ್ಧದಲ್ಲಿ ನಿನ್ನ ಹೆಂಡತಿ ಇದ್ದಾಳೆ; ಆದರೂ ಅಲ್ಲಿ ಕಾಮನಿಲ್ಲ, (ಸ್ವಯಂ ಸರ್ವವಂದ್ಯನಾದ ನೀನು) ಉಷಃಕಾಲದಲ್ಲಿ ಬ್ರಹ್ಮನಿಗೆ ನಮಸ್ಕಾರ ಮಾಡುವೆ. ಹೀಗೆ(ಪರಸ್ಪರ ವಿರುದ್ಧವಾದ) ನಿನ್ನ ನಡತೆಯು ಸ್ವಭಾವತಃ ಅರಿಯಲರಿದು"—ಎಂಬುದು ಅರ್ಜುನ ಮಾಡಿದ ಶಿವಪುರುಷತ್ವದ ವರ್ಣನೆ.

೫೬. ವಿಕ್ರಮಾದಿತ್ಯ ಮಾಡಿದ್ದನ್ನು ಇನ್ನಾವನೂ ಮಾಡಿಲ್ಲ; ಅವನು ಮಾಡಿದಷ್ಟು ದಾನವನ್ನು ಇನ್ನಾವನೂ ಮಾಡಿಲ್ಲ; ಆತನು (ಅನ್ಯರಿಗೆ) ಅಸಾಧ್ಯವೆನ್ನಿಸಿದ ಎಲ್ಲವನ್ನೂ ಸಾಧಿಸಿದನು.

೫೭. ಎಲೈ ಭೋಜರಾಜನೇ, ಬ್ರಹ್ಮನಿಗೆ ಒಮ್ಮೆ ಭೂಮಿಯಲ್ಲಿರುವ ಅರಸರನ್ನು ಎಣಿಸುವ ಕುತೂಹಲವುಂಟಾಯ್ತು; ಆಗ ಅವನು ಸೀಮೆಯ ಸುಣ್ಣದ ತುಂಡಿನಿಂದ ಆಕಾಶದಲ್ಲಿ ಒಂದು ಗೆರೆ ಎಳೆದನು; ಆ ಗೆರೆಯೇ ದೇವನದಿ(ಅಲಕನಂದೆ) ಯಾಯ್ತು; ನಿನ್ನಂಥ ದೊರೆಗಳಿಲ್ಲವಾದುದರಿಂದ ಭೂಮಿಯ ಬೆನ್ನಿನ ಮೇಲಿರುವ ಹಿಮಾಲಯ ಪರ್ವತವು ಭೂಮಿಯನ್ನು ಬಿಡುತ್ತದೆ (ಬಿಟ್ಟು ಆಕಾಶದತ್ತ ಏರುತ್ತಿದೆ) ಎನ್ನಬಹುದಲ್ಲವೇ !

मागाः प्रत्युपकारकातरधिया वैवर्ण्यमाकर्णय
श्रीकर्णाटवसुन्धराधिपसुधासिक्तानि सूक्तानि नः ।
वर्ण्यन्ते कति नाम नार्णवनदीदावाग्निविन्ध्याटवी-
सन्ध्यामारुतनिर्झरप्रभृतयस्तेभ्यः किमाप्तं मया ॥५८॥

आबाहूद्गतमण्डलाग्ररुचयः संनद्धवक्षःस्थलाः
सोष्माणो व्रणिनो विपक्षहृदयप्रोन्माथिनः कर्कशाः ।
उत्सृष्टाम्बरदृष्टविग्रहभरा यस्य स्मराग्रेसरा
योधावारवधूस्तनाश्च न दधुः क्षोभं स वोऽव्याज्जिनः
॥५९॥

मन्दश्चन्द्रकिरीटपूजनरसे तृष्णा न कृष्णार्चने
स्तम्भः शम्भुनितम्बिनीप्रणतिषु व्यग्रो न धातुर्गृहे ।
अस्माकं परमर्दनोऽस्ति वदने न्यस्तेन संरक्षितः
पृथ्वीराजनरेश्वरादिति तृणं तत्पत्तने पूज्यते ॥६०॥

कम्पक्षितीशमनिशं कथयन्ति सन्तः
सङ्गीतदुग्धजलधेरुदितं सुधांशुम् ।
साहित्यमानससरोवरराजहंसं
सङ्ग्रामरङ्गनटनस्थितिसूत्रधारम् ॥६१॥

वीरश्रीकम्पराजोऽस्ति विदुषां सञ्चरन्निधिः ।
यत्कीर्तिकामिनीहस्ते ब्रह्माण्डं कन्दुकायते ॥६२॥

ओमित्यनेति युवयोरभिधानमेकं
सृष्ट्यादि सृष्ट्यवधितागुणमात्र भिन्नम् ।
एकं च तावदभिधेयमपीह रूपं
वेणी जटेति कचसंहतिभेदभिन्नम् ॥६३॥

೫೮. ಎಲೈ, ಪ್ರತ್ಯುಪಕಾರ ಮಾಡಬೇಕಾದೀತಲ್ಲಾ—ಎಂಬ ಭಯದಿಂದ ನೀನು ಪೆಚ್ಚಾಗಬೇಡ; ನಮ್ಮ ಶ್ರೀಮಂತವಾದ ಕರ್ಣಾಟಕ ನಾಡಿನ ದೊರೆಯು ಅಮೃತ ಬಿಂದುಗಳಿಂದ ಸಿಂಪಡಿಸಲ್ಪಟ್ಟ ಗೀತಗಳನ್ನು ಕೇಳು: ಎಷ್ಟು ಕಡಲು, ಹೊಳೆ, ಕಾಳ್ಗಿಚ್ಚು, ವಿಂಧ್ಯ ಪರ್ವತದ ಅಡವಿ, ಸಂಜೆಗಾಳಿ, ಬೆಟ್ಟದೊರೆ ಮುಂತಾದವು ಬಣ್ಣಿಸಲ್ಪಡುವುದಿಲ್ಲ? ಹಾಗೆ ವರ್ಣಿತವಾದವುಗಳಿಂದ ಏನನ್ನು ನಾನು ಪಡೆದು-ಕೊಂಡೆ? (ಉಕ್ತ ಗೀತಗಳನ್ನು!)

೫೯. ಕಂಚುಳಿಂದ ಎದ್ದುನಿಂತ ವೃತ್ತಾಕಾರದ ತುದಿಯ ಕಾಂತಿಯುಳ್ಳ, ಎದೆಯನ್ನು ತುಂಬಿಕೊಂಡಿರುವ, ಬೆಚ್ಚಗಿರುವ (ಉಗುರು) ಗಾಯಗಳಿಂದ ಕೂಡಿದ, ಎದುರಾದವರ ಎದೆಯನ್ನು ಕಡೆದು ನೀರುಮಾಡುವ, ಕಠಿನಸ್ವಭಾವದ, ಬಿಚ್ಚಿ ಕಿತ್ತೊಗೆದು ಕಾಣಿಸುವಂತೆ ನಿಂತ ಮೂರ್ತತೆಯಿಂದ ಕೂಡಿದ ಮತ್ತು ಮನ್ಮಥನಿಗಿಂತ ಮೊದಲು ಮುಂದೆ ಬರುವ— ವೇಶ್ಯಾಸ್ತನಗಳೆಂಬ– ಬಂಟರು ಕ್ಷೋಭೆಯನ್ನುಂಟು ಮಾಡದಿರುವ ಶ್ರೀ ಬುದ್ಧದೇವನು ನಿಮ್ಮನ್ನು ಕಾಯಲಿ.

೬೦. ಶಿವಪೂಜೆಯಲ್ಲಿ ನನಗೆ ಅಭಿರುಚಿಯಿಲ್ಲ; ಕೃಷ್ಣನ ಪೂಜೆಯಲ್ಲಿಯೂ ಆಸೆಯಿಲ್ಲ; ಪಾರ್ವತೀದೇವಿಗೆ ನಮಸ್ಕಾರ ಹಾಕುವುದರಲ್ಲಿ ನಾನು ತಟಸ್ಥನು; ಬ್ರಹ್ಮಾಲಯದಲ್ಲಿ ಆಸಕ್ತಿಯನ್ನು ನಾನು ತಾಳಲಾರೆನು; ನಮ್ಮ ಹತ್ತಿರ ಒಂದು ಶತ್ರುಸಂಹಾರಕ ವಸ್ತುವಿದೆ; ಅದನ್ನು ಬಾಯಲ್ಲಿಟ್ಟುಕೊಂಡರೆ ಸಾಕು, (ಭಾರತೀ-ಯನು)ಪೃಥ್ವೀರಾಜನಿಂದ ರಕ್ಷಿತನಾಗುತ್ತಾನೆ— ಎಂಬ ನಂಬಿಗೆಯಿಂದ ಅವನ (ರಾಜಧಾನೀ) ನಗರದಲ್ಲಿ ಹುಲ್ಲುಕಡ್ಡಿಯು ಪೂಜಿಸಲ್ಪಡುತ್ತಿದೆ !

೬೧. ವೀರಕಂಪಣರಾಯನನ್ನು ಸಂಗೀತವೆಂಬ ಹಾಲುಗಡಲಲ್ಲಿ ಹುಟ್ಟಿದ ಚಂದ್ರನೆಂದೂ ಸಾಹಿತ್ಯವೆಂಬ ಮಾನಸಸರೋವರದ ರಾಜಹಂಸವೆಂದೂ ಯುದ್ಧವೆಂಬ ರಂಗಸ್ಥಳದಲ್ಲಿ ಕುಣಿಯುವ ರುದ್ರನೆಂದೂ ಯಾವಾಗಲೂ ತಿಳಿದವರು ಹೇಳುತ್ತಾರೆ.

೬೨. ವೀರಶ್ರೀಯುತನಾದ ಕಂಪರಾಜನು ವಿದ್ವಾಂಸರಿಗೆ ತಿರುಗಾಡುವ ನಿಕ್ಷೇಪಸ್ಥಾನವಾಗಿದ್ದಾನೆ; ಅವನ ಕೀರ್ತಿಯೆಂಬ ಸುಂದರಿಯು ಕೈಯಲ್ಲಿ ಬ್ರಹ್ಮಾಂಡವೊಂದು ಚೆಂಡಿನ ಗಾತ್ರಕ್ಕಿಳಿಯುತ್ತದೆ.

೬೩. (ಎಲೈ ಶಿವ-ಪಾರ್ವತಿಯರೇ) “ಓಂ” ಮತ್ತು “ಉಮೆ” ಎಂಬ ಒಂದೇ ಹೆಸರನ್ನುಳ್ಳವರು ನೀವು; ಸೃಷ್ಟಿಯ ಆದಿಯಿಂದ ಅಂತ್ಯದವರೆಗೆ ಇರುವ ಗುಣದಿಂದ ಮಾತ್ರ ನೀವು ಭಿನ್ನರು; ಹೆಸರು ಒಂದೇ ಆದರೂ ನಿಮ್ಮ ರೂಪದಲ್ಲಿ ಪ್ರತಿಗೂಡಲ ಗಂಟಿಗೆ “ಜಡೆ” ಮತ್ತು “ಜಟೆ” ಎಂಬ ಎರಡು ಹೆಸರುಗಳಿರುವಷ್ಟೇ ಪ್ರತ್ಯೇಕತೆಯಿದೆ— ಎಂದು ನಾರಾಯಣ ನುತಿಸುತ್ತಾನೆ.

भुञ्जीथा न हलाहलं यदि महादेव त्वमेवं विधं
भुञ्जीरन् किमिमे सुराश्चरुपुरोडाशादिहव्यं मखे ।
आसीथा न यदि स्वयं पितृवने भूतानि संमोहयन्
आसीरन् किमिमे जनाः सुकृतिनो हर्म्येषु सौधेषु च ॥६४॥

दृप्तदानवनिशाचर वर्गस्
तत्र गाण्डिवभृता निहतोऽपि ।
तन्निषङ्गयुगबाणगणानां
संख्यया प्रतिभटत्वमकार्षीत् ॥६५॥

राज्ञां मौलिपरम्परां चरणयोः पाणौ प्रदानश्रियं
बुद्धौ राजनयोदयं हृदि कृपां सत्यं च जिह्वाञ्चले ।
बाहौ सागरमेखलां वसुमतीं मस्ते किरीटं मुदा
कुर्वन् धर्मतनूभवश्चिरमसौ गोपायति स्म प्रजाः ॥६६॥

राज्यं दश सहस्राणि प्राप्य वर्षाणि राघवः
शताश्वमेधानाजह्रे सदश्वान् भूरिदक्षिणान् ॥६७॥

आजानुलम्बबाहुः स महास्कन्धः प्रतापवान्
लक्ष्मणानुचरो रामः पृथिवीमन्वपालयत् ॥६८॥

राघवश्चाऽपि धर्मात्मा प्राप्य राज्यमनुत्तमम्
ईजे बहुविधैर्यज्ञैः ससुहृज्ज्ञातिबान्धवैः ॥६९॥

न पर्यदेवन् विधवा न च व्यालकृतं भयम् ।
न व्याधिजं भयं वापि रामे राज्यं प्रशासति ॥७०॥

निर्दस्युरभवल्लोकोनानर्थः कंचिदस्पृशत् ।
न च स्म वृद्धा बालानां प्रेतकार्याणि कुर्वते ॥७१॥

೬೪. ಎಲೈ ಮಹಾದೇವನೇ, ನೀನು ಹೀಗೆ ಹಾಲಾಹಲ ವಿಷವನ್ನು ನುಂಗ ದಿದ್ದರೆ, ಯಜ್ಞದಲ್ಲಿ ಈ ದೇವತೆಗಳು ಚರು-ಪುರೋಡಾಶ ಮುಂತಾದ ಹವಿಸ್ಸನ್ನು ತಿನ್ನುತ್ತಿದ್ದರೆ (ತಿನ್ನಲು ಶಕ್ತರಾಗುತ್ತಿದ್ದರೆ ?), ನೀನು ಸ್ವೇಚ್ಛಾನುಸಾರ ಭೂತಗಳನ್ನು ಮರುಳಿಗೊಳಿಸಿ ಸ್ಮಶಾನದಲ್ಲಿ ಕುಳಿತುಕೊಳ್ಳದೆ ಹೋಗಿದ್ದರೆ, ಈ ಪುಣ್ಯವಂತರು ಅರಮನೆ–ಉಪ್ಪರಿಗೆ ಮನೆಗಳಲ್ಲಿ ಕುಳಿತುಕೊಳ್ಳುತ್ತಿದ್ದರೆ ? (ಕುಳಿತಿರಲು ಶಕ್ತರಾಗು ತ್ತಿದ್ದರೆ ?)

೬೫. ಗರ್ವಿಗಳಾದ ದಾನವರ ಹಾಗೂ ಇರುಳಲೆಗರ ವರ್ಗವು ಗಾಂಡೀವ ಧನುರ್ಧರನಾದ ಅರ್ಜುನನಿಂದ ಕೊಲ್ಲಲ್ಪಟ್ಟರೂ ಅವನ ಎರಡು ಬತ್ತಳಿಕೆಗಳಲ್ಲಿದ್ದ ಅಂಬುಗಳಿಗೆ ಸಂಖ್ಯಾಬಲದಿಂದ ಎದುರಾಳಾಯಿತು.

೬೬. ಸಾಮಂತರ ಕಿರೀಟಗಳ ಸಾಲುಗಳನ್ನು ತನ್ನ ಚರಣತಲದಲ್ಲಿರಿಸಿ, ದಾನದ ಸಿರಿಯನ್ನು ಕೈಯಲ್ಲಿಟ್ಟು, ರಾಜನೀತಿಯ ಪ್ರಗತಿಯನ್ನು ಬುದ್ಧಿಯಲ್ಲಿ ಸಾಧಿಸಿ, ಹೃದಯದಲ್ಲಿ ಭೂತದಯೆಯನ್ನು ಬೆಳೆಸಿಕೊಂಡು, ನಾಲಿಗೆಯ ತುದಿಯಲ್ಲಿ ಸತ್ಯವನ್ನಿರಿಸಿ, ಚತುಃಸಮುದ್ರ ಸೀಮಿತವಾದ ಭೂಮಿಯನ್ನು ತೋಳುಗಳಲ್ಲಿ ಹೊತ್ತು ಮತ್ತು ತಲೆಯ ಮೇಲೆ ಕಿರೀಟವನ್ನು ಧರಿಸಿ ಧರ್ಮರಾಯನು ಸಂತೋಷದಿಂದ ಪ್ರಜೆಗಳನ್ನು ಬಹುಕಾಲ ಕಾಪಾಡಿದನು.

೬೭. ಶ್ರೀರಾಮನು ರಾಜ್ಯವನ್ನು ಪಡೆದು ೧೦,೦೦೦ ವರ್ಷಗಳ ವರೆಗೆ ಒಳ್ಳೆಯ ಕುದುರೆಗಳಿಂದ ಮತ್ತು ಭೂರಿದಕ್ಷಿಣೆಗಳಿಂದ ಸಹಿತವಾದ ನೂರು ಅಶ್ವ-ಮೇಧ ಯಾಗಗಳನ್ನು ಮಾಡಿದನು.

೬೮. ಅಜಾನುಬಾಹುವಾದ ಆತನು ದೊಡ್ಡ ಹೆಗಲಿನ ಪರಾಕ್ರಮಿ; ಅವನಿಗೆ ಲಕ್ಷ್ಮಣನು (ಸದಾ) ಅನುಯಾಯಿ; ಅಂಥ ರಾಮಚಂದ್ರನು ಸತ್‌ಪರಂಪರಾನುಸಾರ ವಾಗಿ ಜಗತ್ತನ್ನು ಕಾಪಾಡಿದನು;

೬೯. ಧರ್ಮಾತ್ಮನಾದ ಶ್ರೀರಾಮನು ಅತ್ಯುತ್ತಮವಾದ ರಾಜ್ಯ ದೊರಕಿದ ಮೇಲೆ ನಾನಾ ವಿಧದ ಯಜ್ಞಗಳನ್ನು ಗೆಳೆಯರಿಂದ ಹಾಗೂ ಬಾಂಧವರಿಂದ ಕೂಡಿ ಮಾಡಿದನು.

೭೦. ಶ್ರೀರಾಮನು ರಾಜ್ಯಭಾರ ಮಾಡುತ್ತಿದ್ದಾಗ ವಿಧವೆಯರು ಅಳಲಿಲ್ಲ, ದುಷ್ಟರ ಹಾಗೂ ರೋಗರುಜೆಗಳ ಭಯ (ಜನರಿಗೆ) ಇರಲಿಲ್ಲ.

೭೧. (ರಾಮರಾಜ್ಯದಲ್ಲಿ) ಲೋಕವು ಕಳ್ಳರ ಬಾಧೆಯಿಂದ ಮುಕ್ತವಾಯಿತು. ಯಾರಿಗೂ ಅನರ್ಥ ಉಂಟಾಗಲಿಲ್ಲ ಮತ್ತು ಮುದುಕರು ಎಳೆಯರ ಉತ್ತರಕ್ರಿಯೆ ಗಳನ್ನು ಮಾಡುವ ಸಂದರ್ಭ ಉಂಟಾಗಲಿಲ್ಲ.

सर्वं मुदितमेवासीत् सर्वो धर्मपरोऽभवत् ।
राममेवानुपश्यन्तो नाभ्यहिंसन् परस्परम् ॥७२॥

आसन् वर्षसहस्राणि तथा पुत्रसहस्रिणः ।
निरामया विशोकाश्च रामे राज्यं प्रशासति ॥७३॥

रामो राम राम इति प्रजानामभवन् कथाः ।
रामभूतं जगदभूद्रामे राज्यं प्रशासति ॥७४॥

नित्यपुष्पा नित्यफलास्तरवः स्कन्धविस्तृताः ।
काले वर्षी च पर्जन्यः सुखस्पर्शश्च मारुतः ॥७५॥

ब्राह्मणाः क्षत्रिया वैश्याः शूद्रा लोभविवर्जिताः ।
स्वकर्मसु प्रवर्तन्ते तुष्टाः स्वैरेव कर्मभिः ॥७६॥

आसन् प्रजा धर्मरता रामे शासति नानृताः ।
सर्वे लक्षणसम्पन्नाः सर्वे धर्मपरायणाः ॥७७॥

वासुदेवः सङ्कर्षणः प्रद्युम्नः पुरुषः स्वयम्
अनिरुद्ध इति ब्रह्मन् मूर्तिव्यूहोऽभिधीयते ॥७८॥

स विश्वस्तैजसः प्राज्ञ स्तुरीय इति वृत्तिभिः ।
अर्थेन्द्रियाशयज्ञानैर्भगवान्परिभाव्यते ॥७९॥

अङ्गोपाङ्गायुधाकल्पैर्भगवांस्तच्चतुष्टयम् ।
बिभर्ति स्म चतुर्मूर्तिर्भगवान् हरिरीश्वरः ॥८०॥

೭೨. ಎಲ್ಲವೂ ಸಂತೋಷವೇ ಆಗಿತ್ತು; ಪ್ರತಿಯೊಬ್ಬನೂ ಕರ್ತವ್ಯಪರನಾದನು; ರಾಮನನ್ನೇ ಪದೇ ಪದೇ (ಮೇಲ್ಪಂಕ್ತಿಯನ್ನಾಗಿ) ಕಂಡು (ಜನರು) ಪರಸ್ಪರ ಹಿಂಸೆಯಲ್ಲಿ ತೊಡಗದಾದರು.

೭೩. ಶ್ರೀರಾಮನು ರಾಜ್ಯವಾಳುತ್ತಿದ್ದಾಗ (ಪ್ರಜೆಗಳು) ಬಹುಪುತ್ರರೂ ದೀರ್ಘಾಯುಗಳೂ ರೋಗದುಃಖರಹಿತರೂ ಆದರು.

೭೪. ಶ್ರೀರಾಮನ ಆಳಿಕೆಯಲ್ಲಿ ಪ್ರಜೆಗಳು (ಯಾವಾಗಲೂ) ರಾಮನ ಸುದ್ದಿಯನ್ನೇ ಎತ್ತಿಕೊಂಡು ಮಾತಾಡುತ್ತಿದ್ದರು; ಅವರ ಜಗತ್ತಿಡೀ ರಾಮಮಯವಾಗಿತ್ತು !

೭೫. (ರಾಮರಾಜ್ಯದಲ್ಲಿ) ಮರಗಿಡಗಳು ಸದಾ ಹೂ-ಹಣ್ಣುಗಳನ್ನು ಬಿಡುವ ವಿಸ್ತಾರವಾದ ಕೊಂಬೆಗಳಿಂದ ಕೂಡಿದ್ದವು; ಸರಿಯಾದ ಕಾಲದಲ್ಲಿ ಮಳೆ ಸುರಿಯುತ್ತಿತ್ತು ಮತ್ತು ಗಾಳಿಯು ಹಿತಕರವಾಗಿ ಬೀಸುತ್ತಿತ್ತು.

೭೬. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ ವೃತ್ತಿಯವರೆಲ್ಲರೂ ದುರಾಶಾಗ್ರಸ್ತರಾಗಿರಲಿಲ್ಲ; ಎಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿ ಅವುಗಳಿಂದಲೇ ತೃಪ್ತರಾಗಿರುತ್ತಿದ್ದರು.

೭೭. ಶ್ರೀರಾಮನು ಆಳುತ್ತಿದ್ದಾಗ ಪ್ರಜೆಗಳು ನೀತಿನಿಷ್ಠರಾದರು, ಯಾರೂ ಸುಳ್ಳು ಹೇಳದಾದರು; ಎಲ್ಲರೂ ಸಲ್ಲಕ್ಷಣ ಸಂಪನ್ನರೂ ದಾನಧರ್ಮಶೀಲರೂ ಆದರು.

೭೮. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬುದಾಗಿ—ಎಲ್ಲೈ ಬಾಹ್ಮಣನೇ—ಆ ಪರಮಪುರುಷನನ್ನು (ಆ ವಿಶ್ವೇಶ್ವರನನ್ನು) ಚತುರ್ ಮೂರ್ತಿಗಳ ಹೆಸರುಗಳಿಂದ ಕರೆಯುತ್ತಾರೆ.

೭೯. ಆ ಭಗವಂತನನ್ನು ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯ ಎಂದು–ವಿಷಯೇಂದ್ರಿಯಗಳ ಆಧಾರವಾಗಿರುವುದರ ದೆಸೆಯಿಂದ—(ವಿವಿಧನನ್ನಾಗಿ) ಎಣಿಸುತ್ತಾರೆ.

೮೦. ಅಂಗ–ಉಪಾಂಗ–ಆಯುಧ–ವೇಷಭೂಷಣಗಳನ್ನೂ ಹಾಗೇ ಆ ಭಗವಂತನಾದ ಹಾಗೂ ಈಶ್ವರನಾದ ವಿಷ್ಣುವು ತನ್ನ ನಾಲ್ಕು ಮೂರ್ತಿಗಳಲ್ಲಿ (ವಿವಿಧವಾಗಿ)ಧರಿಸಿದ್ದಾನೆ—ಎಂದು ಕಲ್ಪಿಸಲಾಗಿದೆ.

द्विजऋषभ स एष ब्रह्मयोनिः स्वयंदृक्
स्वमहिमपरिपूर्णो मायया च स्वयैतत् ।
सृजति हरति पातीत्याख्ययानावृताक्षो
विवृत इव निरुक्तस्तत्परैरात्मलभ्यः ॥८१॥

सत्सु राज्योपभोगेषु चित्तविभ्रमहेतुषु ।
स लेभे चोत्तमं लाभं शुद्धचित्तो गृहे वसन् ॥८२॥

जहौ राज्यं च धैर्येण गुणैराकृष्टवाञ्जनान् ।
यन्न पूर्वं ददौ कश्चित्तदगृध्नुरदादसौ ॥८३॥

धर्मं ररक्ष योगेन शर्म लेभे ह्यनुत्तमम् ।
चिकाय स यशोऽक्षय्यं यमं कामं जिगाय च ॥८४॥

गौरवे मेरुणा तुल्यः क्षमायां पृथिवीसमः ।
जलदेन समो दाता स मुनिर्नाद्य वर्तते ॥८५॥

पुत्रवल्लालितो लोकः शिष्यवच्छिक्षितस्तथा ।
प्रजावत्पालितो येन स मुनिर्नाद्य वर्तते ॥८६॥

हीयमानं तु तद्रक्षः समीक्ष्य पुरुषादकम् ।
निष्पिष्य भूमौ जानुभ्यां समाजघ्ने वृकोदरः ॥८७॥

ततोऽस्य जानुना पृष्ठमवपीड्य बलादिव
बाहुना परिजग्राह दक्षिणेन शिरोधराम् ॥८८॥

सव्येन च कटीदेशे गृह्य वाससि पाण्डवः ।
तद्रक्षो द्विगुणं चक्रे रवन्तं भैरवं रवम् ॥८९॥

೮೧. ಎಲೈ ಬ್ರಾಹ್ಮಣಶ್ರೇಷ್ಠನೇ:—ಅಂಥ ಪರಮೇಶ್ವರನು ಸೃಷ್ಟಿಕರ್ತನ ಜನಕ, ಸ್ವಯಂದರ್ಶಿ, ಪೂರ್ಣಮಹಿಮ; ಆತನು ತನ್ನ ಮಾಯೆಯಿಂದ ಈ ಜಗತ್ತನ್ನು ಹುಟ್ಟಿಸಿ ಸಲಹಿ ಕೊನೆಗೊಳಿಸುವವನು ಎಂಬ ಹೇಳಿಕೆಯಿಂದ ಅನಾವೃತಾಕ್ಷನೆನ್ನಿಸಿದ್ದಾನೆ; ಅವನನ್ನರಿತವರು (ಅವನ ಈ ಸೃಷ್ಟಿ-ಸ್ಥಿತಿ-ಲಯ ಕರ್ತೃತ್ವದ ದೃಷ್ಟಿಯಿಂದ) ಜಗತ್ತನ್ನು ಅವನ ವಿವರ್ತವೆನ್ನುತ್ತಾರೆ; ಅವರಿಗೆ ಆತ್ಮಜ್ಞಾನದಿಂದ ಅವನ ಜ್ಞಾನವಾಗುವುದು.

೮೨. ಮನಸ್ಸನ್ನು ಭ್ರಮೆಗೊಳಿಸುವ ರಾಜ್ಯೋಪಭೋಗಗಳಿದ್ದರೂ ಮನೆಯಲ್ಲೇ ಶುದ್ಧಚಿತ್ತನಾಗಿದ್ದು ಅಶೋಕ ಚಕ್ರವರ್ತಿಯು ಉತ್ತಮವಾದ ಧರ್ಮಲಾಭವನ್ನು ಹೊಂದಿದನು.

೮೩. ಬುದ್ಧದೇವನು ಧೈರ್ಯದಿಂದ ರಾಜ್ಯವನ್ನು ತ್ಯಜಿಸಿದನು; ಆತನು ತನ್ನ ಸುಗುಣಗಳಿಂದ ಜನತೆಯನ್ನು ಆಕರ್ಷಿಸಿದನು ಮತ್ತು ಲೋಭರಹಿತನಾಗಿ ಜಗತ್ತಿಗೆ ಇನ್ನಾವನೂ ಕೊಡದಿದ್ದಂಥ ದಾನವನ್ನು ಕೊಟ್ಟನು.

೮೪. ಆತನು ಯೋಗದಿಂದ ಧರ್ಮವನ್ನು ರಕ್ಷಿಸಿದನು, ಅತ್ಯುತ್ತಮವಾದ ಸುಖವನ್ನು ಪಡೆದನು, ಅಕ್ಷಯ ಕೀರ್ತಿಯನ್ನು ಸಂಪಾದಿಸಿದನು ಮತ್ತು ಯಮನನ್ನೂ ಕಾಮನನ್ನೂ ಜಯಿಸಿದನು.

೮೫. ಆ ಬುದ್ಧನು ಗೌರವದಲ್ಲಿ ಮೇರುಸಮಾನನು, ಕ್ಷಮೆಯಲ್ಲಿ ಭೂಮಿತಾಯಿಗೆ ಸರಿಸಮನು ಮತ್ತು ದಾನಿಗಳಲ್ಲಿ ಮೋಡಕ್ಕೆ ಸರಿದೊರೆ; ಅಂಥ ಮುನಿಯು ಈಗ ಇಲ್ಲ.

೮೬. ಲೋಕವನ್ನು ಮಗನೆಂದು ಮುದ್ದಾಡಿ, ಶಿಷ್ಯನೆಂದು ಪಾಠ ಕಲಿಸಿ, ಪ್ರಜೆಯೆಂದು ಪಾಲಿಸಿದ ಶಾಕ್ಯಮುನಿಯು ಈಗ ಇಲ್ಲ.

೮೭. ಹಿಮ್ಮೆಟ್ಟಿತೊಡಗಿದ ನರಭಕ್ಷಕ ರಾಕ್ಷಸನಾದ ಬಕನನ್ನು ನೋಡಿ ಭೀಮಸೇನನು ತನ್ನ ಮೊಣಕಾಲುಗಳಿಂದ ನೆಲಕ್ಕೆ ಒತ್ತಿ ಪುಡಿಯಾಗುವಂತೆ ತಿಕ್ಕಿದನು.

೮೮. ಅನಂತರ ತನ್ನ ಮೊಣಕಾಲಿನಿಂದ ಭೀಮನು ಅವನ ಬೆನ್ನನ್ನು ಒತ್ತಿ ಜೋರಾಗಿ ಬಲದೋಳಿನಿಂದ ಬಕನನ್ನು ತಲೆಕೆಳಗೆ ಮಾಡಿ ಹಿಡಿದನು.

೮೯. ಅವನು ಬಕನ ಸೊಂಟದ ವಸ್ತ್ರವನ್ನು ಎಡಗೈಯಿಂದ ಹಿಡಿದುಕೊಂಡಾಗ ಆ ರಾಕ್ಷಸನು ಎರಡುಪಟ್ಟು ಹೆಚ್ಚು ಭೀಕರವಾಗಿ ಚೀರಿದನು.

ततोऽस्य रुधिरं वक्त्रात् प्रादुरासोद्विशांपते ।
भज्यमानस्य भीमेन तस्य घोरस्य रक्षसः ॥९०॥

आसीद्राजा नलो नाम वीरसेनसुतो बली
उपपन्नोगुणैरिष्टै रूपवानश्वकोविदः ॥९१॥

अतिष्ठन्मनुजेन्द्राणां मूर्ध्नि देवपतिर्यथा ।
उपर्युपरि सर्वेषामादित्य इव तेजसा ॥९२॥

ब्रह्मण्यो वेदविच्छूरो निषधेषु महीपतिः ।
अक्षप्रियः सत्यवादी महानक्षौहिणी पतिः ॥९३॥

ईप्सितो वरनारीणामुदारः संयतेन्द्रियः ।
रक्षिता धन्विनां श्रेष्ठः साक्षादिव मनुःस्वयम् ॥९४॥

तस्यां पुर्यामयोध्यायां वेदवित्सर्वसंग्रहः ।
दीर्घदर्शी महातेजाः पौरजानपदप्रियः ॥९५॥

इक्ष्वाकूणामतिरथो यज्वा धर्मरतो वशी ।
महर्षिकल्पो राजर्षिस्त्रिषुलोकेषु विश्रुतः ॥९६॥

बलवान्निहतामित्रो मित्रवान् विजितेन्द्रियः ।
धनैश्च सञ्चयैश्चान्यैः शक्रवैश्रवणोपमः ॥९७॥

यथा मनुर्महातेजा लोकस्य परिरक्षिता ।
तथा दशरथो राजा वसञ्जगदपालयत् ॥९८॥

तेन सत्याभिसन्धेन त्रिवर्गमनुतिष्ठता ।
पालितासा पुरी श्रेष्ठा इन्द्रेणवामरावती ॥९९॥

तस्मिन् पुरवरे हृष्टा धर्मात्मानो बहुश्रुताः ।
नरास्तुष्टा धनैः स्वैः स्वैरलुब्धा सत्यवादिनः ॥२००॥

೯೦. ಅನಂತರ, ಎಲೈ ರಾಜನೇ, ಭೀಮ ಸೀಳುತ್ತಿರುವಾಗ ಆ ಘೋರ ರಾಕ್ಷಸನ ಬಾಯಿಯಿಂದ ನೆತ್ತರು ಹರಿಯಿತು.

೯೧. ವೀರಸೇನನ ಮಗನಾದ ನಳನೆಂಬ ಬಲಿಷ್ಠ ದೊರೆಯಿದ್ದನು; ಅತನು ಇಷ್ಟವಾದ ಗುಣಗಳಿಂದಲೂ ರೂಪದಿಂದಲೂ ಕೂಡಿದ ಅಸ್ತ್ರಶಾಸ್ತ್ರಜ್ಞನಾಗಿದ್ದನು.

೯೨. ನಳನು ದೇವರಾಜನಂತೆ ಅರಸರ ತಲೆಯ ಮೇಲಿದ್ದನು: ಎಲ್ಲರಿಗೂ ಮೇಲೆ ಮೇಲಾದ ಅತನು ಸೂರ್ಯನಂಥ ತೇಜಸ್ವಿಯಾಗಿದ್ದನು.

೯೩. ಬ್ರಾಹ್ಮಣಾನುಕೂಲನೂ ವೇದಜ್ಞನೂ ಶೂರನೂ ಆದ ಆ ನಿಷಧೇಶನು ದ್ಯೂತಪ್ರಿಯ, ದೊಡ್ಡ ಸತ್ಯವಾದಿ ಮತ್ತು ಅಕ್ಷೌಹಿಣೀ ಸೈನ್ಯವುಳ್ಳವನಾಗಿದ್ದನು.

೯೪. ಅವನು ಶ್ರೇಷ್ಠ ಸ್ತ್ರೀಯರಿಗೆ ಬೇಕಾದವನೂ ಉದಾರನೂ ಜಿತೇಂದ್ರಿಯನೂ ಧನುರ್ಧರರಲ್ಲೆಲ್ಲ ಶ್ರೇಷ್ಠನೂ ಆದ ಪ್ರಜಾಪಾಲಕನೆನ್ನಿಸಿ ಸಾಕ್ಷಾತ್ ಮನು ಸಮಾನನಾಗಿದ್ದನು.

೯೫. ಆ ಅಯೋಧ್ಯಾಪುರದಲ್ಲಿ (ಆಳುತ್ತಿದ್ದ ದಶರಥನು) ವೇದಜ್ಞನೂ ಸರ್ವಸಾಧನಗಳನ್ನು ಸಂಗ್ರಹಿಸಿಕೊಂಡವನೂ ದೂರದರ್ಶಿಯೂ ಮಹಾತೇಜಸ್ವಿಯೂ ಹಳ್ಳಿ-ಪಟ್ಟಣಗಳೆರಡರ ಜನಗಳಿಗೆ ಪ್ರಿಯನೂ ಆಗಿದ್ದನು.

೯೬. ಅತನು ಇಕ್ಷ್ವಾಕು ವಂಶದ ದೊರೆಗಳಲ್ಲಿ ಅತಿರಥನಾಗಿದ್ದನು; ಯಜ್ಞ ಮಾಡುವ ಮತ್ತು ಜಿತೇಂದ್ರಿಯತ್ವದಿಂದ ಧರ್ಮನಿಷ್ಠನಾಗಿರುವ ಮಹರ್ಷಿಸದೃಶನಾದ ಆ ರಾಜರ್ಷಿ ದಶರಥನು ಮೂರು ಲೋಕಗಳಲ್ಲಿ ಪ್ರಖ್ಯಾತನಾಗಿದ್ದನು.

೯೭. ಅವನು ಬಲವಂತನೂ ಹಗೆಗಳನ್ನು ಕೊಂದವನೂ ಇಂದ್ರಿಯಗಳನ್ನು ಗೆದ್ದವನೂ ಆಗಿದ್ದನಲ್ಲದೆ, ಧನ ಮತ್ತು ಇತರ ವಸ್ತುಗಳ ಸಂಚಯದಿಂದ ದೇವೇಂದ್ರ ಕುಬೇರರಿಗೆ ಸರಿದೊರೆಯಾಗಿದ್ದನು.

೯೮. ಲೋಕರಕ್ಷಕನಾಗಿದ್ದ ಮನುವಿನಂತೆ ಆ ದಶರಥನು ಮಹಾತೇಜಸ್ವಿಯಾಗಿ ಜಗತ್ತನ್ನು ಪಾಲಿಸುತ್ತಿದ್ದನು.

೯೯. ಆ ಸತ್ಯಸಂಧನಾದ (ದೊರೆಯು) ಧರ್ಮಾರ್ಥಕಾಮಗಳನ್ನು ಸಾಧಿಸುತ್ತ ಇಂದ್ರನು ಅಮರಾವತಿಯನ್ನು ಪಾಲಿಸುವಂತೆ ಅಯೋಧ್ಯಾಪುರವನ್ನು ಸಂರಕ್ಷಿಸುತ್ತಿದ್ದನು.

೧೦೦. (ದಶರಥ ಆಳುತ್ತಿದ್ದ) ಆ ಶ್ರೇಷ್ಠ ನಗರದಲ್ಲಿ ಜನರು ಧರ್ಮಾತ್ಮರೂ ಸಂತೋಷಭರಿತರೂ, ವಿದ್ವಾಂಸರೂ, ತಮ್ಮ ತಮ್ಮ ಆಸ್ತಿಗಳಿಂದ ತೃಪ್ತರಾಗಿಯೂ ಲೋಭರಹಿತರಾಗಿಯೂ, ಸತ್ಯವಾದಿಗಳಾಗಿಯೂ ಇದ್ದರು.

V

प्रकृतिसौन्दर्यवर्णनम्

ग्रीवाभङ्गाभिरामं मुहुरनुपतति स्यन्दने दत्तदृष्टिः
पश्चार्धेन प्रविष्टः शरपतनभयाद् भूयसा पूर्वकायम् ।
दर्भैरर्धावलीढैः श्रमविवृतमुखभ्रंशिभिः कीर्णवर्त्मा
पश्योदग्रप्लुतत्वाद्वियति बहुतरं स्तोकमुर्व्यां प्रयाति ॥१॥

यदालोके सूक्ष्मं व्रजति सहसा तद्विपुलतां
यदर्धे विच्छिन्नं भवति कृतसन्धानमिव तत् ।
प्रकृत्या यद्वक्रं तदपि समरेखं नयनयोर्
न मे दूरे किञ्चित् क्षणमपि न पार्श्वे रथजवात् ॥२॥

नीवाराः शुकगर्भकोटरमुखभ्रष्टास्तरूणामधः
प्रस्निग्धाः क्वचिदिङ्गुदीफलभिदः सूच्यन्त एवोपलाः
विश्वासोपगमादभिन्नगतयः शब्दं सहन्ते मृगास्
तोयाधारपथाश्च वल्कलशिखानिष्यन्दरेखांकिताः ॥३॥

यात्येकतोऽस्तशिखरं पतिरोषधीनां
आविष्कृतोऽरुणपुरःसर एकतोऽर्कः ।
तेजोद्वयस्य युगपद्व्यसनोदयाभ्यां
लोको नियम्यत इवैष दशान्तरेषु ॥४॥

V

ಪ್ರಕೃತಿ ಸೌಂದರ್ಯ ವರ್ಣನೆ

೧. ನೋಡು—(ಈ ಜಿಂಕೆಯು) ನನ್ನ ತೇರಿನಲ್ಲೇ ನೆಟ್ಟ ದೃಷ್ಟಿಯುಳ್ಳದ್ದಾಗಿದೆ; ನನ್ನಂಬು ತಾಗೀತೆಂಬ ಹೆದರಿಕೆಯಿಂದ ತನ್ನ ಮೈಯ ಹಿಂಭಾಗವನ್ನು ಹೆಚ್ಚಾಗಿ ಮುಂಭಾಗದಲ್ಲಿ ಇದು ತುರುಕಿಕೊಂಡಿದೆ; ಅರ್ಧಅಗಿದ ದರ್ಭೆಗಳು ಸುಸ್ತಾದ ಇದರ ತೆರೆವಾಯಿಂದ ದಾರಿಯುದ್ದಕ್ಕೂ ಚೆಲ್ಲಿವೆ; ತನ್ನ ಕುತ್ತಿಗೆಯನ್ನು ತಿರುಹಿಕೊಂಡು ಚೆಲುವಾಗಿ ಇದು ತನ್ನ ಎತ್ತರದ ಜಿಗಿತದ ದೆಸೆಯಿಂದ ಅಂತರಿಕ್ಷದಲ್ಲಿ ಹೆಚ್ಚಾಗಿಯೂ ನೆಲದ ಮೇಲೆ ಕಡಿಮೆಯಾಗಿಯೂ ಹೋಗುತ್ತಿದೆ!

೨. ನನ್ನ ತೇರಿನ ವೇಗದ ದೆಸೆಯಿಂದ ಚಿಕ್ಕದಾಗಿ ಕಂಡದ್ದು ಕೂಡಲೇ ದೊಡ್ಡದಾಗಿ ಬಿಡುತ್ತದೆ, ತುಂಡಾದದ್ದು ಕೂಡಿಸಿಟ್ಟಂತೆ ತೋರುತ್ತದೆ, ಸ್ವಾಭಾವಿಕ ಡೊಂಕಾದದ್ದು ಕಣ್ಣಿಗೆ ನೆಟ್ಟಗಾಗಿ ಕಾಣಿಸುತ್ತದೆ ಮತ್ತು ನನಗೆ ಯಾವುದೂ ಒಂದು ಕ್ಷಣಕಾಲ ಕೂಡ ದೂರದಲ್ಲೂ ಇರದು, ಹತ್ತಿರದಲ್ಲೂ ಇರದು!

೩. ಮರಗಳಡಿಯಲ್ಲಿ ಗಿಳಿಗಳು ವಾಸಮಾಡುತ್ತಿರುವ ಪೊಟ್ಟರೆಗಳಿಂದ ಕಾಡುನವಣೆಯ ಕಾಳುಗಳು ಉದುರಿ ಬಿದ್ದಿವೆ; ಕೆಲವೆಡೆ ಧೂಪಕ್ಕೆ ಬೇಕಾದ ಇಂಗುದಿ ಕಾಯಿಗಳನ್ನು ಒಡೆಯುಲು ಬಳಸಿದ ಎಣ್ಣೆ ಹಿಡಿದ ಕಲ್ಲುಗಳು ಕಾಣಿಸುತ್ತವೆ; ಜಿಂಕೆ ಮುಂತಾದ ಪ್ರಾಣಿಗಳು ಮನುಷ್ಯರಲ್ಲಿ ಬೆಳೆದುಬಂದ ವಿಶ್ವಾಸದ ದೆಸೆಯಿಂದ ಸಹಜವಾಗಿ ತಿರುಗುತ್ತ ಮನುಷ್ಯರ ಸದ್ದನ್ನು ಸಹಿಸುತ್ತಿವೆ; ನಾರುಬಟ್ಟೆಯಿಂದ ಉದುರಿದ ಹನಿಗಳಿಂದ ಎಳೆದ ಗೆರೆಗಳ ಗುರುತುಗಳನ್ನುಳ್ಳ ನೀರಾವಳಿಗಳೂ (ಮೇಲಿನವುಗಳಂತೆಯೇ ಹತ್ತಿರದಲ್ಲೇ ಒಂದು ಋಷ್ಯಾಶ್ರಮವಿದೆ ಎಂಬುದನ್ನು) ಸೂಚಿಸುತ್ತವೆ.

೪. ಒಂದು ಕಡೆ ವನಸ್ಪತಿಗಳೊಡೆಯನಾದ ಚಂದ್ರನು ಮುಳುಗುತ್ತಿದ್ದಾನೆ; ಇನ್ನೊಂದೆಡೆ ಸೂರ್ಯನು ಅರುಣನನ್ನು ಮುಂದಿಟ್ಟುಕೊಂಡು ಮೂಡುತ್ತಿದ್ದಾನೆ. ಈ ಎರಡು ತೇಜೋರಾಶಿಗಳ ಏಕಕಾಲಿಕವಾದ ಬೀಳು-ಏಳುಗಳಿಂದ ಇಂಥ ಬೇರೆ ಬೇರೆ ಸ್ಥಿತಿಗತಿಗಳಲ್ಲಿ ಜಗತ್ತು ಬದ್ಧವಾಗಿದೆಯೋ ಏನೋ ಎಂದು ತೋರುತ್ತದೆ.

कर्कन्धूनामुपरि तुहिनं रञ्जयत्यग्रसन्ध्या
दार्भं मुञ्चत्युटजपटलं वीतनिद्रो मयूरः ।
वेदिप्रान्तात्खुरविलिखितादुत्थितश्चैष सद्यः
पश्चादुच्चैर्भवति हरिणः स्वाङ्गमायच्छमानः ॥५॥

शैलानामवरोहतीव शिखरादुन्मज्जतां मेदिनी
पर्णाभ्यन्तरलीनतां विजहति स्कन्धोदयात्पादपाः ।
सन्तानात्तनुभावनष्टसलिला व्यक्तिं भजन्त्यापगाः
केनाप्युत्क्षिपतेव पश्य भुवनं मत्पार्श्वमानीयते ॥६॥

अग्रे यान्ति रथस्य रेणुवदमी चूर्णीभवन्तो घनाश्
चक्रभ्रान्तिररान्तरेषु जनयत्यन्यामिवारावलीम् ।
चित्रन्यस्तमिवाचलं हयशिरस्यायामवच्चामरं
यष्ट्यग्रे च समं स्थितो ध्वजपटः प्रान्ते च वेगानिलात् ॥७॥

अग्रे स्त्रीनखपाटलं कुरवकं श्यामं द्वयोर्भागयोर्
बालाशोकमुपोढरागसुलभं भेदोन्मुखं तिष्ठति ।
ईषद्बद्धरजःकणाग्रकपिशा चूते नवा मञ्जरी
मुग्धत्वस्य च यौवनस्य च सखे मध्ये मधुश्रीः स्थिता ॥८॥

उष्णालुः शिशिरे निषीदति तरोर्मूलालवाले शिखी
निर्भिद्योपरि कर्णिकारमुकुलान्यालीयते षट्पदः ।
तप्तं वारि विहाय तीरनलिनीं कारण्डवः सेवते
क्रीडावेश्मनि चैष पञ्जरशुकः क्लान्तो जलं याचते ॥९॥

೫. ಮುಜ್ಜಂಜೆಯು ಕರ್ಕಂಧೂ ಫಲಗಳ ಮೇಲಿನ ಇಬ್ಬನಿಯನ್ನು ಆಕರ್ಷಕ ವಾದುದನ್ನಾಗಿ ಮಾಡಿದೆ. ನವಿಲು ಎಲೆವನೆಯಲ್ಲಿರುವ ದರ್ಭೆಹುಲ್ಲಿನ ಹಾಸನ್ನು ಬಿಟ್ಟು ಎಚ್ಚರವಾಗಿದೆ; ಜಿಂಕೆಯು ಈಗ ಗೊರಸಿನ ಗೆರೆ ಇರುವ ಜಗುಲಿಯಿಂದೆದ್ದು ಮುರಿ ತೆಗೆದು ಎತ್ತರವಾಗಿ ನಿಲ್ಲುತ್ತಿದೆ.

೬. ಪರ್ವತ ಶಿಖರದಿಂದ ಕೆಳಗೆ ಧುಮ್ಮಿಕ್ಕುತ್ತಿರುವ (ವಿಮಾನದಲ್ಲಿ ಕುಳಿತ) ನನಗೆ— ಭೂಮಿಯು ಬೆಟ್ಟಗಳಿಂದ ಕೆಳಕ್ಕಿಳಿಯುತ್ತಿರುವ ಹಾಗೆ ತೋರುತ್ತದೆ; ಕೊಂಬೆಗಳು ಮೇಲಕ್ಕೇಳುವುದರಿಂದ ಮರಗಳು ಎಲೆಮರೆಯಿಂದ ಹೊರಬೀಳುತ್ತಿವೆ. ಸಾಲುಸಾಲಾಗದೆ ಒತ್ತಟ್ಟಿಗೆ ಕಾಣಿಸುವುದರಿಂದ ಹೊಳೆಗಳು ಒಂದೇ ಒಂದು ಹೆಜ್ಜೊನಲಾಗಿ ತೋರುತ್ತವೆ; ನೋಡು (ಸಾರಥಿ)— ಉರುಳಿಸುತ್ತಿದ್ದ ಯಾವನೋ ಒಬ್ಬನು ಈ ಜಗತ್ತನ್ನು ನನ್ನ ಹತ್ತಿರಕ್ಕೆ ಎಳೆದುಕೊಂಡು ಬರುವ ಹಾಗೆ ಕಾಣಿ ಸುತ್ತದೆ !

೭. ರಥವೇಗದ ಗಾಳಿಯ ದೆಸೆಯಿಂದ, ತೇರುಬೀದಿಯ ಧೂಳೀಕಣಗಳಂತೆ, ಚೂರುಚೂರಾಗುತ್ತಿರುವ ಮೋಡಗಳು ತೇರಿನ ಮುಂದೆ ಹಾರುತ್ತಿವೆ; ಗಾಲಿಗಳ ಉರುಳುವಿಕೆಯು ಹಳಿಗಳ ನಡುವೆ ಮತ್ತೊಂದು ಗಾಲಿ ತಿರುಗುತ್ತಿರುವ ಭ್ರಮೆ ಯನ್ನು ಹುಟ್ಟಿಸುತ್ತದೆ: ಕುದುರೆಯ ತಲೆಯ ಮೇಲಿನ ನೀಳವಾದ ಚಾಮರವು ಚಿತ್ರದಲ್ಲಿ ಇರುವ ಹಾಗೆ ಅಲುಗಾಡದೆ ಇದೆ; ಬದಿಯ ನಿಲುಗಂಬದ ತುದಿಯಲ್ಲಿ ಇರುವ ಧ್ವಜಪತಾಕೆಯು ನೆಟ್ಟನೆ ನಿಂತಿದೆ.

೮. ಎಲ್ಮೆ ಗೆಳೆಯ, ಇಬ್ಬಾಗದಲ್ಲಿಯೂ ನೀಲವರ್ಣವುಳ್ಳ (ಮತ್ತು ನಡುವೆ) ಹೆಂಗಸರ ಉಗುರಿನಂತೆ ಕೆಂಪಾಗಿರುವ ಗೋರಟೆ ಎದುರಿಗಿದೆ. ಅಶೋಕವೃಕ್ಷದ ಎಳಮೊಗ್ಗು ಕೆಂಪೇರಿಬರುತ್ತಿರುವುದರಿಂದ ಸುಲಭವಾಗಿ ಒಡೆದರಳಲು ತೊಡಗಿದೆ: ಮಾವಿನ ಮರದಲ್ಲಿ ಹೊಸ ನನೆಗೊಂಚಲು ಪರಾಗ ತುಂಬಿಕೊಳ್ಳುತ್ತಿರುವುದರಿಂದ ತುದಿಯಲ್ಲಿ ಸ್ವಲ್ಪ ಬೂದಾಗಿದೆ: (ಈ ಲಕ್ಷಣಗಳಿಂದ) ವಸಂತಲಕ್ಷ್ಮಿಯು ಬಾಲ್ಯ- ಯೌವನಗಳ ನಡುವಣ (ಕೌಮಾರ) ದಶೆಯಲ್ಲಿರುವಂತೆ ಕಾಣಿಸುತ್ತಾಳೆ.

೯. (ಮಧ್ಯಾಹ್ನಕಾಲದಲ್ಲಿ) ಸೆಕೆಹಿಡಿದ ನವಿಲು ಮರದಡಿಯ ತಂಪಾದ ನೀರಾವಳಿಯಲ್ಲಿ ಕುಳಿತುಕೊಳ್ಳುತ್ತದೆ: ಜೇನುಹುಳುವು ಕರ್ಣಿಕಾರ ಹೂವನ್ನು ಮೇಲಿನಿಂದ ಬಿರಿದು ಒಳಹೊಕ್ಕು ಮರೆಯಾಗುತ್ತದೆ; ಕಾರಂಡವ ಹಕ್ಕಿಯು ಬಿಸಿಯಾದ ನೀರನ್ನು ಬಿಟ್ಟು ದಡದ ಸನಿಹದಲ್ಲಿರುವ ತಾವರೆಬಳ್ಳಿಯನ್ನು ಆಶ್ರಯಿ ಸುತ್ತದೆ; ಆಡುಮನೆಯಲ್ಲಿರುವ ಈ ಗೂಡುಗಿಳಿಯು ಸುಸ್ತಾಗಿ ನೀರನ್ನು ಬೇಡು ತ್ತದೆ.

उत्कीर्णा इव वासयष्टिषु निशानिद्रालसा बर्हिणो
धूपैर्जालविनिःसृतैर्वलभयः संदिग्धपारावताः ।
आचारप्रयतः सपुष्पबलिषु स्थानेषु चार्चिष्मतीः
सन्ध्यामङ्गलदीपिका विभजते शुद्धान्तवृद्धाजनः ॥१०॥

पत्रच्छायासु हंसा मुकुलितनयना दीर्घिकापद्मिनीनां
सौधान्यत्यर्थतापाद्वलभिपरिचयद्वेषिपारावतानि ।
बिन्दुक्षेपान् पिपासुः परिसरति शिखी भ्रान्तिमद्वारियन्त्रं
सर्वैरुस्रैः समग्रैस्त्वमिव नृपगुणैर्दीप्यते सप्तसप्तिः ॥११॥

उन्मत्तानां श्रवणसुभगैः कूजितैः कोकिलानां
सानुक्रोशं मनसिजरुजः सह्यतां पृच्छतेव ।
अङ्गे चूतप्रसवसुरभिर्दक्षिणो मारुतो मे
सान्द्रस्पर्शः करतल इव व्यापृतो माधवेन ॥१२॥

रक्ताशोकरुचा विशेषितगुणो बिम्बाधरालक्तकः
प्रत्याख्यातविशेषकं कुरबकं श्यामावदातारुणम् ।
आक्रान्ता तिलकक्रिया च तिलकैर्लग्नद्विरेफाञ्जनैः
सावज्ञेव मुखप्रसाधनविधौ श्रीर्माधवी योषिताम् ॥१३॥

वासोऽर्थं दययेव नातिपृथवः कृत्तास्तरूणां त्वचा
भग्नाऽऽलक्ष्यजरत्कमण्डलु नभःस्वच्छं पयोनैर्झरम् ।
दृश्यन्ते त्रुटितोज्झिताश्च वटुभिर्मौञ्ज्यः क्वचिन्मेखला
नित्याकर्णतया शुकेन च पदं सामामिदं पठ्यते ॥१४॥

೧೦. (ಸಂಜೆ) ಗೂಡುಗಳಲ್ಲಿ ಚೆಲ್ಲಿ ಬಿದ್ದಂತಿರುವ ನವಿಲುಗಳು ಇರುಳಲ್ಲಿ ನಿದ್ರಿಸಿದ ವರಿಗಿರುವಂಥ ಆಲಸ್ಯವನ್ನು ಹೊಂದಿವೆ; ಸೌಧಗಳ ಅಟ್ಟದ ಮೇಲಿನ ಹೊಗೆಕಿಂಡಿಗಳಿಂದ ಹೊರಬರುವ ಹೊಗೆಯು ದೆಸೆಯಿಂದ ಪಾರಿವಾಳಗಳು ದಿಕ್ಕು-ಗಾಣದ ಸಂದಿಗ್ಧ ಸ್ಥಿತಿಯಲ್ಲಿವೆ; ರಾಣೀವಾಸದಲ್ಲಿರುವ ಮುದುಕಿಯರು ಆಚಾರ-ದಿಂದ ಪುನೀತರಾಗಿ ಹೂಬಲಿ ಚೆಲ್ಲಿದ ಸ್ಥಳಗಳಲ್ಲಿ ಜ್ವಾಲಾಮಯವಾದ ಸಂಧ್ಯಾ-ಶುಭದ ದೀವಿಗೆಗಳನ್ನು ಹಚ್ಚಿಡುತ್ತಾರೆ.

೧೧. ಪುಷ್ಕರಿಣಿಗಳಲ್ಲಿರುವ ತಾವರೆಬಳ್ಳಿಗಳ ಎಲೆಗಳ ನೆರಳಿನಲ್ಲಿ ಹಂಸಗಳು (ಮಧ್ಯಾಹ್ನ ಕಾಲದಲ್ಲಿ) ಕಣ್ಣು ಮುಚ್ಚಿ ಕುಳಿತಿವೆ; ಅತಿಯಾದ ಬಿಸಿಲ ಬೇಗೆಯ ದೆಸೆಯಿಂದ ಸೌಧಗಳ ತುದಿಯನ್ನು ಪಾರಿವಾಳಗಳು ಮುಟ್ಟಲೊಲ್ಲವು; ಸಿಡಿವನಿ-ಗಳನ್ನು ಕುಡಿಯುವ ಆಸೆಯಿಂದ ನವಿಲು ತಿರುಗುತ್ತಿರುವ ಜಲಯಂತ್ರವನ್ನು ಸುತ್ತು-ವರಿಯುತ್ತಿದೆ; ನೀನು ನಿನ್ನ ಎಲ್ಲ ರಾಜಗುಣಗಳಿಂದ ಹೇಗೋ ಹಾಗೇ ಏಳು ಕುದುರೆತೇರನ್ನೇರಿ ಬರುವ ಸೂರ್ಯನು ತನ್ನ ಎಲ್ಲ ಕಿರಣಗಳಿಂದಲೂ ಕೂಡಿದವನಾಗಿ ಪ್ರಕಾಶಿಸುತ್ತಿದ್ದಾನೆ.

೧೨. (ವಸಂತ ಋತುವಿನಲ್ಲಿ) ಮದವೇರಿದ ಕೋಗಿಲೆಗಳ ಇಂಪಾದ ಧ್ವನಿಯ ಮೂಲಕ ವಸಂತನು ದಯೆಯಿಂದ ನನ್ನನ್ನು 'ಪ್ರೇಮಜ್ವರವು ಸಹ್ಯವಾಗಿದೆಯೇ?' ಎಂದು ಕೇಳುವಂತೆ ತೋರುತ್ತದೆ; ಅವನ ಅಂಗೈಯ ಗಾಢಸ್ಪರ್ಶವೇನೋ ಎಂಬಂತೆ ಮಾವಿನ ನನೆಯ ಪರಿಮಳವನ್ನು ಸೂಸುವ ಮಲಯ ಮಾರುತನು ನನ್ನ ಮೈಮೇಲೆ ಬೀಸುತ್ತಿದ್ದಾನೆ!

೧೩. (ವಸಂತ ಋತುವಿನಲ್ಲಿ) ತರುಣಿಯರ ಬಿಂಬಾಧರಗಳ ಅರಗುಗೆಂಪನ್ನು ಕೆಂಪು ಅಶೋಕದ ಕಾಂತಿಯು ವಿಸ್ತರಿಸಿದೆ; ಅವರ ಗಲ್ಲ ಮೊಲೆ ಮುಂತಾದ ಅವಯವಗಳ ಮೇಲಿನ ಬಣ್ಣದ ಲೇಪವನ್ನು (ಕರಿ-ಬಿಳಿ-ಕೆಂಪು ಬಣ್ಣದ ಗೆರೆಗಳನ್ನು) ಗೋರಟೆ ಕೀಳ್ಗಳೆಯುತ್ತಿದೆ; ಕಾಡಿಗೆಯಂಥ ದುಂಬಿಗಳಿಂದ ತುಂಬಿದ ತಿಲಕ ಪುಷ್ಪಗಳು ಅವರ ಹಣೆಯ ತಿಲಕದ ಕರ್ಬೊಟ್ಟನ್ನು (ಚೆಂದದಲ್ಲಿ) ಹಿಮ್ಮೆಟ್ಟಿಸಿದೆ.

೧೪. (ಈ ತಪೋವನದಲ್ಲಿ) ಬಟ್ಟೆಗಾಗಿ ಮರಗಿಡಗಳ ತೆಳ್ಳನೆಯ ತೊಗಟನ್ನು ದಯೆಯಿಂದಲೋ ಎಂಬಂತೆ ಒಚ್ಚಿ ತೆಗೆಯಲಾಗಿದೆ; ಒಡಕು ಬಿರುಕುಗಳು ಕಾಣಿಸದ ಹಳೆಯ ಕಮಂಡಲುವಿನಲ್ಲಿರುವ ಗಿರಿನದೀಜಲವು ಆಗಸದಷ್ಟು ಸ್ವಚ್ಛ-ವಾಗಿದೆ; ಇಲ್ಲಿ ಕೆಲವೆಡೆ ಬ್ರಹ್ಮಚಾರಿಗಳು ತಮ್ಮ ಹರಿದ ಮೌಂಜೀ ಮೇಖಲೆಗಳನ್ನು ಎಸೆದುದು ಕಂಡುಬರುತ್ತದೆ; ದಿನವೂ ಕೇಳಿ ಕೇಳಿ ಕಲಿತ ಸಾಮವೇದದ ಪದಗಳನ್ನು ಗಿಳಿಗಳು ಹೇಳುತ್ತವೆ.

मधुरमिव वदन्ति स्वागतं भृङ्गशब्दैर्
नतिमिवफलनम्रैः कुर्वतेऽमी शिरोभिः ।
मम ददत इवार्घ्यं पुष्पवृष्टीः किरन्तः
कथमतिथिसपर्यां शिक्षिताः शाखिनोऽपि ॥१५॥

तापात्तत्क्षणघृष्टचन्दनरसौ पाण्डू कपोलौ वहन्
संसक्तैर्निजकर्णतालपवनैः संवीज्यमानाननः ।
सम्प्रात्येप विशेषसिक्तहृदयो हस्तोज्झितैः शीकरैः
गाढायल्लकदुःमहामिव दशां धत्ते गजानां पतिः ॥१६॥

निष्यन्दश्चन्दनानां शिशिरयति लतामण्डपे कुट्टिमान्तान्
आराद् धारागृहाणां ध्वनिमनुनुते ताण्डवं नीलकण्ठः ।
यन्त्रोन्मुक्तश्च वेगाच्चलति विटपिनां पूरयन्नालवालान्
आपातोत्पीडहेलाहृतकुसुमरजः पिञ्जरोऽयं जलौघः ॥१७॥

अमीगीतारम्भैर्मुखरितलतामण्डपभुवः
परागैः पुष्पाणां प्रकटपटवासव्यतिकराः ।
पिबन्तः पर्याप्तं सह सहचरीभिर्मधुरसं
समन्तादापानोत्सवमनुभवन्तीह मधुपाः ॥१८॥

निद्रामुद्रावबन्धव्यतिकरमनिशं पद्मकोषादपास्यन्
आशापूरैककर्मप्रवणनिजकरप्रीणिताशेषविश्वः ।
दृष्टः सिद्धैः प्रसक्तस्तुतिमुखरमुखैरस्तमप्येष गच्छन्
एकः श्लाघ्यो विवस्वान् परहितकरणायैव यस्य प्रयासः
॥१९॥

उद्गर्जज्जलकुञ्जरेन्द्ररभसास्फालानुबन्धोद्धतः
सर्वाः पर्वतकन्दरोदरभुवः कुर्वन् प्रतिध्वानिनीः ।
उच्चैरुच्चरति ध्वनिः श्रुतिपथोन्माथी यथाऽयं तथा
प्रायः प्रेंखदसंख्यशङ्खवलया वेलेयमागच्छति ॥२०॥

೧೫. (ಈ ತಪೋವನದಲ್ಲಿ) ಮರಗಳು ತಮ್ಮ ಜೇನುದನಿಯಿಂದ ಇಂಪಾಗಿ ನನ್ನನ್ನು ಸ್ವಾಗತಿಸುವಂತೆ ತೋರುತ್ತದೆ: ಇವು ತಮ್ಮ ಫಲಭಾರದಿಂದ ತಲೆಬಾಗಿ ನಮಸ್ಕಾರ ಮಾಡುವಂತೆ ಕಾಣಿಸುತ್ತವೆ; ಹೂಗಳನ್ನು (ಸುತ್ತಲೂ) ಸುರಿದ ಇವು ನನಗೆ ಕೈತೊಳೆಯಲು ನೀರು ಕೊಡುವಂತೆ ಭಾಸವಾಗುತ್ತದೆ; ಇದೇನು ? ಮರಗಿಡಗಳು ಕೂಡ ಇಲ್ಲಿ ಅತಿಥಿ ಸತ್ಕಾರ ಮಾಡಲು ಕಲಿತುಕೊಂಡಿವೆಯೇ ?

೧೬. (ಮಧ್ಯಾಹ್ನದ ಈ ಅವಧಿಯಲ್ಲಿ) ಆನೆಗಳ ಒಡೆಯನಾದ ಈ ಹೇರಾನೆಯೂ ಬಿಸಿಲ ಬೇಗೆಯಿಂದ ಗಂಧದ ಗಿಡಗಳಿಗೆ ತಿಕ್ಕಿ ಕೆಂಗೆಟ್ಟೆಯುಳ್ಳದ್ದಾಗಿದೆ; ಬೀಸಣಿಗೆಯಂಥ ತನ್ನ ಕಿವಿಗಳಿಂದ ಗಾಳಿಯನ್ನು ತನ್ನ ಮುಖಕ್ಕೆ ಇದು ಬೀಸಿಕೊಳ್ಳುತ್ತಿದೆ; ಈಗ ಈ ಆನೆಯು ತನ್ನ ಸೊಂಡಿಲಿಂದ ಎದೆಗೆ ಚೆನ್ನಾಗಿ ನೀರನ್ನು ಸಿಂಪಡಿಸಿಕೊಳ್ಳುತ್ತಿದ್ದರೂ ಕಂಬಕ್ಕೆ ಕಟ್ಟಿದ ಬಿಗಿತದಿಂದ ಎಂಬಷ್ಟು ದುಃಸಹ ವೇದನೆಯನ್ನು ಅನುಭವಿಸುತ್ತಿದೆ.

೧೭. (ಈ ಉದ್ಯಾನದಲ್ಲಿ) ಬಳ್ಳಿಮಾಡಗಳ ಜಗುಲಿಯ ತುದಿಗಳನ್ನು ಗಂಧದ ಮರಗಳಿಂದ ಒಸರಿದ ರಸವು ತಂಪು ಮಾಡಿವೆ; ಹತ್ತಿರದಲ್ಲೇ ನವಿಲು ನೀರಿನ ಧಾರೆ ಬೀಳುವಂಥ ಮೊವ ಮನೆಗಳ (ಧಾರಾಪಾತದ) ತಾಂಡವ ಧ್ವನಿಯನ್ನು ಚಿತ್ರಿಸುತ್ತಿದೆ; ಪಂಪಿನಿಂದ ವೇಗವಾಗಿ ಬಂದ ನೀರು ಮರದಡಿಯ ನೀರಾವಳಿಯನ್ನು ತುಂಬಿಸಿ, ತನ್ನ ರಭಸದ ಪೆಟ್ಟಿನಿಂದ ಲೀಲಾಜಾಲವಾಗಿ ಉದುರಿದ ಪರಾಗದಿಂದ ಹಳದಿಯಾಗಿದೆ.

೧೮. (ಈ ಉದ್ಯಾನದಲ್ಲಿ) ದುಂಬಿಗಳು ಬಳ್ಳಿಮಾಡಗಳಲ್ಲಿ ತಮ್ಮ ಝೇಂಕಾರ ಧ್ವನಿಯನ್ನು ತುಂಬಿವೆ; ಹೂವಿನ ಪರಾಗದಿಂದ ಇವು ಬಟ್ಟೆ-ಬರೆ ತೊಟ್ಟಂತೆ ತೋರುತ್ತವೆ; ಅಲ್ಲದೆ, ಈ ಜೇನುಗಳು ತಮ್ಮ ಪ್ರೇಯಸಿಯರೊಡನೆ ಯಥೇಷ್ಟವಾಗಿ ಹೂವಿನ ಮಕರಂದವನ್ನು ಕುಡಿದು,ಇಲ್ಲೇ ಪಾನೋತ್ಸವವನ್ನು ಅನುಭವಿಸುತ್ತಿರುವಂತೆ ಕಾಣುತ್ತದೆ,

೧೯. ಸೂರ್ಯನು ಪದ್ಮಕೋಶದ ನಿದ್ರಾಮುದ್ರೆಯ ಬಂಧವನ್ನು ನಿತ್ಯವೂ ಬಿಡಿಸಿ, ದಿಕ್ಕುಗಳೆಲ್ಲವನ್ನೂ ತುಂಬುವುದರಲ್ಲಿಯೇ ನಿರತವಾದ ತನ್ನ ಕಿರಣಗಳಿಂದ ಇಡಿ ಜಗತ್ತನ್ನು ಸಂತೋಷಪಡಿಸಿದ್ದು ಅವನ ಸ್ತುತಿಮಾಡುವ ಸಿದ್ಧರಿಗೆ ತಿಳಿಯಿತು; ಅವನೀಗ ಅಸ್ತಂಗತನಾಗುತ್ತಿದ್ದಾನೆ. ಅಂಥ ಪರೋಪಕಾರಕ್ಕಾಗಿ ಪ್ರಯಾಸಪಡುವ ಅವನೊಬ್ಬನೇ ಶ್ಲಾಘ್ಯನು.

೨೦. ಸಮುದ್ರದ ಭರತದ ಪ್ರವಾಹವು, ಗರ್ಜಿಸುವ ನೀರಾನೆಗಳ ರಭಸದ ಸತತವಾದ ಬಡಿತಗಳಿಂದ ಕೆರಳಿ, ಎಲ್ಲ ಬೆಟ್ಟಗಳ ಕಣಿವೆಗಳಲ್ಲೂ ಪಡಿನುಡಿಯು ಮಂತ್ರಿಸಗಿ, ಕಿವಿ ಗಡಚಿಕ್ಕುವಂತೆ ಗಟ್ಟಿಯಾದ ದನಿಯುದ್ದಿರುವುದರಿಂದ, ಉರುಳಿ ಬರುವ ಅನೇಕಾನೇಕ ಶಂಖದ ಚಿಪ್ಪುಗಳೊಡನೆ ಹರಿದು ಬರುತ್ತಿದೆಯೆಂದು ತೋರುತ್ತದೆ.

कवलितलवङ्गपल्लव करिमकरोद्गारसुरभिणा पयसा ।
एषा समुद्रवेला रत्नद्युतिरञ्जिता भाति ॥२१॥

उदयति हि शशाङ्कः क्लिन्नखर्जूरपाण्डुर्
युवतिजनसहायो राजमार्गप्रदीपः ।
तिमिरनिचयमध्ये रश्मयो यस्य गौराः
हृतजल इव पङ्के क्षीरधाराः पतन्ति ॥२२॥

द्रुमा धावन्तीव द्रुतरथगतिक्षीणविषया
नदीवोद्वृत्ताम्बुर्निपतति मही नेमिविवरे ।
अरव्यक्तिर्नष्टा स्थितमिव जवाच्चक्रवलयं
रजश्चाश्वोद्धूतं पतति पुरतो नानुपतति ॥२३॥

भ्रमति सलिलं वृक्षावर्ते सफेनमवस्थितं
तृषितपतितानैतेक्लिष्टं पिबन्ति जलं खगाः ।
स्थलमभिपतन्त्यार्द्राः कीटा बिले जलपूरिते
नववलयिनो वृक्षा मूले जलक्षयरेखया ॥२४॥

कनकरचितविद्रुमेन्द्रनीलैर्
विकृतमहाद्रुमपंक्तिचित्रदेशा ।
रुचिरतरनगा विभातिशुभ्रा
नभसि सुरेन्द्रविहारभूमिकल्पा ॥२५॥

सजलजलधरेन्द्रनीलनीरो
विलुलितफेनतरङ्गचारुहारः ।
समधिगतनदीसहस्रबाहुर्
हरिरिव भाति सरित्पतिः शयानः ॥२६॥

೨೧. ಲವಂಗದ ಚಿಗುರುಗಳನ್ನು ನುಂಗಿದ ನೀರಾನೆ ಹೆಮ್ಮೀನುಗಳು ಉಗುಳಿದ ಸುವಾಸನೆ ಬೆರೆದ ನೀರಿಂದ ನವರತ್ನಗಳ ಕಾಂತಿಯಿಂದ ರಂಜಿಸುವ ಈ ಕಡಲ ಭರತದ ಹೊನಲು ಸುಂದರವಾಗಿ ತೋರುತ್ತದೆ.

೨೨. ರಾಜಬೀದಿಗೆ ದೀಪವಾಗಿ, ತರುಣಿಯರಿಗೆ ಸಹಚರನಾಗಿ, ನೀರಲ್ಲಿ ಅದ್ದಿದ ಬೆಳ್ಳಿಯಂತೆ ಬೆಳಗಿರುವ ಚಂದ್ರನು ಮೂಡುತ್ತಿದ್ದಾನೆ; ಕತ್ತಲ ಪೊತ್ತದ ನಡುವೆ ಆತನ ಬೆಳ್ಗದಿರುಗಳು ನೀರು ಬತ್ತಿದ ಕೆಸರುಗೆರೆಯಲ್ಲಿ ಹಾಲಿನ ಧಾರೆಗಳಂತೆ ಬೀಳುತ್ತಿವೆ.

೨೩. (ತೇರೇರಿ ಕುಳಿತ ನನಗೆ) ರಥಗತಿಯ ವೇಗದಿಂದ ಮರಗಳು ಓಡುವಂತೆಯೂ ವಸ್ತುಗಳು ಚಿಕ್ಕವುಗಳಾಗುತ್ತ ಹೋಗುವಂತೆಯೂ ಭೂಮಿಯು ನೀರು ಮೇಲೆದ್ದ ನದಿಯಂತೆ ರಥಚಕ್ರದ ಸುತ್ತುಪಟ್ಟಿಯೊಳಗಿನ ತೂತುಗಳಲ್ಲಿ ಬೀಳುವಂತೆಯೂ ತೋರುತ್ತವೆ; ಹಳಿಗಳು ಕಾಣಿಸವು; ವೇಗದ ದೆಸೆಯಿಂದ ಗಾಲಿಯುಚ್ಚಿನ ಬಳೆ ನಿಂತಂತೆ ಕಾಣುತ್ತದೆ; ಕುದುರೆಗಳೆಬ್ಬಿಸಿದ ಧೂಳು ಒಮ್ಮೆ ಮೇಲೆದ್ದು ಕೆಳಗೆ ಬೀಳುವುದಲ್ಲದೆ, ತೇರನ್ನು ಹಿಂಬಾಲಿಸಿ ಬಾರದು.

೨೪. ಮರದಡಿಯ ನೀರಾವಳಿಯಲ್ಲಿ ನೊರೆ ನೀರು ಸುತ್ತುತ್ತಿದೆ; ಪಕ್ಕಿಗಳು ಬಾಯಾರಿ ಕೆಳಗೆ ಹಾರಿ ಸುಖವಾಗಿ ನೀರು ಕುಡಿಯುತ್ತಿವೆ; ನೀರು ತುಂಬಿದ ಚಿಕ್ಕ ಕುಳಿಗಳಲ್ಲಿಯ ಒದ್ದೆಯಾದ ಹುಳುಗಳು ಮೇಲೆದ್ದು ನೆಲದತ್ತ ಹರಿಯುತ್ತಿವೆ; ನೀರಾರಿ ಹೋದ ನೀರಾವಳಿಯುಳ್ಳ ಮರಗಳ ಬೇರುಗಳಿಗೆ ನೀರಾರಿದ ಗೆರೆಗಳ ದೆಸೆಯಿಂದ ಹೊಸ ಬಳೆಯನ್ನು ತೊಡಿಸಿದಂತೆ ತೋರುತ್ತದೆ.

೨೫. ಆಕಾಶದ ಪ್ರದೇಶವು (ಈಗ) ಬಂಗಾರದಿಂದ ಮಾಡಿದ ಹವಳ ನೀಲಮಣಿಗಳಿಂದ ಕೂಡಿದ, ವಿಕಟಾಕಾರದ ದೊಡ್ಡ ಮರಗಳ ಸಾಲುಗಳಿಂದ ಚಿತ್ರ ವಿಚಿತ್ರವಾಗಿ ಕಾಣುತ್ತದೆ; ಶುಭ್ರವೂ ಸುಂದರವೂ ಆದ ಬೆಟ್ಟಗಳು ಬೇರೆ ತೋರುತ್ತಿವೆ. ಆದುದರಿಂದ ಅದು ದೇವತೆಗಳ ಒಡೆಯನಾದ ಇಂದ್ರನ ವಿಹಾರ ಸ್ಥಳಕ್ಕೆ ಸರಿದೊರೆಯಾಗಿದೆ.

೨೬. ನೀರ್ಮೋಡಗಳಿಂದ ನೀಲ ನೀರುಳ್ಳವನಾಗಿ, ಅತ್ತಿತ್ತ ಚಲಿಸುವ ನೊರೆ ಯಲೆಗಳಿಂದ ಸೊಗಸಾದ ಹಾರವುಳ್ಳವನಾಗಿ, ಪಡೆದ (ಸಾವಿರಾರು) ಹೊಳೆಗಳಿಂದ ಸಾವಿರ ಕೈಗಳನ್ನುಳ್ಳವನಾಗಿ ಹೊಳೆಗಳೊಡೆಯನಾದ ಕಡಲು ಮಲಗಿದ ನಾರಾಯಣನಂತೆ ತೋರುತ್ತಾನೆ.

क्वचित्फेनोद्गारी क्वचिदपिच मीनाकुलजल:
क्वचिच्छङ्काकीर्ण: क्वचिदपिच नीलाम्बुदनिभ: ।
क्वचिद्वीचीमाल: क्वचिदपिच नक्रप्रतिभय:
क्वचिद्भीमावर्त: क्वचिदपि च निष्कम्पसलिल: ॥२७॥

अस्ताद्रिमस्तकगत: प्रतिसंहृतांशु:
सन्ध्यानुरञ्जितवपु: प्रतिभाति सूर्य: ।
रक्तोज्वलांशुकवृते द्विरदस्य कुम्भे
जाम्बूनदेन रचित: पुलको यथैव ॥२८॥

विस्रब्धं हरिणाश्चरन्त्यचकिता देशागतप्रत्यया
वृक्षा: पुष्पफलै: समृद्धविटपा: सर्वे दयारक्षिता: ।
भूयिष्ठं कपिलानि गोकुलधनान्यक्षेत्रवत्योदिश:
नि:सन्दिग्धामिदं तपोवनमयं धूमोहि वह्वाश्रय: ॥२९॥

खगा वासोपेता: सलिलमवगाढो मुनिजन:
प्रदीप्तोऽग्निर्भाति प्रविचरति धूमो मुनिवनम् ।
परिभ्रष्टो दूराद्रविरपि च संक्षिप्तकिरणो
रथं व्यावर्त्यासौ प्रविशति शनैरस्तशिखरम् ॥३०॥

ऋज्वायतां च विरलां च नतोन्नतां च
सप्तर्षिवंशकुटिलां च निवर्तनेषु ।
निर्मुच्यमान भुजगोदरनिर्मलस्य
सीमामिवाम्बरतलस्य विभज्यमानाम् ॥३१॥

पूर्वा तु काष्ठा तिमिरानुलिप्ता
सन्ध्यारुणा भाति च पश्चिमाशा ।
द्विधा विभक्तान्तरमन्तरिक्षं
यात्यर्धनारीश्वररूपशोभाम् ॥३२॥

೨೭. ಸಮುದ್ರವು ಕೆಲವೆಡೆ ನೊರೆಯುಗುಳುತ್ತಿದೆ; ಕೆಲವೆಡೆ ಅದರ ನೀರಿನಲ್ಲಿ ಮೀನುಗಳು ತುಂಬಿವೆ; ಮತ್ತೆ ಕೆಲವೆಡೆ ಶಂಖದ ಚಿಪ್ಪುಗಳು ಚೆಲ್ಲಿ ಬಿದ್ದಿವೆ; ಇತರ ಕಡೆ ಅದು ನೀಲಮೇಘಸದೃಶವಾಗಿದೆ; ಕೆಲವೆಡೆ ಅದು ತರಂಗ ಮಾಲೆಗಳಿಂದ ಕೂಡಿದ್ದರೆ, ಇನ್ನೂ ಕೆಲವೆಡೆ ಮೊಸಳೆಯನ್ನೂ ಹೆದರಿಸುವಷ್ಟು ಭಯಂಕರವಾಗಿದೆ; ಹೆದರಿಕೆ ಹುಟ್ಟಿಸುವಂಥ ಬಲವಾದ ಸುಳಿಗಳು ಕೆಲವೆಡೆ ಇದ್ದರೆ, ಕೆಲವೆಡೆ ಅದರ ನೀರು ನಿಷ್ಪಂದವಾಗಿದೆ.

೨೮. ಸೂರ್ಯನು (ಈಗ) ಅಸ್ತಪರ್ವತದ ಶಿಖರದಲ್ಲಿದ್ದಾನೆ; ತನ್ನ ಕಿರಣ-ಗಳನ್ನವನು ಹಿಂದಕ್ಕೆ ಎಳೆದು ಕೊಂಡಿರುವುದರಿಂದ ಆತನು ಕೆಂಪಾಗಿ ಹೊಳೆಯುವ ಬಟ್ಟೆಯಿಂದ ಅಲಂಕೃತವಾದ ಆನೆಯ ಕುಂಭಸ್ಥಳದಲ್ಲಿಟ್ಟ ರತ್ನದಂತೆ ತೋರುತ್ತಾನೆ.

೨೯. ನಾಡಿಂದ ಬಂದ ಜನರ ಪರಿಚಯವುಳ್ಳ ಜಿಂಕೆಗಳಿಲ್ಲಿ ಹಾಯಾಗಿ ತಿರುಗಾಡುತ್ತಿವೆ; ದಯೆಯಿಂದ ರಕ್ಷಿತವಾದ ಮರಗಳ ಕೊಂಬೆಗಳು ಫಲಪುಷ್ಪ ಗಳಿಂದ ಸಮೃದ್ಧವಾಗಿವೆ; ಕಪಿಲೆ ಹಸುಗಳು ಬೇಕಾದಷ್ಟಿವೆ; ಸುತ್ತುಮುತ್ತಲಿನ ಪ್ರದೇಶಗಳನ್ನು ಉತ್ತು ಬಿತ್ತಿ ಯಾರೂ ಬೇಸಾಯಕ್ಕೊಳಪಡಿಸಿಲ್ಲ; ಆದುದರಿಂದ ಬಹಳ ಕಡೆಗಳಲ್ಲಿ ಹೊಗೆ ಏಳುತ್ತಿರುವ ಈ ಪ್ರದೇಶವು ನಿಃಸಂದೇಹವಾಗಿ ಒಂದು ತಪೋವನವೇ ಸರಿ.

೩೦. (ತಪೋವನದಲ್ಲಿ ಈ ಸಂಜೆ) ಹಕ್ಕಿಗಳು ಗೂಡು ಸೇರುತ್ತಿವೆ; ತಪಸ್ವಿ-ಗಳು ಸ್ನಾನಮಾಡುತ್ತಿದ್ದಾರೆ; ಹಚ್ಚಿದ ಬೆಂಕಿಯು ಹೊಳೆಯುತ್ತಿದೆ; ತಪೋವನದ ತುಂಬ ಹೊಗೆ ಆಡುತ್ತಿದೆ; ಸೂರ್ಯ ಕೂಡ ತನ್ನ ಕಿರಣಗಳನ್ನು ಮೊಟಕು ಮಾಡಿ ಕೊಂಡು ದೂರದಲ್ಲಿ ಕಳಚಿಕೊಳ್ಳುತ್ತಿದ್ದಾನೆ; ಅವನು ತೇರು ತಿರುಗಿಸಿಕೊಂಡು ಮೆಲ್ಲ ಮೆಲ್ಲನೆ ಅಸ್ತಾಚಲದ ಶಿಖರವನ್ನು ಹೊಗುತ್ತಿದ್ದಾನೆ.

೩೧. ಆಕಾಶದಲ್ಲಿ ಸಾರಸಪಕ್ಷಿಗಳ ಸಾಲು ನೇರವೂ ಉದ್ದವೂ ಆಗಿದೆ; ಅದರಲ್ಲಿ ಪಕ್ಷಿಗಳ ಸ್ಥಾನ ಬಿಡಿ ಬಿಡಿ ಆಗಿದೆ ಮತ್ತು ತಗ್ಗು-ಏರಾಗಿದೆ; ತಿರುಗುವ ಸಂದರ್ಭದಲ್ಲಿ ಸಪ್ತರ್ಷಿ ಮಂಡಲದಂತೆ ಡೊಂಕಾಗುತ್ತದೆ; ಅದು ಬಿಡಲ್ಪಡುತ್ತಿರುವ ಹಾವಿನ ಪೊರೆಯಷ್ಟು ಸ್ವಚ್ಛವಾಗಿರುವ ಚಾಂದೀದ ಸೀಮಾರೇಖೆ ಎಳೆಯಲ್ಪಡುತ್ತಿದೆ ಎಂಬಂತೆ ತೋರುವ ಹಾಗೆ ಮಾಡಿದೆ.

೩೨. ಮೂಡಲಿಗೆ ಕತ್ತಲು ಬಳಿದುಕೊಂಡಿದೆ; ಪಡುವಲು ಸಂಜೆಗೆಂಪಿನಿಂದ ಶೋಭಿಸುತ್ತಿದೆ; ಆದರಿಂದ ಮುಗಿಲು ಇಬ್ಭಾಗವಾಗಿ ಅರ್ಧನಾರೀಶ್ವರನ ಚೆಂದ ವನ್ನು ಹೊಂದಿದೆ.

व्यामृष्टसूर्यतिलको विततोडुमालो
नष्टातपो मृदुमनोहरशीतवातः ।
संलीनकामुकजनः प्रविकीर्णशूरो
वेषान्तरं रचयतीव मनुष्यलोकः ॥३३॥

गर्भस्था इव मोहमभ्युपगताः सर्वाः प्रजा निद्रया
प्रासादाः सुखसुप्तनीरवजनाध्यानं प्रविष्टा इव ।
प्रग्रस्ता इव सञ्चितेन तमसा स्पर्शानुमेया नगा
अन्तर्धानमिवोपयति सकलं प्रज्छन्नरूपं जगत् ॥३४॥

तिमिरमिव वहन्ति मार्गनद्यः
पुलिननिभाः प्रतिभान्ति हर्म्य मालाः ।
तमसि दश दिशो निमग्नरूपाः
प्लवतरणीय इवायमन्धकारः ॥३५॥

अत्युष्णाज्वरितेव भास्करकरैरापीतसारा मही
यक्ष्मार्ता इव पादपाः प्रमुषितच्छायादवाग्न्याश्रयात् ।
विक्रोशन्त्यवशादिवोच्छ्रितगुहाव्यात्ताननाः पर्वता
लोकोऽयं रविपाकनष्टहृदयः संयाति मूर्छामिव ॥३६॥

लिम्पन्ति रूक्षपवनाः सिकताग्निचूर्णैः
संखेदयन्ति च नगाः परुषैः पलाशैः ।
दावैर्द्रवीकृततनुः स्रवतीव भास्वान्
आदित्यपाकचलितः फलतीव लोकः ॥३७॥

शैलेन्द्राः कलभोपमा जलधयः क्रीडातटाकोपमा
वृक्षाः शैवलसन्निभाः क्षितितलं प्रच्छन्ननिम्नस्थलम् ।
सीमन्ता इव निम्नगाः सुविपुलाः सौधाश्चबिन्दूपमा
दृष्टं वक्रमिवाभिभाति सकलं संक्षिप्तरूपं जगत् ॥३८॥

೩೩. ಈಗ ಮನುಷ್ಯಲೋಕವು ಸೂರ್ಯನೆಂಬ ತಿಲಕವನ್ನು ಕಳೆದುಕೊಂಡಿದೆ; ತಾರಾಮಾಲೆ (ಆಕಾಶದಲ್ಲಿ) ಹಬ್ಬಿದೆ; ಬಿಸಿಲಿಳಿದಿದೆ; ಜೇನ್ನಾದ ಮೆಲ್ಲೆಲರು ತಂಪಾಗಿ ಬೀಸುತ್ತಿದೆ; ಪ್ರಿಯ-ಪ್ರೇಯಸಿಯರು ಅವಿತು ಸೇರುತ್ತಿದ್ದಾರೆ; ಇದರಿಂದ, ಶೂರರಿಂದ ತುಂಬಿದ ಈ ಪ್ರಪಂಚವು ವೇಷ ಬದಲಾಯಿಸಿದಂತೆ ತೋರುತ್ತಿದೆ !

೩೪. ಎಲ್ಲ ಪ್ರಜೆಗಳೂ ಗರ್ಭಸ್ಥ ಶಿಶುಗಳಂತೆ ಎಚ್ಚರವಿಲ್ಲದವರಾಗಿದ್ದಾರೆ (ಈ ಅರ್ಧರಾತ್ರಿಯಲ್ಲಿ), ಸುಖವಾಗಿ ನಿದ್ದೆಮಾಡಿದ ಜನರಿಂದ ನಿಃಶಬ್ದವಾಗಿರುವ ಉಪ್ಪರಿಗೆ ಮನೆಗಳು ಧ್ಯಾನಮಗ್ನವಾಗಿರುವಂತೆ ತೋರುತ್ತವೆ; ಕೂಡಿಬಂದ ಕಪ್ಪಿನಿಂದ ಕಬಳಿಸಲ್ಪಟ್ಟಿರುವ ಹಾಗೆ ಬೆಟ್ಟಗಳು ಮುಟ್ಟಿದರೆ ಮಾತ್ರ ಗೊತ್ತಾಗುವ ಸ್ಥಿತಿಯಲ್ಲಿವೆ; ಆದುದರಿಂದ ಅವ್ಯಕ್ತವಾಗಿರುವ ಈ ಜಗತ್ತು ಅದೃಶ್ಯವಾಗಿ ಹೋಗಿರುವಂತೆ ತೋರುತ್ತದೆ.

೩೫. (ಈ ನಟ್ಟಿರುಳಲ್ಲಿ) ಹಾದಿಯುದ್ದಕ್ಕು ಸಿಗುವ ಹೊಳೆಗಳು ಕತ್ತಲಿನಂತೆ ಹರಿಯುತ್ತಿವೆ; ಸೌಧಗಳ ಮಾಲೆ ಮರಳು ದಿಣ್ಣೆಗಳಂತೆ ತೋರುತ್ತವೆ; ಹತ್ತು ದಿಕ್ಕುಗಳೂ ಕಪ್ಪಿನಲ್ಲಿ ಮುಳುಗಿಹೋಗಿವೆ; ಈ ಕಗ್ಗತ್ತಲು ದೋಣಿ ಹತ್ತಿ ದಾಟಬೇಕಾದ (ಹೊನಲಿನ) ಹಾಗೆ ಇದೆ.

೩೬. (ಬೇಸಿಗೆಯಲ್ಲಿ) ಬಹಳ ಬಿಸಿಯಾದ ಭೂಮಿಯೂ, ಸೂರ್ಯನ ಕಿರಣಗಳು ಹೀರಿದ್ದರಿಂದ, ಶಕ್ತಿಯನ್ನು ಕಳೆದುಕೊಂಡಿದೆ; ಕಾಳ್ಗಿಚ್ಚಿನ ದೆಸೆಯಿಂದ ನೆಳಲೀಯಲಾರದ ಮರಗಳು ಕ್ಷಯರೋಗದಿಂದ ನರಳುತ್ತಿರುವ ಹಾಗೆ ಕಾಣಿಸುತ್ತವೆ; ಮೇಲ್ಭಾಗದಲ್ಲಿ ಬಾಯ್ದೆರೆದಿರುವ ಗುಹೆಗಳಿಂದ ಕೂಡಿದ ಬೆಟ್ಟಗಳು ವಶತಪ್ಪಿ ಗಟ್ಟಿಯಾಗಿ ಅಳುವಂತೆ ತೋರುತ್ತವೆ; ಈ ಲೋಕವೇ ಸೂರ್ಯ ಬೇಯಿಸಿದ್ದರಿಂದ ಎದೆಯನ್ನು ಕಳೆದುಕೊಂಡು ಮೂರ್ಛೆಹೋದಂತಾಗಿದೆ.

೩೭. (ಬೇಸಿಗೆಯಲ್ಲಿ) ಬೆಂಕಿಯಾದ ಹೊಯಿಗೆ ಹುಡಿಗಳ ದೆಸೆಯಿಂದ ಒಣಗಾಳಿ ಕುಂಟುತ್ತಿದೆ; ಒರಟು ಮುತ್ತುಗ ಮರಗಳ ದೆಸೆಯಿಂದ ಬೆಟ್ಟಗಳು ಬೆವರುತ್ತಿವೆ; ಸೂರ್ಯನು ಕಾಳ್ಗಿಚ್ಚು ಹಬ್ಬಿದ್ದರಿಂದ ನೀರಾದ ಮೈಯುಳ್ಳವನಾಗಿ ಸೋರುತ್ತಿರುವ ಹಾಗೆ ಕಾಣಿಸುತ್ತಾನೆ; ಜಗತ್ತು ಸೂರ್ಯ ಬೇಯಿಸಿದ್ದರಿಂದ ಹಣ್ಣಾಗುತ್ತಿದೆಯೋ ಏನೋ ಎಂಬಂತೆ ತೋರುತ್ತದೆ.

೩೮. (ಆಕಾಶಯಾನದಲ್ಲಿರುವಾಗ ಕೆಳಗೆ ನೋಡಿದರೆ) ಹೆಬ್ಬೆಟ್ಟಗಳು ಆನೆಮರಿಗಳಂತೆ, ಕಡಲುಗಳು ಆಟದ ಕೆರೆಗಳಂತೆ, ಮರಗಳು ಹಾವಸೆಗಳ ಹಾಗೆ, ನೆಲವು ತಗ್ಗಿಲ್ಲದಂತೆ, ಹೊಳೆಗಳು ಬೈತಲೆ ಗೆರೆಗಳಂತೆ ಮತ್ತು ದೊಡ್ಡ ಮನೆಗಳು ಚುಕ್ಕೆಗಳ ಹಾಗೆ ಕಾಣಿಸುತ್ತವೆ; (ಒಟ್ಟಿನಲ್ಲಿ) ಇಡಿ ಜಗತ್ತೇ ಚಿಕ್ಕದಾಗಿಯೂ ಸೊಟ್ಟ ಸ್ವಭಾವದ್ದಾಗಿಯೂ ತೋರುತ್ತಿದೆ.

जलदसमयघोषणाडम्बरानेकरूपक्रियाजम्भका वज्रभृद्-
गृष्टयो
भगणयवनिकास्तटित्पन्नगीवासवल्मीकभूतानभोमार्गरूढ
क्षपाः ।
मदनशरनिशातशैलाः प्ररुष्टाङ्गनासन्धिपाला गिरिस्नाप-
नाम्भोघटाः
उदधिसलिलभैक्षहारा रवीन्द्वर्गला देवयन्त्रप्रपाभान्तिनीला-
म्बुदाः ॥३९॥

व्योमार्णवोर्मिसदृशा निनदन्ति मेघा
मेघप्ररोहसदृशा प्रपतन्ति धाराः ।
रक्षोङ्गनाभ्रुकुटिवत् तडितः स्फुरन्ति
प्राप्तोऽग्रयौवनघनस्तनमर्दकालः ॥४०॥

लिम्पतीव तमोऽङ्गानि वर्षतीवाञ्जनं नभः ।
असत्पुरुषसेवेव दृष्टिर्निष्फलतां गता ॥४१॥

आलोकविशाला मे सहसा तिमिरप्रवेशसञ्छन्ना ।
उन्मीलिताऽपि दृष्टिर्निमीलितेवान्धकारेण ॥४२॥

अप्रकाशा इव दिशो घनीभूता इव द्रुमाः ।
सुनिविष्टस्य लोकस्य कृतो रूपविपर्ययः ॥४३॥

कपाले मार्जारः पय इति कराँल्लेढि शशिनस्
तरुच्छिद्रप्रोतान् बिसमिति करी सङ्कलयति ।
रतान्ते तल्पस्थान् हरति वनिताऽप्यंशुकमिति
प्रभामत्तश्चन्द्रो जगदिदमहो विप्लवयति ॥४४॥

೩೯. (ಕಾರ್ಗಾಲದ) ನೀಲಮೋಡಗಳು ಇಂದ್ರನ ಆನೆಗಳು; ಮಳೆಗಾಲದಲ್ಲಿ ಅವು ಘೀಳಿಡುತ್ತ ವಿವಿಧ ಆಡಂಬರದ ರೂಪ-ನಡತೆಗಳನ್ನು ವ್ಯಕ್ತಪಡಿಸುತ್ತವೆ; ಆಗ ನಭ ಹಾದಿಯಲ್ಲಿ ನೆಲೆನಿಂತ ಇರುಳುಗಳಂತಿರುವ ಅವು ಮಿಂಚೆಂಬ ನಾಗರ ಹಾವು ವಾಸವಾಗಿರುವ ಹುತ್ತಗಳಾಗಿರುವುವಲ್ಲದೆ, ನಕ್ಷತ್ರಗಳನ್ನು ಮುಚ್ಚಿದ ಪರದೆಗಳೂ ಆಗಿವೆ; ಅವು ಮನ್ಮಥನ ಅಂಬುಗಳಷ್ಟು ಹರಿತವಾದ (ಬಂಡೆಗಳನ್ನುಳ್ಳ) ಗುಡ್ಡಗಳು, ಸಿಟ್ಟುಬಂದ ಸುಂದರಿಯರ (ಮನವೊಲಿಸುವ) ರಾಯಭಾರಿಗಳು, ಪರ್ವತಗಳಿಗೆ ಅಭಿಷೇಕ ಮಾಡುವ ನೀರ್ಗೊಡಗಳು, ಕಡಲಿತ್ತ ನೀರ ಭಿಕ್ಷೆಯನ್ನು ಕೊಂಡೊಯ್ಯುವಂಥವು, ಸೂರ್ಯ-ಚಂದ್ರರು ಹೊರಬೀಳದಂತೆ ಜಡಿದ ಬಾಗಿಲ ತಾಳಗಳು, ದೇವತೆಗಳು ರಚಿಸಿದ ಯಂತ್ರಗಳಿಂದ ಕೂಡಿದ ಅರವಟ್ಟಿಗೆಗಳು ಎಂಬಂತೆ ತೋರುತ್ತವೆ.

೪೦. ಆಕಾಶಸಮುದ್ರದ ಅಲೆಗಳಂತಹ ಮೋಡಗಳು ಸದ್ದುಮಾಡುತ್ತಿವೆ; ಮೋಡದ ಮೊಗ್ಗುಗಳಂತಹ ಜಲಧಾರೆಗಳು ಜೋರಾಗಿ ಬೀಳುತ್ತಿವೆ; ರಾಕ್ಷಸ ಸ್ತ್ರೀಯರ ಗಂಟಿಕ್ಕಿದ ಹುಬ್ಬುಗಳಂತೆ ಮಿಂಚುಗಳು ಜಗ್ಗನೆ ಹೊಳೆಯುತ್ತಿವೆ; ಆದುದರಿಂದ ಮುಂಬರೆಯುದ ಜವ್ವನೆಯರ ಸ್ತನಮರ್ದನದ ಕಾಲ (ಮಳೆಗಾಲವು) ಬಂದಿದೆ.

೪೧. (ಈ ಕಾರಿರುಳಿನಲ್ಲಿ) ಕಪ್ಪು ಕೈಕಾಲುಗಳಿಗೆ ಬಳಿಯುತ್ತಿರುವಂತೆ ಮತ್ತು ಬಾನು ಕಾಡಿಗೆಮಳೆ ಸುರಿಸುತ್ತಿರುವಂತೆ ತೋರುತ್ತದೆ; ಆದುದರಿಂದ ದುಷ್ಟರ ಚಾಕರಿ ಮಾಡಿಯೋ ಎಂಬಂತೆ ಕಣ್ಣು ಕಾಣದಂತಾಯಿತು.

೪೨. ನೋಡಲು ಅಗಲವಾಗಿರುವ ನನ್ನ ಕಣ್ಣು ಒಮ್ಮೆಂದೊಮ್ಮೆ ಕತ್ತಲು ಹೊಕ್ಕುದರಿಂದ ತೆರೆದೇ ಇದ್ದರೂ ಕಪ್ಪಿನಿಂದ ಮುಚ್ಚಿಹೋದಂತೆ ತೋರುತ್ತದೆ.

೪೩. ಎಲ್ಲ ದಿಕ್ಕುಗಳಲ್ಲೂ ಬೆಳಕಿಲ್ಲದಂತೆ ಮತ್ತು ಎಲ್ಲ ಮರಗಳೂ ಗಡ್ಡೆಗಟ್ಟಿ ಹೋಗಿರುವಂತೆ ಕಾಣುತ್ತದೆ; (ಕತ್ತಲು ತನ್ನ) ಹಿಡಿತಕ್ಕೆ ಸಿಕ್ಕಿದ ಜಗತ್ತಿನ ರೂಪವನ್ನೇ ವಿಪರೀತ ಗೊಳಿಸಿದೆಯೇನೋ ಎನ್ನಿಸುತ್ತದೆ.

೪೪. ತಟ್ಟೆಯಲ್ಲಿ ಬಿದ್ದ ಚಂದ್ರಕಿರಣಗಳನ್ನು ಬೆಕ್ಕು ನೆಕ್ಕುತ್ತಿದೆ; ಮರಗಳ ಸಂದಿಗಳಲ್ಲಿ ಸಿಕ್ಕಿಬಿದ್ದಿರುವ ಬೆಳ್ದಿರುಗಳನ್ನು ಆನೆ ತಾವರೆದಂಟೆಂದು ತಿಳಿದು ಒಟ್ಟು ಗೂಡಿಸುತ್ತದೆ; ತರುಣಿಯೊಬ್ಬಳು ಪ್ರಿಯಭೋಗಾಂತದಲ್ಲಿ ಹಾಸಿಗೆಯ ಮೇಲೆ ಚೆಲ್ಲಿದ ಬೆಳುದಿಂಗಳನ್ನು ಬಟ್ಟೆಯೆಂದು ಬಗೆದು ತೆಗೆದುಕೊಳ್ಳುತ್ತಿದ್ದಾಳೆ: ಅಬ್ಬಾ! ತನ್ನ ಬೆಳಕಿನಿಂದ ಸೊಕ್ಕಿದ ಚಂದ್ರನು ಈ ಲೋಕವನ್ನೇ ಗಲಿಬಿಲಿಗೊಳಿಸುತ್ತಿದ್ದಾನೆ.

प्रालेयमिश्रमकरन्दकरालकोशैः
पुष्पैः समं निपतिता रजनीप्रबुद्धैः ।
अर्कांशुभिन्नमुकुलोदरसान्द्रगन्ध-
संसूचितानि कमलान्यलयः पतन्ति ॥४५॥

जृम्भारम्भप्रविततदलोपान्तजालप्रविष्टैर्
भाभिर्भानोनुपतय इव स्पृश्यमाना विबुद्धाः ।
स्त्रीभिः सार्धं घनपरिमलस्तोकलक्ष्याङ्गरागा
मुञ्चन्त्येके विकचनलिनीगर्भशय्यां द्विरेफाः ॥४६॥

दिक्षु व्यूढांघ्रिपाङ्गस्तृणजटिलचलत्प्रांशुदण्डोऽन्तरिक्षे
झाङ्कारी शर्करालः पथिषु विटपिनां स्कन्धकाषैः सधूमः ।
प्रासादानां निकुञ्जेष्वभिनवजलदोद्गारगम्भीरधीरस्
चण्डारम्भः समीरो वहति परिदिशं भीरु किं सम्भ्रमेण
॥४७॥

हर्म्याणां हेमशृङ्गश्रियमिव निचयैरर्चिषामादधानः
सान्द्रोद्यानद्रुमाग्रग्लपनपिशुनितात्यन्ततीव्राभितापः ।
कुर्वन् क्रीडामहीध्रं सजलजलधरश्यामलं धूमपातैर्
एष प्लोषार्तयोषिज्जन इह सहसैवोत्थितोऽन्तःपुरोऽग्निः
॥४८॥

आभात्यर्कांशुतापक्वथमिव शफरोद्वर्तनैर्दीर्घिकाम्भश्
छत्राभं नृत्तलीलाशिथिलमपि शिखी बर्हभारं तनोति ।
छायाचक्रं तरूणां हरिणशिशुरुपैत्यालवालाम्बुलुब्धः
सद्यस्त्यक्त्वा कपोलं विशति मधुकरः कर्णपाली गजस्य
॥४९॥

೪೫. (ಈ ಮುಂಜಾವದಲ್ಲಿ) ಮಂಜಿನ ಹನಿಗಳಿಂದಲೂ ಮಕರಂದ ರಸದಿಂದಲೂ ಬಿರುಸಾಗಿರುವ ಕೇಸರವುಳ್ಳ ಮತ್ತು ಇರುಳಲ್ಲೇ ಅರಳಿದ ಹೂಗಳು ತಂಗಾಳಿಯಿಂದ ಉದುರಿ ಕೆಳಗೆ ಬೀಳುತ್ತಲೇ, ಅವುಗಳಲ್ಲಿದ್ದ ಜೇನುಗಳು ಆ ಹೂಗಳನ್ನು ಬಿಟ್ಟು ಸೂರ್ಯಕಿರಣಗಳಿಂದ ಅರಳಿದ ಕಮಲಗಳ ಸುಗಂಧವನ್ನು ಮೂಸಿ ಆ ಕಮಲಗಳ ಮಧುವನ್ನು ಸೇವಿಸಹೋಗುತ್ತವೆ.

೪೬. ಅರಳು ಮೊಗ್ಗೆಗಳ ಎಸಳುಗಳ ಬಿರುಕುಗಳಿಂದ ಒಳಗೆ ಬಂದ ಸೂರ್ಯ ಕಿರಣಗಳು ಮೈಮೇಲೆ ಬಿದ್ದದ್ದರಿಂದ ತಮ್ಮ ತಮ್ಮ ಸ್ತ್ರೀಯರೊಡನೆ ದುಂಬಿಗಳು ಅರಸರಂತೆ ಸಾಂದ್ರ ಸುಗಂಧದ ಪರಾಗದ ಉರುಟಣೆ ಮೈಯಲ್ಲಿ ಸ್ವಲ್ಪ ಸ್ವಲ್ಪ ಹತ್ತಿರಲು ಕಮಲಗರ್ಭವೆಂಬ ಹಾಸಿಗೆಯನ್ನು ಬಿಟ್ಟು ಏಳುತ್ತವೆ.

೪೭. ಉಗ್ರವಾದ ಈ ಗಾಳಿಯು ದಿಕ್ಕುದಿಕ್ಕಿನಲ್ಲಿರುವ ಮರಗಳ ಮೈಯನ್ನೇರಿದೆ, ಹುಲ್ಲುಕಡ್ಡಿಗಳೊಡನೆ ಕೂಡಿಕೊಂಡು ಅಂತರಿಕ್ಷದಲ್ಲಿ ಗದೆಯಾಗಿ ಆಳೆತ್ತರಕ್ಕೆ ಜಿಗಿದಿದೆ. ಹಾದಿಗಳಲ್ಲಿ ಕಲ್ಲು ಹುಡಿಗಳಿಂದ ಅಲಂಕೃತವಾಗಿ ಘೋರ್ಗರೆಯುತ್ತಿದೆ, ಮರಗಳ ಕೊಂಬೆಗಳ ಘರ್ಷಣಗಳಿಂದ (ಹೊತ್ತಿದ ಬೆಂಕಿಯ) ಹೊಗೆಯನ್ನು ಕೂಡಿ-ಕೊಂಡಿದೆ ಮತ್ತು ದೊಡ್ಡ ಮಹಡಿ ಮನೆಗಳೆದುರಿನ ಬೆಳ್ಳಿಮೋಡಗಳಲ್ಲಿ ಹೊಸ ಮೋಡ ಸುರಿಸುವ ಮಳೆಯ ದೆಸೆಯಿಂದ ಗಂಭೀರವೂ ಧೀರವೂ ಆಗಿದೆ; ಎಲೈ ಪಕ್ಷಿಯೇ ಹೀಗೆ ಬೀಸಲಾರಂಭಿಸಿದ್ದು (ಬಿರು) ಗಾಳಿ; ಇದರಿಂದೇಕೆ ಗಾಬರಿಗೊಳ್ಳುವೆ ?

೪೮. ಹೆಮ್ಮನೆಗಳ ಹೊಂಗೋಪುರಗಳ ಸೌಂದರ್ಯವನ್ನು ತಳೆದನೋ ಎಂಬಂತೆ ಜ್ವಾಲಾಸಮೂಹಗಳನ್ನು ತಳೆದು, ಉದ್ಯಾನದಲ್ಲಿ ದಟ್ಟವಾಗಿ ಬೆಳೆದ ಮರಗಳ ತುದಿಗಳೆಲ್ಲವನ್ನೂ ಕರಿಕಲು ಮಾಡುವುದರ ಮೂಲಕ ತನ್ನ ಉಗ್ರವಾದ ಉರಿಯನ್ನು ಪ್ರಕಟಿಸಿ, ಹೊಗೆ ಹಬ್ಬಿಸಿ ಆಟದ ಬೆಟ್ಟಗಳನ್ನು ಮಳೆಗಾಲದ ಮೋಡದಷ್ಟು ಕಪ್ಪು ಮಾಡಿ ಅಗ್ನಿಯು ಎದ್ದನು; ಆಗ ಅಂತಃಪುರದಲ್ಲಿ ಸುಡತದ ದೆಸೆಯಿಂದ ದುಃಖಕ್ಕೀಡಾದ ಈ ಹೆಂಗಸರು ಧಿಗ್ಗನೆ ಎಚ್ಚತ್ತರು.

೪೯. (ಈ ನಡುಹಗಲಿನಲ್ಲಿ) ನೀಳ್ಗೊಳದ ನೀರು ಸೂರ್ಯನ ಬಿಸಿಲಿನಿಂದ ಕುದಿದಂತಾಗಿರುವುದರಿಂದ (ಅಲ್ಲಿಯ) ಹೊಳೆವ ಸಣ್ಣ ಮೀನುಗಳು ಮೊಗಚಾಡು-ತ್ತವೆ. ಕುಣಿದಾಟದಿಂದ ಸುಸ್ತಾಗಿದ್ದರೂ ನವಿಲು ಕೊಡೆಯಂತೆ ತನ್ನ ಗರಿಗಳನ್ನು ಬಿಚ್ಚಿ ಹೊತ್ತಿದೆ: ನೀರಾವಳಿಯಲ್ಲಿಯ ನೀರನ್ನಾಶಿಸಿ ಜಿಂಕೆಮರಿ ಗಿಡಗಳ ಉರುಟು ನೆಳಲನ್ನು ಸಮೀಪಿಸಿ ಹೋಗುತ್ತಿದೆ; ದುಂಬಿಯು ಈಗ ಆನೆಯ ಕೆನ್ನೆಯನ್ನು ಬಿಟ್ಟು (ಅದರ) ಹೊರಗಿವಿಯತ್ತ ಹೋಗುತ್ತದೆ.

वृन्तैः क्षुद्रप्रवालस्थगितमिव तलं भाति शेफालिकानां
गन्धः सप्तच्छदानां सपदि गजमदामोदमोहं करोति ।
एतेचोन्निद्रपद्मच्युतबहलरजः पुञ्जपिङ्गाङ्गरागा
गायन्त्यव्यक्तवाचः किमपि मधुलिहो वारुणीपानमत्ताः
॥५०॥

उदयति हिशशाङ्कः कामिनीगण्डपाण्डुर्
ग्रहगणपरिवारो राजमार्गप्रदीपः ।
तिमिरनिकरमध्ये रश्मयो यस्य गौराः
स्रुतजल इव पङ्के क्षीरधाराः पतन्ति ॥५१॥

असौहि दत्वा तिमिरावकाशं
अस्तं व्रजत्युन्नतकोटिरिन्दुः ।
जलावगाढस्य वनद्विपस्य
तीक्ष्णं विषाणाग्रमिवावशिष्टम् ॥५२॥

धो। मेघोजलार्द्रमहिषोदरभृङ्गनीलो
विद्युत्प्रभारचितपीतपटोत्तरीयः ।
आभाति संहतबलाकगृहीतशङ्खः
एवं केशवोऽपर इवाक्रमितुं प्रवृत्तः ॥५३॥

केशवगात्रश्यामः कुटिलबलाकावलीरचितशङ्खः
विद्युद्गुणकौशेयः चक्रधर इवोन्नतो मेघः ॥५४॥

संसक्तैरिव चक्रवाकमिथुनैर्हंसैः प्रडीनैरिव
व्याविद्धैरिव मीनचक्रमकरैर्हर्म्यैरिव प्रोच्छ्रितैः ।
तैस्तैराकृतिविस्तरैरनुगतैर्मेघैः समभ्युन्नतैः
पत्रच्छेद्यमिवेह भाति गगनं विश्लेषितैर्वायुना ॥५५॥

೫೦. (ಈ ಕಾರಂಜಿ ತೋಟದಲ್ಲಿ) ಶೇಫಾಲಿಕಾ ವೃಕ್ಷಗಳ ಅಡಿಯ ನೆಲವು ಅವುಗಳ ಹೂಗಳ ಉದುರಿದ ತೊಟ್ಟುಗಳ ದೆಸೆಯಿಂದ ಚಿಕ್ಕ ಚಿಕ್ಕ ಹವಳಗಳಿಂದ ಜಡಿದಿರುವ ಹಾಗೆ ತೋರುತ್ತದೆ; ಏಳುಸುಳಿ ಬಾಳೆಗಳ ಪರಿಮಳವು ಒಮ್ಮೊಂದೊಮ್ಮೆ ಆನೆಯ ಮದೋದಕವೇನೋ ಎನ್ನಿಸುತ್ತದೆ; ಮಧುವನ್ನು ಹೀರಿದ ಈ ತುಂಬಿಗಳು ಅರಳಿದ ತಾವರೆಗಳ ರಾಶಿರಾಶಿಯಾದ ಪರಾಗವನ್ನು ಮೈತುಂಬ ಮೆತ್ತಿಕೊಂಡು ಕೆಂಫಳದಿಯಾಗಿರುವುದಲ್ಲದೆ, ಏನೇನನ್ನೋ ಅಸ್ಪಷ್ಟವಾಗಿ ಹಾಡುತ್ತಿವೆ.

೫೧. ಸುಂದರಿಯರ ಮೋಲ್ಗೆನ್ನೆಯಷ್ಟು ಗೌರವರ್ಣವುಳ್ಳ ಚಂದ್ರನು ಉದಯಿಸುತ್ತಿದ್ದಾನೆ; ಅವನ ಸುತ್ತಲೂ ಗ್ರಹಗಳ ಪರಿವಾರವಿದೆ; ಅವನು ರಾಜ ಮಾರ್ಗಕ್ಕೆ ದೀವಿಗೆಯಾಗಿದ್ದಾನೆ, ಕತ್ತಲ ರಾಶಿಯ ನಡುವೆ ಅವನ ಕಿರಣಗಳು ಬೆಳ್ಳಗಾಗಿ ತೋರುತ್ತವೆ; ಅವು ನೀರರತ ಕೆಸರಿನಲ್ಲಿ ಬೀಳುವ ಹಾಲಿನ ಧಾರೆಗಳು!

೫೨. ಕತ್ತಲಿಗೆ ಅವಕಾಶ ಮಾಡಿಕೊಟ್ಟು ಈ ಚಂದ್ರನು ಎತ್ತರದ ಕೋಡಿ ನಿಂದ ಮುಳುಗುತ್ತಿದ್ದಾನೆ; ಆ ಕೋಡು ನೀರಲ್ಲಿ ಮುಳುಗಿದ ಕಾಡಾನೆಯ–ನೀರ ಮೇಲೆ ಉಳಿದ–ದಂತದಂತಿದೆ.

೫೩. ಈ ಮೋಡವು ನೀರಿಂದ ತೊಯ್ದ ಕೋಣದ ಹೊಟ್ಟೆಯಂತೆ ದುಂಬಿ ನೀಲಿ ಬಣ್ಣವನ್ನು ತಳೆದಿದೆ; ಇದಕ್ಕೆ ಮಿಂಚಿನ ಹೊಳಪೆಂಬ ಹಳದೀ ಬಟ್ಟೆಯ ಮೇಲುದುವಿದೆ; ಒಟ್ಟುಗೂಡಿದ ಕೊಕ್ಕರೆಗಳ ದೆಸೆಯಿಂದ ಇದು ಶಂಖ ವನ್ನು ಹಿಡಿದುಕೊಂಡಂತೆ ತೋರುತ್ತದೆ; ಆದ್ದರಿಂದ ತ್ರಿವಿಕ್ರಮನಂತೆ ಆಕಾಶವನ್ನು ಆಕ್ರಮಿಸಲು ಇದು ಹೊರಟಂತೆ ಕಾಣುತ್ತದೆ.

೫೪. ಈ ಮೋಡವು ವಿಷ್ಣುವಿನ ಮೈಯ ಹಾಗೆ ಕಪ್ಪಾಗಿದೆ, ಸೊಟ್ಟಾದ ಬೆಳ್ಳಕ್ಕಿಗಳ ಸಮೂಹದಿಂದ ಶಂಖ ಹಿಡಿದುಕೊಂಡಿರುವಂತೆ ತೋರುತ್ತದೆ; ಮಿಂಚಿಂದ ಪಟ್ಟೆಯುಟ್ಟಂತೆ ಕಾಣಿಸುವ ಇದು ಚಕ್ರಪಾಣಿ ವಿಷ್ಣುಮೂರ್ತಿಯ ಹಾಗೆ ಎತ್ತರ-ವಾಗಿದೆ.

೫೫. ಚಕ್ರವಾಕ ದಂಪತಿಗಳಿಂದೊಡಗೂಡಿದಂತೆಯೂ ಹಾರುತ್ತಿರುವ ಹಂಸ-ಗಳಿಂದ ಕೂಡಿದಂತೆಯೂ ಮೀನು–ನೆಗಳಗಳ ಚಿತ್ರಗಳಿಂದ ಕೂಡಿದ ಎತ್ತರದ ದೊಡ್ಡ ಮನೆಗಳಿಂದ ತುಂಬಿರುವಂತೆಯೂ ಕಾಣುವ ಹಾಗೂ ಇನ್ನೂ ಯಾವ ಯಾವುವೋ ಆಕಾರಗಳಿಂದ ಹಿಂಬಾಲಿಸಲ್ಪಟ್ಟಂತಿರುವ ಎತ್ತರದ ಮೋಡಗಳ ದೆಸೆಯಿಂದ, ಗಾಳಿ ಪಾಲು ಪಾಲಾಗಿ ಒಡೆದ ಆಕಾಶವೀಗ ಬಣ್ಣಬಣ್ಣದ ಚಿತ್ರ-ಗಳಿಂದ ವಿಂಗಡಿಸಲ್ಪಟ್ಟಂತೆ ತೋರುತ್ತದೆ.

एतत्तद्धृतराष्ट्रवक्त्रसदृशं मेघान्धकारं नभो
हृष्टो गर्जति चातिदर्पितबलो दुर्योधनो वा शिखी ।
अक्षद्यूतजितो युधिष्ठिर इवाध्वानं गतः कोकिलो
हंसाः सम्प्रति पाण्डवा इव वनादज्ञातचर्यां गताः ॥५६॥

गर्जन्ति शैलशिखरेषु विलम्बिबिम्बा
मेघा वियुक्तवनिताहृदयानुकाराः ।
येषां रवेण सहसोत्पतितैर्मयूरैः
खं वीज्यते मणिमयैरिव तालवृन्तैः ॥५७॥

पङ्कक्लिन्नमुखाः पिबन्ति सलिलं धाराहता दर्दुराः
कण्ठं मुञ्चति बर्हिणः समदनो नीपः प्रदीपायते ।
संन्यासः कुलदूषणैरिव जनैर्मेघैर्वृतश्चन्द्रमा
विद्युन्नीचकुलोद्गतेव युवतिर्नैकत्र सन्तिष्ठते ॥५८॥

पवनचपलवेगः स्थूलधाराशरौघः
स्तनितपटहनादः स्पष्टविद्युत्पताकः ।
हरति करसमूहं खे शशाङ्कस्य मेघो
नृप इव पुरमध्ये मन्दवीर्यस्य शत्रोः ॥५९॥

एह्येहीति शिखण्डिनां पटुतरं केकाभिराक्रन्दितः
प्रोड्डीयेव बलाकया सरभसं सोत्कण्ठमालिङ्गितः ।
हंसैरुज्झित पङ्कजैरतितरं सोद्वेगमुद्वीक्षितः ।
कुर्वन्नञ्जनमेचका इव दिशो मेघः समुत्तिष्ठति ॥६०॥

विद्युद्भिर्ज्वलतीव संविहसतीवोच्चैर्बलाकाशतैः
माहेन्द्रेण विवल्गतीव धनुषा धाराशरोद्गारिणा ।
विस्पष्टाशनिनिस्वनेन रसतीवाघूर्णतीवानिलैः
नीलैः सान्द्रमिवाहिभिर्जलधरैर्धूपायतीवाम्बरम् ॥६१॥

೫೬. ಮೋಡಗತ್ತಲಿನ ಈ ಆಕಾಶವು ಧೃತರಾಷ್ಟ್ರನ ಸೈನ್ಯದಂತಿದೆ; ನವಿಲು ಕೌರವನಂತೆ ಹೆಚ್ಚಿನ ದರ್ಪಬಲದಿಂದ ಸಂತುಷ್ಟವಾಗಿ ಕೇಕೆ ಹಾಕುತ್ತಿದೆ; ಪಗಡೆ ಜೂಜಿನಲ್ಲಿ ಸೋತ ಧರ್ಮರಾಯನಂತೆ ಕೋಗಿಲು (ದೂರದ) ದಾರಿ ಹಿಡಿದು ಹೋಗಿದೆ; ವನವಾಸ ಮುಗಿಸಿದ ಪಾಂಡವರಂತೆ ಹಂಸಗಳೀಗ ಅಜ್ಞಾತವಾಸಕ್ಕೆ ತೆರಳಿವೆ.

೫೭. ಪರ್ವತ ಶಿಖರಗಳಲ್ಲಿ ನೇತಾಡುತ್ತಿರುವ ಮುಗಿಲುಗಳು ಕೂಗುತ್ತಿವೆ; ಅವು ವಿರಹಿಣಿಯರ ಹೃದಯವನ್ನು ಅನುಕರಿಸುತ್ತಿವೆ; ಅವುಗಳ ಸದ್ದಿನಿಂದ ಕೂಡಲೆ ಎದ್ದ ನವಿಲುಗಳ ದೆಸೆಯಿಂದ ಆಕಾಶವು ರತ್ನಖಚಿತವಾದ ಬೀಸಣಿಗೆಗಳಿಂದ ಬೀಸಲ್ಪಡುತ್ತಿದೆಯೋ ಏನೋ ಎಂಬಂತೆ ತೋರುತ್ತದೆ.

೫೮. ಮಳೆಯಧಾರೆಯ ಹೊಡೆತಕ್ಕೆ ಸಿಕ್ಕಿದ ಕಪ್ಪೆಗಳು ಕೆಸರು ಹಿಡಿದ ಬಾಯಿಂದ ನೀರನ್ನು ಕುಡಿಯುತ್ತಿವೆ; ಕಡವಾಲಮರವು ಮನ್ಮಥನಿಂದ ಪ್ರದೀಪ್ತವಾಗಿ ನವಿಲಿನ ಕೊರಳನ್ನು (ಕೇಕೆ ಹಾಕಲು) ಪ್ರೇರಿಸುತ್ತದೆ; ಕುಲಕಲಂಕರಾದ ಜನರು ಸಂನ್ಯಾಸ ಹಿಡಿಯುವಂತೆ ಮೋಡಗಳು ಚಂದ್ರನನ್ನು (ಆವರಿಸಿ)ಹಿಡಿದಿವೆ: ನೀಚ ಕುಲದಲ್ಲಿ ಹುಟ್ಟಿದ ಯುವತಿಯಂತೆ ಮಿಂಚು ಒಂದು ಕಡೆ ನಿಲ್ಲುವುದೇ ಇಲ್ಲ.

೫೯. ಗಾಳಿಯಷ್ಟು ಚುರುಕಾದ ವೇಗವುಳ್ಳ, ದೊಡ್ಡ ಜಲಧಾರೆಗಳೆಂಬ ಬಾಣಾವಳಿಯನ್ನುಳ್ಳ, ಗುಡುಗೆಂಬ ಭೇರೀನಾದವುಳ್ಳ ಮತ್ತು ಮಿಂಚೆಂಬ ಧ್ವಜ ಪತಾಕೆಯನ್ನುಳ್ಳ ಮೋಡವು ಆಕಾಶದಲ್ಲಿ ಚಂದ್ರನ ಕಿರಣಗಳನ್ನು–ರಾಜನು ತನ್ನ ರಾಜಧಾನಿಯ ಮಧ್ಯದಲ್ಲಿ ನಿಂತು ಅವನ ಕರಗಳೆಲ್ಲವನ್ನೂ (ತೆರಿಗೆಯಿಂದ ಬಂದ ಆದಾಯವೆಲ್ಲವನ್ನೂ) ಅಪಹರಿಸಿಕೊಂಡು ಹೋಗುವಂತೆ ಅಪಹರಿಸುತ್ತಿದೆ.

೬೦. ನವಿಲುಗಳಿಂದ "ಬಾ, ಬಾ" ಎಂದು ಕೇಕೆಯ ಮೂಲಕ ಕರೆಯಿಸಿ-ಕೊಂಡು ಹಾರಿಬಂದ ಹೆಣ್ಣು ಕೊಕ್ಕರೆಯಿಂದ ಅತ್ಯಂತ ಪ್ರಣಯಾವೇಶ ಪೂರ್ವಕ-ವಾಗಿ ರಭಸದಿಂದ ಆಲಿಂಗಿತವಾಗಿ, ತಾವರೆಗಳನ್ನುಳಿದು ಹಂಸಗಳು ಉದ್ವೇಗದಿಂದ ಮೇಲಕ್ಕೆ ನೋಡುತ್ತಿರುವಾಗ, ದಿಕ್ಕುಗಳನ್ನು ಕಾಡಿಗೆಯಷ್ಟು ಕಪ್ಪು ಬಣ್ಣಕ್ಕೆ ತಿರುಗಿಸಿ ಎಂಬಂತೆ ಮುಗಿಲು ಮೇಲಕ್ಕೆದ್ದಿದೆ.

೬೧. ಆಕಾಶವು ಮಿಂಚುಗಳಿಂದ ಉರಿಯುವಂತೆಯೂ ನೂರಾರು ಬೆಳ್ಳಕ್ಕಿಗಳಿಂದ ಚೆನ್ನಾಗಿ ನಗುತ್ತಿರುವಂತೆಯೂ, ಮಳೆಯ ಧಾರೆಗಳೆಂಬ ಬಾಣಗಳನ್ನು ಬಿಡುವ ಮಳೆಬಿಲ್ಲಿನಿಂದ ಜಗಿಯುವಂತೆಯೂ, ಜೋರಾದ ಸಿಡಿಲಿನ ಸದ್ದಿನಿಂದ ಗರ್ಜಿಸುವಂತೆಯೂ, ಗಾಳಿಗಳಿಂದ ಅಲ್ಲಾಡುವಂತೆಯೂ ಮತ್ತು ನೀಲವರ್ಣದ ದಟ್ಟವಾದ ಸರ್ಪಸದೃಶ ಮೋಡಗಳಿಂದ ಹೊಗೆಯಾಡುವಂತೆಯೂ ತೋರುತ್ತದೆ.

तालीषु तारं विटपेषु मन्द्रं
शिलासु रूक्षं सलिलेषु चण्डम् ।
सङ्गीतवीणा इव ताड्यमानास्
तालानुसारेण पतन्ति धाराः ॥६२॥

वणिज इव भान्ति तरवः पण्यानीव स्थितानि कुसुमानि ।
शुल्कमिव साधयन्तो मधुकरपुरुषाः प्रविचरन्ति ॥६३॥

धारायन्त्रविमुक्तसन्ततपयःपूरस्नुते सर्वतः
सद्यः सान्द्रविमर्दकर्दमकृतक्रीडे क्षणं प्राङ्गणे ।
उद्दामप्रमदाकपोलनिपतत्सिन्दूररागारुणैः
सैन्दूरीक्रियते जनेन चरणन्यासैः पुरः कुट्टिमम् ॥६४॥

उद्यद्विद्रुमकान्तिभिः किसलयैस्ताम्रां त्विषं बिभ्रतो
भृङ्गाली विरुतैः कलैरविशदव्याहारलीलाभृतः ।
घूर्णन्तो मलयानिलाहतिचलैः शाखासमूहैर्मुहु–
र्भ्रान्तिं प्राप्य मधुप्रसङ्गमधुना मत्ता इवामी द्रुमाः ॥६५॥

अध्वानं नैकचक्रः प्रभवति भुवनभ्रान्तिदीर्घं विलङ्घ्य
प्रातः प्राप्तुं रथो मे पुनरिति मनसि न्यस्तचिन्तातिभारः ।
सन्ध्याकृष्टावशिष्टस्वकरपरिकरस्पष्टहेमारपङ्क्तिर्
व्याकृष्यावस्थितोऽस्तक्षितिभृति नयतीवैष दिक्चक्रमर्कः
॥६६॥

यातोऽस्मि पद्मवदने समयो ममैष
सुप्ता मयैव भवती प्रतिबोधनीया ।
प्रत्यायनामयमितीव सरोरुहिण्याः
सूर्योऽस्तमस्तकनिविष्टकरः करोति ॥६७॥

೬೨. ತಾಳೆಮರಗಳ ಮೇಲೆ ತಾರಸ್ವರದಿಂದ, ಪೊದೆಗಳ ಮೇಲೆ ಮಂದ್ರ ಸ್ವರದಿಂದ, ಕಲ್ಲುಗಳ ಮೇಲೆ ಕರ್ಕಶ ಸ್ವರದಿಂದ ಮತ್ತು ನೀರಿನ ಮೇಲೆ ಭಯಂಕರವಾದ ಸ್ವರದಿಂದ ಮಳೆಯ ಧಾರೆಗಳು ಸಂಗೀತ ಸಂದರ್ಭದಲ್ಲಿ ವೀಣೆ ಬಾರಿಸಿದಂತೆ ತಾಳ ತಪ್ಪದೆ ಬೀಳುತ್ತಿವೆ.

೬೩. (ಈ ಉದ್ಯಾನದಲ್ಲಿ) ಗಿಡಗಳು ವ್ಯಾಪಾರಿಗಳಂತೆಯೂ ಅವುಗಳ ಹೂವುಗಳು ಮಾರಲಿಟ್ಟ ಸಾಮಾನುಗಳಂತೆಯೂ ದುಂಬಿಗಳೆಂಬ ಅಧಿಕಾರಿಗಳು (ಅತ್ತಿತ್ತ) ತಿರುಗುತ್ತ ಸುಂಕ ವಸೂಲು ಮಾಡುತ್ತಿರುವಂತೆಯೂ ತೋರುತ್ತವೆ.

೬೪. ಅಂಗಳವು ಕಾರಂಜಿಯಿಂದ ಒಂದೇ ಸಮನಾಗಿ ಜಿಗಿಯುತ್ತಿರುವ ಜಲಪ್ರವಾಹದಿಂದ ತುಂಬಿರುವಾಗ ಮತ್ತು ಕೂಡಲೇ ಅಲ್ಲಿ ದಟ್ಟವಾದ ಕೆಸರಾಗಿ, ಅದನ್ನು ಮೆಟ್ಟಿ ಕ್ಷಣಕಾಲ ಆಟವಾಡಿದಾಗ, ಮೇಲ್ವಾಯ್ದು ಬರುವ ತರುಣಿಯರ ಕೆನ್ನೆಗಳಿಂದ ಬೀಳುವ ಕುಂಕುಮದ ಬಣ್ಣದಿಂದ ಕೆಂಪಾದ ಹೆಜ್ಜೆಗಳ ಚೆಟ್ಟುಗಳನ್ನು ಹಾಕುವ ಜನರಿಂದ ಮುಂದಿನ ಜಗುಲಿಯು ಕುಂಕುಮಮಯವಾಗಿ ಮಾರ್ಪಡುತ್ತಿದೆ.

೬೫. ಹವಳದಷ್ಟು ಎದ್ದು ಕಾಣುವ ಕಾಂತಿಯುಳ್ಳ ಚಿಗುರುಗಳಿಂದ ಕೆಂಪಾಗಿ ಹೊಳೆಯುವ, ದುಂಬಿಗಳ ಕಲರವದಿಂದ ಅಸ್ಪಷ್ಟವಾಗಿ ಮಾತನಾಡುವ ಲೀಲೆಯನ್ನು ತಳೆದ ಮತ್ತು ಮಲಯ ಮಾರುತದ ಮೇಲಿಂದಮೇಲೆ ಬೀಳುವ ಹೊಡೆತದಿಂದ ಅಲುಗಾಡುವ ಕೊಂಬೆಗಳ ದೆಸೆಯಿಂದ ಹೊಯ್ದಾಡುತ್ತಿರುವ ಈ ಮರಗಳು ತಮ್ಮ ಹೂಗಳಲ್ಲಿ ಮಕರಂದ (ಮದ್ಯ) ಒಸರುವ ಪ್ರಸ್ತುತ ವಸಂತ ಋತುವಿನಲ್ಲಿ ಮದಮತ್ತವಾದಂತೆ ತೋರುತ್ತವೆ.

೬೬. ಒಗ್ಗಾಲಿಯ ನನ್ನ ತೇರು ಜಗತ್ತಿನ ಉದ್ದಕ್ಕೂ ಇರುವ ಮಾರ್ಗವನ್ನು ಕ್ರಮಿಸಿ ಮತ್ತೆ ಬೆಳಿಗ್ಗೆ ಹೊರಡಲು ಶಕ್ತವಾಗದು ಎಂದು ಮನಸ್ಸಿನಲ್ಲಿ ಚಿಂತಾಕುಲನಾದ ಸೂರ್ಯನು, ಸಂಜೆ ಎಳೆದುಕೊಂಡ ಮೇಲೆ ಉಳಿದ ಕಿರಣಗಳನ್ನು ಕೂಡಿಕೊಂಡು, ಬಂಗಾರದ ಬಣ್ಣದ ತೇರ್ಗಾಲಿಯ ಹಳಿಗಳಿಂದ ದಿಕ್ಕುಗಳನ್ನು ಅಸ್ತಾಚಲದತ್ತ ಎಳೆದುಕೊಂಡು ಹೋಗಿ ನಿಂತಂತೆ ಕಾಣುತ್ತದೆ.

೬೭. 'ಎಲೈ ಕಮಲಮುಖಿ, ನನ್ನ ವೇಳೆ ಮುಗಿಯಿತು, ನಾನು ಹೋಗುತ್ತೇನೆ; ಮಲಗುವ ನಿನ್ನನ್ನು ನಾನೇ ಎಚ್ಚರಿಸುತ್ತೇನೆ' ಎಂದು ಸೂರ್ಯದೇವನು ಅಸ್ತಾದ್ರಿಯ ಶಿಖರದಲ್ಲಿ ಕರವಿಟ್ಟು ಪದ್ಮಿನಿಯನ್ನು ಸಂತೈಸುತ್ತಿರುವಂತಿದೆ.

पुरः पूर्वामेव स्थगयति ततोऽन्यामपि दिशं
क्रमात्क्रामन्नद्रिद्रुमपुरविभागांस्तिरयति ।
उपेतः पीनत्वं तदनु च जनस्येक्षणपथं
तमः सङ्घातोऽयं हरति हरकण्ठद्युतिहरः ॥६८॥

प्रचण्डसूर्यः स्पृहणीय चन्द्रमाः
सदावगाहक्षमवारिसञ्चयः ।
दिनान्तरम्योऽभ्युपशान्तमन्मथो
निदाघकालोऽयमुपागतः प्रिये ॥६९॥

सशीकराम्भोधरमत्तकुञ्जरस्
तडित्पताकोऽशनिशब्दमर्दलः ।
समागतो राजवदुद्धतद्युतिर्
घनागमः कामिजनप्रियः प्रिये ॥७०॥

काशांशुका विकचपद्ममनोज्ञवक्त्रा ।
सोन्मादहंसरवनूपुरनादरम्या
आपक्वशालिरुचिरानतगात्रयष्टिः
प्राप्ता शरन्नववधूरिव रूपरम्या ॥७१॥

नवप्रवालोद्गमसस्यरम्यः
प्रफुल्ललोध्रः परिपक्वशालिः ।
विलीनपद्मः प्रपतत्तुषारो
हेमन्तकालः समुपागतोयम् ॥७२॥

प्ररूढशालीक्षुचयावृतक्षितिं
क्वचित्स्थितक्रौञ्चनिनादराजितम् ।
प्रकामकामं प्रमदाजनप्रियं
वरोरु कालं शिशिराह्वयं शृणु ॥७३॥

೬೮. ಈ ಕತ್ತಲಿನ ರಾಶಿಯು ಮೊದಲು ಮೂಡಲನ್ನೂ ಅನಂತರ ಇತರ ದಿಕ್ಕುಗಳನ್ನೂ ಕ್ರಮವಾಗಿ ಸ್ಥಗಿತಗೊಳಿಸುತ್ತ ಹೋಗುತ್ತಿದೆ; ಆಮೇಲೆ ಅದು ಬೆಟ್ಟ, ಪಟ್ಟಣ ವಿಭಾಗ ಮುಂತಾದವೆಲ್ಲವನ್ನೂ ಆವರಿಸುತ್ತ ನಡೆಯುತ್ತಿದೆ. ಘನವಾಗಿ ಬೆಳೆದು ಅದು ನೀಲಕಂಠನ ಕೊರಳ ಕಾಂತಿಯನ್ನು ಮಿಂಚಿಸುತ್ತ ಜನರ ಕಣ್ಣಿಗೆ ದಾರಿಗಾಣದಂತೆ ಎಸಗುತ್ತದೆ.

೬೯. ಪ್ರಿಯೇ, ಈಗ ಬೇಸಿಗೆ ಬಂದಿದೆ: ಸೂರ್ಯನು ಭಯಂಕರ; ಚಂದ್ರನು ಸುಖಕರ: ನೀರು ದಿನವಿಡೀ ಮಿಂಯಲು ತಕ್ಕದ್ದಾಗಿದೆ; ಸಂಜೆಗಳು ಸುಂದರ; (ಜನಮನದ) ಪ್ರೇಮವೃತ್ತಿಯು ಶಾಂತವಾಗಿದೆ.

೭೦. ಈಗ, ಪ್ರಿಯೇ, ದೊರೆಯ ಹಾಗೆ ಮಳೆಗಾಲ ಬಂದಿದೆ; ದೊರೆ ಬರುವಾಗ ಮದಿಸಿದ ಆನೆಗಳು ಮದೋದಕ ಸುರಿಸಿದರೆ, ಇದು ಬರುತ್ತಿರುವಾಗ ಮೋಡಗಳು ನೀರ್ವನಿಗಳನ್ನು ಸುರಿಸುತ್ತಿವೆ; ಮಿಂಚು ಇದರ ಧ್ವಜಪತಾಕೆ, ಸಿಡಿಲು ಮದ್ದಳೆಯ ಹೊಡೆತ; ದರ್ಪಪ್ರಭೆಯನ್ನು ಬೀರುತ್ತಿರುವ ಈ ಕಾಲವು ಇದರ ಬರವನ್ನೇ ಹಾರೈಸುತ್ತಿರುವ ಜನಕ್ಕೆ ಬಹಳ ಪ್ರಿಯವೆನ್ನಿಸಿದೆ.

೭೧. ರೂಪದಲ್ಲಿ ಸುಂದರವಾದ ಹೊಸ ಸೊಸೆಯ ಹಾಗಿರುವ ಶರದೃತು-ವೀಗ ಪ್ರಾಪ್ತವಾಗಿದೆ; (ಶುಭ್ರವಾದ) ಕಾಶ ವಸ್ತ್ರವನ್ನು ಅದು ಧರಿಸಿದೆ, ಅರಳು ತ್ತಿರುವ ಕಮಲಗಳಿಂದಾದ ಅದರ ಮುಖ ಚೆಲುವಾಗಿದೆ, ಉತ್ಸಾಹ ಚಿಮ್ಮುತ್ತಿರುವ ಹಂಸಗಳ ಸ್ವರದ ಮೂಲಕ ಅದು ಇಂಪಾಗಿ ಕಾಲುಗೆಜ್ಜೆಯ ಸದ್ದನ್ನು ಮಾಡುತ್ತಿದೆ, ಮತ್ತು ಮಾಗಿದ ಬತ್ತದ ಸಸಿಗಳ ಮೂಲಕ ಸೊಗಸಾಗಿ ಬಾಗಿದ ಮೈಯುಳ್ಳದ್ದಾಗಿದೆ.

೭೨. ಈಗ ಚಳಿಗಾಲ ಬಂತು. ಇದು ಹೊಸ ಚಿಗುರುವಡೆದ ಸಸ್ಯಗಳಿಂದ ಸೊಗಸಾಗಿದೆ; ಈಗ ಲೋಧ್ರದ ಹೂ ಅರಳಿದೆ, ಬತ್ತ ಬೆಳೆದು ಮಾಗಿದೆ, ತಾವರೆ ಅಡಗಿದೆ ಮತ್ತು ಮಂಜಿನ ಹನಿ ಬೀಳುತ್ತಿದೆ.

೭೩. ಕೇಳು ಚಲುವಾದ ಮೊಣಕಾಲಿನವಳೇ, ತರುಣಿಯರಿಗೆ ಪ್ರಿಯವಾದ ಶಿಶಿರ ಋತುವೀಗ ಬಂದಿದೆ: ಈಗ ಭೂಮಿಯು ಬೆಳೆದ ಬತ್ತ-ಕಬ್ಬುಗಳ ಹೊಲ ಗಳಿಂದ ತುಂಬಿದೆ,ಅಲ್ಲಲ್ಲಿ ಕೇಳಿಬರುವ ಕ್ರೌಂಚಪಕ್ಷಿಗಳ ಧ್ವನಿಯಿಂದ ಅಲಂಕೃತವಾಗಿದೆ ಮತ್ತು ಜನಮನದಲ್ಲಿ ಪ್ರೇಮಭಾವ ಪುಟಿದೇಳುತ್ತಿದೆ.

प्रफुल्लचूताङ्कुरतीक्ष्णसायको
द्विरेफमालाविलसद्धनुर्गुणः ।
मनांसि भेत्तुं सुरतप्रसङ्गिनां
वसन्तयोद्धा समुपागतः प्रिये ॥७४॥

उन्नमति नमति गर्जति वर्षति मेघः करोति तिमिरौघम् ।
प्रथम श्रीरिव पुरुषः करोति रूपाण्यनेकानि ॥७५॥

शीतलादिव सन्त्रस्तं प्रावृषेण्यान्नभस्वतः ।
नभो बभार नीरन्ध्रं जीमूतकुलकम्बलम् ॥७६॥

वह्नेः शक्तिर्जलमिवगता दर्शनाद्दाहवृत्तेर्
नित्योद्गन्धे नवमरुबके वर्तते पुष्पकार्यम् ।
शीतत्रासं दधदिव रविर्याति सिन्धोः कृशानुं
शीतैर्भीता इव च दिवसाः साम्प्रतं सङ्कुचन्ति ॥७७॥

केशानाकुलयन् दृशौ मुकुलयन् वासो बलादक्षिपन्
आतन्वन् पुलकोद्गमं प्रकटयन्नावेगकम्पं गतेः ।
वारं वारमुदारसीत्कृतभरैर्दन्तच्छदं पीडयन्
प्रायः शैशिर एषसम्प्रति मरुत्कान्तासु कान्तायते ॥७८॥

चन्द्रायते शुक्लरुचापि हंसो
हंसायते चारुगतेन कान्ता ।
कान्तायते स्पर्शसुखेन वारि
वारीयते स्वच्छतया विहायः ॥७९॥

अङ्गारैः खचितेव भूर्वियदपि ज्वालाकरालं करैस्
तिग्मांशोः किरतीव तीव्रमभितो वायुः कुकूलानलम् ।
अप्यम्भांसि नखंपचानि सरितामाशाज्वलन्तीव च
ग्रीष्मेऽस्मिन्नववह्निदीपितमिवाशेषं जगद्वर्तते ॥८०॥

೭೪. ಪ್ರಿಯೇ, ಯೋಧನಾದ ವಸಂತಋತು ಈಗ ಬಂದ. ಅರಳಿದ ಮಾವಿನ ನನೆ ಅವನ ಹರಿತವಾದ ಅಂಬು, ದುಂಬಿಗಳ ಮಾಲೆ ಅವನ ಪ್ರಕಾಶಮಾನ ವಾದ ಬಿಲ್ಲು, ಅವನು ಬಂದದ್ದು ಪ್ರಣಯ ಪ್ರಸಂಗಿಗಳ ಎದೆಯನ್ನು ಭೇದಿಸುವುದ-ಕ್ಕಾಗಿ!

೭೫. ಮೋಡವು ಮೇಲಕ್ಕೆ ಸೆಟೆದು ಹೋಗುತ್ತದೆ, ಕೆಳಗೆ ಬಾಗುತ್ತದೆ, ಗುಡುಗುತ್ತದೆ, ಮಳೆ ಸುರಿಸುತ್ತದೆ, ಮತ್ತು ಕತ್ತಲನ್ನು ಕವಿಸುತ್ತದೆ; ಅದು ಹೊಸ ದಾಗಿ ಶ್ರೀಮಂತಿಕೆಗೇರಿದ ಮನುಷ್ಯನಂತೆ ಅನೇಕ ವಿಧವಾಗಿ ವರ್ತಿಸುತ್ತದೆ.

೭೬. ಮಳೆಗಾಲದ ಗಾಳಿಯ ಶೀತದಿಂದ ಹೆದರಿಯೋ ಎಂಬಂತೆ ಆಕಾಶವು ಎಡೆಬಿಡದೆ ಮೋಡದೊಡ್ಡೆಂಬ ಕಂಬಳಿಯನ್ನು ಹೊದೆದಿರುವಂತೆ ತೋರುತ್ತದೆ.

೭೭. ಕಂಡಕೂಡಲೆ ಸುಡುವ ಸ್ವಭಾವವುಳ್ಳ ಬೆಂಕಿಯ ಶಕ್ತಿಯು (ಈ ಶಿಶಿರ ಋತುವಿನಲ್ಲಿ) ನೀರಲ್ಲಿ ಕಂತಿ ಹೋದಂತೆ ಕಾಣುತ್ತದೆ; ನಿತ್ಯವೂ ಸುವಾಸನೆ ಸೂಸುವ ಮರುಬಕದಲ್ಲಿ ಪುಷ್ಪವಾಗುವ ಕಾರ್ಯ (ಮಾತ್ರ) ಆಗುತ್ತಿದೆ; ಶೀತದಿಂದ ಹೆದರಿಯೋ ಎಂಬಂತೆ ಸೂರ್ಯನು ಬಡಬಾನಲನಲ್ಲಿ ಸೇರುತ್ತಿದ್ದಾನೆ; ಶೀತಭೀತಿಯಿಂದಲೋ ಎಂಬಂತೆ ಈಗ ಹಗಲುಗಳು ಸಣ್ಣವುಗಳಾಗುತ್ತಹೋಗಿವೆ,

೭೮. ತಲೆಕೂದಲನ್ನು ಕೆದರಿ, ಕಣ್ಣುಗಳನ್ನು ಮುಚ್ಚಿಸಿ, ಉಡುಪನ್ನು ಬಲಾತ್ಕಾರದಿಂದ ಕಿತ್ತೆಸೆದು, ರೋಮಗಳನ್ನು ನಿಗುರಿಸಿ, ನಡಿಗೆಯಲ್ಲಿ ಭಾವೋ-ದ್ವೇಗದ ನಡುಕವನ್ನು ಪ್ರಕಟಿಸಿ, ಪದೇ ಪದೇ ದೊಡ್ಡದಾಗಿ ಸೀನುವಂತೆ ಮಾಡಿ ಮತ್ತು ತುಟಿಯನ್ನು ಮುದುರಿಸಿ ಬಹುಶಃ ಈ ಶಿಶಿರಮಾರುತನು ಈಗ ಪ್ರಣಯ ಸುಂದರಿಯರೆದುರಿಗೆ ಪ್ರಣಯಸುಂದರನಾಗಿ ನಿಲ್ಲುವಂತೆ ತೋರುತ್ತದೆ.

೭೯. (ಈ ಶರತ್ಕಾಲದಲ್ಲಿ) ಹಂಸವು ಬಿಳಿ ಹೊಳಪಿನಿಂದ ಚಂದ್ರನಾಗು ತ್ತದೆ: ಆಕರ್ಷಕ ನಡಿಗೆಯಿಂದ ಪ್ರಿಯತಮೆಯು ಹಂಸವಾಗುತ್ತಾಳೆ ; ಸ್ಪರ್ಶಸುಖ ದಿಂದ ನೀರು ಪ್ರಿಯತಮೆಯಾಗುತ್ತದೆ ; ಬಾನು ಸ್ವಚ್ಛತೆಯಿಂದ ನೀರಾಗುತ್ತದೆ.

೮೦. ಈ ಗ್ರೀಷ್ಮ ಋತುವಿನಲ್ಲಿ ನೆಲವು ಬೆಂಕಿಕೆಂಡಗಳಿಂದ ಖಚಿತವಾಗಿದೆ, ಬಾನು ಸೂರ್ಯನ ಕಿರಣಗಳಿಂದ ಭಯಂಕರವಾಗಿ ಉರಿಯುತ್ತಿದೆ, ಗಾಳಿಯು ಎಡುರು-ಗಡೆ ಉರಿಬೆಂಕಿಯಾಗಿದೆ, ನದಿಗಳ ನೀರು ಉಗುರನ್ನು ಸುಡುತ್ತದೆ ಮತ್ತು ದಿಕ್ಕು ಭುಗಿಲ್ಲೆನ್ನುತ್ತದೆ—ಎಂಬ ಹಾಗೆ ಇಡಿ ಜಗತ್ತು ಹೊಸದಾಗಿ ಬೆಂಕಿ ಹೊತ್ತಿ ಉರಿಯುತ್ತಿರುವಂತೆ ತೋರುತ್ತದೆ.

आध्मातोद्धतदाववह्निसुहृदः कीर्णोष्मरेणूत्कराः
सन्तप्ताध्वगमुक्तखेदविषमश्वासोष्णसंवादिनः ।
तृष्णार्ताजगरायतास्यकुहरक्षिप्रप्रवेशोत्कटा
भ्रूभङ्गैरिव तर्जयन्ति पवना दग्धस्थलीकज्जलैः ॥८१॥

तत्रापश्यद् द्रुमान् फुल्लान् विहगैर्वल्गुनादितान्
नदीश्च विपुलावर्ता वैडूर्यविमलप्रभाः ॥८२॥

हंसकारण्डवोद्गीताः सारसाभिरुतास्तथा ।
पुंस्कोकिलरुताश्चैव क्रौञ्चबर्हिणनादिताः ॥८३॥

मनोहरवनोपेतास्तस्मिन्नतिरथोऽर्जुनः ।
पुण्यशीतामलजलाः पश्यन् प्रीतमनाभवत् ॥८४॥

ज्वलन्तमचलं मेरुं तेजोराशिमनुत्तमम् ।
आक्षिपन्तं प्रभां भानोः स्वशृङ्गैःकाञ्चनोज्ज्वलैः ॥८५॥

कनकाभरणं चित्रं देवगन्धर्वसेवितम् ।
अप्रमेयमनाधृष्यमधर्मबहुलैर्जनैः ॥८६॥

व्यालैरावारितं घोरैर्दिव्यौषधिविदीपितम् ।
नाकमावृत्य तिष्ठन्तमुच्छ्रयेण महागिरिम् ॥८७॥

अगम्यं मनसाप्यन्यैर्नदीवृक्षसमन्वितम् ।
नानापतगसङ्घैश्च नादितं सुमनोहरैः ॥८८॥

ततोऽभ्रशिखराकारैर्गिरिश्रृङ्गैरलङ्कृतम् ।
मन्दरं पर्वतवरं लताजालसमाकुलम् ॥८९॥

नानाविहगसंघुष्टं नानादंष्ट्रिसमाकुलम् ।
किन्नरैरप्सरोभिश्च देवैरपि च सेवितम् ॥९०॥

೮೧. ಈ ಗ್ರೀಷ್ಮ ಮಾರುತಗಳು ಊದಿ ಉದ್ಧಟವಾದ ಕಾಳ್ಕಿಚ್ಚಿನ ಗೆಳೆಯರಾಗಿವೆ, ಚೆಲ್ಲಿದ ಬಿಸಿಯಾದ ಧೂಲೀಕಣಗಳಿಂದ ತುಂಬಿವೆ; ಬೇಗೆಗೆ ತುತ್ತಾದ ದಾರಿಗರು ಬಿಟ್ಟ ದುಃಖ ಪೂರ್ಣವಾದ ನಿಟ್ಟುಸಿರಿನ ಬಿಸಿಗೆ ಅವುಗಳ ಬಿಸಿ ಸರಿದೊರೆಯಾಗಿದೆ. ಬಾಯಾರಿದ್ದರಿಂದ ತೆರೆದ ಹೆಬ್ಬಾವಿನಷ್ಟು ಅಗಲವಾದ ಗಂಟಲಗುಳಿಯೊಳಗೆ ಕೂಡಲೇ ಹೋಗಲು ಅವು ತವಕಿಸುತ್ತಿವೆ ಮತ್ತು ಆ ಗಾಳಿಗಳು ಸುಟ್ಟ ಸ್ಥಳಗಳ ಕರಕುಗಳಿಂದ ಹುಬ್ಬುಗಂಟಿಕ್ಕಿಯೋ ಎಂಬಂತೆ ಬೆದರಿಸುತ್ತಿವೆ.

೮೨. ಅರ್ಜುನನು ಹಿಮಾಚಲದಲ್ಲಿ ಪಕ್ಷಿಗಳ ಇಂಚರದಿಂದೊಡಗೂಡಿದ ಅರಳಿದ ಮರಗಳನ್ನೂ ವೈಡೂರ್ಯದ ಪವಿತ್ರಶಾಂತಿಯನ್ನುಳ್ಳ ದೊಡ್ಡ ಸುಳಿಯ ಹೊಳೆಗಳನ್ನೂ ನೋಡಿದನು.

೮೩. ಆ ಹೊಳೆಗಳ ಸನಿಹದಲ್ಲಿ ಹಂಸ, ಕಾರಂಡವ, ಸಾರಸ, ಗಂಡು ಕೋಗಿಲೆ, ಕ್ರೌಂಚ ಮತ್ತು ನವಿಲುಗಳ ಧ್ವನಿ ಕೇಳಿಸುತ್ತಿತ್ತು.

೮೪. ಅತಿರಥನಾದ ಅರ್ಜುನನು ಅಲ್ಲಿ ಸುಂದರ ವನಗಳಿಂದೊಡಗೂಡಿದ ಪುಣ್ಯ, ಶೀತಲ ಮತ್ತು ನಿರ್ಮಲ ಜಲಾಶಯಗಳನ್ನು ನೋಡಿ ಸಂತಸಪಟ್ಟನು.

೮೫. ಉತ್ತಮ ತೇಜೋರಾಶಿಯಿಂದ ಕೂಡಿದ ಮೇರುಪರ್ವತವು ಉರಿಯುತ್ತಿತ್ತು; ಅದು ಚಿನ್ನದಂತೆ ಹೊಳೆಯುವ ತನ್ನ ಶಿಖರಗಳಿಂದ ಸೂರ್ಯಪ್ರಭೆಯನ್ನು ತೆಗೆದು ದೂರ ಎಸೆಯುತ್ತಿತ್ತು.

೮೬. ಆ ಪರ್ವತವು ಆಶ್ಚರ್ಯಕರವಾದ ಒಂದು ಬಂಗಾರದ ಒಡವೆಯಾಗಿತ್ತು; ಅದರಲ್ಲಿ ದೇವತೆಗಳೂ ಗಂಧರ್ವರೂ ಇರುತ್ತಿದ್ದರು; ಅಧಾರ್ಮಿಕರಿಗದು ಅಳತೆಗೆ ಮೀರಿದ್ದೂ ಎದುರಿಸಲಾರದ್ದೂ ಆಗಿತ್ತು.

೮೭. ಅದು ಭಯಂಕರವಾದ ಹಾವುಗಳಿಂದ ತುಂಬಿತ್ತು, ದಿವ್ಯ ವನಸ್ಪತಿಗಳಿಂದ ದೀಪ್ತವಾಗಿತ್ತು; ತನ್ನ ಎತ್ತರದಿಂದ ಆ ಮಹಾಗಿರಿಯು ಸ್ವರ್ಗವನ್ನು ಆವರಿಸಿ ನಿಂತಿತ್ತು.

೮೮. ದೇವತೆಗಳಲ್ಲದ ಯಾರ ಮನಸ್ಸಿಗೂ ಅದು ಹೊಳೆಯದು; ಹೊಳೆಗಳೂ ಮರಗಳೂ ಅಲ್ಲಿ ತುಂಬಿದ್ದವು; ವಿವಿಧ ಹಕ್ಕಿಬಳಗಗಳು ಅಲ್ಲಿ ಇಂಪಾಗಿ ಹಾಡುತ್ತಿದ್ದವು. (ಅಂಥ ಪರ್ವತದ ಶಿಖರವನ್ನು ದೇವತೆಗಳು ಹತ್ತಿದರು).

೮೯. ಮುಗಿಲೊಡ್ಡುಗಳಾಕೃತಿಯ ಶಿಖರಗಳಿಂದ ಶೋಭಿಸುವ ಶ್ರೇಷ್ಠ ಪರ್ವತವಾದ ಮಂದರದಲ್ಲಿ ಎಲ್ಲೆಲ್ಲೂ ಬಳ್ಳಿಗಳು ಬೆಳೆದಿದ್ದವು.

೯೦. ನಾನಾವಿಧದ ಪಕ್ಷಿಘೋಷ, ನಾನಾವಿಧದ ಕೋರೆದಾಡೆಗಳುಳ್ಳ ಮೃಗಗಳು, ಕಿನ್ನರ–ಅಪ್ಸರೆಯರಲ್ಲದೆ ದೇವತೆಗಳೂ ಕೂಡ ಅಲ್ಲಿದ್ದರು.

एकादशसहस्राणि योजनानां समुच्छ्रितम् ।
अधो भूमेः सहस्रेषु तावत्स्वेव प्रतिष्ठितम् ॥९१॥

आदीप्तानिव वैदेहि सर्वतः पुष्पितान्नगान् ।
स्वैः पुष्पैः किंशुकान् पश्य मालिनः शिशिरात्यये ॥९२॥

पश्य भल्लातकान् बिल्वान् वानरैरुपसेवितान् ।
फलपुष्पैरवनतान् नूनं शक्ष्याम जीवितुम् ॥९३॥

पश्य द्रोणप्रमाणानि लम्बमानानि लक्ष्मण ।
मधूनि मधुकारीभिः संभृतानि नगे नगे ॥९४॥

एष क्रोशाति नत्यूहस्तं शिखी प्रतिकूजति ।
रमणीये वनोद्देशे पुष्पसंस्तरसङ्कटे ॥९५॥

मातङ्गयूथानुसृतं पक्षिसंघानुनादितम् ।
चित्रकूटमिमं पश्य प्रवृद्धशिखरं गिरिम् ॥९६॥

समभूमितले रम्ये द्रुमैर्बहुभिरावृते ।
पुण्ये रंस्यामहे तात चित्रकूटस्य कानने ।९७।

तं तु पर्वतमासाद्य नानापक्षिगणायुतम् ।
बहुमूलफलं रम्यं सम्पन्नं सरसोदकम् ॥९८॥

मनोज्ञोऽयं गिरिः सौम्य नाना द्रुमलतायुतः ।
बहुमूलफलो रम्यः स्वाजीवः प्रतिभाति मे ॥९९॥

मुनयश्च महात्मानो वसन्त्यस्मिञ्शिलोच्चये ।
अयं वासो भवेत्तावदत्र सौम्य रमेमहि ॥१००॥

೯೧. ಆ ಮಂದರವು ಹನ್ನೊಂದು ಸಾವಿರ ಯೋಜನೆಗಳಷ್ಟು ಎತ್ತರವಾಗಿತ್ತು; ಭೂಮಿಯಿಂದ ಅದು ಅಷ್ಟೇ ಕೆಳಗೆ ನೆಲೆನಿಂತಿತ್ತು. (ದೇವತೆಗಳದನ್ನು ಎತ್ತಲಾರದಾದರು).

೯೨. ಎಲೈ ಸೀತೆ, ಸುತ್ತಲೂ ಹೂಗಳಿಂದ ತುಂಬಿ ಬುಡದಿಂದ ತುದಿಯವರೆಗೆ ದೀಪಗಳನ್ನು ಹಚ್ಚಿಟ್ಟಿದ್ದಾರೋ ಏನೋ ಎಂಬಂತೆ ತೋರುವ ಗುಡ್ಡ–ಬೆಟ್ಟಗಳನ್ನೂ, ಶಿಶಿರ ಋತು ಕೊನೆಗೊಂಡ ಈ ಕಾಲದಲ್ಲಿ ತಮ್ಮ ತಮ್ಮ ಹೂಗಳಿಂದ ಮಾಲಾಧಾರಿಗಳಾಗಿರುವ ಮುತ್ತುಗದ ಮರಗಳನ್ನೂ ನೋಡು (ಎಂದು ರಾಮನು ಚಿತ್ರಕೂಟದ ಗುಡ್ಡಗಳನ್ನು ತೋರಿಸಿದನು).

೯೩. ಮಂಗಗಳು ಹತ್ತಿ ಕುಳಿತಿರುವ ಬಿಲ್ವಪತ್ರೆಯ ಮರಗಳನ್ನೂ ಗೇರು ಮರಗಳನ್ನೂ ನೋಡು; ಅವು ಹಣ್ಣು-ಹೂಗಳಿಂದ ಬಾಗಿವೆ; ಆದುದರಿಂದ ನಾವು ನಿಶ್ಚಯವಾಗಿ (ಇಲ್ಲಿ) ಬದುಕಬಲ್ಲೆವು.

೯೪. ಎಲೈ ಲಕ್ಷ್ಮಣ, ನಾನೂರು ಗಜಗಳ ಉದ್ದಕ್ಕೂ ಜೋತುಬಿದ್ದಿರುವ ಜೇನು(ತಟ್ಟೆ)ಗಳನ್ನು ನೋಡು; ಅವು ಪ್ರತಿ ಬೆಟ್ಟದಲ್ಲಿಯೂ ಜೇನುಹುಳುಗಳಿಂದ ತುಂಬಿವೆ.

೯೫. ಹೂ ಹಾಸಿದ ಇಕ್ಕಟ್ಟಾದ (ಈ) ಸುಂದರ ವನಪ್ರದೇಶದಲ್ಲಿ ಈ ಕಾಗೆಯು ಕೂಗಿದ್ದಕ್ಕೆ ನವಿಲು ಪ್ರತ್ಯುತ್ತರ ಕೊಡುವಂತೆ ಕೂಗುತ್ತಿದೆ.

೯೬. ಆನೆಹಿಂಡುಗಳು ಅನುಸರಿಸಿ ಬರುವ, ಹಕ್ಕಿಬಳಗ ಎಡೆಬಿಡದೆ ಚಿಲಿಪಿಲಿಗುಟ್ಟುವ, ಬೆಳೆದ ಶಿಖರವನ್ನುಳ್ಳ ಈ ಚಿತ್ರಕೂಟ ಪರ್ವತವನ್ನು ನೋಡು.

೯೭. ಪ್ರಿಯ ಲಕ್ಷ್ಮಣ, ಬಹಳ ಮರಗಳಿಂದ ಆವೃತವಾದ, ಚಪ್ಪಟೆಯಾದ ಚೆಲುನೆಲವನ್ನುಳ್ಳ ಚಿತ್ರಕೂಟದ ಈ ಪುಣ್ಯಾರಣ್ಯದಲ್ಲಿ ನಾವು ಸಂತೋಷದಿಂದ ಇರೋಣ— (ಎಂದು ರಾಮನು ಹೇಳಿದನು).

೯೮. ರಾಮಸೀತಾಲಕ್ಷ್ಮಣರು ವಿವಿಧ ಹಕ್ಕಿಹಿಂಡುಗಳಿಂದ ಕೂಡಿದ, ಬಹಳ ಗಡ್ಡೆಗೆಣಸು–ಹಣ್ಣು ಹಂಪಲಗಳನ್ನುಳ್ಳ ಮತ್ತು ಸವಿಯಾದ ನೀರುಳ್ಳ ಆ ರಮ್ಯ ಪರ್ವತವನ್ನು ತಲುಪಿದರು.

೯೯. ಸೌಮ್ಯ ಸ್ವಭಾವದ ಲಕ್ಷ್ಮಣ, ಈ ಬೆಟ್ಟವು ಸುಂದರವಾಗಿದೆ, ಇದರಲ್ಲಿ ನಾನಾ ತರಹದ ಮರಗಿಡಬಳ್ಳಿಗಳಿವೆ. ಮತ್ತು ಬೇಕಾದಷ್ಟು ಕಂದಮೂಲ ಫಲಗಳಿವೆ; ಆದುದರಿಂದ ಇಲ್ಲಿ ನಾವು ಸುಖವಾಗಿ ಬದುಕಬಹುದೆಂದು ತೋರುತ್ತದೆ.

೧೦೦. ಈ ಗುಡ್ಡದ ಮೇಲೆ ಮಹಾತ್ಮರಾದ ಮುನಿಗಳು ವಾಸಿಸುತ್ತಿದ್ದಾರೆ; ಇದೇ ನಮಗೆ ವಸತಿಯಾಗಲಿ, ಎಲೈ ಸೌಮ್ಯನಾದ ತಮ್ಮಾ, ಇಲ್ಲೆ ನಾವು ಸುಖವಾಗಿರೋಣ— (ಎಂದು ರಾಮನು ಹೇಳಿದನು).

VI

हास्यं च चतुरोक्तयश्च

दिनकरकरामृष्टं बिभ्रद्द्युतिं परिपाटलां
दशनकिरणैरुत्सर्पद्भिः स्फुटीकृतकेसरम् ।
अयि मुखमिदं मुग्धे सत्यं समं कमलेन ते
मधु मधुकरः किन्त्वेतस्मिन् पिबन्नविभाव्यते ।।१।।

समं बाष्पेण पतता तस्योपरि ममाप्यधः
पितुर्मे क्लेदितौ पादौ ममापि क्लेदितं शिरः ।।२।।

अस्मदीयैर्महावृक्षैरस्मदीया महाबलाः ।
क्षिप्रमेव हतास्तेन किङ्करा द्रुमयोधिना ।।३।।

अदत्तेत्यागतालज्जा दत्तेतिव्यथितं मनः ।
धर्मस्नेहान्तरे न्यस्ता दुःखिताः खलु मातरः ।।४।।

असारे खलु संसारे सारं श्वशुरमन्दिरम् ।
हरो हिमालये शेते हरिःशेते महोदधौ ।।५।।

सदा वक्रः सदा क्रूरः सदा पूजामपेक्षते ।
कन्याराशिस्थितो नित्यं जामाता दशमो ग्रहः ।।६।।

उदरद्वयभरणभयादर्धाङ्गाहितदारः ।
यदि नैवं तस्य सुनः कथमद्यापि कुमारः ।।७।।

VI

ಹಾಸ್ಯ ಮತ್ತು ಚತುರೋಕ್ತಿಗಳು

೧. ಸೂರ್ಯಕಿರಣದ ಸ್ಪರ್ಶದಿಂದ ಕೆಂಪಾಗಿ ಕಾಂತಿವೆತ್ತ, ಹಲ್ಲುಗಳ ಮೇಲಿಂದ ಎದ್ದು ಹೊಳೆಯುವ ಕಿರಣಗಳ ಮೂಲಕ ಸ್ಪಷ್ಟವಾದ ಕೇಸರಗಳನ್ನುಳ್ಳ ನಿನ್ನ ಮುಖವು, ಸುಂದರಿ, ನಿಜವಾಗಿಯೂ ಕಮಲಕ್ಕೆ ಸರಿದೊರೆ, ಆದರೆ ಈ ನಿನ್ನ ಮುಖದಲ್ಲಿ ಮಕರಂದ ಕುಡಿಯುವ ಜೇನುಗಳು ಕಾಣಿಸುವುದೇ ಇಲ್ಲವಲ್ಲಾ !

೨. ನನ್ನ ಮತ್ತು ನನ್ನ ತಂದೆಯ ಕಂಬನಿ ಮೇಲಿನಿಂದ ಮತ್ತು ಕೆಳಗಿನಿಂದ ಬಿದ್ದಾಗ ಏಕಕಾಲದಲ್ಲಿ ಆತನ ಪಾದಗಳೂ ನನ್ನ ತಲೆಯೂ ಒದ್ದೆಯಾದವು.

೩. ಆ ಮರಗಾಳಿಗದವನು ನಮ್ಮವುಗಳೇ ಆದ ಮರಗಳಿಂದ ಮಹಾಬಲ ರಾದ ನಮ್ಮ ಸೇವಕರನ್ನೇ ಕ್ಷಣಾರ್ಧದಲ್ಲಿ ಕೊಂದನು !

೪. ಮಗಳನ್ನು ಮದುವೆ ಮಾಡಿಕೊಡದಿರುವಾಗ ಕೊಡಲಿಲ್ಲವಲ್ಲಾ ಎಂದು ನಾಚಿಕೆ, ಕೊಟ್ಟ ಮೇಲೆ (ಅಯ್ಯೋ) ಕೊಟ್ಟುಬಿಟ್ಟೆವಲ್ಲಾ ಎಂಬ ಚಿಂತೆ—ಹೀಗೆ ಧರ್ಮ ಮತ್ತು ಮಮತೆಗಳ ನಡುವೆ ಸಿಕ್ಕಿಬೀಳುವ ತಾಯಂದಿರು (ಯಾವಾಗಲೂ) ದುಃಖಿಗಳೇ ಸರಿ.

೫. ಸಾರವಿಲ್ಲದ ಸಂಸಾರದಲ್ಲಿ ಮಾವನ ಮನೆಯೊಂದೇ ಸಾರವುಳ್ಳದ್ದು ; ಆದರಿಂದಲೇ ಹರನು ಹಿಮಾಲಯದಲ್ಲಿಯೂ ಹರಿಯು ಹೆಗ್ಗಡಲಿನಲ್ಲಿಯೂ ಮಲಗಿದ್ದಾರೆ.

೬. ಅಳಿಯನೆಂದರೆ ಯಾವಾಗಲೂ ವಕ್ರವಾಗಿ ನಡೆದುಕೊಳ್ಳುವವನು, ನಿರ್ದಯನಾಗಿ ವರ್ತಿಸುವವನು, ನಿತ್ಯವೂ ತನ್ನ ಪೂಜೆ ನಡೆಯುತ್ತಿರಬೇಕೆಂದು ಬಯಸುವವನು ಮತ್ತು ತರುಣಿಯರ ಗುಂಪಿನಲ್ಲಿರುವವನು; ಆದುದರಿಂದ ಆತನು ೧೦ನೆಯ ಗ್ರಹವೇ ಸರಿ !

೭. ಎರಡು ಹೊಟ್ಟೆಗಳನ್ನು ಹೊರೆಯಬೇಕಾದೀತೆಂಬ ಭಯದಿಂದ ಶಿವನು ತನ್ನ ಅರ್ಧಾಂಗದಲ್ಲೇ ಹೆಂಡತಿಯನ್ನು ಇಟ್ಟುಕೊಂಡಿದ್ದಾನೆ: ಇದು ಸುಳ್ಳೆನ್ನುವು- ದಾದರೆ ಅವನ ಮಗ ಈಗಲೂ ಅವಿವಾಹಿತ(ಕುಮಾರ)ನಾಗಿಯೇ ಇರುವುದು ಹೇಗೆ ?

क्रयविक्रयकूटतुलालाघवनिक्षेपरक्षणव्याजैः ।
एते हि दिवसचौरा मुष्णन्ति महाजनं वणिजः ॥८॥

आख्यायिकानुरागी व्रजति सदा पुण्यपुस्तकं श्रोतुम् ।
दष्ट इव कृष्णसर्पैः पलायते दानधर्मेभ्यः ॥९॥

वाचयति नान्यलिखितं लिखितमनेनापि वाचयति नान्यः
अयमपरोऽस्य विशेषः स्वयमपि लिखितं स्वयं न
वाचयति ॥१०॥

एका भार्या प्रकृतिमुखरा चञ्चलाच द्वितीया
पुत्रस्त्वेको भुवनविजयी मन्मथो दुर्निवारः ।
शेषः शय्या शयनमुदधौ वाहनं पन्नगारिः
स्मारं स्मारं स्वगृहचरितं दारुभूतो मुरारिः ॥११॥

अत्तुं वाञ्छति वाहनं गणपतेराखुं क्षुधार्तः फणी
तं च क्रौञ्चपतेः शिखी च गिरिजासिंहोऽपि नागाननम्
गौरी जह्नुसुतामसूयति कलानाथं कपालानलो
निर्विण्णः स पपौ कुटुम्बकलहादीशोऽपि हालाहलम्
॥१२॥

रे रे कोकिल मा भज मौनं
किञ्चिदुदञ्चय पञ्चमरागम् ।
नो चेत् त्वामिह को जानीते
काककदम्बकपिहिते चूते ॥१३॥

आमरणादपि विरुतं कुर्वाणाः स्पर्धया मयूरैः ।
किं जानन्ति वराकाः काकाः केकारवं कर्तुम् ॥१४॥

೮. ಕೊಂಡು ಮಾರಲು ಮೋಸದ ತಕ್ಕಡಿಯ ತಟ್ಟೆ ಕೆಳಗೆ ಇಳಿಯದಂತೆ ಪೇರು ಕಟ್ಟುವ ನೆವಗಳಿಂದ ಹಗಲುಗಳ್ಳರಾದ ಈ ವ್ಯಾಪಾರಿಗಳು ಸಾರ್ವಜನಿಕರನ್ನು ಮೋಸಗೊಳಿಸುತ್ತಾರೆ.

೯. ಈತನು ಕಥೆ ಕೇಳುವುದರಲ್ಲಿ ಆಸಕ್ತನಾಗಿರುವುದರಿಂದ ಯಾವಾಗಲೂ ಪುಣ್ಯಕಥಾಶ್ರವಣಕ್ಕೆಂದು (ದೇವಾಲಯಗಳಿಗೆ) ಹೋಗುತ್ತಾನೆ. ಆದರೆ ದಾನಧರ್ಮಗಳನ್ನು ಮಾಡಬೇಕಾದ ಸಂದರ್ಭ ಬಂದಕೂಡಲೇ ಕೃಷ್ಣಸರ್ಪ ಕಚ್ಚಿದವನಂತೆ ಓಡಿ ಹೋಗುತ್ತಾನೆ.

೧೦. ಇನ್ನೊಬ್ಬ ಬರೆದದ್ದನ್ನು ಈತ ಓದುವುದಿಲ್ಲ; ಇನ್ನಾವನೂ ಈತ ಬರೆದದ್ದನ್ನು ಓದುವುದಿಲ್ಲ. ಇವನಲ್ಲಿಯ ಇನ್ನೂ ಒಂದು ವಿಶೇಷವೇನೆಂದರೆ, ತಾನು ಬರೆದದ್ದನ್ನೂ ತಾನೇ ಓದುವುದಿಲ್ಲ!

೧೧. ಒಬ್ಬ ಹೆಂಡತಿಯು ಸ್ವಭಾವತಃ ಹರಟೆಮಲ್ಲಿ; ಎರಡನೆಯವಳು ಇದ್ದಲ್ಲಿ ಇರುವವಳಲ್ಲ; ಲೋಕಗಳನ್ನು ಗೆಲ್ಲುವ ಒಬ್ಬನೇ ಆದ ಮನ್ಮಥನೆಂಬ ಮಗನು ಹಿಡಿತಕ್ಕೆ ಸಿಕ್ಕುವವನಲ್ಲ; ಆದಿಶೇಷನು ಹಾಸಿಗೆ; ಮಲಗುವುದು ಕಡಲಲ್ಲಿ; ಹತ್ತಿಕೊಂಡು ಹೋಗುವುದು ಗರುಡನನ್ನು! ಮನೆವಾರ್ತೆಯ ಈ ಬಗೆಯ ವ್ಯವಸ್ಥೆಯನ್ನು ನೆನೆದು ನೆನೆದು ನಾರಾಯಣನು ಮರವಟ್ಟು ಹೋದನು.

೧೨. ಹಸಿದ ಸರ್ಪವು ಗಣಪತಿಯ ವಾಹನವಾದ ಇಲಿಯನ್ನು ತಿನ್ನಲು ಬಯಸುತ್ತದೆ; ಸುಬ್ರಹ್ಮಣ್ಯನ ವಾಹನವಾದ ನವಿಲು ಆ ಸರ್ಪವನ್ನು ತಿನ್ನಲಪೇಕ್ಷಿಸುತ್ತದೆ; ಗಿರಿಜೆ ಏರಿ ಕುಳಿತ ಸಿಂಹವು ಆನೆಯ ಮುಖಕ್ಕೆ ಬಾಯಿಹಾಕ ಬಯಸುತ್ತದೆ; ಗಿರಿಜೆಯು ಗಂಗೆಯ ಬಗ್ಗೆ ಹೊಟ್ಟೆಕಿಚ್ಚುಪಡುತ್ತಾಳೆ; (ಶಿವ ಹಿಡಿದ) ಕಪಾಲದಲ್ಲಿರುವ ಬೆಂಕಿಯು (ಅವನ ಹಣೆಯ ಮೇಲಿರುವ) ಚಂದ್ರನ ಬಗ್ಗೆ ಅಸೂಯೆ ಪಡುತ್ತದೆ; ಈ ಕುಟುಂಬಕಲಹದ ದೆಸೆಯಿಂದ ನಿರ್ವಿಣ್ಣನಾಗಿ ಶಿವನೂ ಹಾಲಾಹಲವೆಂಬ ವಿಷವನ್ನು ಕುಡಿದನು!

೧೩. ಎಲೈ ಕೋಗಿಲೆಯೇ, ಮೌನದಿಂದಿರಬೇಡ; ನಿನ್ನ ಪಂಚಮಸ್ವರವನ್ನು ಸ್ವಲ್ಪ ಹೊರಡಿಸು: ಇಲ್ಲವಾದರೆ ಈ ಕಾಗೆಗುಂಪಿನಿಂದ ತುಂಬಿದ ಮಾವಿನ ಮರದಲ್ಲಿ ನಿನ್ನನ್ನು ಯಾರು ಗುರುತಿಸುತ್ತಾರೆ?

೧೪. ನವಿಲುಗಳೊಡನೆ ಪೈಪೋಟಿ ಹೂಡಿ ಸಾಯುವ ತನಕ ಕೂಗಿದರೂ ಬಡ ಕಾಗೆಗಳಿಗೆಂದಾದರೂ ಕೇಕೇ ಹಾಕಲು ಬಂದೀತೇ?

एष बकः सहसैव विपन्नः
शाठ्यमहो क्वनु तद्गतमस्य ।
साधु कृतान्तक कश्चिदपि त्वां
वञ्चयितुं न कुतोऽपि समर्थः ॥१५॥

न कोकिलानामिव मञ्जु कूजितं
न लब्धलास्यानि गतानि हंसवत्
न बर्हिणानामिव चित्रपक्षता
गुणस्तथाप्यस्ति बके बकव्रतम् ॥१६॥

पिब पयः प्रसर क्षितिपान्तिकं
कलय काञ्चन काञ्चनशृङ्खलाम् ।
इदमवद्यतमं हि यदीहसे
भषक सम्प्रति केसरिणस्तुलाम् ॥१७॥

दिव्यं चूतरसं पीत्वा गर्वं नो याति कोकिलः ।
पीत्वा कर्दमपानीयं भेको रटरटायते ॥१८॥

उदस्योच्चैः पुच्छं शिरसि निहितं जीर्णजटिलं
यदृच्छाव्यापन्नद्विपपिशितलेशाः कवलिताः ।
गुहागर्ते शून्ये सुचिरमुषितं जम्बुक सखे
किमेतस्मिन् कुर्मो यदसि न गतः सिंहसमताम् ॥१९॥

तावद् गर्जन्ति मण्डूकाः कूपमाश्रित्य निर्भयाः
यावत्करिकराकारः कृष्णसर्पो न विद्यते ॥२०॥

हारं वक्षसि केनापि दत्तमज्ञेन मर्कटः ।
लेढि जिघ्रति संक्षिप्य करोत्युन्नतमाननम् ॥२१॥

೧೫. ಒಮ್ಮೆಲೇ ಈ ಬಕ ವಿಪತ್ತಿಗೀಡಾಯಿತು (ಸತ್ತಿತು). ಆದರಲ್ಲಿ ಅಡಗಿದ ಶಠತ್ವ (ಈಗ) ಎಲ್ಲಿಗೆ ಹೋಯಿತಯ್ಯಾ! ಯಮನೇ, ನೀನು ಒಳ್ಳೆಯ ಕೆಲಸ ಮಾಡಿದೆ—ನೀನು ಯಾವನೇ ಆಗಿರು— ನಿನ್ನನ್ನು (ಯಾರೂ) ಯಾವುದ-ರಿಂದಲೂ ಮೋಸಗೊಳಿಸಲಾರರು.

೧೬. ಕೊಕ್ಕರೆಗೆ ಕೋಗಿಲೆಗಳಂಥ ಇಂಪಾದ ಸ್ವರವಿಲ್ಲ; ಹಂಸಗಳಂಥ ಲಾಸ್ಯ ಕಲೆ ಅರಿಯದು; ನವಿಲುಗಳಂಥ ಬಣ್ಣ-ಬಣ್ಣದ ಗರಿಗಳಿಲ್ಲ; ಆದರೂ ಅದರಲ್ಲಿ ಒಂದು ಗುಣವಿದೆ—ಅದೇನೆಂದರೆ ಬಕವ್ರತ (ಕಪಟ ಧ್ಯಾನದ ವ್ರತ).

೧೭. ಎಲೈ ನಾಯಿಯೇ, ಹಾಲು ಕುಡಿ, ದೊರೆಯ ಹತ್ತಿರ ಹೋಗು, ಯಾವುದಾದರೊಂದು ಚಿನ್ನದ ಸರಪಳಿಯನ್ನು ಹಾಕಿಸಿಕೋ. ಹೀಗೆ ಮಾಡಿದರೆ ಹೀನತಮವಾದದ್ದನ್ನು ಬಯಸುವ ನೀನು (ಖಂಡಿತವಾಗಿಯೂ) ಈಗ ಸಿಂಹಕ್ಕೆ ಸರಿಸಾಟಿಯಾಗುತ್ತೀಯೆ!

೧೮. ದಿವ್ಯವಾದ ಮಾವಿನ ರಸವನ್ನು ಕುಡಿದೂ ಕೋಗಿಲೆ ಸೊಕ್ಕದು; ಕೆಸರು ನೀರನ್ನು ಕುಡಿದೂ ಕಪ್ಪೆ (ಜಂಭದಿಂದ) ವಟಗುಟ್ಟುತ್ತದೆ!

೧೯. ಗೆಳೆಯನಾದ ನರಿಯೇ, ಜೀರ್ಣವೂ ಜಟಿಲವೂ ಆದ ನಿನ್ನ ಬಾಲ-ವನ್ನೆತ್ತಿ ತಲೆಯ ಮೇಲಿಟ್ಟುಕೊಂಡೆ; ಆಕಸ್ಮಿಕವಾಗಿ ಸತ್ತ ಆನೆಯ ಮಾಂಸದ ಚೂರು-ಗಳನ್ನು ನೀನು ತಿಂದೆ; ನಿರ್ಜನವಾದ ಗವಿಯ ಹೊಂಡದಲ್ಲಿ ಬಹಳ ಕಾಲ ವಾಸಿಸಿದೆ; ಆದರೂ ನೀನು ಸಿಂಹಸಮನಾಗದೆ ಹೋದರೆ ಇದರಲ್ಲಿ ನಾವೇನು ಮಾಡಬೇಕು?

೨೦. ಆನೆಯ ಸೊಂಡಿಲಿನ ಆಕಾರದ ಕೃಷ್ಣಸರ್ಪವು ಬಾರದಿರುವತನಕ ನಿರ್ಭಯವಾಗಿ ಬಾವಿಯಲ್ಲಿ ಕುಳಿತು ಕಪ್ಪೆಗಳು ಗರ್ಜನೆ ಮಾಡುತ್ತವೆ.

೨೧. ಯಾವನೋ ಒಬ್ಬ ಹೆಡ್ಡನು ಮಂಗದ ಕೊರಳಿಗೆ ಹಾರ ಹಾಕಿದ ಎಂದುಕೊಳ್ಳಿ; ಆಗ ಅದು ಆ ಹಾರವನ್ನು ನೆಕ್ಕುತ್ತದೆ, ಮೂಸುತ್ತದೆ ಮತ್ತು ಮುದುಡಿ (ಎಸೆದು) ಮೇಲೆ ನೋಡುತ್ತ ಕುಳಿತುಕೊಳ್ಳುತ್ತದೆ.

कस्त्वं भोः कथयामि दैवहतकं मां विद्धि शाखोटकं
वैराग्यादिव वक्षि साधुविदितं कस्मादिदं कथ्यते ।
वामेनात्र वटस्तमध्वगजनः सर्वात्मना सेवते
न च्छायापि परोपकारकृतये मार्गस्थितस्यापि मे ॥२२॥

निम्ब किं बहुनोक्तेन निष्फलानि फलानि ते ।
यानि सञ्जातपाकानि काका निःशेषयन्त्यमी ॥२३॥

अखिलेषु विहङ्गेषु हन्त स्वच्छन्दचारिषु ।
शुक पञ्जरबन्धस्ते मधुराणां गिरां फलम् ॥२४॥

पलाशकुसुमभ्रान्त्या शुकतुण्डे पतत्यलिः
सोऽपि जम्बूफलभ्रान्त्या तमलिं धर्तुमिच्छति ॥२५॥

अयं रत्नाकरोऽम्भोधिरित्यसेवि धनाशया ।
धनं दूरेऽस्तु वदनमपूरि क्षारवारिभिः ॥२६॥

काकः कृष्णः पिकः कृष्णः को भेदः पिककाकयोः ।
वसन्तसमये प्राप्ते काकः काकः पिकः पिकः ॥२७॥

वैद्यराज नमस्तुभ्यं यमराज सहोदर ।
यमस्तु हरति प्राणान् वैद्यः प्राणान् धनानि च ॥२८॥

काकाल्लौल्यं यमात् क्रौर्यं स्थपतेर्दृढघातिताम् ।
आद्यक्षराणि संगृह्य कायस्थः केन निर्मितः ॥२९॥

೨೨. ಎಲೈ ನೀನು ಯಾರು? ಹೇಳುತ್ತೇನೆ—"ನಾನು ದುರ್ದೈವಿಯಾದ ಶಾಖೋಟಕ (ಚಿಕ್ಕ ಕುರೂಪಿ ಮರ) ಎಂದು ತಿಳಿ", ವೈರಾಗ್ಯದಿಂದಲೋ ಎಂಬಂತೆ ಉತ್ತರಿಸುವೆ ಎಂಬುದು ಚೆನ್ನಾಗಿ ತಿಳಿಯಿತು. "ಏಕೆ ಇದನ್ನು ಹೇಳಬೇಕು (ನಾನು) ? ಇಲ್ಲಿ ಎಡಗಡೆ ಆಲದಮರವಿದೆ; ಅದನ್ನು ದಾರಿಹೋಕರು ಸಂಪೂರ್ಣ ತೃಪ್ತಿಯಿಂದ ಆಶ್ರಯಿಸುತ್ತಾರೆ: ದಾರಿಯಲ್ಲಿರುವೆನಾದರೂ ನನ್ನ ನೆರಳು ಕೂಡ ಪರೋಪಕಾರಕ್ಕೆ ಒದಗಲಾಗಲಿಲ್ಲವಲ್ಲಾ !"

೨೩. ಎಲೈ ಬೇವಿನ ಮರವೇ, ಹೆಚ್ಚಿಗೆ ಹೇಳುವುದೇನಿದೆ? ನಿನ್ನ ಹಣ್ಣು-ಗಳೆಲ್ಲಾ ವ್ಯರ್ಥ; ಏಕೆಂದರೆ, ಅವು ಸರಿಯಾಗಿ ಮಾಗಿದೊಡನೆಯೇ ಕಾಗೆಗಳು ಅವುಗಳನ್ನು (ತಿಂದು) ನಿಃಶೇಷ ಮಾಡಿಬಿಡುತ್ತವೆ!

೨೪. ಮನಬಂದಂತೆ ತಿರುಗುವ ಎಲ್ಲ ಪಕ್ಕಿಗಳಲ್ಲಿ— ಅಯ್ಯೋ ಗಿಳಿಯೇ— ನಿನಗೆ ಪಂಜರದಲ್ಲಿ ಬಂಧನ! ಇದು ನಿನ್ನ ಇಂಪಾದ ಉಲಿಯ ಫಲ! (ತಪ್ಪೆಲ್ಲ ನಿನ್ನದೇ)

೨೫. ಮುತ್ತುಗದ ಹೂವೆಂದು ಭ್ರಮಿಸಿ ದುಂಬಿಯು ಗಿಳಿಯ ಕೊಕ್ಕಿನಲ್ಲಿ ಹಾರಿ ಹೋಗುತ್ತದೆ; ಗಿಳಿಯಾದರೂ ಅದೊಂದು ಜಂಬುನೇರಳೆ ಹಣ್ಣೆಂದು ಭ್ರಮಿಸಿ ಆ ಜೇನುಹುಳುವನ್ನು ಹಾಗೇ ಕೊಕ್ಕಿನಲ್ಲಿಟ್ಟುಕೊಳ್ಳಬಯಸುತ್ತದೆ!

೨೬. ಈ ಕಡಲು ರತ್ನಗಳ ಆಕರವೆಂದು ಧನಾಶೆಯಿಂದ ನಾನು ಇದರ ನೀರನ್ನು ಕುಡಿದೆನು; ಆದರೆ ಧನವಲ್ಲಿರಲಿ, ನನ್ನ ಬಾಯಿಯೆಲ್ಲಾ ಉಪ್ಪು ನೀರಿನಿಂದ ತುಂಬಿಹೋಯಿತು!

೨೭. ಕಾಗೆಯೂ ಕಪ್ಪು, ಕೋಗಿಲೆಯೂ ಕಪ್ಪು; ಆದರೆ ವಸಂತ ಋತು ಬಂದೊಡನೆಯೇ ಕಾಗೆ ಕಾಗೆ, ಕೋಗಿಲೆ ಕೋಗಿಲೆ!

೨೮. ವೈದ್ಯಶ್ರೇಷ್ಠನೇ, ನಿನಗೆ ನಮಸ್ಕಾರ; ನೀನು ಯಮರಾಜನ ಅಣ್ಣ. ಏಕೆಂದರೆ ಯಮ ಪ್ರಾಣವನ್ನು ಮಾತ್ರ ತೆಗೆದುಕೊಂಡು ಹೋಗುತ್ತಾನೆ; (ನೀನೋ ? ವೈದ್ಯ !) ವೈದ್ಯನು ಪ್ರಾಣ-ಧನ ಎರಡನ್ನೂ ಹಾರಿಸಿಕೊಂಡು ಹೋಗುತ್ತಾನೆ !

೨೯. "ಕಾಗೆ"ಯಿಂದ ಚಾಪಲವನ್ನೂ "ಯಮ" ನಿಂದ ಕ್ರೂರತೆಯನ್ನೂ "ಸ್ಥಪತಿ" ಎನ್ನಿಸಿದ ಬಡಿಗನಿಂದ ಜೋರಾಗಿ ಹೊಡೆಯುವುದನ್ನೂ (ಘಾತ ಮಾಡು-ವುದನ್ನೂ ನಷ್ಟ ಉಂಟು ಮಾಡುವುದನ್ನೂ) ಮೊದಲಕ್ಷರಗಳಿಂದ ತೆಗೆದು ಒಟ್ಟು-ಗೂಡಿಸಿ ಯಾರಯ್ಯಾ "ಕಾಯಸ್ಥ" ಎನ್ನಿಸಿದ ಬರಹಗಾರನನ್ನು ಹುಟ್ಟಿಸಿದವನು?

वैकल्यं धरणीपातमयथोचितजल्पनम् ।
संनिपातस्य चिह्नानि मद्यं सर्वाणि दर्शयेत् ॥३०॥

किमहं वदामि खल दिव्यमतं
गुणपक्षपातमभितो भवतः ।
गुणशालिनो निखिलसाधुजनान्
यदहर्निशं न खलु विस्मरसि ॥३१॥

कृपणेन समो दाता न भूतो न भविष्यति ।
अस्पृशन्नेव वित्तानि यः परेभ्यः प्रयच्छति ॥३२॥

मत्वा सारं गुणानां शिरसि यदि शशी
स्थापितो दैवयोगात्
ईशेन क्षीणबिम्बः सकलमुपचयं
किं न नीतः क्षणेन ।
मिथ्यैवं ख्यापयन्तो गुणिनि सरलतां
लोकभक्त्यर्थमुच्चैर्
आढ्याः कुर्वन्ति वित्तव्ययचकितधियो
मानमर्थेन शून्यम् ॥३३॥

काचो मणिर् मणिः काचो येषां तेऽन्ये हि देहिनः ।
सन्ति ते सुधियो येषां काचः काचो मणिर्मणिः ॥३४॥

यद्यपि रटति सरोषं मृगपति पुरतोऽपि मत्तगोमायुः ।
तदपि न कुप्यति सिंहोऽप्यसदृशपुरुषेषु कः कोपः ॥३५॥

आकर्ण्य गर्जितरवं घनगर्जतुल्यं
सिंहस्य यान्ति वनमन्यदिभा भयार्ताः ।
तत्रैव पौरुषनिधिः स्वकुलेन सार्धं
दर्पोद्धुरो वसति वीतभयो वराहः ॥३६॥

೩೦. ನಿಟ್ಟುಗೇಡು, ನೆಲದ ಮೇಲೆ ಬೀಳುವುದು ಮತ್ತು ಬಾಯಿಗೆ ಬಂದ ಹಾಗೆ ಗಳಹುವುದು ತಲೆಗೆ ಸನ್ನಿ ಏರಿದವರ ಲಕ್ಷಣಗಳು. (ಕುಡಿದವರಲ್ಲಿ) ಹೆಂಡ ಈ ಎಲ್ಲವನ್ನೂ ತೋರಿಸೀತು!

೩೧. ಎಲೈ ಧೂರ್ತನೇ, ನಿನ್ನೆದುರು ನಾನು ನೀನಿಟ್ಟುಕೊಂಡಿರುವ 'ಗುಣ ಪಕ್ಷಪಾತ' ಎಂಬ ದಿವ್ಯ ಸಿದ್ಧಾಂತದ ಬಗ್ಗೆ ಏನು ಹೇಳಲಿ? ಗುಣವಂತರಾದ ಎಲ್ಲ ಸಜ್ಜನರನ್ನೂ ನೀನು ಹಗಲೂ ರಾತ್ರಿಯೂ ಮರೆಯದಿರುವೆ (ಕಾಡಿಸಲು ಮರೆಯದಿರುತ್ತೀಯೆ).

೩೨. ದಾನಿಯೆಂದೂ ಕೃಪಣನಿಗೆ ಸರಿಸಾಟಿ ಎನ್ನಿಸನು: ಏಕೆಂದರೆ, ಕೃಪಣನು ಧನವನ್ನು (ಕೈಯಿಂದ) ಮುಟ್ಟದೆ ಇನ್ನೊಬ್ಬನಿಗೆ ಕೊಟ್ಟುಬಿಡುತ್ತಾನೆ!

೩೩. ದೈವಯೋಗದಿಂದ ಚಂದ್ರನ ಗುಣಸಾರವನ್ನರಿತು ಈಶ್ವರನು ತನ್ನ ತಲೆಯ ಮೇಲಿಟ್ಟುಕೊಂಡದ್ದು ನಿಜವಾದರೆ— ಅವನ ಬಿಂಬ ಚಿಕ್ಕದಾದಾಗ ಕ್ಷಣಾರ್ಧದಲ್ಲಿ ಈಶ್ವರನೇಕೆ ಅವನ ಬಿಂಬವನ್ನು (ಮೊದಲಿರುವಂತೆ) ತುಂಬಿ-ಕೊಡುವುದಿಲ್ಲ? ಆಢ್ಯರಾದವರು ಗುಣವಂತರಲ್ಲಿಯ ಸರಳತೆಯನ್ನು ಗಟ್ಟಿಯಾಗಿ ಕೂಗಿ ಹೇಳುವುದೆಲ್ಲ ಕಪಟ— ಲೋಕ ತಮಗೆ ಭಕ್ತಿದೋರಲಿ— ಎಂಬ ಆಸೆ-ಯಿಂದ ಮಾತ್ರ ಅವರು ಹಾಗೆ ಹೇಳುವುದು. ತಮ್ಮ ದುಡ್ಡೆಲ್ಲಿಯಾದರೂ ಖರ್ಚಾಗಿ ಹೋದರೆ ಏನು ಗತಿ?— ಎಂಬ ಹೆದರಿಕೆಯಿಂದ ಅವರು (ಯಾವಾಗಲೂ) ಯೋಗ್ಯತಾಸಂಪನ್ನರಿಗೆ ಧನವನ್ನು ದಾನ ಮಾಡದೇ ಬರಿ ಮಾನವನ್ನಷ್ಟೇ ಕೊಡುತ್ತಾರೆ!

೩೪. ಗಾಜು ಮಣಿ, ಮಣಿ (ರತ್ನ) ಗಾಜು— ಎಂದು ತಿಳಿಯುವ ಜನಗಳ ವರ್ಗವೇ ಬೇರೆ; ಗಾಜು ಗಾಜು, ರತ್ನ ರತ್ನ ಎಂಬುದನ್ನು ಬಲ್ಲ ಸುಬುದ್ಧಿ ಸಂಪನ್ನರು ಇದ್ದೇ ಇರುತ್ತಾರೆ.

೩೫. ಸೊಕ್ಕಿದ ನರಿಯು ಮೃಗರಾಜನಾದ ಸಿಂಹನ ಎದುರು ಸಿಟ್ಟಿನಿಂದ ಕಿರಿಚಿದರೂ ಸಿಂಹವು ಪ್ರತಿಯಾಗಿ ಕೆರಳದು; ಸರಿಸಮಾನರಲ್ಲದವರೆದುರು ಸಿಟ್ಟು ಎಲ್ಲಿ ಬಂತು?

೩೬. ಸಿಂಹದ ಗುಡುಗಿನಂಥ ಗರ್ಜನೆಯನ್ನು ಕೇಳಿ ಹೆದರಿದ ಆನೆಗಳು (ತಾವಿರುವ ಕಾಡಿನಿಂದ) ಇನ್ನೊಂದು ಕಾಡಿಗೆ ಓಡಿಹೋಗುತ್ತವೆ: ಆದರೆ ಪೌರುಷಕ್ಕೆ ನಿಕ್ಷೇಪಸ್ಥಾನವಾದ ಮತ್ತು ದರ್ಪ–ದಕ್ಷತೆಗಳನ್ನುಳ್ಳ ಹಂದಿಯು ನಿರ್ಭಯವಾಗಿ ತನ್ನ ಬಳಗದೊಡನೆ ಇದ್ದಲ್ಲೇ ಇರುತ್ತದೆ.

वाप्यां स्नाति विचक्षणो द्विजवरो मूर्खोऽपि वर्णाधमः
फुल्लां नाम्यति वायसोऽपि हि लतां या नामिता बर्हिणा ।
ब्रह्मक्षत्रविशस्तरन्ति च यया नावा तयैवेतरे
त्वं वापीव लतेव नौरिव जनं वेश्यासि सर्वं भज ॥३७॥

अभिलषसि यदीन्दो वक्त्रलक्ष्मीं मृगाक्ष्याः
पुनरपि सकृदब्धौ मज्ज संक्षालयाङ्कम् ।
सुविमलमथ बिम्बं पारिजातस्य गन्धैः
सुरभय वद नोचेत् त्वं क्व तस्या मुखं क्व ॥३८॥

तव कुसुमशरत्वं शीतरश्मित्वमिन्दोर्
द्वयमिदमयथार्थं दृश्यते मद्विधेषु ।
विसृजति हिमगर्भैरग्निमिन्दुर्मयूखैस्
त्वमपि कुसुमबाणान् वज्रसारीकरोषि ॥३९॥

हंस प्रयच्छ मे कान्तां गतिरस्यास्त्वया हृता
विभावितैकदेशेन देयं यदभियुज्यते ॥४०॥

अस्ति यद्यपि सर्वत्र नीरं नीरजमण्डितम् ।
रमते न मरालस्य मानसं मानसं विना ॥४१॥

दिक्चक्रं तृणभस्मना कवलितं मूलान्यपि क्ष्मारुहां
निर्दग्धानि न चार्भकोऽपि हरिणीयूथस्य शेषीकृतः ।
आःकष्टं विपिनौकसोऽपि मुनयः प्लुष्टाः कृतान्तक्रियां
कृत्वेत्थं वनवह्निना किमधुना शान्तेन दीप्तेन वा ॥४२॥

೩೭. ಬುದ್ಧಿವಂತನಾದ ದ್ವಿಜನೂ ಕೀಳುವರ್ಣದ ಮೂರ್ಖನೂ ಒಂದೇ ಬಾವಿಯ ನೀರಿಂದ ಮೀಯುತ್ತಾರೆ; ನವಿಲು (ಪಕ್ಷಿ)ಬಾಗಿಸಿದ ಅರಳಿದ ಹೂ ಬಳ್ಳಿಯನ್ನು ಕಾಗೆಯೂ ಬಾಗಿಸುತ್ತದೆ; ದ್ವಿಜರು ದಾಟಿದ ದೋಣಿಯಿಂದಲೇ ಇತರರೂ (ಹೊಳೆಗಳನ್ನು) ದಾಟುತ್ತಾರೆ. ಎಲೈ, ನೀನು ಚೆಲುವೆಣ್ಣಾಗಿರುವುದರಿಂದ ಬಾವಿ, ಬಳ್ಳಿ, ದೋಣಿಗಳಂತೆ (ಎಲ್ಲರಿಗೂ ಆಶ್ರಯ ಕೊಡು) ಎಲ್ಲರನ್ನೂ ಸೇವಿಸು.

೩೮. ಆ ಹರಿಣಾಕ್ಷಿಯ ಮೊಗದ ಚೆಲುವನ್ನು ನೀನು ಬಯಸುವುದಾದರೆ— ಎಲೈ ಚಂದ್ರನೇ—ಮತ್ತೊಮ್ಮೆ ಕಡಲಲ್ಲಿ ಮುಳುಗು, ನಿನಗೆ ಹಿಡಿದ ಕಲಂಕವನ್ನು ಚೆನ್ನಾಗಿ ತೊಳೆದು ಚೊಕ್ಕ ಮಾಡಿಕೋ; ಅಲ್ಲದೆ, ಹಾಗೆ ತೊಳೆದು ಶುದ್ಧಮಾಡಿ ಕೊಂಡ ನಿನ್ನ ಬಿಂಬಕ್ಕೆ ಪಾರಿಜಾತದ ಪರಿಮಳವನ್ನು ಬಳಿದುಕೋ— ಏನು ಹೇಳುವೆ ?— ಇಲ್ಲವಾದರೆ ನೀನೆಲ್ಲಿ, ಅವಳ ಮೊಗವೆಲ್ಲಿ ?

೩೯. (ಎಲೈ ಮನ್ಮಥನೇ) ನೀನು ಹೂವಿನಂಬುಗಳನ್ನು ಬಿಡುವವನು ಮತ್ತು ಚಂದ್ರನು ತಂಪಾದ ಕಿರಣಗಳನ್ನು ಚೆಲ್ಲುವವನು ಎಂಬೀ ಎರಡೂ ನನ್ನ ಅನುಭವ ದಲ್ಲಿ ಸುಳ್ಳಾಗಿದೆ; ತನ್ನ ತಂಗದಿರುಗಳಿಂದ ಚಂದ್ರನು ಬೆಂಕಿಯನ್ನು ಸುರಿಸುತ್ತಿದ್ದಾನೆ; ನೀನೂ ನಿನ್ನ ಹೂಬಾಣಗಳನ್ನು ವಜ್ರಕಠೋರವಾಗಿ ಮಾಡಿರುತ್ತೀಯೆ.

೪೦. ಎಲೈ ಹಂಸವೇ, ನನ್ನ ಪ್ರಿಯತಮೆಯನ್ನು ಕೊಡು; ಅವಳ ನಡಿಗೆಯ ಸೊಗಸನ್ನು ನೀನು ಅಪಹರಿಸಿಕೊಂಡು ಹೋಗಿರುವೆ. (ಕಳವು ಮಾಲಿನ) ಒಂದು ಭಾಗದೊಡನೆ (ನೀನು) ಸಿಕ್ಕಿಬಿದ್ದಿರುವುದರಿಂದ ಎಲ್ಲವನ್ನೂ ನೀನೇ ಕೊಡಬೇಕಾಗು ತ್ತದೆ.

೪೧. ಎಲ್ಲೆಲ್ಲೂ ನೀರು ತಾವರೆಯಿಂದ ಅಲಂಕೃತವಾಗಿದ್ದರೂ ಹಂಸದ ಮನಸ್ಸು ಮಾನಸಸರೋವರವನ್ನುಳಿದು ಇನ್ನೆಲ್ಲೂ ಸಂತೋಷಪಡದು

೪೨. ಕಾಳ್ಗಿಚ್ಚು ಎಲ್ಲ ದಿಕ್ಕುಗಳನ್ನೂ ಹುಲ್ಲುಬೂದಿಯಿಂದ ಮುಚ್ಚಿತು: ಮರಗಳ ಬೇರುಗಳು ಸಹ ಸುಟ್ಟುಹೋದವು; ಬೆಂಕೆಗಳ ಗುಂಪಿನ ಒಂದು ಮರಿ ಯನ್ನೂ ಕಾಳ್ಗಿಚ್ಚು ಉಳಿಸಲಿಲ್ಲ; ಅಯ್ಯೋ, ಎಂಥ ಕಷ್ಟ! ಕಾಡಿನಲ್ಲಿ ನೆಲಸಿದ್ದ ಮುನಿಗಳು ಕೂಡ ದಗ್ಧರಾದರು. ಈಗ ಈ ಕಿಚ್ಚು—ಯಮಕಾರ್ಯವನ್ನು ಮಾಡಿದ ಬಳಿಕ—ಆರಿದರೇನು, ಉರಿದರೇನು ?

मणिर्लुठति पादेषु काचः शिरसि धार्यते ।
यथैवास्ते तथैवास्तां काचः काचो मणिर्मणिः ॥४३॥

लभेत सिकतासु तैलमपि यत्नतः पीडयन्
पिबेच्च मृगतृष्णिकासु सलिलं पिपासार्दितः ।
कदाचिदपि पर्यटन् शशविषाणमासादयेत्
न तु प्रतिनिविष्टमूर्खजनचित्तमाराधयेत् ॥४४॥

अथवाभिनिविष्टबुद्धिषु व्रजति व्यर्थकतां सुभाषितम् ।
रविरागिषु शीतरोचिषः करजालं कम–
लाकरेष्विव ॥४५॥

यस्य भार्या विरूपा च कश्मला कलहप्रिया ।
अधिकाधिक भक्षा च सा जरा न जरा जरा ॥४६॥

मक्षिका व्रणमिच्छन्ति धनमिच्छन्ति पार्थिवाः ।
नीचाः कलहमिच्छन्ति शान्तिमिच्छन्ति साधवः ॥४७॥

काके शौचं द्यूतकारे च सत्यं
सर्पे क्षान्तिः स्त्रीषु कामोपशान्तिः ।
क्लीबे धैर्यं मद्यपे तत्वचिन्ता
राज्ञां मित्रं केन दृष्टं श्रुतं वा ॥४८॥

को न याति वशं लोके मुखे पिण्डेन पूरितः ।
मृदङ्गो मुखलेपेन करोति मधुरध्वनिम् ॥४९॥

र्खो द्विजातिः स्थविरो गृहस्थः
कामी दरिद्रो धनवांस्तपस्वी ।
वेश्या कुरूपा नृपतिः कदर्यो
लोके षडेतानि विडम्बितानि ॥५०॥

೪೩. ರತ್ನವು ಕಾಲ ಕೆಳಗೆ ಉರುಳುತ್ತಿದೆ, ಗಾಜು ಒಬ್ಬನ ತಲೆಯ ಮೇಲೆ ರಾಜಿಸುತ್ತದೆ—ಎಂದಿಟ್ಟುಕೊಳ್ಳಿರಿ; ಅವು ಆಯಾ ಸ್ಥಳಗಳಲ್ಲೇ ಇರಲಿ (ಪರವಾಯಿಲ್ಲ); ಆದರೆ (ಅವು ಉಕ್ತ ಸ್ಥಳಗಳಲ್ಲೇ ಇದ್ದರೂ) ಗಾಜು ಗಾಜೇ, ರತ್ನ ರತ್ನವೇ !

೪೪. ಪ್ರಯತ್ನದಿಂದ ಮಳಲಿನಲ್ಲಿ ಎಣ್ಣೆಯನ್ನಾದರೂ ಹಿಂಡಿ ತೆಗೆಯಬಹುದು; ಬಾಯಾರಿದವನು ಬಿಸಿಲುಗುದುರೆಯಲ್ಲಾದರೂ ನೀರು ಕುಡಿಯಬಹುದು; ಎಂದಾದರೊಮ್ಮೆ ತಿರುತಿರುಗಿ ಮೊಲದ ಕೋಡನ್ನಾದರೂ ತರಬಹುದು; ಆದರೆ ಎದುರು ನಿಂತ (ಪೂರ್ವಗ್ರಹದೂಷಿತರಾದ) ಮೂರ್ಖ ಜನರ ಮನಸ್ಸನ್ನು ಸಂತೋಷಗೊಳಿಸಲು ಸಾಧ್ಯವಾಗದು.

೪೫. ಪೂರ್ವಗ್ರಹದೂಷಿತರಲ್ಲಿ ಒಳ್ಳೆಯ ಮಾತನ್ನು ಹೇಳುವುದು ನಿಷ್ಪ್ರಯೋಜಕವಾಗುವುದೆಂದು ತೋರುತ್ತದೆ; ಸೂರ್ಯನಲ್ಲಿ ಆಸಕ್ತವಾದ ತಾವರೆಗೊಳಗಳಲ್ಲಿ ಚಂದ್ರನ ಕಿರಣಗಳು ನಿಷ್ಫಲವಾಗುವುದಲ್ಲವೇ !

೪೬. ಕುರೂಪಿಣಿಯೂ ಕೊಳಕಿಯೂ ಕಲಹಪ್ರಿಯೆಯೂ ಬಹು ಭಕ್ಷಕಳೂ ಆದ ಹೆಂಡತಿಯೇ (ಗಂಡನಿಗೆ) ಮುಪ್ಪಲ್ಲದೆ ಮುಪ್ಪು ಮುಪ್ಪಲ್ಲ.

೪೭. ನೊಣಗಳು ಗಾಯವನ್ನೂ ರಾಜರು ಧನವನ್ನೂ ನೀಚರು ಜಗಳವನ್ನೂ ಸಾಧುಗಳು ಶಾಂತಿಯನ್ನೂ ಬಯಸುತ್ತಾರೆ.

೪೮. ಕಾಗೆಯಲ್ಲಿ ಶುಚಿಯನ್ನೂ ಜೂಜುಗಾರನಲ್ಲಿ ಸತ್ಯಸಂಧತೆಯನ್ನೂ ಸರ್ಪದಲ್ಲಿ ಕ್ಷಮೆಯನ್ನೂ ಸ್ತ್ರೀಯರಲ್ಲಿ ಕಾಮತೃಪ್ತಿಯನ್ನೂ ನಪುಂಸಕನಲ್ಲಿ ಧೈರ್ಯವನ್ನೂ ಹೆಂಡಗುಡುಕನಲ್ಲಿ ತತ್ವಜಿಜ್ಞಾಸೆಯನ್ನೂ ರಾಜರಲ್ಲಿ ಗೆಳೆಯನನ್ನೂ ಕಂಡವರಾರು ? ಕೇಳಿದವರಾರು ?

೪೯. ಬಾಯಿಗೆ ತುತ್ತು ತುಂಬಿಸಿದಾಗ ಈ ಜಗತ್ತಿನಲ್ಲಿ ಯಾರು ವಶವಾಗುವುದಿಲ್ಲ ? ಮದ್ದಳೆಯ ಮುಖಕ್ಕೆ ಬೋನವನ್ನು ಬಳಿದಾಗ ಇಂಪಾದ ದನಿಗೊಡುತ್ತದೆ !

೫೦. ಬ್ರಾಹ್ಮಣ, ಕ್ಷತ್ರಿಯ ಅಥವಾ ವೈಶ್ಯನು ಮೂಢನಾದರೆ, ಗೃಹಸ್ಥನು ಮುದುಕನಾದರೆ (ಕರ್ಮಮಾಡಲು ಅಶಕ್ತನಾದರೆ), ಪ್ರೇಮಿಯು ದರಿದ್ರನಾದರೆ, ತಪಸ್ವಿಯು ಧನವಂತನಾದರೆ, ವೇಶ್ಯೆಯು ಕುರೂಪವತಿಯಾದರೆ ಮತ್ತು ರಾಜನು ಕೃಪಣನಾದರೆ (ಈಯೆಲ್ಲರೂ) ಲೋಕದಲ್ಲಿ ಹಾಸ್ಯಾಸ್ಪದರಾಗುತ್ತಾರೆ.

वन्दी विन्दति चेदमात्यपदवीं शिष्टैरलं भूरिभिः
पुंभिश्चेत् प्रतिपाद्यते रतिकला क्वैणीदृशामादरः ।
विश्रान्ता यदि वैखरीषु कविता काव्येन भव्येन किं
भूपाले यवने समस्तभुवने वैदग्ध्यमस्तं गतम् ॥५१॥

आहूतेषु विहङ्गमेषु मशको नायान् पुरो वार्यते
मध्ये वारिधि मा वसंस्तृणमणिर्धत्ते मणीनां रुचम् ।
खद्योतोऽपि न कम्पते प्रविचलन्मध्येऽपि तेजस्विनां
धिक् सामान्यमचेतसं प्रभुमिवानामृष्टतत्वान्तरम् ॥५२॥

खलः सर्षपमात्राणि परच्छिद्राणि पश्यति ।
आत्मनो बिल्वमात्राणि पश्यन्नपि न पश्यति ॥५३॥

विपर्यस्तमनश्चेष्टैः शिलाशकलवर्ष्मभिः ।
मांसवृक्षैरियं मूर्खैर्भाराक्रान्ता वसुन्धरा ॥५४॥

स्वाभिप्रायपरोक्षस्य परचित्तानुवर्तिनः ।
स्वयं विक्रीतदेहस्य सेवकस्य कुतः सुखम् ॥५५॥

धर्मः प्रव्रजितस्तपः प्रचलितं सत्यं च दूरे गतं
पृथ्वी मन्दफला नराः कपटिनश्चित्तं च शाठ्योर्जितम् ।
राजानोऽर्थपरा न रक्षणपराः पुत्राः पितुर्द्वेषिणः
साधुः सीदति दुर्जनः प्रभवति प्राप्तौ कलौ दुर्युगे ॥५६ ।

೫೧. ಹೊಗಳುಭಟ್ಟನು ಮಂತ್ರಿ ಪದವಿಯನ್ನು ಪಡೆದರೆ ಶಿಷ್ಟರು ಮೂಲೆಗುಂಪಾಗುವರು; ಬಹಳ ಜನ ಪುರುಷರು ರತಿಕಲಾಪ್ರತಿಪಾದನನಿರತರಾದರೆ ಪರಿಶಾಕ್ಷಿಯರಿಗೆಲ್ಲಿ ಮಾನ ಉಳಿದೀತು ? ಕವಿತೆಯು ಬುರುಡೆ ಹೊಡೆಯುವುದರಲ್ಲೇ ಮುಗಿತಾಯಗೊಂಡರೆ ಭಾವಿ ಕಾವ್ಯದ ನಿರ್ಮಾಣಕ್ಕೆಲ್ಲಿ ಬರಬೇಕು ಅವಕಾಶ ? ಯವನನು ರಾಜನಾದ್ದರಿಂದ ಇಡಿ ಜಗತ್ತಿನಲ್ಲಿ ಪಾಂಡಿತ್ಯವು ಅಸ್ತಂಗತವಾಯಿತು.

